ಪ್ರಜಾವಾಣಿ ಭಾನುವಾರ • ಅಕ್ಟೋಬರ್ 20, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331









ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/ 9845114560 / 9731810277/ 9886213331

PROPERTY CORNER ಕ್ಲಾಸಿಫೈಡ್ಸ್

REAL ESTATE BUYING

Agricultural Land Converted

Out-Station

LOOKING FOR Plots and built houses, also agriculture lands in and around Hassan city. Extent 5 acres. Call: 9483756284. Agents welcome.

LOOKING FOR agriculture lands in and aounrd Solur, Kunigal, Tumkur. Contact:- Sunil:- 9480721298. Agents Welcome.

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact:9902038118, 9449060605

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Kanakapura Road

WANTED SITE 30x40, 40x60, Anjanapura BDA, Banashankri 6th Stage, BCCHS Layout, Investment Purpose. Agent Excuse. Call: 9663454878.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

WANTED BDA SITE 30x40,40x60, 50x80 Visweshwarayya Layout, Nagarabhavi RHCS Layout, NGF, Banashankari 6th Stage. 8105688602.

WANTED/ AVAILABLE 50x80, 40x60, 30x40, 20x30, BDA Sites Vishveswaraiah Layout, Kempegowda Layout. Contact: 9886634578/ 9742681666

BUILDERS ESSENTIAL

Building Contractors

WE-UNDERTAKE ALL Types Of Civil Work. Building Renovation, Flooring, Falseceiling, Kitchen Co Boards/ Wardrobes. All Type of Fabrication Works, Plumbing, Electrical and Painting works. New Building Construction etc with 30 Years of-Experience Call:9019239712





Commercial Property FOR SALE & RENT



North East Corner Commercial Property located in the heart of MALLESHWARAM In the Densely Populated Market Area
11th cross, Sampige road, Malleshwaram.
Property is spread on 3600 sqft area offers around 18 SHOPS on the ground & basement,
it has 4 levels
Basement, Ground, 1st and 2nd floor.
interested parties please contact:
97408 00003 / 84472 99780
OPENING A GATEWAY TO VARIOUS BUSINESS OPPORTUNITIES
YIELD HIGH RENTAL INCOME

DC CONVERSION E KHATA — SITES FOR SALE
ಯಲಹಂಕ
ಬಾಗಲೂರು Circle to Budigere Road
DC COVERSION LAYOUT / E KHATA
- REVA University
- Delhi Public School
- Country Club
- Attached SEZ

~~₹3,800~~ ₹3,600 per sqft
ದೀಪಾವಳಿಯ ವಿಶೇಷ ಕೊಡುಗೆ
ಯಲಹಂಕ ಬಾಗಲೂರು
SEZ Road, Vidya Nagar Cross, Venkateswara Engg. College
UPCOMING BBMP LIMITS
~~₹4,200~~ ₹4,000 per sqft
ನಿರ್ಮಾಣಕ್ಕೆ ಸಿದ್ಧವಾಗಿದೆ ಬ್ಯಾಂಕ್ ಸಾಲ @ LIC HFL ICICI Bank
9880 149 159 | 9900 698 748

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Lotus Enclave
BMRDA & NPA APPROVED
Residential Sites
Near ನಿವೇಶನಗಳು ಮಾರಾಟಕ್ಕಿವೆ
Nelamangala
100% Released from BMRDA, Bank Loan Available,100% Developed Layout
Ready For Registration & Construction
Layout Video Scan Here
Call: 8956 412 000



Shobha Residency
BDA Approved Luxury Flats Sale in Prime Location
100% Vastu
3 BHK FLATS FOR SALE
Each Flat Super Built up Area 2200 Sqft.
Omkar Nagar, Opposite JSS College, 40 Feet Wide Road. Near to Global Village, Bangalore.
Call: 98440 26676 | 83104 43385

ದೀಪಾವಳಿ ಹಬ್ಬದ ವಿಶೇಷ ಕೊಡುಗೆ
ರೂ. 50 ಸಾವಿರ ಡಿಸ್ಕೌಂಟ್
ಸೈಟುಗಳು ಮಾರಾಟಕ್ಕಿವೆ
ನೆಲಮಂಗಲದ ಟಿ.ಬೇಗೂರು ಹತ್ತಿರ
DC CONVERSION
7 ಲಕ್ಷಕ್ಕೆ 20X30
BANK LOAN AVAILABLE
Contact: 88806 60099



SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 13.50 CRORES.
Call: 96322-37557/ 96069-07557

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology and Painting work. Call-9880916988

RENTAL PROPERTIES

Accommodation Available

Commercial

GODOWN/ KITCHEN Space of 5000 sqft available for Rent in Neelasandra, near Rose garden bus stop. Contact: 9844079596/ 9686210975.

J.P.NAGAR, 5TH Phase, Commercial space for Rent, 2nd & 3rd floor 1100Sft. Each with Lift- 9743328999.

WAREHOUSE SPACE IMMEDIATELY AVAILABLE Location: Near Hennur/ Hebbal Space: 30000 sqft Contact No. 9004476233

BRAND NEW BUILDING Ground Parking, 1st`Floor Commercial Space 2000`Sqft Rent 1 Lakh 2nd,3rd`Floor 3 BHK Rent.65,000. Mahalakshmipuram Near WOC Road Call: 9008728728

AVAILABLE FOR LEASE 300 Sft.Lalbagh Main Road East`Facing Ideal for Stationary/ Showrooms, Next to CMS Jain College. 9972208719.

RENT: COMMERCIAL SPACE Opposite to Bangalore One Kumaraswamy Layout First Floor- 250 Sft, 2nd Floor- 250 Sft. Contact: 9844002912

RENT: COMMERCIAL SPACE Near Wipro off SARJAPUR ROAD First Floor- 300 Sft, GF- 900 Sft plus 150 Sft. Contact: 99640-49783

Flats

MALLESWARAM (NEAR Canara Union). 2BHK Flat (1000sft) North facing, Lift, carparking. Rent: 30000/-. 9845243657

House

HOUSE FOR Lease in Jayanagar 2nd Block, GF, Two Bedroom, Ready Occupation, East Facing- 9481525329.

Farm House/Land/ Resorts

2.25 ACRE LAND With Borewell, Fencing, House,Available For LEASE/RENT. Near Harohalli, Rampura, Suitable: Agriculture/ Resort/Parking. Call: 9900309409.

Industrial And Factory

AVAILABLE OF Industrial Shed of 95000 sqft at Soukya Road, Whitefield. Contact:9341234288/ 9663224353/ 9845417487.

General

FOR RENT: COMMERCIAL PROPERTY 1500 SQFT Space Ground Floor RESIDENTIAL PROPERTY 7 BEDROOM VILLA TRIPLEX SEMI FURNISH, 4 CARPARK on 40X60 PLOT at ISRO Layout, Bikashipura Main Road, Near DPS School South. Bangalore. Contact: 9845035135

REAL ESTATE SELLING

Flat

Anekal

ANEKAL TALUK Bidaragere village, Indya Estates. The Greens apartment 2 BHK 890 sqft 32 Lakhs. Contact:- 9916425362.

Malleshwaram

MALLESWARAM (ELEVENTH Main) 3BHK flat, (1650sft) first floor. lift carpark. 2.10Cr. Negotiable. 9845243757

Rajajinagar

PURVA BLUBELLE Adjacent to Magadi road Metro station Rajajinagar Centre of the City 3 Bedroom & Exclusive 5Bedroom Flats +servant room with all luxurious Amenities, Only few units for Sale. Contact: 9844027560

Uttarahalli

3/4 BHK New Luxurious Flat Sale, A khatha, Ready-move. 75L/ 1cr. Carparking, Cauvery, Vaasthu. 9844394444, 9019110623.

Commerical

J P Nagar

J.P.NAGAR 3RD Phase,Commerical near Mini Forest &.Jayadeva Hospital 60' Road, 42x75 Corner 5 floors Building, 12,00,00,000/- 9731775536.

Kumarapark

FOR-SALE FAIR Field Layout Behind Chalukya Hotel 3650sft Ground Floor Suitable for Office, Residence, Clinics Heart of Bangalore, 7829203369

Commercial Building

Banashankari

"COMMERCIAL BUILDING Banashankari 2nd Stage built on 2500 Sq.ft Plot 14 years old. "Sri.Ganesh Estate"- 9845286505"

Seshadripuram

4185 SQ.FT Land with Building for Sale in Seshadripuram opposite Mantri Mall, 17,000 sq.ft built up area. 9945939990

Agricultural Land Converted

Bannerghatta Road

BANGLALORE IN Bannerggatta Limits Beside Jain Temple 1 Acre non agricultural Land Sale.Suitable: Marriage Hall/Resort/ any:- 6360079761.

Hoskote

HOSKOTE CONVERTED 50 Acre Land ForJ.D Only Genuine Buyers, Builders, Investors, Developers Contact: 9916763727

Residential/ Commercial

J P Nagar

NORTH EAST corner semi commercial building for sale @ J P Nagar 1st phase sarakki Road Near Hanuma Temple 6362905595

M G Road And Around

FOR SALE 2 Bed Room 2000 Sq Ft 3.7 Cr 3 Bed room 2700 Sft 5 Cr Infantry Road close to Metros Markets Hospitals Bus Stand Jayaram 9845049918

Industrial & Factory

Mysore Road

MYSORE TO Bangalore Highway Near Ramanagara opp.Sri.Rama Devara Temple facing Highway 2.14 Acres Industrial Conversion Land`for`sale, 9,50,00000/- 9731775536

Yeshwanthpur

SITE FOR SALE INDUSTRIAL SITE MEASURING 3654 SQFT YESHWANTHPUR INDUSTRIAL AREA NEAR GATE NO.6 APMC YARD NEGOTIABLE 16000/ SFT: 7676999656

House

Banashankari

HOUSE SALE (G+3) 2BHK EACH Floor @ Banashankari 5th Stage BDA 30x40 South Plot Beside POORNAPRAGNA LAYOUT, Near PATALAMMA TEMPLE BUS STOP Rs 3.20 Crores Renuka 9632444445/ 9632356565 Shivakumar 9845875555

20×30,ENGINEER BUILT Houe @ 7th Blk, BSK 6thstg 4 BHK Duplex with CarPark, Borewell,1BHK(Gf) 3BHK (3 F) Semi furnished.1.40cr Contact/What sap only: 9845719543 / 99001 59936

Jayanagar

JAYANAGAR 8TH Block 30x50 North, old house, Excellent location (Genuine buyersonly) Suraj Realtors- 9845232711

Hennur



For Sale-7BHK Independent House @ Hennur Main Road Bileshivale Price: 3cr. In Ashatown ship Near Puravnkara flats (BITS Club) CT: 9342760192.

Bannerghatta Road

BANNERAGTTA ROAD, C.K.Palya Road, 30x50 North, 3 Floors Building for Sale, Rental Income 1,00,000/- -8867395201

Yelahanka

SALE- RENTAL PROPERTY G+2+ SHOP 550SQFT BEHIND YELAHANKA NEWTOWN BUSTOP A KHATA KHB 8296038024

MORE Classifieds IN MAIN ISSUE



27ಕ್ಕೆ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಸುವರ್ಣ ಸಂಭ್ರಮದ ಪ್ರಯುಕ್ತ ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯು ಮಕ್ಕಳಿಗೆ ಇದೇ 27ರಂದು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ ಹಮ್ಮಿಕೊಂಡಿದೆ.

ಸ್ಪರ್ಧೆಯಲ್ಲಿ 8ರಿಂದ 18 ವರ್ಷದೊಳಗಿನವರು ಭಾಗವಹಿಸಬಹುದಾಗಿದ್ದು, ವಯೋಮಿತಿ ಆಧಾರದಲ್ಲಿ ಮೂರು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆಎಂದು ಸಂಸ್ಥೆಯ ಕಾರ್ಯದರ್ಶಿ ವಿನಾಯಕ ಪಾಟೀಲ್ ತಿಳಿಸಿದ್ದಾರೆ.

ಸ್ಪರ್ಧೆಗೆ ಹೆಸರು ನೋಂದಾಯಿಸಿಕೊಳ್ಳಲು ಇದೇ 20 ಕೊನೆಯ ದಿನವಾಗಿದ್ದು, ಆಸಕ್ತರು ಮೊಬೈಲ್ ಸಂಖ್ಯೆ 93806 71947ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಭಕ್ತಿಗೀತೆಗಳ ಸ್ಪರ್ಧೆ

ಬೆಂಗಳೂರು: ಹೊಂಬೇಗೌಡ ನಗರದ ಶ್ರೀರಾಮ ಸೇವಾ ಮಂಡಳಿ ಟ್ರಸ್ಟ್ ವತಿಯಿಂದ ಅ.27ರಂದು ಬೆಳಿಗ್ಗೆ 10.30ಕ್ಕೆ ಕನ್ನಡ ಭಕ್ತಿ ಗೀತೆಗಳ ಸ್ಪರ್ಧೆ ನಡೆಯಲಿದೆ. ಆಸಕ್ತರು ಅ.26ರ ಒಳಗೆ ಹೆಸರು ನೋಂದಾಯಿಸಿಕೊಳ್ಳಲುಕೋರಲಾಗಿದೆ. 9 ವರ್ಷಕ್ಕಿಂತ ಮೇಲಿನವರು ಸ್ವವಿವರವನ್ನು ಅಧ್ಯಕ್ಷರು, ಶ್ರೀರಾಮಸೇವಾ ಮಂಡಲಿ ಟ್ರಸ್ಟ್, 10ನೇ ಕ್ರಾಸ್, ಹೊಂಬೇಗೌಡ ನಗರ, ಬೆಂಗಳೂರು-560027 ಇಲ್ಲಿಗೆ ಕಳುಹಿಸಬೇಕು. ಮಾಹಿತಿಗೆ ದೂರವಾಣಿ ಸಂಖ್ಯೆ 080-22220839 ಸಂಪರ್ಕಿಸಬಹುದು ಎಂದು ಟ್ರಸ್ಟ್‌ನ ಪ್ರಕಟಣೆ ತಿಳಿಸಿದೆ.



ಕನ್ನಡ ಕಡೆಗಣನೆ: ಬಿಬಿಎಂಪಿ ನಡೆಗೆ ಆಕ್ಷೇಪ

ಕನ್ನಡ ವಿರೋಧಿ ಅಧಿಕಾರಿಗಳ ಮೇಲೆ ಕ್ರಮಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಗಳ ನಾಮಫಲಕ ಸೇರಿ ವಿವಿಧೆಡೆ ಕನ್ನಡ ಕಡೆಗಣನೆಗೆ ಕಾರಣವಾಗಿರುವ ಅಧಿಕಾರಿಗಳ ಮೇಲೆ ಕ್ರಮಗಳನ್ನು ಕೈಗೊಂಡು, ಈ ಬಗ್ಗೆ ವರದಿಯನ್ನು ಸಲ್ಲಿಸಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬಿಬಿಎಂಪಿಗೆ ಸೂಚಿಸಿದೆ.

ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಈ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

'ಕನ್ನಡಿಗರ ಅಸ್ಮಿತೆಯ ಪ್ರತೀಕವಾಗಬೇಕಾದ ಬಿಬಿಎಂಪಿ, ಹಲವು ಕಾರಣಗಳಿಂದ ಕನ್ನಡ ವಿರೋಧಿ ಎಂದು ಸಾರ್ವಜನಿಕವಾಗಿ ಬಿಂಬಿತವಾಗುತ್ತಿರುವುದು ವಿಷಾದನೀಯ. ನಾಮಫಲಕಗಳಲ್ಲಿ ತಪ್ಪು ಕನ್ನಡ ಪದಗಳ ಬಳಕೆ, ಪಾಲಿಕೆಯೇ ಆಯೋಜಿಸುವ ಕಾರ್ಯಕ್ರಮಗಳಲ್ಲಿ ಕನ್ನಡದ ಶೀರ್ಷಿಕೆಗಳು ಕಾಣೆಯಾಗುತ್ತಿರುವುದು ಖಂಡನೀಯ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕನ್ನಡದ ಹಿತ ಕಾಯಬೇಕಾದ ಸಂಸ್ಥೆಯಿಂದಲೇ ಕನ್ನಡ ಕಡೆಗಣನೆ ಸರಿಯಲ್ಲ. ಭಾಷಾ ಜ್ಞಾನ ಮತ್ತು ಅಭಿಮಾನವುಳ್ಳ ಅಧಿಕಾರಿಗಳನ್ನು ಪಾಲಿಕೆಯ ಸಾರ್ವಜನಿಕ ಸೇವಾ ವಿಭಾಗಗಳಿಗೆ ನೇಮಿಸಬೇಕು. ಕನ್ನಡ ಕಡೆಗಣಿಸಿ ಪ್ರಮಾದ ಮಾಡಿದ ಅಧಿಕಾರಿಗಳಿಗೆ ಸೂಕ್ತ ಎಚ್ಚರಿಕೆ ನೀಡಬೇಕು' ಎಂದು ಪತ್ರದಲ್ಲಿ ಹೇಳಿದ್ದಾರೆ.

'ಭಾಷಾ ವಿರೋಧಿ ಕ್ರಮ'

'ಬಿಬಿಎಂಪಿ ಇತ್ತೀಚಿಗೆ ಹಮ್ಮಿಕೊಂಡಿದ್ದ ಬೀದಿ ನಾಯಿಗಳಿಗೆ ಆಹಾರ ನೀಡುವ ಉತ್ಸವಕ್ಕೆ 'ಕುಕುರ್ ತಿಹಾರ್' ಎನ್ನುವ ಹೆಸರಿಡಲಾಗಿದೆ. ಈ ಹೆಸರನ್ನು ಇಡುವಾಗ ಕನ್ನಡ ಸಂಸ್ಕೃತಿ ಕುರಿತಾದ ಯಾವುದೇ ಆಲೋಚನೆಗಳು ಪಾಲಿಕೆಯ ಅಧಿಕಾರಿಗಳಲ್ಲಿ ಸುಳಿಯದಿರುವುದು ದುರ್ದೈವ. ಇಂತಹ ಭಾಷಾ ವಿರೋಧಿ ಕ್ರಮಗಳಿಗೆ ಬಿಬಿಎಂಪಿ ಅಂತಹ ಮಹತ್ವದ ಸಂಸ್ಥೆಗಳೇ ಮುಂದಾದರೆ, ನಮ್ಮದೇ ನೆಲದಲ್ಲಿ ನಮ್ಮ ಭಾಷೆಗೆ ಸಿಗಬೇಕಾದ ಪ್ರಾತಿನಿಧ್ಯ ಮರೀಚಿಕೆ ಯಾಗುತ್ತದೆ. ಆದ್ದರಿಂದ ಕೂಡಲೇ ಕನ್ನಡ ವಿರೋಧಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು' ಎಂದು ಪುರುಷೋತ್ತಮ ಬಿಳಿಮಲೆ ಸೂಚಿಸಿದ್ದಾರೆ.



ಕೆಂಗೇರಿಯಲ್ಲಿ ಅತಿಹೆಚ್ಚು 6.8 ಸೆಂ.ಮೀ ಮಳೆ • ವಾಹನ ಸಂಚಾರ ಅಸ್ತವ್ಯಸ್ತ • ವಾರಾಂತ್ಯದ ಸಂಭ್ರಮಕ್ಕೆ 'ತಣ್ಣೀರು'

ಮಳೆ: ರಸ್ತೆ ಜಲಾವೃತ, ವಾಹನ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ರಾತ್ರಿ ಹಾಗೂ ಶನಿವಾರ ಸುರಿದ ಮಳೆ ಅಬ್ಬರಕ್ಕೆ ಎಂದಿನಂತೆ ರಸ್ತೆಗಳು ಜಲಾವೃತವಾಗಿದ್ದವು. ವಾರಾಂತ್ಯವಾದ್ದರಿಂದ ವಾಹನ ದಟ್ಟಣೆ ಹೆಚ್ಚಾಗಿತ್ತು.

ಶುಕ್ರವಾರ ರಾತ್ರಿ ಸುರಿದ ಮಳೆಯಿಂದ ರಸ್ತೆಗಳಲ್ಲಿ ಒಂದಷ್ಟು ನೀರು ನಿಂತಿತ್ತು. ಶನಿವಾರ ಬೆಳಿಗ್ಗೆ 9 ಗಂಟೆಯ ನಂತರ ಸುರಿದ ಮಳೆಗೆ ನಗರದ ಬಹುತೇಕ ರಸ್ತೆಗಳು ನೀರಿನಿಂದ ತುಂಬಿಹೋದವು. ಹೊರವಲಯದಲ್ಲಿ ಸಂಕಷ್ಟ ಅಧಿಕವಾಗಿತ್ತು.

ಶನಿವಾರ ಬೆಳಿಗ್ಗೆ 9ರವರೆಗೆ ಕೆಂಗೇರಿಯಲ್ಲಿ ಅತಿಹೆಚ್ಚು (6.8 ಸೆಂ.ಮೀ) ಮಳೆಯಾಗಿತ್ತು. ರಾಜರಾಜೇಶ್ವರಿನಗರ, ಜ್ಞಾನಭಾರತಿ, ನಾಯಂಡಹಳ್ಳಿ ಸುತ್ತಮುತ್ತ ತಲಾ 5 ಸೆಂ.ಮೀ, ಗೊಟ್ಟಿಗೆರೆ, ಅಂಜನಾಪುರ, ಬೇಗೂರು, ನಾಗರಬಾವಿ, ಮಾರುತಿ ಮಂದಿರ ಸುತ್ತಮುತ್ತಲ ಪ್ರದೇಶಗಳಲ್ಲಿ ತಲಾ 3 ಸೆಂ. ಮೀಟರ್ ಮಳೆಯಾಯಿತು.

ಶನಿವಾರ ಬೆಳಿಗ್ಗೆ 10 ಗಂಟೆಯ ನಂತರ ರಾತ್ರಿಯವರೆಗೆ ಆಗಾಗ್ಗೆ ಮಳೆ ಸುರಿಯಿತು. ವಾರದ ಆರಂಭದ ಮೂರು ದಿನ ಮಳೆ ಅಬ್ಬರಕ್ಕೆ ತತ್ತರಿಸಿದ ನಾಗರಿಕರು, ಶನಿವಾರವೂ ಸಂಕಷ್ಟ ಅನುಭವಿಸಿದರು. ರಸ್ತೆಗಳಲ್ಲಿ ನಿಂತ ನೀರಿನಲ್ಲಿ ಸಂಚರಿಸುವುದೇ ವಾಹನ ಸವಾರರಿಗೆ ಸವಾಲಾಗಿತ್ತು. ವಾಹನ ಸಂಚಾರ ನಿಧಾನಗತಿಯಲ್ಲಿದ್ದುದ್ದರಿಂದ, ಹಲವು ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಗಿತ್ತು.

ಜಯಮಹಲ್ ಅಂಡರ್‌ಪಾಸ್ ಉದಯ ಟಿವಿ ಜಂಕ್ಷನ್, ಡೇರಿ ವೃತ್ತದಿಂದ ಸಾಗರ್ ಜಂಕ್ಷನ್‌ವರೆಗೆ, ಹೆಬ್ಬಾಳ ಮೇಲ್ಸೇತುವೆ ಸುತ್ತಮುತ್ತ, ವೀರಣ್ಣಪಾಳ್ಯ - ಕೋರ್ಟ್‌ಯಾರ್ಡ್ ಮ್ಯಾರಿಯಟ್ ಹೋಟೆಲ್, ಸಿಟಿಒ ಜಂಕ್ಷನ್, ಹೆಬ್ಬಾಳ, ವಿಂಡ್ಸರ್ ಮ್ಯಾನರ್ ಕೆಳಸೇತುವೆ, ದೇವರ ಬೀಸನಹಳ್ಳಿಯಿಂದ ಬೆಳ್ಳಂದೂರು ಕೋಡಿ, ಹೆಣ್ಣೂರು ಬಾಗಲೂರು ಮುಖ್ಯರಸ್ತೆಯ ಎರಡು ಕಡೆ, ಸಿಬಿಐ ಮೇಲ್ಸೇತುವೆಯಿಂದ ವಿಮಾನ ನಿಲ್ದಾಣದ ಕಡೆಗೆ, ರಾಮಮೂರ್ತಿ ನಗರದಿಂದ ಹೆಬ್ಬಾಳ ಕಡೆಗೆ, ಕೊಡಿಗೇಹಳ್ಳಿ (ಬಳ್ಳಾರಿ ಮುಖ್ಯ ರಸ್ತೆ) ಬಳಿ, ಬನಶಂಕರಿ ಸಮೀಪದ ಗುರಪ್ಪನಪಾಳ್ಯ ಜಂಕ್ಷನ್ ಬಳಿ ನೀರು ನಿಂತು ವಾಹನ ಸಂಚಾರ ಹಲವು ಸಂದರ್ಭದಲ್ಲಿ ಸ್ಥಗಿತಗೊಂಡಿತ್ತು.

ಆರ್‌.ಟಿ. ನಗರದ ಪ್ರೆಸಿಡೆಂಟ್ ಸ್ಕೂಲ್ ಹಿಂಬದಿಯ ರಸ್ತೆಯಲ್ಲಿ ಮರ ಬಿದ್ದುದ್ದರಿಂದ ಸಂಚಾರ ಪೊಲೀಸರು ವಾಹನ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆ ಮಾಡಿದ್ದರು.

ಶನಿವಾರ ಬೆಳಿಗ್ಗೆ 8.30ರವರೆಗೆ 153 ವಾರ್ಡ್‌ಗಳಲ್ಲಿ ಮಳೆಯಾಗಿತ್ತು. ನಂತರ 103 ವಾರ್ಡ್‌ಗಳಲ್ಲಿ ಮಳೆಯಾಗಿದೆ.



ಜಿಟಿ ಜಿಟಿ ಮಳೆಯಿಂದ ರೆಸಿಡೆನ್ಸಿ ರಸ್ತೆಯಲ್ಲಿ ವಾಹನ ದಟ್ಟಣೆ ಕಂಡುಬಂತು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಎಲ್ಲಿ ಎಷ್ಟು ಮಳೆ? (ಸೆಂ.ಮೀಗಳಲ್ಲಿ)

ಶನಿವಾರ ಬೆಳಿಗ್ಗೆಯಿಂದ ರಾತ್ರಿವರೆಗೆ			
ಜಕ್ಕೂರು	4.25	ಮಾರತ್‌ಹಳ್ಳಿ	2.0
ಹೊರಮಾವು	3.2	ಕೋರಮಂಗಲ	1.9
ವಿದ್ಯಾರಣ್ಯಪುರ	3.0	ಬಸವೇಶ್ವರನಗರ	1.8
ಕೊಡಿಗೇಹಳ್ಳಿ	2.8	ಬಿಟಿಎಂ ಲೇಔಟ್	1.7
ವನ್ನಾರ್‌ಪೇಟೆ	2.8	ನಾಗಪುರ	1.7
ವಿಶ್ವನಾಥ ನಾಗೇನಹಳ್ಳಿ	2.6	ನಂದಿನಿಲೇಔಟ್	1.7
ಬಾಣಸವಾಡಿ	2.5	ಬಾಗಲಗುಂಟೆ	1.6
ಚೌಡೇಶ್ವರಿ	2.4	ರಾಮಮೂರ್ತಿನಗರ	1.6
ಪುಲಕೇಶಿನಗರ	2.1	ಹಂಪಿನಗರ	1.5



ಮಹಾತ್ಮಗಾಂಧಿ ರಸ್ತೆಯ ಅನಿಲ್ ಕುಂಬ್ಳೆ ವೃತ್ತದಲ್ಲಿ ನಿಂತ ಮಳೆನೀರಿನಲ್ಲಿ ಸಂಚರಿಸಲು ಪಾದಚಾರಿಗಳು, ವಾಹನ ಸವಾರರು ಪ್ರಯಾಸಪಟ್ಟರು
ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಸೋಂಪುರದಲ್ಲಿ ಧಾರಾಕಾರ ಮಳೆ



ದಾಬಸಪೇಟೆ: ಶನಿವಾರ ಬೆಳಗ್ಗಿನ ಜಾವ ಹಾಗೂ ಮಧ್ಯಾಹ್ನ ಸೋಂಪುರ ಹೋಬಳಿಯಲ್ಲಿ ಧಾರಾಕಾರ ಮಳೆಯಾಗಿದೆ.

ಶುಕ್ರವಾರ ಬಿಡುವಿವುಕೊಟ್ಟ ಮಳೆ, ಶನಿವಾರ ಬೆಳಗಿನಿಂದ ಜೋರಾಗಿ ಸುರಿಯಿತು. ಇದರಿಂದ ಹೊಲಗಳಲ್ಲಿ ನೀರು ನಿಂತುಕೊಂಡಿದೆ.

ನಿರಂತರ ಮಳೆಯ ಪರಿಣಾಮ ತೋಟಗಾರಿಕೆ ಬೆಳೆಗಳಾದ ಹೂ, ತರಕಾರಿ ಟೊಮೆಟೊ ಬೆಳೆಗಳಿಗೂ ತೊಂದರೆಯಾಗಿದೆ. ಹೂವು, ಹಣ್ಣು ತರಕಾರಿ ಕೊಳೆಯುವ ಸ್ಥಿತಿ ನಿರ್ಮಾಣ ಆಗಿದೆ.



ಹೆಣ್ಣೂರು– ಬಾಗಲೂರು ಮುಖ್ಯರಸ್ತೆಯ ಎರಡೂ ಬದಿ ಮಳೆ ನೀರು ತುಂಬಿಕೊಂಡು ವಾಹನ ಸಂಚಾರ ದುಸ್ತರವಾಗಿತ್ತು



ಶೇಷಾದ್ರಿ ರಸ್ತೆಯಲ್ಲಿ ಗಾಳಿ ಮತ್ತು ಮಳೆಗೆ ರಸ್ತೆಗೆ ಉರುಳಿದ ಮರ



ಡೇರಿ ವೃತ್ತದಲ್ಲಿ ಮಳೆ ನೀರು ತುಂಬಿಕೊಂಡಿದ್ದ ಕಾರಣಕ್ಕೆ ವಾಹನಗಳು ನಿಧಾನಗತಿಯಲ್ಲಿ ಸಂಚರಿಸಿದವು

ನಟ ಮಯೂರ್ ಪಟೇಲ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿಕ್ರಮ ಪ್ರವೇಶ ಮಾಡಿ ಕಾಂಪೌಂಡ್ ಉರುಳಿಸಿ ಶೆಡ್ ನಿರ್ಮಿಸಿದ್ದ ಆರೋಪದ ಅಡಿ ನಟ ಮಯೂರ್ ಪಟೇಲ್ ಸೇರಿ ಹಲವರ ವಿರುದ್ಧ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಎಚ್‌ಎಸ್‌ಆರ್ ಲೇಔಟ್‌ನ ಸೋಮಸುಂದ್ರಪಾಳ್ಯ ನಿವಾಸಿ ಶಾಲಿನಿ ಅವರು ನೀಡಿದ ದೂರು ಆಧರಿಸಿ ಮಯೂರ್ ಪಟೇಲ್, ಎನ್‌.ಆರ್‌.ಭಟ್ಟ, ಸುಬ್ರಹ್ಮಣ್ಯ, ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿ ಹರಳಕುಂಟೆ ಗ್ರಾಮದ ಸರ್ವೆ ನಂ.: 55/10ರಲ್ಲಿ 14 ಗುಂಟೆ ಜಮೀನು ನೋಂದಾಯಿತ ದಾನಪತ್ರದ ಮೂಲಕ ತನ್ನ ಪತಿ ಮಂಜುನಾಥ ರೆಡ್ಡಿಗೆ ಬಂದಿದೆ. ಇಲ್ಲಿ, ಕಾಂಪೌಂಡ್ ಮತ್ತು ಖಾಲಿ ಜಾಗ ಇದೆ. ಈ ಜಾಗ ಕುರಿತು ಮಯೂರ್ ಪಟೇಲ್ ಮತ್ತು ಎನ್‌.ಆರ್‌.ಭಟ್ಟ ವಿರುದ್ಧ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ. ನ್ಯಾಯಾಲಯ ಸ್ವತ್ತಿನ ಯಥಾಸ್ಥಿತಿ ಕಾಯ್ದುಕೊಳ್ಳಬೇಕು. ಆದರೆ, ಆರೋಪಿಗಳು ಆದೇಶ ಉಲ್ಲಂಘಿಸಿ, ಅ.18ರಂದು ಅತಿಕ್ರಮವಾಗಿ ಪ್ರವೇಶಿಸಿ ಕಾಂಪೌಂಡ್ ಉರುಳಿಸಿ ನಷ್ಟ ಉಂಟು ಮಾಡಿದ್ದಾರೆ' ಎಂದು ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ.

ನಕ್ಸಲರಿಂದ ಸ್ಫೋಟ, ಇಬ್ಬರು ಭದ್ರತಾ ಸಿಬ್ಬಂದಿ ಹತ್ಯೆ



ನಾರಾಯಣಪುರ (ಪಿಟಿಐ): ಛತ್ತೀಸಗಢದ ನಾರಾಯಣಪುರ ಜಿಲ್ಲೆಯಲ್ಲಿ ನಕ್ಸಲೀಯರು ಕಚ್ಚಾ ಬಾಂಬ್ ಸ್ಫೋಟಿಸಿದ್ದು, ಇಂಡೊ–ಟಿಬೆಟನ್ ಗಡಿ ಪೊಲೀಸ್ (ಐಟಿಬಿಪಿ) ಪಡೆಯ ಇಬ್ಬರು ಸಿಬ್ಬಂದಿ ಮೃತಪಟ್ಟಿದ್ದಾರೆ. ಇತರ ಇಬ್ಬರಿಗೆ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಬೂಝಮಾಢ ಪ್ರದೇಶದ ಕೊಡ್ಲಿಯಾರ್ ಅರಣ್ಯದಲ್ಲಿ ಭದ್ರತಾ ಸಿಬ್ಬಂದಿಯು ನಕ್ಸಲ್ ವಿರೋಧಿ ಕಾರ್ಯಾಚರಣೆ ನಡೆಸುತ್ತಿದ್ದಾಗ ಈ ಸ್ಫೋಟ ಸಂಭವಿಸಿದೆ ಎಂದು ಬಸ್ತಾರ್ ವಲಯದ ಐಜಿಪಿ ಸುಂದರ ರಾಜ್ ಹೇಳಿದ್ದಾರೆ.

ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ಐಟಿಬಿಪಿ, ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಮತ್ತು ರಾಜ್ಯ ಪೊಲೀಸ್ ಇಲಾಖೆಯ ಜಿಲ್ಲಾ ಮೀಸಲು ಪಡೆ ಮತ್ತಿತರ ಪಡೆಗಳ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಕಾರ್ಯಾಚರಣೆ ನಡೆಸಿ ಹಿಂದಿರುಗುವಾಗ ಸ್ಫೋಟ ಆಗಿದೆ. ನಾಲ್ಕು ಮಂದಿ ಭದ್ರತಾ ಸಿಬ್ಬಂದಿಗೆ ಗಾಯಗಳಾಗಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಐಟಿಬಿಪಿ ಸಿಬ್ಬಂದಿ ಆಸ್ಪತ್ರೆಗೆ ಕರೆದೊಯ್ಯುವ ಸಂದರ್ಭದಲ್ಲಿ ಮೃತಪಟ್ಟರು.

ಏಳು ಜಿಲ್ಲೆಗಳಿರುವ ಬಸ್ತಾರ್ ವಲಯದಲ್ಲಿ ಈ ವರ್ಷ ನಕ್ಸಲ್ ಸಂಬಂಧಿ ಘಟನೆಗಳಲ್ಲಿ 17 ಮಂದಿ ಪೊಲೀಸರು ಅಸುನೀಗಿದ್ದಾರೆ. ಇದೇ ಅವಧಿಯಲ್ಲಿ ನಡೆದ ಎನ್‌ಕೌಂಟರ್‌ಗಳಲ್ಲಿ ಭದ್ರತಾ ಪಡೆಗಳ ಗುಂಡಿಗೆ 189 ಮಂದಿ ನಕ್ಸಲೀಯರು ಮೃತಪಟ್ಟಿದ್ದಾರೆ.

ಮಹೇಶ್ ಊಗಿನಹಳ್ಳಿ, ವಿಜಯಲಕ್ಷ್ಮಿಗೆ ಕನ್ನಡ ಸಂಘರ್ಷ ಸಮಿತಿ ಪ್ರಶಸ್ತಿ



ಮಹೇಶ್ ಊಗಿನಹಳ್ಳಿ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ನೀಡುವ 'ಕನ್ನಡ ಕಟ್ಟಾಳು' ಪ್ರಶಸ್ತಿಗೆ ಕನ್ನಡ ಪರ ಹೋರಾಟಗಾರ ಮಹೇಶ್ ಊಗಿನಹಳ್ಳಿ ಹಾಗೂ 'ನಿಸ್ಸೀಮ ಕನ್ನಡತಿ' ಪ್ರಶಸ್ತಿಗೆ ಕನ್ನಡ ಕಾರ್ಯಕರ್ತೆ ಎಂ.ಬಿ.ವಿಜಯಲಕ್ಷ್ಮಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ಸ್ಮರಣಿಕೆ ಹಾಗೂ ತಲಾ ₹ 11 ಸಾವಿರ ನಗದು ಒಳಗೊಂಡಿದೆ. ನ.10ರಂದು ನಗರದಲ್ಲಿ ನಡೆಯುವ ಸಮಿತಿಯ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಸಾಹಿತಿ ಹಂ.ಪ. ನಾಗರಾಜಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಲಿದ್ದು, ಜಯಲಕ್ಷ್ಮಿ ಪಾಟೀಲ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ರಾಮಣ್ಣ ಎಚ್‌.ಕೋಡಿಹೊಸಹಳ್ಳಿ ಅಧ್ಯಕ್ಷತೆ ವಹಿಸುವರು ಎಂದು ಸಮಿತಿಯ ಅಧ್ಯಕ್ಷ ಎ.ಎಸ್‌.ನಾಗರಾಜಸ್ವಾಮಿ ತಿಳಿಸಿದ್ದಾರೆ.

ಹೈದರಾಬಾದ್ ರೇಸ್

ಅಶೋಕ ಗೆಲ್ಲುವ ನಿರೀಕ್ಷೆ

ಬೋಲ್ಡ್ ವೆಂಚರ್ ಪ್ಲೇಟ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಶೋಕ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:50ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮಿಕ್ಸ್ ದಿ ಮ್ಯಾಜಿಕ್ 1, ಗ್ಲೋರಿಯಾ 2, ಅನಹಿಟ 8
2ನೇ ರೇಸ್: ಸ್ಟಾರ್ ಫಾರೆವರ್ 2, ಟೆರೆಂಗ 1, ಕಿಂಗ್ಸ್ ಬೆಸ್ಟ್ 6
3ನೇ ರೇಸ್: ಬೆಲ್ಲಿಂಗ್‌ಹ್ಯಾಮ್ 1, ದಟ್ಸ್ ಮೈ ಮಿಷನ್ 2, ಲಿಂಡಾ 3
4ನೇ ರೇಸ್: ಅಶೋಕ 1, ಕ್ಯಾಂಡಿ ಗರ್ಲ್ 2, ಮಿಸ್ ಮಾಯ 3
5ನೇ ರೇಸ್: ಹರಿಕೇನ್ ಬೇ 9, ಫ್ಲೈ ಟು ದಿ ಸ್ಟಾರ್ಸ್ 6, ಲಾಸ್ಟ್ ವಿಶ್ 1
6ನೇ ರೇಸ್: ಶ್ಯಾಡೊಫ್ಯಾಕ್ಸ್ 2, ಪ್ರೌಡ್ ಮೇರಿ 1, ಫೈನಲ್ ಜಡ್ಜ್‌ಮೆಂಟ್ 6

ಉತ್ತಮ ಬೆಟ್: ಮಿಕ್ಸ್ ದಿ ಮ್ಯಾಜಿಕ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6


ಆರ್‌.ವಿ.ಟೀಚರ್ ಕಾಲೇಜಿನಲ್ಲಿ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಆಯೋಜಿಸಿದ್ದ ಭೂಮಿಕಾ ಕ್ಲಬ್ ಕಾರ್ಯಕ್ರಮದಲ್ಲಿ ಮಹಿಳೆಯರು ಡ್ರಮ್ ಸಹಿತ ವಿವಿಧ ವಾದನಗಳನ್ನು ನುಡಿಸಿದರು ಪ್ರಜಾವಾಣಿ ಚಿತ್ರ/ ಎಂ.ಎಸ್‌.ಮಂಜುನಾಥ್

ಪುಳಕಗೊಳಿಸಿದ ನಟಿಯರ ಮನದ ಮಾತು, ಸೀರೆ ಉಡುವ ಪ್ರಾತ್ಯಕ್ಷಿಕೆ, ಅಡುಗೆ ಕಾರ್ಯಕ್ರಮ

‘ಭೂಮಿಕಾ’ದಲ್ಲಿ ಬೀಟ್ ಗುರು ಹವಾ..!


ನಟಿ ಸಾಕ್ಷಿ ಮೇಘನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೆಡೆ ವೇದಿಕೆಯಲ್ಲಿ ಬೀಟ್ ಗುರು ತಂಡ ಡ್ರಮ್ ನುಡಿಸುತ್ತಿದ್ದರೆ, ಪ್ರೇಕ್ಷಕರೂ ಡ್ರಮ್ ಸಹಿತ ವಿವಿಧ ವಾದನಗಳನ್ನು ಬಾರಿಸಿ ಸಂಭ್ರಮಪಟ್ಟರು.

ಜಯನಗರದ ಆರ್‌.ವಿ.ಟೀಚರ್ಸ್ ಕಾಲೇಜು ಸಭಾಂಗಣದಲ್ಲಿ ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ನ ಭೂಮಿಕಾ ಕ್ಲಬ್ ಶನಿವಾರ ಆಯೋಜಿಸಿದ್ದ 21ನೇ ಆವೃತ್ತಿಯ ಕಾರ್ಯಕ್ರಮ ಇದಕ್ಕೆ ವೇದಿಕೆಯಾಯಿತು.

ಬೀಟ್ ಗುರು ತಂಡದ ಸದಸ್ಯರೇ ವಾದನಗಳನ್ನು ಪ್ರೇಕ್ಷಕರಿಗೆ ಸರಬರಾಜು ಮಾಡಿ ಉತ್ಸಾಹ ತುಂಬಿದರು.

‘ಫ್ರೀಡಂ ಆಯಿಲ್’ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸೀರೆ ಉಡುವ ಕಲೆ, ಅಡುಗೆ ತಯಾರಿಗಳು, ನಟಿಯರ ಮನದ ಮಾತುಗಳು ಪುಳಕಗೊಳಿಸಿದವು.

ನಟಿಯರಾದ ಸಾಕ್ಷಿ ಮೇಘನಾ ಮತ್ತು ಸುಕೃತಾ ವಾಗ್ಲೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

‘ಎಲ್ಲರಲ್ಲಿಯೂ ಪ್ರತಿಭೆ ಇರುತ್ತದೆ. ಕಾಲ ಕೂಡಿ ಬಂದಾಗ ಸೂಕ್ತ ವೇದಿಕೆ ಸಿಕ್ಕಿದಾಗ ಅದು ಅನಾವರಣಗೊಳ್ಳುತ್ತದೆ. ಕಾಲ ಮತ್ತು ನಮ್ಮ ಶಕ್ತಿಯ ಮೇಲೆ ನಂಬಿಕೆ ಇಡಬೇಕು. ನಮ್ಮ ಪ್ರಯತ್ನದಲ್ಲಿ ಎದುರಾಗುವ ಸವಾಲುಗಳಿಗೆ ಕುಗ್ಗಬಾರದು. ನಮ್ಮ ದೌರ್ಬಲ್ಯ ಏನು ಎಂದು ಕಂಡುಕೊಂಡು, ಅದನ್ನು ತಿದ್ದಿಕೊಂಡು ಮುನ್ನಡೆಯಬೇಕು’ ಎಂದು ಸಾಕ್ಷಿ ಮೇಘನಾ ಸಲಹೆ ನೀಡಿದರು.

‘ಹೆಣ್ಣುಮಕ್ಕಳು ತಮಗಾಗಿ ತಾವು ಬದುಕುವುದನ್ನು ಕೂಡ ಕಲಿಯಬೇಕು. ಸುಖ–ದುಃಖ ಎಂಬುದು ನಮ್ಮೆರಡು ಕಣ್ಣುಗಳು ಎಂದು ತಿಳಿಯಬೇಕು. ಎಲ್ಲ ಸಾಧಕರ ಹಿಂದೆ ಸಂಘರ್ಷದ ಕಥೆ ಇರುತ್ತದೆ. ಯಾರೂ ಸುಲಭವಾಗಿ ಸಾಧನೆ ಮಾಡಿರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದರು.

ಸುಕೃತಾ ವಾಗ್ಲೆ ಮಾತನಾಡಿ, ‘ನಾವು ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರೂ ಅದನ್ನು ಪ್ರೀತಿಸುವುದನ್ನು ಕಲಿಯಬೇಕು. ಆತ್ಮವಿಶ್ವಾಸ ಇದ್ದರೆ ಮಾತ್ರ ಸಾಧನೆ ಮಾಡಲು ಸಾಧ್ಯ’ ಕಿವಿ ಮಾತು ಹೇಳಿದರು.

‘ಹೆಣ್ಣು ಮಕ್ಕಳು ಮೊದಲ ಆದ್ಯತೆಯನ್ನು ಹೆತ್ತವರು, ಗಂಡ, ಮಕ್ಕಳಿಗೆ ನೀಡುತ್ತಾರೆ. ಅವರಿಗಾಗಿ ಯಾವ ತ್ಯಾಗವನ್ನಾದರೂ ಮಾಡುತ್ತಾರೆ. ಪ್ರಾಣ ನೀಡಲೂ ಸಿದ್ಧರಿರುತ್ತಾರೆ. ಅದು ನಮ್ಮ ಶಕ್ತಿಯೂ ಹೌದು, ದೌರ್ಬಲ್ಯವೂ ಹೌದು. ನಾವು ಸರಿ ಇದ್ದರೆ, ಆರೋಗ್ಯವಾಗಿದ್ದರೆ ಮಾತ್ರ ಎಲ್ಲ ನಮ್ಮ ಜೊತೆಗೆ ಇರುತ್ತಾರೆ ಎಂಬುದನ್ನು ಅರ್ಥ ಮಾಡಿಕೊಂಡು ಬದುಕಬೇಕು’ ಎಂದು ತಿಳಿಸಿದರು.

ಬಾಣಸಿಗರಾದ ಪೂಜಾ ಪಾಟೀಲ ಅವರು ವಿವಿಧ ಅಡುಗೆಗಳ ಬಗ್ಗೆ ಮಾಹಿತಿ ನೀಡಿದರಲ್ಲದೇ ಮಹಾರಾಷ್ಟ್ರದ ತಿನಿಸು ದಹಿ ತಡ್ಕಾ ತಯಾರಿಯ ಪ್ರಾತ್ಯಕ್ಷಿಕೆ ನೀಡಿದರು. ನಿರೂಪಕಿ ನಿಖಿತಾ ಪ್ರೇಕ್ಷಕರಿಗೆ ವಿವಿಧ ಆಟಗಳನ್ನು ಆಡಿಸಿ ಹುರಿದುಂಬಿಸಿದರು.



ಸೀರೆ ಉಡುವ ಕಲೆ

ಯಾವುದೇ ಕಾರ್ಯಕ್ರಮ ಇದ್ದಾಗ ಸೀರೆ ಉಡುವುದಕ್ಕೇ ಹೆಣ್ಣು ಮಕ್ಕಳ ಸಮಯ ಹೆಚ್ಚು ವ್ಯಯವಾಗುತ್ತದೆ. ಅದನ್ನು ತಪ್ಪಿಸುವುದಕ್ಕಾಗಿ, ಸೀರೆಯನ್ನು ನೆರಿಗೆ, ಸೆರಗು ಸಹಿತ ಮೊದಲೇ ಪಿನ್ ಮಾಡಿ ಇಟ್ಟುಕೊಳ್ಳುವ ಮತ್ತು ಒಯ್ಯುವ ರೀತಿ ಹಾಗೂ ಕಾರ್ಯಕ್ರಮದ ದಿನ ಐದೇ ನಿಮಿಷದಲ್ಲಿ ಸೀರೆ ಉಡುವ ಬಗೆಯನ್ನು ಅಶ್ವಿನಿ ಶೆಣೈ ತಿಳಿಸಿಕೊಟ್ಟರು.

ಅಶ್ವಿನಿ ಶೆಣೈ ಅವರು ಸೀರೆ ಉಡುವ ಕಲೆ ಮತ್ತು ಮೇಕಪ್ ಕಾರ್ಯಾಗಾರ ನಡೆಸಿಕೊಟ್ಟರು


ನಟಿ ಸುಕೃತಾ ವಾಗ್ಲೆ


ಪೂಜಾ ಪಾಟೀಲ ಅಡುಗೆ ಮಾಡುತ್ತಿರುವ ದೃಶ್ಯ

ಪಂಡಿತ್ ರಾಜೀವ್ ತಾರಾನಾಥರ 92ನೇ ಜನ್ಮದಿನದ ಸಮಾರಂಭ

ಹಲವರಿಂದ ಸಮಾನತೆ: ಹಂಸಲೇಖ

ಬೆಂಗಳೂರು: ‘ದೇಶದ ಮಣ್ಣಿನಲ್ಲಿ ಅಹಿಂಸೆಯ ಬೀಜ ಯಾರಿಂದ ಬಿತ್ತನೆ ಆಗಿದೆಯೊ ಗೊತ್ತಿಲ್ಲ. ಆದರೆ, ಸಮಾನತೆಯನ್ನು ಸಾರಿದವರು ಹಲವರಿದ್ದಾರೆ’ ಎಂದು ಸಂಗೀತ ನಿರ್ದೇಶಕ ಹಂಸಲೇಖ ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಪಂಡಿತ್ ರಾಜೀವ್ ತಾರಾನಾಥ ಮೆಮೋರಿಯಲ್ ಟ್ರಸ್ಟ್ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ‘ಪಂಡಿತ್ ರಾಜೀವ್ ತಾರಾನಾಥರ 92ನೇ ಜನ್ಮ ದಿನದ ಸಮಾರಂಭ’ದಲ್ಲಿ ಅವರು ಮಾತನಾಡಿದರು.

‘ರಾಜೀವ್ ತಾರಾನಾಥ ಅವರು ಸಂಗೀತ ಕ್ಷೇತ್ರದಲ್ಲಿದ್ದು ಬಹುತ್ವದ ಧ್ವನಿಯಾಗಿ ತಮ್ಮ ಧ್ವನಿಯನ್ನು ದಕ್ಕಿಸಿಕೊಂಡವರು. ಸಂಗೀತ ಕ್ಷೇತ್ರದ ದಿಗ್ಗಜರಾಗಿ ಬಹುತ್ವ, ಸಮನ್ವಯತೆಯ ದನಿಯಾದ ತಾರಾನಾಥರ ಸಾಮಾಜಿಕ ಚಿಂತನೆ ಮುಂದಿನ ಪೀಳಿಗೆಗೆ ವರ್ಗಾವಣೆಯಾಗಬೇಕು’ ಎಂದು ಅಭಿಪ್ರಾಯಪಟ್ಟರು.

ರಾಜೀವ್ ತಾರಾನಾಥ ಸ್ಮರಣಾರ್ಥ ಸ್ಥಾಪಿಸಿರುವ ಟ್ರಸ್ಟ್‌ನಿಂದ ಅವರ ಆಶಯಗಳನ್ನು ಎತ್ತಿ ಹಿಡಿಯುವ, ಜತೆಗೆ ಮುಂದಿನ ಪೀಳಿಗೆಗೆ ಅವರ ಸಂಗೀತ ಲಭ್ಯವಾಗುವಂತೆ ಮಾಡಬೇಕು. ಸಂಗೀತ ಮಾಧ್ಯಮದ ಮೂಲಕ ಅವರ ಚಿಂತನೆಗಳನ್ನು ಪಸರಿಸಬೇಕು ಎಂದರು.

‘ಹೊಸ ಪೀಳಿಗೆಯವರು ಕನ್ನಡದ ಓದಿನಿಂದ ದೂರವಾಗುತ್ತಿದ್ದಾರೆ. ಇದರಿಂದ ಸಂಗೀತ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಹೊಸಬರು ಬರುತ್ತಿಲ್ಲ’ ಎಂದು ಲೇಖಕ ಬೊಳುವಾರು ಮಹಮದ್ ಕುಂಞಿ ಆತಂಕ ವ್ಯಕ್ತಪಡಿಸಿದರು.

ತಾರಾನಾಥ ಅವರೊಂದಿಗಿನ ತಮ್ಮ ಒಡನಾಟವನ್ನು ಸ್ಮರಿಸಿದ ಮೊಹಮದ್, ‘ತಬಲಾ, ಇಂಗ್ಲಿಷ್ ಸಾಹಿತ್ಯದ ಅಧ್ಯಯನ, ಸರೋದ್ ಕ್ಷೇತ್ರಗಳ ಬಹುಮುಖ ಪ್ರತಿಭೆಯಾಗಿದ್ದವರು ತಾರಾನಾಥ್. ದೊಡ್ಡ ಶಿಷ್ಯ ಪರಂಪರೆಯನ್ನು ಬೆಳೆಸಿದ ಕೀರ್ತಿಯೂ ಅವರದ್ದು’ ಎಂದರು.

ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್‌.ಎನ್. ಮುಕುಂದರಾಜ್, ಲೇಖಕಿ ಸರ್ವಮಂಗಳ ಮಾತನಾಡಿದರು. ವೆಂಕಟೇಶ್ ಕುಮಾರ್, ಕೇಶವ ಜೋಶಿ, ಪಂಚಾಕ್ಷರಿ ಹಿರೇಮಠ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಿತು.


ಪಂಡಿತ್ ರಾಜೀವ್ ತಾರನಾಥ ಅವರ ಭಾವಚಿತ್ರಕ್ಕೆ ಮೆಮೋರಿಯಲ್ ಟ್ರಸ್ಟ್ ವ್ಯವಸ್ಥಾಪಕ ಟ್ರಸ್ಟಿ ಕೃಷ್ಣ ಮನವಲ್ಲಿ, ಲೇಖಕಿ ಸರ್ವಮಂಗಳ, ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌.ಮುಕುಂದರಾಜ್, ಲೇಖಕ ಬೊಳುವಾರು ಮಹಮ್ಮದ್ ಕುಂಞಿ, ಲೇಖಕಿ ವಿಜಯಮ್ಮ, ಸಂಗೀತ ನಿರ್ದೇಶಕ ಹಂಸಲೇಖ ಅವರು ಪುಷ್ಪನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ತನಿಖಾಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌.ಆರ್‌.ನಗರ ಕ್ಷೇತ್ರದಲ್ಲಿ ನಡೆದಿದ್ದ ನಕಲಿ ವೋಟರ್ ಐ.ಡಿ ಪ್ರಕರಣದ ತನಿಖೆ ವೇಳೆ ಹೈಕೋರ್ಟ್ ಆದೇಶ ಉಲ್ಲಂಘಿಸಿ ಕರ್ತವ್ಯ ಲೋಪ ಎಸಗಿದ ತನಿಖಾಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ವಿಧಾನ ಪರಿಷತ್ ಮಾಜಿ ಸದಸ್ಯ ಪಿ.ಎಂ.ಮುನಿರಾಜುಗೌಡ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರಿಗೆ ಶನಿವಾರ ದೂರು ನೀಡಿದರು.

ಶನಿವಾರ ತಮ್ಮ ವಕೀಲರ ಜತೆಗೆ ಕಮಿಷನರ್ ಕಚೇರಿ ಬಂದ ಅವರು ಕೆಲವು ದಾಖಲೆಗಳನ್ನು ಸಲ್ಲಿಸಿದರು. ನಕಲಿ ವೋಟರ್ ಐ.ಡಿ ಹಗರಣ ಸಂಬಂಧ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ 2018ರಲ್ಲಿ ಎರಡು ಪ್ರಕರಣಗಳು ದಾಖಲಾಗಿದ್ದವು.

ನೋಂದಣಿ ಮಸೂದೆಗೆ ಅಂಕಿತ

ಬೆಂಗಳೂರು: ಉಪ–ನೋಂದಣಾಧಿಕಾರಿ ಕಚೇರಿಗೆ ಭೇಟಿ ನೀಡದೆಯೇ ಆಸ್ತಿ ನೋಂದಣಿಗೆ ಅವಕಾಶ ಕಲ್ಪಿಸುವ ‘ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆ’ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇದೇ 8ರಂದು ಅಂಕಿತ ಹಾಕಿದ್ದಾರೆ. ಮಸೂದೆಗೆ ವಿಧಾನಮಂಡಲ ಇದೇ ಫೆಬ್ರುವರಿಯಲ್ಲಿ ಅನುಮೋದನೆ ನೀಡಿತ್ತು. ಅದನ್ನು ರಾಜ್ಯಪಾಲರ ಅನುಮೋದನೆಗೆ ಕಳುಹಿಸಲಾಗಿತ್ತು. ಆದರೆ, ಅವರು ಕೆಲ ಸ್ಪಷ್ಟನೆಗಳನ್ನು ಕೇಳಿ ಸರ್ಕಾರಕ್ಕೆ ಮರಳಿಸಿದ್ದರು. ಸರ್ಕಾರ ವಿವರಣೆ ನೀಡಿದ ನಂತರ ರಾಷ್ಟ್ರಪತಿಯ ಅಂಕಿತಕ್ಕೆ ಮೀಸಲಿಟ್ಟು, ಅಂಕಿತ ಹಾಕಿದ್ದ ರಾಜ್ಯಪಾಲರು, ಸೆ.19ರಂದು ಕೇಂದ್ರಕ್ಕೆ ಕಳುಹಿಸಿದ್ದರು.

ಆಂಧ್ರ: ಮಾಜಿ ಸಂಸದರ ಮನೆ ಮೇಲೆ ಇ.ಡಿ ದಾಳಿ

ಹೈದರಾಬಾದ್ (ಪಿಟಿಐ): ವೈಎಸ್‌ಆರ್‌ಸಿಪಿ ಮಾಜಿ ಸಂಸದ, ತೆಲುಗು ಚಿತ್ರ ನಿರ್ಮಾಪಕ ಎಂ.ವಿ.ವಿ. ಸತ್ಯನಾರಾಯಣ ಮತ್ತು ಇತರರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ಜಾರಿ ನಿರ್ದೇಶನಾಲಯವು (ಇ.ಡಿ.) ಶನಿವಾರ ದಾಳಿ ನಡೆಸಿದೆ.

‘ಅಪರಾಧಗಳು ಡಿಜಿಟಲ್ ಸ್ವರೂಪ ಪಡೆದಿವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪರಾಧ ಕೃತ್ಯದ ಸ್ವರೂಪ ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ಸ್ವರೂಪ ಪಡೆದುಕೊಳ್ಳುತ್ತಿವೆ’ ಎಂದು ನಿವೃತ್ತ ಪೊಲೀಸ್ ಮಹಾನಿರ್ದೇಶಕ ಡಿ.ವಿ. ಗುರುಪ್ರಸಾದ್ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಮನೆಯಂಗಳದಲ್ಲಿ ಮಾತುಕತೆ’ ಕಾರ್ಯಕ್ರಮದಲ್ಲಿ ಮನದಾಳದ ಮಾತುಗಳನ್ನು ಹಂಚಿಕೊಂಡರು.


ಡಿ.ವಿ. ಗುರುಪ್ರಸಾದ್

‘ಆರೋಪಿಗಳು ಸದ್ಯ ಡಿಜಿಟಲ್ ಬಂಧನದ ಹೆಸರಿನಲ್ಲಿ ಕೋಟ್ಯಂತರ ಹಣ ಲೂಟಿ ಮಾಡುತ್ತಿದ್ದಾರೆ. ಮನೆಗಳಲ್ಲಿ ಕಳವು ಕಡಿಮೆ ಆಗುತ್ತಿದ್ದು, ಡಿಜಿಟಲ್ ಅಪರಾಧಗಳ ಹೆಚ್ಚಾಗಿವೆ. ಕೊಲೆ, ದರೋಡೆ, ಅತ್ಯಾಚಾರ ಹಿಂದಿನ ರೀತಿಯಲ್ಲಿ ನಡೆಯುತ್ತಿವೆ’ ಎಂದರು.

‘ಈಗ ಬೀಭತ್ಸ ಅಪರಾಧ ಪ್ರಕರಣಗಳ ಸಂಖ್ಯೆ ಹೆಚ್ಚಿವೆ. ಇತ್ತೀಚೆಗೆ ಮಲ್ಲೇಶ್ವರದಲ್ಲಿ ಮಹಿಳೆ ದೇಹವನ್ನು 60 ತುಂಡುಗಳಾಗಿ ಕತ್ತರಿಸಿ ಕೊಲೆ ಮಾಡಲಾಗಿತ್ತು. ನಾವು ನೌಕರಿಗೆ ಸೇರುವಾಗ ಇಂತಹ ಕೃತ್ಯಗಳ ಬಗ್ಗೆ ಕೇಳಿರಲಿಲ್ಲ. ಈಗ ಮಾಮೂಲಿಯಾಗಿವೆ’ ಎಂದರು.

‘ನಾನು ಭ್ರಷ್ಟಾಚಾರ ನಿಗ್ರಹ ದಳದಲ್ಲಿ ಇದ್ದಾಗ ಸರ್ಕಾರದ ಮುಖ್ಯಕಾರ್ಯದರ್ಶಿಯೊಬ್ಬರ ಮನೆ ಮೇಲೆ ದಾಳಿ ಮಾಡಲಾಗಿತ್ತು. ಅಲ್ಲಿ ಸಿಕ್ಕ ಹಣದಲ್ಲಿ ಶೇ 50ರಷ್ಟು ನನಗೆ ಆಮಿಷ ಒಡ್ಡಿದ್ದರು. ಆ ಮಾಹಿತಿಯನ್ನು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಿದ್ದೆ’ ಎಂದು ಸ್ಮರಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕಿ ಬನಶಂಕರಿ ಅಂಗಡಿ ಉಪಸ್ಥಿತರಿದ್ದರು.

ನಗರದಲ್ಲಿ ಇಂದು


‘ಸೇವಾ ಸಂಕಲ್ಪ’: ಬೃಹತ್ ರಕ್ತದಾನ ಶಿಬಿರ, ಆರೋಗ್ಯ ತಪಾಸಣೆ, ಆಯೋಜನೆ: ಅಭಯ, ಸ್ಥಳ: ರಾಮಮಂದಿರ ಮೈದಾನ, ರಾಜಾಜಿನಗರ, ಬೆಳಿಗ್ಗೆ 6.30ರಿಂದ

ಕನ್ನಡ ನಾಡು ನುಡಿ ನಿತ್ಯೋತ್ಸವ ಮತ್ತು ‘ಎಂ.ಎಸ್.ಎನ್.–75’ ಅಭಿನಂದನಾ ಕಾರ್ಯಕ್ರಮ, ಎಂ.ಎಸ್.ಎನ್., ಅವರ ‘ಪುತ್ರಕಾಮ್ಯ’, ‘ನಾ ಕಂಡಂತೆ ಎಂ.ಎಸ್.ಎನ್.,’ ಪುಸ್ತಕಗಳ ಬಿಡುಗಡೆ: ಉದ್ಘಾಟನೆ: ‘ಸಿಹಿಕಹಿ’ ಚಂದ್ರು, ಅತಿಥಿಗಳು: ತೇಜಸ್ವಿ ಸೂರ್ಯ, ಪುಸ್ತಕದ ಬಗ್ಗೆ: ಡಾ.ನಾ.ಸೋಮೇಶ್ವರ, ಸನ್ಮಾನ: ಎಂ.ಎಸ್.ನರಸಿಂಹಮೂರ್ತಿ, ಅಧ್ಯಕ್ಷತೆ: ಬಾಬು ಕೃಷ್ಣಮೂರ್ತಿ, ಆಯೋಜನೆ: ಜಾಗೃತಿ ಟ್ರಸ್ಟ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 9.30ರಿಂದ

‘ನಿಧಿ’ ಪುಸ್ತಕ ಬಿಡುಗಡೆ: ಭಾಗವಹಿಸುವವರು: ನಾರಾಯಣಗೌಡ, ವೀರಕಪುತ್ರ ಶ್ರೀನಿವಾಸ್, ರತೀಶ ರತ್ನಾಕರ, ಜಮೀಲ್, ರೂಪೇಶ್ ರಾಜಣ್ಣ, ಪ್ರಮೋದ್ ಶೆಟ್ಟಿ, ದಾಕ್ಷಾಯಿಣಿ ಭಟ್, ಬೇಲೂರು ರಘುನಂದನ್, ಸ್ಥಳ: ಆರ್‌.ವಿ. ಟೀಚರ್ಸ್ ಕಾಲೇಜು ಕಟ್ಟಡ, ಲಾಲ್‌ಬಾಗ್ ಮೆಟ್ರೊ ನಿಲ್ದಾಣದ ಹತ್ತಿರ, ಜಯನಗರ, ಬೆಳಿಗ್ಗೆ 10

ಲೇಖಕರೊಂದಿಗೆ ಭೇಟಿ: ಕೆ.ವಿ. ನಾರಾಯಣ, ಆಯೋಜನೆ ಮತ್ತು ಸ್ಥಳ: ಸಾಹಿತ್ಯ ಅಕಾಡೆಮಿಯ ಸಭಾಂಗಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10.30

ಆನಂದರಾಮ ಉಪಾಧ್ಯ ಅವರ ‘ಯಕ್ಷ ಸಂಕಾಶ’ ಪುಸ್ತಕ ಬಿಡುಗಡೆ: ನರಹಳ್ಳಿ ಬಾಲಸುಬ್ರಹ್ಮಣ್ಯ, ಅತಿಥಿ: ಜೋಗಿ, ಉಪಸ್ಥಿತಿ: ಎಚ್.ಎಸ್. ವೆಂಕಟೇಶಮೂರ್ತಿ, ಅಧ್ಯಕ್ಷತೆ: ತಲ್ಲೂರು ಶಿವರಾಮ ಶೆಟ್ಟಿ, ಆಯೋಜನೆ: ಐಸಿರಿ ಪ್ರಕಾಶನ, ಯಕ್ಷ ವಾಹಿನಿ, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30


ಹಂ.ಪ. ನಾಗರಾಜಯ್ಯ

‘ಸಂಸ್ಕೃತಿ ಸಂಗಮ–2024’ ಪ್ರಶಸ್ತಿ ಪ್ರದಾನ: ವಿ.ಸೋಮಣ್ಣ, ಸಾನ್ನಿಧ್ಯ: ಅಲ್ಲಮಪ್ರಭು ಸ್ವಾಮೀಜಿ, ಅಧ್ಯಕ್ಷತೆ: ಹಂ.ಪ. ನಾಗರಾಜಯ್ಯ, ಸಂಸ್ಕೃತಿ ಸಂಗಮ ವಿಶೇಷ ಸಂಚಿಕೆ ಬಿಡುಗಡೆ: ಟಿ.ಎನ್. ಸೀತಾರಾಂ, ಪ್ರಾಸ್ತಾವಿಕ ನುಡಿ: ಸಿ. ಸೋಮಶೇಖರ, ಪ್ರಶಸ್ತಿ ಪುರಸ್ಕೃತರು: ಬಸವರಾಜ ಸಬರದ, ಕೃಷ್ಣ ಕೊಲ್ಹಾರ ಕುಲಕರ್ಣಿ, ಬಸವರಾಜ ನೆಲ್ಲಿಸರ, ಜಯದೇವಿ ಜಂಗಮಶೆಟ್ಟಿ, ಆಯೋಜನೆ: ಡಾ.ಸಿ. ಸೋಮಶೇಖರ–ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

‘ದುಡಿಯುವ ಮಾನಿನಿಯರ ಮಹಾಸಂಗಮ’: ಉದ್ಘಾಟನೆ: ಸಂತೋಷ್ ಎಸ್. ಲಾಡ್, ಅತಿಥಿಗಳು: ನಾಗಲಕ್ಷ್ಮಿ ಚೌಧರಿ, ಬಾಬು ಮ್ಯಾಥ್ಯೂ, ಇಶ್ರತ್ ನಿಸಾರ್, ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯ, ಆಯೋಜನೆ: ಮುನ್ನಡೆ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಮತ್ತು ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 10.30

‘ಆರ್ಟ್ ಪಾರ್ಕ್ ಬೆಂಗಳೂರು’: ಅತಿಥಿ: ಎಂ.ಸಿ. ನರೇಂದ್ರ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಶೇಷಾದ್ರಿಪುರ, ಬೆಳಿಗ್ಗೆ 11

ಸಂಗೀತ ಸಾಮ್ರಾಟ್ ವಿಜಯಭಾಸ್ಕರ್ ಜನ್ಮ ಶತಮಾನೋತ್ಸವ ಕಾರ್ಯಕ್ರಮ: ‘ಚಿತ್ರರಂಗಕ್ಕೆ ವಿಜಯಭಾಸ್ಕರ್ ಅವರ ಕೊಡುಗೆಗಳು’: ಅಧ್ಯಕ್ಷತೆ: ದೊಡ್ಡರಂಗೇಗೌಡ, ಬಿ.ಕೆ. ಸುಮಿತ್ರ, ಎಸ್.ಆರ್. ರಾಮಕೃಷ್ಣ, ಮನುಚಕ್ರವರ್ತಿ, ಚಿದಂಬರ ಕಾಕತ್ಕರ್, ‘ವಿಜಯಭಾಸ್ಕರ್ ಒಡನಾಟದ ನೆನಪುಗಳು’: ಅಧ್ಯಕ್ಷತೆ: ಶ್ರೀನಾಥ್, ರಾಮಕೃಷ್ಣ, ಶ್ರೀಧರ್, ಕಸ್ತೂರಿ ಶಂಕರ್, ಎಚ್.ಎಂ.ಎಂ. ಪ್ರಕಾಶ್, ಸಮಾರೋಪ ಸಮಾರಂಭ: ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ‘ವಿಜಯಭಾಸ್ಕರ್ ಅವರ ಜೀವನ ಚಿತ್ರ ಎಲ್ಲೆಲ್ಲೂ ಸಂಗೀತವೇ’ ಪುಸ್ತಕ ಬಿಡುಗಡೆ: ಮಹೇಶ ಜೋಶಿ, ಅತಿಥಿಗಳು: ಹಂಸಲೇಖ, ನಾಗಲಕ್ಷ್ಮಿ ಪುಟ್ಟಣ್ಣ ಕಣಗಾಲ್, ಸಾಧು ಕೋಕಿಲ, ಆಯೋಜನೆ: ಸಂಗೀತ ಸಾಮ್ರಾಟ್ ಶ್ರೀ ವಿಜಯಭಾಸ್ಕರ್ ಜನ್ಮ ಶತಮಾನೋತ್ಸವ ಸಮಿತಿ, ಸ್ಥಳ: ಇಂದಿರಾನಗರ ಸಂಗೀತ ಸಭಾಂ ಪುರಂದರ ಭವನ, ಎಂಟನೇ ಮುಖ್ಯರಸ್ತೆ, ಎಚ್‌ಎಎಲ್ ಎರಡನೇ ಹಂತ, ಮಧ್ಯಾಹ್ನ 2ರಿಂದ


ದೊಡ್ಡರಂಗೇಗೌಡ

ಅಚ್ಯುತದಾಸ ಮತ್ತು ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್ ಸ್ಮರಣಾರ್ಥ ‘ಕಥಾಕೀರ್ತನ ವೈಭವ–2024’: ಗುರುನಮನ: ಪಾವನಿ ಭಾರದ್ವಾಜ್, ತಬಲಾ: ಯೋಗೀಶ್ ಭಟ್, ಹಾರ್ಮೋನಿಯಂ: ಸತ್ಯಜೀತ್ ಸಂಜು, ಉಪಸ್ಥಿತಿ: ಸ್ವಾಮಿ ಸೌಖ್ಯಾನಂದ ಮಹಾರಾಜ್, ‘ಕೀರ್ತನ ಸೇವಾರತ್ನ ಪ್ರಶಸ್ತಿ’ ಪುರಸ್ಕೃತರು: ಕೆ. ಮಹಾಬಲ ಶೆಟ್ಟಿ, ‘ಲಕ್ಷ್ಮಣದಾಸ ವೇಲಣಕರ್ ಸ್ಮರಣಾರ್ಥ ಯುವ ಪುರಸ್ಕಾರ’ ಪುರುಸ್ಕೃತರು: ಶ್ರದ್ಧಾ ಗುರುದಾಸ, ಹರಿಕಥೆ: ಎಸ್.ಪಿ. ಗುರುದಾಸ, ಆಯೋಜನೆ: ಶಡ್ಜ ಕಲಾ ಕೇಂದ್ರ ಟ್ರಸ್ಟ್, ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4.30

ಏಳನೇ ಭಾರತೀಯ ಸಂಸ್ಕೃತಿ ಉತ್ಸವ ಮತ್ತು ಕೊತ್ತಲ ಸ್ವರ್ಣ–2025 ಪರಿಚಯ ಸಭೆ: ಪ್ರಾಸ್ತಾವಿಕ ನುಡಿ: ಬಸವರಾಜ ಪಾಟೀಲ್ ಸೇಡಂ, ಉಪಸ್ಥಿತಿ: ಬಿ.ಎಸ್. ಯಡಿಯೂರಪ್ಪ, ವಿಶ್ವೇಶ್ವರ ಹೆಗಡೆ ಕಾಗೇರಿ, ಆಯೋಜನೆ: ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಂ, ವಿಕಾಸ ಅಕಾಡೆಮಿ, ಭಾರತ ವಿಕಾಸ ಸಂಗಮ, ಸ್ಥಳ: ಕೆ.ಇ.ಬಿ. ಎಂಜಿನಿಯರ್ಸ್ ಅಸೋಸಿಯೇಷನ್ ಸಭಾಂಗಣ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ಕುವೆಂಪು ವಿರಚಿತ ‘ಕಾನೂರು ಸುಬ್ಬಮ್ಮ ಹೆಗ್ಗಡತಿ ಆಧಾರಿತ ಏಕಪಾತ್ರಾಭಿನಯ’ ಪ್ರಸ್ತುತಿ: ರಾಧಾರಾಣಿ, ಆಯೋಜನೆ: ಟೆಂಟ್ ಸಿನಿಮಾ, ಸ್ಥಳ: ಸಂಖ್ಯೆ 184, ಲಿರಿಕ್ಸ್, 17ನೇ ಮುಖ್ಯರಸ್ತೆ, ಬನಶಂಕರಿ ಎರಡನೇ ಹಂತ, ಮಧ್ಯಾಹ್ನ 3

ಶೋಭಾ ಯಾತ್ರೆ ಹಾಗೂ ಮಧ್ವವಿಜಯ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ: ಸುಜಯನಿಧಿತೀರ್ಥ ಶ್ರೀಪಾದ, ಅತಿಥಿಗಳು: ತೇಜಸ್ವಿ ಸೂರ್ಯ, ರವಿ ಸುಬ್ರಮಣ್ಯ, ಉದಯ ಗರುಡಾಚಾರ್, ರಘುನಾಥ್ ಎಸ್., ಆರ್. ಲಕ್ಷ್ಮೀಕಾಂತ್, ಮೇದಿನಿ ಗರುಡಚಾರ್, ನಾಗೇಶ್, ಗುರುರಾಜ ಪೋಶೆಟ್ಟಿಹಳ್ಳಿ, ಅಧ್ಯಕ್ಷತೆ: ವೆಂಕೋಬರಾವ್ ಬುಕ್ಕಸಾಗರ, ಪ್ರಶಸ್ತಿ ಪುರಸ್ಕೃತರು: ಮನ್ಮಾಧ್ವ ಸಂಘ, ಅರಳುಮಲ್ಲಿಗೆ ಪಾರ್ಥಸಾರಥಿ, ಡಿ.ಪಿ. ಅನಂತಾಚಾರ್ಯ, ಪ್ರಸನ್ನ ಹೆಬ್ಬಣಿ, ಹರಿಣಿ ಪಗಡಾಲ, ಆಯೋಜನೆ: ವಿಶ್ವ ಮಧ್ವಮತ ವೆಲ್‌ಫೇರ್ ಫೌಂಡೇಶನ್, ಸ್ಥಳ: ಶ್ರೀಮನ್ಮಾಧ್ವ ಸಂಘ, ಐದನೇ ಮುಖ್ಯರಸ್ತೆ ಚಾಮರಾಜಪೇಟೆ, ಸಂಜೆ 3.30

ವಾದನ, ಸನ್ಮಾನ, ಗಾಯನ: ಸಾನ್ನಿಧ್ಯ: ಯತಿರಾಜ ಜೀಯರ್ ಸ್ವಾಮೀಜಿ, ಸನ್ಮಾನ: ಸುಬ್ಬರಾಜು ಅರಸ್, ಶೆಹನಾಯಿ: ಶೈಲೇಶ್ ಭಾಗವತ್, ಗಾಯನ: ಸಾನಿಯಾ ಪಟ್ಟಣ್‌ಕರ್, ತಬಲಾ: ವಿಕಾಸ್ ನರೇಗಲ್, ಹಾರ್ಮೋನಿಯಂ: ಭರತ್ ಹೆಗಡೆ, ಆಯೋಜನೆ: ಸಪ್ತಕ್, ಸ್ಥಳ: ಕೆನರಾ ಯೂನಿಯನ್, ಎಂಟನೇ ಮುಖ್ಯರಸ್ತೆ, ಮಲ್ಲೇಶ್ವರ, ಸಂಜೆ 5

14ನೇ ವಾರ್ಷಿಕೋತ್ಸವ ಸಿರಿಕಲಾ ಯಕ್ಷ ತ್ರಿವಳಿ ಸಮಾರೋಪ ಸಮಾರಂಭ: ‘ಸಿರಿಕಲಾ ಪುರಸ್ಕಾರ ಮತ್ತು ಸಿರಿಕಲಾಪೋಷಕ ಪುರಸ್ಕಾರ’ ಪುರಸ್ಕೃತರು: ಕೆ.ಪಿ. ಹೆಗಡೆ, ಸುಧಾಕರ ಪೈ, ಅರವಿಂದ ನಾಯಕ್, ಅತಿಥಿಗಳು: ಕೆ. ಗೋಪಾಲಯ್ಯ, ತಲ್ಲೂರು ಶಿವರಾಮ ಶೆಟ್ಟಿ, ಎಚ್.ಪಿ. ವಾಸುದೇವ ರಾವ್, ಬನವಾಸಿ ಕೃಷ್ಣಮೂರ್ತಿ, ಗುರುದತ್ತ ಪ್ರಭು, ‘ಪಾಂಚಜನ್ಯ’ ಯಕ್ಷಗಾನ ಪ್ರದರ್ಶನ, ಆಯೋಜನೆ: ಸಿರಿಕಲಾ ಮೇಳ, ಸ್ಥಳ: ಉತ್ತರ ಕನ್ನಡ ಸಂಘಧ ಸಭಾಭವನ, ನಂದಿನಿ ಬಡಾವಣೆ, ಸಂಜೆ 5ರಿಂದ

ಕೆ.ಸಿ.ಸಿಂಗ್ ಅವರ ‘ಭಾರತ ರತ್ನ’ ಪುಸ್ತಕ ಬಿಡುಗಡೆ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ವಿಜಯಲಕ್ಷ್ಮಿ ಸತ್ಯಮೂರ್ತಿ, ಅಧ್ಯಕ್ಷತೆ: ಶಶಿಧರ್ ಕೋಟೆ, ಪುಸ್ತಕ ಬಿಡುಗಡೆ: ರತ್ನಕಲಾ, ಅತಿಥಿ: ಸುರೇಶ್ ಎನ್. ಸಾಗರ್, ಪ್ರಶಸ್ತಿ ಪ್ರದಾನ: ಡಾ.ಟಿ.ಎಚ್. ಅಂಜನಪ್ಪ, ಪುಸ್ತಕ ಪರಿಚಯ: ಶೈಲಸುತೆ ರಂಜಿತಾ, ಆಯೋಜನೆ: ಲವ್ ಇಂಡಿಯಾ, ಸ್ಥಳ: ಭಾರತೀಯ ವಿದ್ಯಾಭವನ, ಇ.ಎಸ್.ವಿ. ಸಭಾಂಗಣ, ಆರ್.ಸಿ. ರಸ್ತೆ, ಸಂಜೆ 5

‘ಹೋಂ ರೂಲು’ ನಾಟಕ ಪ್ರದರ್ಶನ: ರಚನೆ: ಕೈಲಾಸಂ, ನಿರ್ದೇಶನ: ವೈ.ವಿ.ಗುಂಡೂರಾವ್, ‘ಕೈಲಾಸಂ ಝಲಕ್’ ನಾಟಕ ಪ್ರದರ್ಶನ, ಆಯೋಜನೆ: ಕೊರವಂಜಿ ಅಪರಂಜಿ ಟ್ರಸ್ಟ್, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 6ರಿಂದ

17ನೇ ವರ್ಷದ ಬೆಂಗಳೂರು ಅಂತರರಾಷ್ಟ್ರೀಯ ಕಲಾ ಉತ್ಸವ: ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6.15

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ- nagaradalli_indu@prajavani.co.in



ಜಕ್ಕೂರು ಶಾಖೆಯ ಸರ್ಕಾರಿ ನ್ಯಾಯಬೆಲೆ ಅಂಗಡಿ ಎದುರು ಪಡಿತರ ಪಡೆಯಲು ಸಾಲುಗಟ್ಟಿ ನಿಂತಿರುವ ಜನ

ಯಲಹಂಕ: ಸರ್ವರ್ ಸಮಸ್ಯೆ–15 ದಿನ ಕಳೆದರೂ ವಿತರಣೆಯಾಗದ ಪಡಿತರ

ಪಡಿತರ ವಿತರಣೆಯಲ್ಲಿ ಅವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಯಲಹಂಕ: ಸರ್ವರ್ ಸಮಸ್ಯೆಯಿಂದಾಗಿ, ಜಕ್ಕೂರು ಶಾಖೆಯ ಸರ್ಕಾರಿ ನ್ಯಾಯಬೆಲೆ ಅಂಗಡಿಗಳಲ್ಲಿ ಈ ತಿಂಗಳ ಪಡಿತರ ಸಮಯಕ್ಕೆ ಸರಿಯಾಗಿ ವಿತರಣೆಯಾಗದೆ ಸಾರ್ವಜನಿಕರು ತೊಂದರೆ ಅನುಭವಿಸ ಬೇಕಾಗಿದೆ.

ಪ್ರತಿ ತಿಂಗಳ ಆರಂಭದಲ್ಲಿ ಸಂಬಂಧಪಟ್ಟ ಆಹಾರ ಗೋದಾಮುಗಳಿಗೆ ಪಡಿತರ ವಿಲೇವಾರಿಯಾಗಿ 5ನೇ ತಾರೀಕಿನ ನಂತರ ಸಾರ್ವಜನಿಕರಿಗೆ ವಿತರಣೆಯಾಗು ತ್ತಿತ್ತು. ಆದರೆ ಈ ತಿಂಗಳು 15ನೇ ತಾರೀಕು ಕಳೆದರೂ ಪಡಿತರ ವಿತರಣೆಯಾಗಿಲ್ಲ.ಜೊತೆಗೆ, ಈ ತಿಂಗಳಲ್ಲಿ ಹಬ್ಬಗಳು ಬಂದಿದ್ದರಿಂದ, ಮನೆಯಲ್ಲೂ ಆಹಾರ ಧಾನ್ಯ ಖಾಲಿಯಾಗಿ ಸಾರ್ವಜನಿಕರು ಪರದಾ-ಡುವಂತಾಗಿದೆ.

‘ಪಡಿತರಕ್ಕಾಗಿ ಕೆಲಸಕ್ಕೂ ಹೋಗದೆ ಬೆಳಿಗ್ಗೆ 8 ಗಂಟೆಯಿಂದ ಸರತಿ ಸಾಲಿನಲ್ಲಿ ನಿಂತು ಕಾಯುತ್ತಿದ್ದೇನೆ. 11 ಗಂಟೆಯಾದರೂ ಪಡಿತರ ಸಿಕ್ಕಿಲ್ಲ. ನಿನ್ನೆಯೂ ಬಂದು ವಾಪಸ್ ಹೋಗಿದ್ದೆ. ಸರ್ವರ್ ಸಮಸ್ಯೆಯಿಂದ ಪಡಿತರ ವಿತರಣೆಗೆ ಅಡಚಣೆ ಯಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಮನೆಯಲ್ಲಿ ದಿನಸಿ ಖಾಲಿಯಾಗಿದೆ. ಅತ್ತ ಕೆಲಸಕ್ಕೂ ಹೋಗದೆ ಇತ್ತ ಪಡಿತರವೂ ದೊರೆಯದೆ ಸಮಸ್ಯೆ ಯಾಗಿದೆ’ ಎಂದು ಸ್ಥಳೀಯ ನಿವಾಸಿ ರತ್ನಮ್ಮ ಅಳಲು ತೋಡಿಕೊಂಡರು.

‘ಪಡಿತರ ವಿತರಣೆ ವಿಳಂಬದಿಂದ ಜನರು ಪರದಾಡುವಂತಾಗಿದೆ. ಸರ್ವರ್ ಸಮಸ್ಯೆಯನ್ನು ಕೂಡಲೇ ಪರಿಹರಿಸಿ, ಸರಾಗವಾಗಿ ಪಡಿತರ ವಿತರಣೆಗೆ ಅನುವು ಮಾಡಿಕೊಡಬೇಕು’ ಎಂದು ಜಕ್ಕೂರು ನಿವಾಸಿ ಕೃಷ್ಣಪ್ಪ ಒತ್ತಾಯಿಸಿದರು.

‘ಈವರೆಗೆ ಬಳಕೆಯಲ್ಲಿದ್ದ ಎನ್.ಐ.ಸಿ ಸರ್ವರ್ ಅನ್ನು ಕೆ.ಎಸ್.ಡಿ.ಸಿ ಸರ್ವರ್ ಆಗಿ ಬದಲಾಯಿಸುವ ಸಲುವಾಗಿ ರಾಜ್ಯದಾದ್ಯಂತ ಸಮಸ್ಯೆ ಉಂಟಾಗಿದೆ. ಅದಿನ್ನೂ ಬಗೆಹರಿದಿಲ್ಲ’ ಎಂದು ಪಡಿತರ ವಿತರಕ ಚಂದ್ರಶೇಖರ್ ತಿಳಿಸಿದರು.

‘ಜಕ್ಕೂರು ಶಾಖೆಯ ಸರ್ಕಾರಿ ನ್ಯಾಯಬೆಲೆ ಅಂಗಡಿ ವ್ಯಾಪ್ತಿಯಲ್ಲಿ ಒಟ್ಟು 800 ಪಡಿತರ ಚೀಟಿಗಳಿವೆ. ಒಂದು ಚೀಟಿಗೆ ಪಡಿತರ ವಿತರಿಸಲು ಕನಿಷ್ಠ 25ರಿಂದ 30 ನಿಮಿಷ ಬೇಕಾಗಿದೆ. ಸರ್ವರ್ ಸಮಸ್ಯೆಯಿಂದಾಗಿ ಶುಕ್ರವಾರ ಮಧ್ಯಾಹ್ನದವರೆಗೆ ಕೇವಲ 42 ಕಾರ್ಡುಗಳಿಗಷ್ಟೇ ವಿತರಿಸಲು ಸಾಧ್ಯವಾಯಿತು. ಶನಿವಾರವೂ ಇದೇ ಸಮಸ್ಯೆ ಮುಂದುವರೆದು ಕೇವಲ 15 ಕಾರ್ಡುಗಳಿಗೆ ಮಾತ್ರ ಪಡಿತರ ವಿತರಿಸಲಾಗಿದೆ’ ಎಂದು ಹೇಳಿದರು.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಸೆಕ್ಯೂರಿಟಿ ಗಾರ್ಡ್ ಸೇರಿ ಇಬ್ಬರು ಮೃತಪಟ್ಟಿದ್ದಾರೆ.

ವೈಟ್‌ಫೀಲ್ಡ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಟಿಪ್ಪರ್ ಡಿಕ್ಕಿ ಹೊಡೆದು ಪಾದಚಾರಿ, ಮುನ್ನೇಕೊಳಾಲು ನಿವಾಸಿ ಬಾಬು (49) ಮೃತಪಟ್ಟರು.

ಚನ್ನಸಂದ್ರದ ಹೋಪ್ ಫಾರ್ಮ್ ಜಂಕ್ಷನ್‌ನಲ್ಲಿ ಶುಕ್ರವಾರ ರಾತ್ರಿ 10 ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದೆ. ಈ ಸಂಬಂಧ ಟಿಪ್ಪರ್ ಚಾಲನಕನನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

‘ಮೃತ ಬಾಬು ಅವರು ಅಂಗವಿಕಲರಾಗಿದ್ದರು. ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಈ ಸಂಬಂಧ ವೈಟ್‌ಫೀಲ್ಡ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ಜೆಸಿಬಿ ಡಿಕ್ಕಿ- ಬೈಕ್ ಸವಾರ ಸಾವು: ಹೆಬ್ಬಾಳದ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜೆಸಿಬಿ ಯಂತ್ರಕ್ಕೆ ಹಿಂದಿನಿಂದ ದ್ವಿಚಕ್ರ ವಾಹನ ಡಿಕ್ಕಿಯಾಗಿ ಲಾಜಿಸ್ಟಿಕ್ ಕಂಪನಿಯ ನೌಕರ, ಭದ್ರಪ್ಪಲೇಔಟ್ ನಿವಾಸಿ ಅಜಯ್ ಮುರುಳಿ(30) ಮೃತಪಟ್ಟಿದ್ದಾರೆ.

ಶುಕ್ರವಾರ ರಾತ್ರಿ ಸುಮಾರು 11 ಗಂಟೆ ಸುಮಾರಿಗೆ ಎಸ್ಟೀಮ್ ಮಾಲ್ ಕಡೆಯಿಂದ ನಾಗವಾರ ಕಡೆಗೆ ತೆರಳುವಾಗ ಹೆಬ್ಬಾಳ ಮೇಲ್ಸೇತುವೆ ಬಳಿ ಘಟನೆ ನಡೆದಿದೆ. ಲಾಜಿಸ್ಟಿಕ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಅವರು ಶನಿವಾರ ಹೊಸೂರಿನತ್ತ ತೆರಳುವಾಗ ಅಪಘಾತ ಸಂಭವಿಸಿದೆ. ಜೆಸಿಬಿ ಯಂತ್ರದ ಚಾಲಕ ಪರಾರಿಯಾಗಿದ್ದಾನೆ. ಹೆಬ್ಬಾಳ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುತ್ರನ ಕೊಲೆ: ತಂದೆಯ ಬಂಧನ

ಬೆಂಗಳೂರು: ಮದ್ಯ ಸೇವಿಸಿ ಮನೆಗೆ ಬಂದು ಗಲಾಟೆ ಮಾಡುತ್ತಿದ್ದ ಪುತ್ರನನ್ನು ಕೊಲೆ ಮಾಡಿದ್ದ ಆರೋಪದ ಅಡಿ ತಂದೆಯನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾಗದೇವನಹಳ್ಳಿ ನಿವಾಸಿ ರಾಜೇಶ್ (35) ಕೊಲೆಯಾದ ವ್ಯಕ್ತಿ. ಅವರ ತಂದೆ ಲಿಂಗಪ್ಪ (58) ಅವರನ್ನು ಬಂಧಿಸಲಾಗಿದೆ. ಮಂಡ್ಯ ಜಿಲ್ಲೆಯ ನವುಲೆ ಗ್ರಾಮದ ಲಿಂಗಪ್ಪ ತುಂಬ ಹಿಂದೆ ಬೆಂಗಳೂರಿಗೆ ಬಂದಿದ್ದರು. ‘ಶುಕ್ರವಾರ ಮದ್ಯ ಸೇವಿಸಿ ಬಂದಿದ್ದ ರಾಜೇಶ್, ತಂದೆಯ ಜತೆಗೆ ವಾಗ್ವಾದ ನಡೆಸಿದ್ದರು. ಗಲಾಟೆ ವಿಕೋಪ ಹೋದಾಗ ರಾಜೇಶ್‌ನ ಕೈಗಳನ್ನು ಹಿಂದಕ್ಕೆ ಕಟ್ಟಿ, ಮರದ ಪಟ್ಟಿಯಿಂದ ತಲೆಗೆ ಹೊಡೆದಿದ್ದಾರೆ. ಆಗ ಅವರು ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಮನೆಯಲ್ಲಿ ಗಲಾಟೆ: ಯುವತಿ ಆತ್ಮಹತ್ಯೆ




ಶ್ರಾವ್ಯಾ

ಬೆಂಗಳೂರು: ಮನೆಯಲ್ಲಿ ನಡೆದ ಗಲಾಟೆಯ ವೇಳೆ ತಂದೆ ಬುದ್ಧಿ ಮಾತು ಹೇಳಿದ್ದಕ್ಕೆ ಮನನೊಂದು ಪುತ್ರಿ ನೇಣುಬಿಗಿದುಕೊಂಡು ಶುಕ್ರವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಖಾಸಗಿ ಕಾಲೇಜಿನಲ್ಲಿ ಬಿಬಿಎ ವ್ಯಾಸಂಗ ಮಾಡುತ್ತಿದ್ದ, ಚಾಮರಾಜಪೇಟೆಯ ನಿವಾಸಿ ಡಿ.ಶ್ರಾವ್ಯಾ (19) ಆತ್ಮಹತ್ಯೆ ಮಾಡಿಕೊಂಡವರು.

‘ಶ್ರಾವ್ಯಾ ಅವರು ತಂದೆ–ತಾಯಿ ಜತೆಗೆ ಚಾಮರಾಜಪೇಟೆಯಲ್ಲಿ ನೆಲಸಿದ್ದರು. ಕೌಟುಂಬಿಕ ವಿಚಾರಕ್ಕೆ ಒಂದು ವಾರದಿಂದ ಗಲಾಟೆ ನಡೆಯುತ್ತಿತ್ತು. ಶುಕ್ರವಾರ ಅಕ್ಕನ ಜತೆಗೂ ಶ್ರಾವ್ಯಾ ಗಲಾಟೆ ಮಾಡಿಕೊಂಡಿದ್ದರು. ಆಗ ಮಧ್ಯ ಪ್ರವೇಶಿಸಿದ್ದ ತಂದೆ ಶ್ರಾವ್ಯಾ ಅವರಿಗೆ ಬುದ್ಧಿಮಾತು ಹೇಳಿದ್ದರು. ಇದರಿಂದ ಮನನೊಂದು ಮನೆಯ ಕೊಠಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಚಾಮರಾಜಪೇಟೆ ಠಾಣೆಯಲ್ಲಿ ಸಹಜ ಸಾವು ಪ್ರಕರಣ ದಾಖಲಾಗಿದೆ.

ಪತ್ನಿ ಕೊಲೆ: ಪತಿಯ ಬಂಧನ



ಶ್ರೀನಿವಾಸ್

ಬೆಂಗಳೂರು: ಬಾಗಲೂರು ಪೊಲೀಸ್ ಠಾಣಾ ವ್ಯಾಪ್ತಿಯ ಸಿಂಗೇನಹಳ್ಳಿಯಲ್ಲಿ ಪತ್ನಿ ಕೊಲೆ ಮಾಡಿದ್ದ ಆರೋಪದ ಅಡಿ ಮೃತಳ ಪತಿ ಶ್ರೀನಿವಾಸ್(50) ಅವರನ್ನು ಪೊಲೀಸರು ಬಂಧಿಸಿದ್ದಾರೆ. ಸುಧಾ ಕೊಲೆಯಾದವರು.

‘ಶ್ರೀನಿವಾಸ್ ಅವರು ಕೋಳಿ ಮಾಂಸದ ವ್ಯಾಪಾರ ನಡೆಸುತ್ತಿದ್ದಾರೆ. ಮದ್ಯ ಸೇವಿಸಿ ಮನೆಗೆ ಬಂದು ಗಲಾಟೆ ನಡೆಸುತ್ತಿದ್ದರು. ಪತ್ನಿ ಬೇಸತ್ತು ಇತ್ತೀಚೆಗೆ ತವರು ಮನೆಗೆ ಹೋಗಿದ್ದರು. ನಂತರ, ಸಂಬಂಧಿಕರ ಸಮ್ಮುಖದಲ್ಲಿ ರಾಜಿಯಾಗಿ ಮರಳಿದ್ದರು. ‘ಶುಕ್ರವಾರ ರಾತ್ರಿ ಮತ್ತೆ ಇಬ್ಬರ ಮಧ್ಯೆ ಗಲಾಟೆ ನಡೆದಿದೆ. ತಡರಾತ್ರಿ ಕೋಳಿ ಕತ್ತರಿಸುವ ಮಚ್ಚಿನಿಂದ ಸುಧಾ ಅವರ ತಲೆ ಹಾಗೂ ಕೈಗೆ ಹೊಡೆದು ಕೊಲೆ ಮಾಡಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಬಾಗಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಲೆಗಳಲ್ಲಿ ಮದುಮಗಳು' ಇಂಗ್ಲಿಷ್ ಅನುವಾದಿತ ಕೃತಿ ಬಿಡುಗಡೆ

'ಹೊಸ ದರ್ಶನ ಕುವೆಂಪು ಕಾವ್ಯದ ಸೌಂದರ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊಸ ದರ್ಶನವೇ ಕುವೆಂಪು ಅವರ ಕಾವ್ಯದ ಸೌಂದರ್ಯವಾಗಿದೆ. ಓದುಗರ ಮನೋಧರ್ಮ, ನಂಬಿಕೆಯನ್ನು ಪ್ರತಿನಿಧಿಸುವ ಶಕ್ತಿ ಅವರ ಕಥಾ ನಿರೂಪಣೆಯಲ್ಲಿತ್ತು' ಎಂದು ವಿಮರ್ಶಕ ಬಸವರಾಜ ಕಲ್ಗುಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಇಂಗ್ಲಿಷ್ ಅನುವಾದ ಕೃತಿ 'ಬ್ರೈಡ್ ಇನ್ ದಿ ಹಿಲ್ಸ್' ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ಕಾದಂಬರಿಯನ್ನು ವನಮಾಲಾ ವಿಶ್ವನಾಥ್ ಅವರು ಅನುವಾದಿಸಿದ್ದಾರೆ.

'ಕುವೆಂಪು ಅವರ ಕಾವ್ಯದಲ್ಲಿ ಕಾವ್ಯಾತ್ಮಕ ಗುಣವಿಲ್ಲ ಎನ್ನುವುದು ತಪ್ಪು. ಅವರ ಹೊಸ ದರ್ಶನವೇ ದೊಡ್ಡ ಕಾವ್ಯ ತತ್ವವಾಗಿದೆ. ನಿರಂತರವಾದ ದರ್ಶನ ಅವರ ಸಾಹಿತ್ಯದಲ್ಲಿದ್ದು, ಆ ದರ್ಶನವೇ ಅವರ ಕಾವ್ಯ ತತ್ವವನ್ನು ನಿರ್ಮಾಣ ಮಾಡಿದೆ. 'ಮಲೆಗಳಲ್ಲಿ ಮದುಮಗಳು' ಕೃತಿ ಗಂಡುಗಳ ನಡುವೆ ಒತ್ತಾಸೆಯಾಗಿ ನಿಲ್ಲುವ ಹೆಣ್ಣುಗಳ ಕಥನವೂ ಹೌದು' ಎಂದು ಹೇಳಿದರು.

ಮುಖ್ಯಾಂಶಗಳು

- ಕುವೆಂಪು ಅವರ ಕಾವ್ಯದಲ್ಲಿನ ಹೊಸ ದರ್ಶನವೇ ದೊಡ್ಡ ಕಾವ್ಯ ತತ್ವ
- 'ಮಲೆಗಳಲ್ಲಿ ಮದುಮಗಳು' ಆಧುನಿಕ ಕನ್ನಡದ ಪ್ರಾತಿನಿಧಿಕ ಕೃತಿ
- ಈ ಕೃತಿಯನ್ನು ವಿಮರ್ಶಾ ಲೋಕ ಈಗಲೂ ಪೂರ್ಣ ಅರಗಿಸಿಕೊಂಡಿಲ್ಲ

ಇನ್ನೋರ್ವ ವಿಮರ್ಶಕ ಕೆ.ವಿ.ನಾರಾಯಣ ಅವರು, 'ಈ ಕಾದಂಬರಿಯನ್ನು ಕನ್ನಡಿಗರು ದೃಶ್ಯ ರೂಪದಲ್ಲಿ ನೋಡಿದಾಗಲೂ ಕೃತಿಯ ನಿಜವಾದ ತಿರುಳು ಅರಿವಿಗೆ ಬರುತ್ತದೆಯೇ ಎಂಬ ಸಂದೇಹವಿದೆ. ಈ ಕಾದಂಬರಿ ತನ್ನ ಸಾಧ್ಯತೆಗಳನ್ನು ಮತ್ತೆ ಮತ್ತೆ ತೆರೆದು ತೋರಿಸುತ್ತಾ ಬಂದಿದೆ' ಎಂದು ಅಭಿಪ್ರಾಯಪಟ್ಟರು.

'ಕನ್ನಡ ವಿಮರ್ಶಾ ಲೋಕ ಈಗಲೂ ಪೂರ್ಣ ಪ್ರಮಾಣದಲ್ಲಿ ಈ ಕಾದಂಬರಿಯನ್ನು ಅರಗಿಸಿಕೊಂಡಿಲ್ಲ. ಭಾರತೀಯ ಭಾಷೆಯಲ್ಲಿನ ಕೃತಿಗಳು ಇಂಗ್ಲಿಷ್ ಅಥವಾ ಯುರೋಪಿಯನ್ ಭಾಷೆಗೆ ಅನುವಾದವಾದರೆ, ಅಂತಹ ಕೃತಿಗಳು ಸಾಂಸ್ಕೃತಿಕ ಅಧ್ಯಯನದ ಭಾಗವಾಗಿ ಬಳಕೆಯಾಗಲಿದೆ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ಕೆ.ವಿ.ನಾರಾಯಣ ಮತ್ತು ಬಸವರಾಜ ಕಲ್ಗುಡಿ ಸಮಾಲೋಚನೆ ನಡೆಸಿದರು. (ಎಡದಿಂದ) ಲೇಖಕಿ ಮತ್ತು ಕುವೆಂಪು ಅವರ ಪುತ್ರಿ ತಾರಿಣಿ ಚಿದಾನಂದ, ವನಮಾಲಾ ವಿಶ್ವನಾಥ್, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಲ್.ಶಂಕರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಇತಿಹಾಸ ತಜ್ಞ ಪೃಥ್ವೀದತ್ತ ಚಂದ್ರಶೋಭಿ, 'ಮಲೆಗಳಲ್ಲಿ ಮದುಮಗಳು ಕೃತಿಯು ಆಧುನಿಕ ಕನ್ನಡದ ಪ್ರಾತಿನಿಧಿಕ ಕೃತಿಯಾಗಿದೆ. ಕುವೆಂಪು ಅವರು ತಮ್ಮ ಕಾಲವನ್ನು ಅರ್ಥ ಮಾಡಿಕೊಂಡು ರಚಿಸಿದ್ದಾರೆ. ಅವರು ಅದ್ಭುತವಾದ ಕಥನ ಶಕ್ತಿ ಹೊಂದಿದ್ದರು. ಅವರ ಜತೆಗೆ ಅನುಸಂಧಾನ ಮಾಡುವುದು ಎಲ್ಲ ಕಾಲಕ್ಕೂ, ಎಲ್ಲರಿಗೂ ಲಾಭದಾಯಕ' ಎಂದು ಹೇಳಿದರು.

ಅನುವಾದಕಿ ವನಮಾಲಾ ವಿಶ್ವನಾಥ್, 'ಕುವೆಂಪು ಅವರು ಕನ್ನಡಿಗರ ಮನೆ, ಮನಸ್ಸಿನಲ್ಲಿ ತುಂಬಿಕೊಂಡಿದ್ದಾರೆ. ಅವರು ನಮ್ಮ ಸ್ವಾಸ್ಥ್ಯಕಾಪಾಡುವ ಗಾಳಿ-ಬೆಳಕಾಗಿದ್ದಾರೆ. ಈ ಬೆಳಕನ್ನು ಅನುವಾದ ಪ್ರಕಾರದ ಮೂಲಕ ಹಂಚಬೇಕಿದೆ' ಎಂದರು.

'ಪಶುಪಾಲನಾ ಇಲಾಖೆಗೆ 700 'ಡಿ' ಗ್ರೂಪ್ ನೌಕರರ ನೇಮಕ'

ಕಾಲುಬಾಯಿ ಜ್ವರ 6ನೇ ಸುತ್ತಿನ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಪಶುಪಾಲನಾ ಇಲಾಖೆಯಲ್ಲಿ 700 'ಡಿ' ಗ್ರೂಪ್ ನೌಕರರ ನೇಮಕಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನುಮತಿ ನೀಡಿದ್ದು, ಶೀಘ್ರ ಪ್ರಕ್ರಿಯೆ ಆರಂಭಿಸಲಾಗುವುದು' ಎಂದು ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಶನಿವಾರ ನಗರದಲ್ಲಿ ಪಶುವೈದ್ಯರ ರಾಜ್ಯಮಟ್ಟದ ತಾಂತ್ರಿಕ ವಿಚಾರಸಂಕಿರಣ ಮತ್ತು ಕಾಲುಬಾಯಿ ಜ್ವರದ ವಿರುದ್ಧ 6ನೇ ಸುತ್ತಿನ ಲಸಿಕಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, 'ಈಗಾಗಲೇ 400 ಪಶುವೈದ್ಯರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿದ್ದು, 400 ಕಾಯಂ ವೈದ್ಯರ ನೇಮಕಾತಿಗೂ ಕೆಪಿಎಸ್‌ಸಿ ಮಟ್ಟದಲ್ಲಿ ಪ್ರಕ್ರಿಯೆ ನಡೆದಿದೆ' ಎಂದರು.



ರಾಜ್ಯದಲ್ಲಿ ಖಾಸಗಿ ಪಶುವೈದ್ಯ ಕಾಲೇಜು ಆರಂಭಿಸಲು ನಿಷೇಧ ಹೇರಲಾಗಿದೆ. ಬೆಳಗಾವಿ ಜಿಲ್ಲೆಯ ಕೊಕಟನೂರ ಹಾಗೂ ಪುತ್ತೂರಲ್ಲಿ ಸರ್ಕಾರಿ ಕಾಲೇಜುಗಳನ್ನು ಈ ವರ್ಷವೇ ಪ್ರಾರಂಭಿಸಲಾಗುವುದು
ಕೆ.ವೆಂಕಟೇಶ್, ಪಶುಸಂಗೋಪನಾ ಸಚಿವ

'ರಾಜ್ಯದಲ್ಲಿ ಪ್ರತಿ ವರ್ಷ 400 ಮಂದಿ ಪಶು ವೈದ್ಯ ಪದವಿ ಪಡೆಯುತ್ತಿದ್ದಾರೆ. ಖಾಸಗಿ ಪಶುವೈದ್ಯ ಕಾಲೇಜು ಆರಂಭಿಸಲು ಕೆಲವರು ಇಲಾಖೆಯನ್ನು ಸಂಪರ್ಕಿಸಿದ್ದ ಕುರಿತು ಮುಖ್ಯಮಂತ್ರಿಯ ಗಮನ ಸೆಳೆದಾಗ, ಸರ್ಕಾರಿ ಕಾಲೇಜನ್ನೇ ಆರಂಭಿಸಬೇಕೆಂದು ಸೂಚಿಸಿದ್ದರು' ಎಂದರು.

ಇಲಾಖೆಯ ನಿರ್ದೇಶಕ ಡಾ.ಮಂಜುನಾಥ್ ಎಸ್.ಪಾಳೇಗಾರ ಮಾತನಾಡಿ, 'ಅಕ್ಟೋಬರ್ 21ರಿಂದ 98 ಲಕ್ಷ ರಾಸುಗಳಿಗೆ ಕಾಲುಬಾಯಿ ಜ್ವರದ ಲಸಿಕೆ ನೀಡಲಾಗುವುದು. ರಾಜ್ಯದಲ್ಲಿ ಎಲ್ಲಿಯೂ ರೋಗ ಕಂಡುಬಂದಿಲ್ಲ. ಕರುಗಳಿಗೂ ಲಸಿಕೆಯನ್ನು ಉಚಿತವಾಗಿ ಹಾಕಲಾಗುವುದು. ಶೇ 100 ಗುರಿ ತಲುಪಲು ಕ್ರಮ ವಹಿಸಲಾಗಿದೆ' ಎಂದು ತಿಳಿಸಿದರು.

ಶಾಸಕ ಕೆ.ಹರೀಶ್ ಗೌಡ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಇದ್ದರು.

ಭಾಗ್ಯವಸುಗೆ 'ಬೆರಗು' ಪ್ರಶಸ್ತಿ ಘೋಷಣೆ

ಆಲಮೇಲ (ವಿಜಯಪುರ ಜಿಲ್ಲೆ): ಬೆರಗು ಪ್ರಕಾಶನ ಸಂಸ್ಥೆ ನೀಡುವ ರಾಜ್ಯಮಟ್ಟದ ಪ್ರೊ. ಎಚ್.ಟಿ.ಪೋತೆ ಹಸ್ತಪ್ರತಿ ಪ್ರಶಸ್ತಿಗೆ ಕಾವ್ಯ ವಿಭಾಗದಲ್ಲಿ ಬೆಂಗಳೂರಿನ ಭಾಗ್ಯವಸು ಅವರ 'ರೆಪ್ಪೆಗಂಬದ ಮೇಲೆ ಕೂತ ಮರಿ ಹಕ್ಕಿ' ಆಯ್ಕೆಯಾಗಿದೆ.



ಭಾಗ್ಯವಸು

ಕಥಾ ವಿಭಾಗದಲ್ಲಿ ಡಾ.ಲಕ್ಷ್ಮಣ ವಿ.ಎ ಅವರ 'ಜಿರಿ ಮಳೆಯ ಕಣ್ಣು', ದಿ.ಯಮುನಾಬಾಯಿ ರಾಜಣ್ಣ ಭೋವಿ ಸ್ಮರಣಾರ್ಥ 2023ರ ಸಾಲಿನ ಪುಸ್ತಕ ಪ್ರಶಸ್ತಿಗೆ ದಾವಣಗೆರೆಯ ಮಲ್ಲಿಕಾರ್ಜುನ ಕಡಕೋಳ ಅವರ 'ಪರಿಮಳದ ಹಾದಿಯ ಪಯಣಿಗರು' ಕೃತಿ ಆಯ್ಕೆಯಾಗಿದೆ ಎಂದು ಬೆರಗು ಪ್ರಕಾಶನದ ಪ್ರಕಾಶಕಿ ವಿಜಯಲಕ್ಷ್ಮಿ ಆರ್.ಕತ್ತಿ ತಿಳಿಸಿದ್ದಾರೆ.

'ಯುವ ಕಾವ್ಯ ಪುರಸ್ಕಾರ'ವು ಕಲಬುರಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ಪಿ.ನಂದಕುಮಾರ ಅವರ 'ಹಂಗಿನ ಕಿರೀಟಕ್ಕೆ ಜೋತು ಬಿದ್ದ ನಾಲಿಗೆ' ಹಸ್ತಪ್ರತಿ ಆಯ್ಕೆಯಾಗಿದೆ. ಪ್ರಸಕ್ತ ವರ್ಷದ ಪ್ರಶಸ್ತಿಗೆ 74 ಹಸ್ತಪ್ರತಿಗಳು ಬಂದಿದ್ದವು. ಕವಿ, ಕತೆಗಾರ ವಾಸುದೇವ ನಾಡಿಗ ಮತ್ತು ಗುಲಬರ್ಗಾ ವಿಶ್ವವಿದ್ಯಾಲಯದ ಡಾ.ಎಂ.ಬಿ.ಕಟ್ಟಿ ಅವರು ತೀರ್ಪುಗಾರರಾಗಿದ್ದರು.

ಹಸ್ತಪ್ರತಿ ಪ್ರಶಸ್ತಿ ₹10 ಸಾವಿರ ನಗದು ಮತ್ತು ಪುಸ್ತಕ ಪ್ರಶಸ್ತಿಯು ₹5 ಸಾವಿರ ನಗದು ಒಳಗೊಂಡಿದೆ. ನವೆಂಬರ್‌ನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ಬೆಂಗಳೂರು ನಗರ ವಿವಿ: ಕೌನ್ಸೆಲಿಂಗ್ 21ರಿಂದ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯವು 2024-25ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ವಿಭಾಗಗಳು ಮತ್ತು ಸಂಯೋಜಿತ ಕಾಲೇಜುಗಳ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿ ಪ್ರಕ್ರಿಯೆಗೆ ಇದೇ 21ರಿಂದ 25ರವರೆಗೆ ಕೌನ್ಸೆಲಿಂಗ್ ಹಮ್ಮಿಕೊಂಡಿದೆ.

ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದ ಆವರಣದಲ್ಲಿ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಯಲಿದೆ. ಮಾಹಿತಿಗೆ ವಿಶ್ವವಿದ್ಯಾಲಯದ ವೆಬ್‌ಸೈಟ್ http://bcu.ac.in ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿವಿಧೆಡೆ 23ರವರೆಗೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯದ ನಿಮಿತ್ತ ಅ.20ರಿಂದ 23ರವರೆಗೆ ಬೆಳಿಗ್ಗೆ 10ರಿಂದ ರಾತ್ರಿ 10ರವರೆಗೆ ನಗರದ ಕೆಲವು ಸ್ಥಳಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಒಬಳೇಶ್ ಕಾಲೊನಿ, ವಿ.ಎಸ್. ಗಾರ್ಡನ್, ರಾಯಪುರ, ಬಿನ್ನಿಪೇಟೆ, ಪಾದರಾಯನಪುರ, ಜೆ.ಜೆ.ಆರ್. ನಗರ, ಗೋಪಾಲನ್ ಮಾಲ್, ಮೈಸೂರು ರಸ್ತೆ 1,2 ಮತ್ತು 3ನೇ ಕ್ರಾಸ್, ಮೋಮಿಂಪುರ, ಜನತಾ ಕಾಲೊನಿ, ಶಾಮಣ್ಣ ಗಾರ್ಡನ್, ಉರ್ಫತ್ ನಗರ, ರಂಗನಾಥ ಕಾಲೊನಿ, ಹೊಸಹಳ್ಳಿ ಮುಖ್ಯರಸ್ತೆ, ಪೂರ್ವ ವೆಸ್ಟ್ ಅಪಾರ್ಟ್‌ಮೆಂಟ್ ಬಿನ್ನಿಪೇಟೆ, ಅಂಜನಪ್ಪ ಗಾರ್ಡನ್, ದೊರೆಸ್ವಾಮಿ ನಗರ, ಹೂವಿನ ಉದ್ಯಾನ, ಹೊಸ ಪೊಲೀಸ್ ಕ್ವಾಟ್ರಸ್, ಎಸ್‌ಡಿ ಮಠ, ಮಾಮೂಲ್ ಪೇಟೆ, ಕಾಟನ್‌ಪೇಟೆ, ಅಕ್ಕಿಪೇಟೆ, ಬಾಲಾಜಿ ಕಾಂಪ್ಲೆಕ್ಸ್, ಸುಲ್ತಾನ್ ಪೇಟೆ, ಪೊಲೀಸ್ ರಸ್ತೆ, ಗೋಪಾಲನ್ ಅಪಾರ್ಟ್‌ಮೆಂಟ್, ಮರಿಯಪ್ಪ ಎ. ಕೆಪಿಎಸ್ ಮಠ, ಗಂಗಪ್ಪ ಗಾರ್ಡನ್, ಭುವನೇಶ್ವರಿ ನಗರ, ಪ್ರೆಸ್ಟೀಜ್ ವುಡ್ ಅಪಾರ್ಟ್‌ಮೆಂಟ್ ಆಸುಪಾಸಿನ ಪ್ರದೇಶಗಳು.

24ಕ್ಕೆ ಉಪ ಲೋಕಾಯುಕ್ತರಿಂದ ಅಹವಾಲು ಸ್ವೀಕಾರ

ಬೆಂಗಳೂರು: ಉಪ ಲೋಕಾಯುಕ್ತ ಕೆ.ಎನ್.ಫಣೀಂದ್ರ ಅವರು ಇದೇ 24ರಿಂದ ಎರಡು ದಿನ ನಗರದಲ್ಲಿ ಪ್ರವಾಸ ನಡೆಸಲಿದ್ದಾರೆ. ಯಲಹಂಕ ಉಪನಗರದ ಅಂಬೇಡ್ಕರ್ ಭವನದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ.


24ರಂದು ಬೆಳಿಗ್ಗೆ 10ರಿಂದ ಯಲಹಂಕ ಮತ್ತು ಪೂರ್ವ ತಾಲ್ಲೂಕುಗಳಿಗೆ ಸಂಬಂಧಿಸಿದ ಅಹವಾಲು ಸ್ವೀಕರಿಸುವರು. ಸಂಜೆ 5.30ರಿಂದ 'ಕರ್ನಾಟಕ ಲೋಕಾಯುಕ್ತ ಕಾಯ್ದೆ' ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಅಹವಾಲುಗಳ ಪರಿಶೀಲನೆ, ಪರಿಹಾರ ಸಂಬಂಧ 25ರಂದು ಜಿಲ್ಲಾಧಿಕಾರಿ, ವಿವಿಧ ಇಲಾಖೆಯ ಅಧಿಕಾರಿಗಳ ಜತೆ ಚರ್ಚೆ ನಡೆಸಲಿದ್ದಾರೆ. ಸಾರ್ವಜನಿಕರು ಈ ಅವಕಾಶವನ್ನು ಸುದುಪಯೋಗಪಡಿಸಿಕೊಳ್ಳಬೇಕೆಂದು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆಯಲ್ಲಿ ಕೋರಲಾಗಿದೆ.

ಕಾಂಗ್ರೆಸ್ ಶಾಸಕರಲ್ಲೇ ಅಸಮಾಧಾನ ಸ್ಫೋಟ– ಸರ್ಕಾರ ಶೀಘ್ರ ಪತನ: ಎಚ್‌.ಡಿ.ಕುಮಾರಸ್ವಾಮಿ ಹೇಳಿಕೆ

ಜನ ಆಶೀರ್ವದಿಸಿದರೆ ಮತ್ತೆ ಸಿ.ಎಂ ಆಗುವೆ

ಪ್ರಜಾವಾಣಿ ವಾರ್ತೆ



ಎಚ್‌.ಡಿ. ಕುಮಾರಸ್ವಾಮಿ

ಮಂಡ್ಯ: 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ 2028ರವರೆಗೆ ಅಧಿಕಾರದಲ್ಲಿರುವುದಿಲ್ಲ. ಆ ಪಕ್ಷದ ಶಾಸಕರಲ್ಲೇ ಅಸಮಾಧಾನ ಸ್ಫೋಟಿಸಿದೆ. ಜನ ಆಶೀರ್ವದಿಸಿದರೆ ಮತ್ತೊಮ್ಮೆ ನಾನು ಮುಖ್ಯಮಂತ್ರಿಯಾಗುತ್ತೇನೆ. ನಾನು ಜ್ಯೋತಿಷಿಯಲ್ಲ, ಜನ ಅವಕಾಶ ನೀಡುವ ವಿಶ್ವಾಸವಿದೆ' ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಶನಿವಾರ ಉದ್ಯೋಗ ಮೇಳದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡ ವೇಳೆ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.

'ನನಗೆ ಐದು ವರ್ಷ ಪೂರ್ಣಾವಧಿ ಮುಖ್ಯಮಂತ್ರಿಯಾಗುವ ಅವಕಾಶ ಸಿಕ್ಕಿಲ್ಲ. ಬೇರೆಯವರ ಹಂಗಿನಲ್ಲಿ ಕೆಲವು ತಿಂಗಳು ಅಧಿಕಾರ ಮಾಡಿದ್ದೇನೆ. ಜನರ ನನ್ನ ಆಡಳಿತ ನೋಡಿದ್ದಾರೆ. ಮುಂದೆ ಪೂರ್ಣ ಬಹುಮತದ ಸರ್ಕಾರ ರಚಿಸುವ ನಂಬಿಕೆಯಿದೆ' ಎಂದರು.

'ಸಾರ್ವಜನಿಕರ ತೆರಿಗೆ ಹಣ ಲೂಟಿಯಾಗುತ್ತಿದೆ. ಸರ್ಕಾರದ ಆಸ್ತಿಗಳು ಕಬಳಿಕೆಯಾಗುತ್ತಿವೆ. ಅದಕ್ಕೆ ಕಡಿವಾಣ ಹಾಕಿದರೆ, ಕಾಂಗ್ರೆಸ್‌ನವರು ತಿಂಗಳಿಗೆ ₹2 ಸಾವಿರ ಕೊಡುತ್ತಿದ್ದಾರಲ್ಲ, ಅದರ ಬಲದಾಗಿ ಜನರಿಗೆ ತಿಂಗಳಿಗೆ ₹10 ಸಾವಿರ ಸಂಪಾದನೆ ಮಾಡುವ ಆರ್ಥಿಕ ಶಕ್ತಿ ತುಂಬಬಹುದು. ಕಾಂಗ್ರೆಸ್ ಸರ್ಕಾರದ ಆಡಳಿತ ನೋಡಿ ಜನ ಬೇಸತ್ತಿದ್ದಾರೆ. ನಾವು ಸರ್ಕಾರವನ್ನು ತೆಗೆಯುವುದಿಲ್ಲ. ಜನರೇ ತೆಗೆಯುತ್ತಾರೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕಲ್ಯಾಣ ಕರ್ನಾಟಕ ಭಾಗದ ಶಿಕ್ಷಕರು ಮುತ್ತಿಗೆ ಹಾಕಿದ ಕುರಿತು ಪ್ರತಿಕ್ರಿಯಿಸಿ, 'ಇದಕ್ಕಾಗಿಯೇ ನಾನು ರಾಜ್ಯದಲ್ಲಿ ಸರ್ಕಾರ ಇದೆಯೇ ಅಂದಿದ್ದು' ಎಂದರು.

ಪ್ರಜಾ ಮತ
ಜನತಂತ್ರದ ಹಬ್ಬ

'15 ಸಾವಿರ ಹುದ್ದೆಗಳು ಖಾಲಿ ಇದೆ ಎನ್ನುತ್ತಾರೆ. ಆದರೆ 70 ಹುದ್ದೆ ತುಂಬಿಸಲು ಹೊರಟಿದ್ದಾರೆ. ಕಲ್ಯಾಣ ಕರ್ನಾಟಕದ ಬಗ್ಗೆ ಮುಖ್ಯಮಂತ್ರಿ ದೊಡ್ಡ ಭಾಷಣ ಮಾಡಿದರು. ಆದರೆ ಯಾವ ರೀತಿ ಅವರನ್ನು ನಡೆಸಿಕೊಳ್ಳುತ್ತಿದ್ದಾರೆ. ಯಾವ ಬದ್ಧತೆ ಇಟ್ಟುಕೊಂಡಿದ್ದಾರೆ ಎಂಬುದು ಕಾಣುತ್ತಿದೆ' ಎಂದು ಹೇಳಿದರು.

'ನ್ಯಾಯಾಲಯದ ಆದೇಶದ ಮೇರೆಗೆ ಮೈಸೂರಿನ ಮುಡಾ ಕಚೇರಿ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿದೆ. ತನಿಖೆ ಪ್ರಾರಂಭವಾಗಿದೆ. ಅಂತಿಮವಾಗಿ ಏನೇನಾಗುತ್ತದೆ ಎಂಬುದನ್ನು ಕಾದು ನೋಡಬೇಕು' ಎಂದು ತಿಳಿಸಿದರು.

'ಜೆಡಿಎಸ್ ತುಂಬಿದ ಶಕ್ತಿ ದೆಹಲಿ ನಾಯಕರಿಗೆ ಗೊತ್ತು'

'ಯಾರಿಗೆ, ಯಾರು ಮರುಜನ್ಮ ಕೊಟ್ಟಿದ್ದಾರೆ ಎಂದು ಬೀದಿಯಲ್ಲಿ ಚರ್ಚಿಸಲು ಆಗಲ್ಲ. ಜೆಡಿಎಸ್ ಯಾವ ರೀತಿ ಶಕ್ತಿ ತುಂಬಿದೆ ಎಂಬುದು ದೆಹಲಿ ನಾಯಕರಿಗೆ ಗೊತ್ತಿದೆ' ಎಂದು ಎಚ್‌.ಡಿ. ಕುಮಾರಸ್ವಾಮಿ ಅವರು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಗೆ ಪ್ರತಿಕ್ರಿಯಿಸಿದರು.

'ಚನ್ನಪಟ್ಟಣ ಸೇರಿ ಮೂರು ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಯೇ ನಿಲ್ಲುತ್ತಾರೆ ಎಂದು ನಾನು ಹೇಳಿದ್ದೇನೆಯೇ ಹೊರತು, ಜೆಡಿಎಸ್ ಅಭ್ಯರ್ಥಿಯನ್ನು ಹಾಕುತ್ತೇನೆಂದಿಲ್ಲ. ತ್ಯಾಗದ ಬಗ್ಗೆ ಮಾತನಾಡುವವರು, ತಮ್ಮ ಆತ್ಮವನ್ನು ಪ್ರಶ್ನಿಸಿಕೊಳ್ಳಬೇಕು. ಮೈತ್ರಿಗೆ ಅಡ್ಡಿಯಾಗಬಾರದು ಎಂದು ನಡೆದುಕೊಳ್ಳುತ್ತಿದ್ದೇನೆ' ಎಂದರು.

ಸ್ಪರ್ಧಿಸಲು ನನಗೆ ಭಯವಿಲ್ಲ: ನಿಖಿಲ್



ನಿಖಿಲ್

ಬಳ್ಳಾರಿ: 'ಚನ್ನಪಟ್ಟಣ ವಿಧಾನಸಭಾ ಉಪಚುನಾವಣೆಯಲ್ಲಿ ಸ್ಪರ್ಧಿಸಲು ಯಾವುದೇ ರೀತಿಯ ಹೆದರಿಕೆ ಇಲ್ಲ' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

'ಚನ್ನಪಟ್ಟಣದಲ್ಲಿ ಸಾಮಾನ್ಯ ಕಾರ್ಯಕರ್ತ ಸ್ಪರ್ಧಿಸಿದರೂ 80 ಸಾವಿರ ಮತ ಬರುತ್ತವೆ. ಇನ್ನೂ 15 ಸಾವಿರ ಮತ ಬೇಕಾಗುತ್ತವೆ. ಅವಕಾಶ ಒದಗಿ ಬಂದರೆ, ಸ್ಪರ್ಧೆಯಿಂದ ಹಿಂದೆ ಸರಿಯುವ ಮಾತೇ ಇಲ್ಲ' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಪಕ್ಷದ ಕಾರ್ಯಕರ್ತರ ರಕ್ಷಣೆಯೇ ನಮಗೆ ಮುಖ್ಯ. ನಮ್ಮದು ಎನ್‌ಡಿಎ ಕುಟುಂಬ. ಮೋದಿ ಅಥವಾ ಅಮಿತ್ ಶಾ ಅವರನ್ನು ನಾವು ಮೀರಿ ಹೋಗುವ ಪ್ರಶ್ನೆ ಇಲ್ಲ' ಎಂದರು.

'ಚನ್ನಪಟ್ಟಣ ಬಿಟ್ಟುಕೊಡಿ, ಕೋಲಾರ ಬಿಟ್ಟಿರಲಿಲ್ಲವೇ?'

ಪ್ರಜಾವಾಣಿ ವಾರ್ತೆ



ಅಶ್ವತ್ಥ ನಾರಾಯಣಗೌಡ

ರಾಮನಗರ: 'ನಾವು ಗೆದ್ದಿದ್ದ ಕೋಲಾರವನ್ನು ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್‌ಗೆ ಬಿಟ್ಟು ಕೊಡಲಿಲ್ಲವೇ? ಅದೇ ರೀತಿ, ಚನ್ನಪಟ್ಟಣ ಕ್ಷೇತ್ರವನ್ನು ಈಗ ಬಿಜೆಪಿಗೆ ಬಿಟ್ಟು ಕೊಡುವಂತೆ ಜೆಡಿಎಸ್‌ಗೆ ಒತ್ತಾಯಿಸುತ್ತೇವೆ...'

- ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರು ಚನ್ನಪಟ್ಟಣವನ್ನು ಬಿಜೆಪಿಗೆ ಬಿಟ್ಟು ಕೊಡುತ್ತಾರೆಯೇ? ಎಂಬ ಪ್ರಶ್ನೆಗೆ ಬಿಜೆಪಿ ವಕ್ತಾರ ಅಶ್ವತ್ಥ ನಾರಾಯಣಗೌಡ ಶನಿವಾರ ಸುದ್ದಿಗೋಷ್ಠಿಯಲ್ಲಿ ನೀಡಿದ ಪ್ರತಿಕ್ರಿಯೆ ಇದು.

'ಕೋಲಾರ ಸಂಸದರಾಗಿದ್ದ ಮುನಿಸ್ವಾಮಿ ಅವರಿಗೆ ಟಿಕೆಟ್ ಕೈ ತಪ್ಪಿದರೂ ಪಕ್ಷದ ಸೂಚನೆಯಂತೆ ಜೆಡಿಎಸ್ ಅಭ್ಯರ್ಥಿ ಮಲ್ಲೇಶ್ ಬಾಬು ಪರ ಕೆಲಸ ಮಾಡಿ ಗೆಲುವಿಗೆ ಶ್ರಮಿಸಲಿಲ್ಲವೇ? ಬಿಜೆಪಿ ಅಥವಾ ಜೆಡಿಎಸ್ ಟಿಕೆಟ್ ಪ್ರಬಲ ಆಕಾಂಕ್ಷಿಯಾಗಿರುವ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರೇ ಅಭ್ಯರ್ಥಿಯಾಗಲಿದ್ದಾರೆ ಎಂದು ಹೇಳಿದರು.

'ಉಪ ಚುನಾವಣೆಯಲ್ಲಿ ಯೋಗೇಶ್ವರ್ ಗೆಲುವು ಸಾಧಿಸುವುದು ಗೋಡೆ ಮೇಲಿನ ಬರಹದಷ್ಟೇ ಸತ್ಯ. ಯೋಗೇಶ್ವರ್ ಹೊರತುಪಡಿಸಿದರೆ ಅಲ್ಲಿ ಗೆಲ್ಲುವ ಸಾಮರ್ಥ್ಯವಿರುವುದು ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಮಾತ್ರ ಎಂದು ಹೇಳಿದರು.

'ಯೋಗೇಶ್ವರ್ ನುರಿತ ರಾಜಕಾರಣಿ. ಪಕ್ಷೇತರವಾಗಿ, ಕಾಂಗ್ರೆಸ್ ಮತ್ತು ಬಿಜೆಪಿಯಿಂದಲೂ ಗೆದ್ದಿದ್ದಾರೆ. ಟಿಕೆಟ್ ಸಿಗದಿದ್ದಾಗ ಸಮಾಜವಾದಿ ಪಕ್ಷದಿಂದ ಟಿಕೆಟ್ ತಂದು ಕೆಂಪು ಟೋಪಿ ಧರಿಸಿ ಚುನಾವಣೆ ಗೆದ್ದಿದ್ದಾರೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಚಿತ್ರಾವಳಿ



ಆಶ್ವಾಸನ ಫೌಂಡೇಷನ್ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ 2024ನೇ ಸಾಲಿನ 'ಆಶ್ವಾಸನ ಪ್ರಶಸ್ತಿ' ಪ್ರದಾನ ಮಾಡಲಾಯಿತು. (ಎಡದಿಂದ) ಫೌಂಡೇಶನ್‌ನ ವ್ಯವಸ್ಥಾಪಕ ಟ್ರಸ್ಟಿ ಮಾಳವಿಕಾ ಉಭಯಕರ್ ಬಿಜೂರ್, ಪ್ರಶಸ್ತಿ ಪುರಸ್ಕೃತರಾದ ರಂಗನಗೌಡ ಕೆ. ನಾಡಿಗೇರ, ಶ್ರೀಧರ ಷಡಕ್ಷರಿ,ಎಂ. ನಾಗೇಶ, ಪಿ.ಕೃಷ್ಣಮೂರ್ತಿ ಹಾಗೂ 'ಸಪ್ತಕ' ಸಂಸ್ಥೆಯ ಮುಖ್ಯಸ್ಥ ಜಿ.ಎಸ್‌.ಹೆಗಡೆ ಉಪಸ್ಥಿತರಿದ್ದರು.



ಆರೋಹಣ ಸಂಸ್ಥೆ ನಗರದಲ್ಲಿ ಶನಿವಾರ ಹಮ್ಮಿಕೊಂಡ ಸಮಾರಂಭದಲ್ಲಿ ತಬಲಾ ವಾದಕ ಸತೀಶ್ ಹಂಪಿಹೊಳಿ ಹಾಗೂ ಆಯುರ್ವೇದ ವೈದ್ಯೆಯೂ ಆಗಿರುವ ಲೇಖಕಿ ಡಾ. ವಸುಂಧರಾ ಭೂಪತಿ ಅವರಿಗೆ 'ಆರೋಹಣ ಕಲಾ ರೂಪ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಮನೋವೈದ್ಯ ಡಾ.ಸಿ.ಆರ್‌.ಚಂದ್ರಶೇಖರ್, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ಕೆ.ಎಸ್‌.ಆನಂದ ಮೂರ್ತಿ ಹಾಗೂ ಆರೋಹಣ ಸಂಸ್ಥೆಯ ಸ್ಥಾಪಕ ಸುಧೀಂದ್ರ ಉಪಸ್ಥಿತರಿದ್ದರು.



ಪ್ರಯಾಣಿಕರ ಬಳಕೆಗೆ ಮುಕ್ತ

'ನಮ್ಮ ಮೆಟ್ರೊ' ಹಸಿರು ಮಾರ್ಗದಲ್ಲಿನ ಆರ್.ವಿ.ರಸ್ತೆ ಮೆಟ್ರೊ ನಿಲ್ದಾಣದ ರೀಚ್-4 ರಲ್ಲಿ ಪ್ಲಾಟ್‌ಫಾರ್ಮ್–1ರ ಕಡೆಯಿಂದ ಹೊಸ ಪ್ರವೇಶ ದ್ವಾರವನ್ನು ಶನಿವಾರ ಪ್ರಯಾಣಿಕರ ಬಳಕೆಗೆ ಮುಕ್ತಗೊಳಿಸಲಾಯಿತು ಪ್ರಜಾವಾಣಿ ಚಿತ್ರ

'ಆರೋಗ್ಯ ಪ್ರವಾಸೋದ್ಯಮಕ್ಕೆ ಉತ್ತೇಜನ'

ಖಾಸಗಿ ವೈದ್ಯಕೀಯ ಸಂಸ್ಥೆಗಳ ಪ್ರತಿನಿಧಿಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯಕೀಯ ಚಿಕಿತ್ಸೆಗೆ ಹೊರ ರಾಜ್ಯ, ವಿದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬೆಂಗಳೂರಿಗೆ ಬರುತ್ತಿದ್ದಾರೆ. ಆರೋಗ್ಯ ಪ್ರವಾಸೋದ್ಯಮಕ್ಕೆ ಸರ್ಕಾರ ಅಗತ್ಯ ಉತ್ತೇಜನ ನೀಡಲಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆರೋಗ್ಯ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಇಲ್ಲಿನ ಪ್ರಮುಖ ಖಾಸಗಿ ಆಸ್ಪತ್ರೆಗಳ ಪ್ರತಿನಿಧಿಗಳ ಜತೆಗೆ ಸಭೆ ನಡೆಸಿದ ಅವರು, ಆರೋಗ್ಯ ಪ್ರವಾಸೋದ್ಯಮ ಬೆಳವಣಿಗೆಗೆ ಇರುವ ಅವಕಾಶಗಳ ಬಗ್ಗೆ ಚರ್ಚಿಸಿದರು.

'ಸರ್ಕಾರದ ವತಿಯಿಂದ ಅಧಿಕೃತ ವೆಬ್ ಪೋರ್ಟಲ್ ಒಂದನ್ನು ಆರಂಭಿಸಿ, ಆ ಮೂಲಕ ಖಾಸಗಿ ಆಸ್ಪತ್ರೆಗಳ ಚಿಕಿತ್ಸೆಯ ಗುಣಮಟ್ಟದ ಬಗ್ಗೆ ಸರ್ಕಾರವೇ 'ಕ್ರೆಡಿಟ್ ಪಾಯಿಂಟ್ಸ್' ನೀಡುವ ವ್ಯವಸ್ಥೆ ರೂಪಿಸಬೇಕು' ಎಂದು ಖಾಸಗಿ ಆಸ್ಪತ್ರೆಗಳ ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೆ ಸಚಿವರು, ಈ ಬಗ್ಗೆ ಹೆಚ್ಚಿನ ಚರ್ಚೆಗಳನ್ನು ನಡೆಸಿ, ನಿರ್ಣಯ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಮುಖ್ಯಾಂಶಗಳು
- ಸೌಲಭ್ಯ ಅಭಿವೃದ್ಧಿ ಕುರಿತು ಖಾಸಗಿ ಆಸ್ಪತ್ರೆಗಳ ಪ್ರತಿನಿಧಿಗಳ ಜತೆಗೆ ಸಭೆ
- ಆರೋಗ್ಯ ಪ್ರವಾಸೋದ್ಯಮದಿಂದ ವಿದೇಶಿಯರನ್ನು ಸೆಳೆಯಬಹುದು
- ಲಭ್ಯವಿರುವ ಚಿಕಿತ್ಸೆ, ಅತ್ಯಾಧುನಿಕ ಸೌಲಭ್ಯ ಕುರಿತು ಜಾಗೃತಿ ಮೂಡಿಸಬೇಕು

ಬಳಿಕ ಮಾಧ್ಯಮಗಳ ಜತೆಗೆ ಮಾತನಾಡಿದ ಸಚಿವರು, 'ಚಿಕಿತ್ಸೆಗಾಗಿ ಬರುವವರಿಗೆ ಇಲ್ಲಿಯ ಅತ್ಯಾಧುನಿಕ ಆರೋಗ್ಯ ಸೌಲಭ್ಯಗಳು ಹಾಗೂ ಚಿಕಿತ್ಸೆಯ ಬಗ್ಗೆ ಭರವಸೆ ಮೂಡಿಸಬೇಕಿದೆ. ಈ ನಿಟ್ಟಿನಲ್ಲಿ ಖಾಸಗಿ ಆಸ್ಪತ್ರೆಗಳು ನೀಡುವ ಚಿಕಿತ್ಸೆಯ ಗುಣಮಟ್ಟದ ಬಗ್ಗೆ ಸರ್ಕಾರವೇ ಪ್ರಮಾಣೀಕರಣ ಮಾಡುವ ವ್ಯವಸ್ಥೆ ರೂಪಿಸಬೇಕಿದೆ' ಎಂದು ಅಭಿಪ್ರಾಯಪಟ್ಟರು.



ದಿನೇಶ್ ಗುಂಡೂರಾವ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ, ಆಯುಕ್ತ ಶಿವಕುಮಾರ ಕೆ.ಬಿ., ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ನಿರ್ದೇಶಕ ನವೀನ್ ಭಟ್ ಹಾಗೂ ಖಾಸಗಿ ಆಸ್ಪತ್ರೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ


'ಆಗ ಜನರಿಗೂ ಆಸ್ಪತ್ರೆಗಳಲ್ಲಿನ ಚಿಕಿತ್ಸೆಯ ಬಗ್ಗೆ ವಿಶ್ವಾಸ ಮೂಡಲಿದೆ. ಈ ಕ್ರಮದಿಂದ ಬೆಂಗಳೂರಿನಲ್ಲಿ ಆರೋಗ್ಯ ಪ್ರವಾಸೋದ್ಯಮ ಬೆಳೆಯುವುದರ ಜತೆಗೆ ಬೆಂಗಳೂರು ಆರೋಗ್ಯ ನಗರವಾಗಿಯೂ ಮುನ್ನೆಲೆಗೆ ಬರಲಿದೆ' ಎಂದರು.

'ನಗರದಲ್ಲಿ ಉತ್ತಮ ಆಸ್ಪತ್ರೆಗಳಿವೆ. ನಿಗದಿತ ಅವಧಿಯಲ್ಲಿ ಗುಣಮಟ್ಟದ ಚಿಕಿತ್ಸೆಗಳು ದೊರೆಯುತ್ತಿವೆ. ವಿದೇಶಗಳಲ್ಲಿ ಚಿಕಿತ್ಸೆಗೆ ತಿಂಗಳಾನುಗಟ್ಟಲೆ ಕಾಯುವ ಪರಿಸ್ಥಿತಿಯಿದೆ. ಹೀಗಾಗಿ, ಆರೋಗ್ಯ ಪ್ರವಾಸೋದ್ಯಮದ ಮೂಲಕ ವಿದೇಶಿಗರನ್ನು ಸೆಳೆಯಬಹುದು. ಆರೋಗ್ಯ ಸೇವೆಗಳಿಗಾಗಿ ಬೆಂಗಳೂರಿಗೆ ಬರುವ ಜನರು ರಾಜ್ಯದ ಇತರ ಪ್ರವಾಸಿ ಸ್ಥಳಗಳಿಗೂ ಭೇಟಿ ನೀಡುತ್ತಾರೆ. ಇದರಿಂದ ರಾಜ್ಯದ ಪ್ರವಾಸೋದ್ಯಮವೂ ಅಭಿವೃದ್ಧಿ ಹೊಂದಲಿದೆ' ಎಂದು ತಿಳಿಸಿದರು.

ಸಭೆಯಲ್ಲಿ ಮಣಿಪಾಲ್ ಆಸ್ಪತ್ರೆ, ನಾರಾಯಣ ಹೃದಯಾಲಯ, ಅಪೋಲೊ ಹೆಲ್ತ್ ಕೇರ್ ಸೇರಿ 50ಕ್ಕೂ ಹೆಚ್ಚು ಪ್ರಮುಖ ಖಾಸಗಿ ಆಸ್ಪತ್ರೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

'ಸರ್ಕಾರದಿಂದ ಪ್ರತಿಪಕ್ಷದ ಮುಖಂಡರ ಟಾರ್ಗೆಟ್'

ಪ್ರಜಾವಾಣಿ ವಾರ್ತೆ



ಬಿ.ವೈ. ರಾಘವೇಂದ್ರ

ಶಿವಮೊಗ್ಗ: 'ಮುಡಾ ಹಗರಣ, ಅಕ್ರಮ ಭೂಮಿ ಮಂಜೂರಾತಿ ಪ್ರಕರಣಗಳ ತಪ್ಪು ಮುಚ್ಚಿಕೊಳ್ಳಲು ಕಾಂಗ್ರೆಸ್ ಸರ್ಕಾರ, ವಿರೋಧ ಪಕ್ಷದವರನ್ನು ಟಾರ್ಗೆಟ್ ಮಾಡುತ್ತಿದೆ. ಅದರ ಭಾಗವೇ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕುಟುಂಬದ ಮೇಲಿನ ಆರೋಪ' ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

'ತನಿಖೆ ಆಗುವ ಮುನ್ನವೇ ಕೇಂದ್ರ ಸಚಿವರ ಮೇಲೆ ವೃಥಾ ಆರೋಪ ಮಾಡುವುದು ಸಲ್ಲ. ಮೈಸೂರಿನ ಮುಡಾ ಕಚೇರಿ ಮೇಲೆ ಇ.ಡಿ.ದಾಳಿ ನಡೆದಿದ್ದು, ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಲಿ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಜೈವಿಕ ನಿಯಂತ್ರಕಗಳ ಅಭಿವೃದ್ಧಿಗೆ ಒತ್ತು ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ಅಗತ್ಯಗಳಿಗೆ ಪೂರಕವಾಗಿ ಹವಾಮಾನಕ್ಕೆ ಅನುಗುಣವಾಗಿ ಜೈವಿಕ ನಿಯಂತ್ರಕಗಳ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಭಾರತ ಸರ್ಕಾರದ ರಾಷ್ಟ್ರೀಯ ಮಳೆಯಾಶ್ರಿತ ಪ್ರದೇಶ ಪ್ರಾಧಿಕಾರದ ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಶೋಕ ದಳವಾಯಿ ತಿಳಿಸಿದರು.

ಐಸಿಎಆರ್–ಎನ್‌ಬಿಎಐಆರ್ ಯಲಹಂಕ ಕ್ಯಾಂಪಸ್‌ನಲ್ಲಿ ಶನಿವಾರ ನಡೆದ 'ಬಯೋಕಂಟ್ರೋಲ್ ಎಕ್ಸ್‌ಪೋ' 32ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು ಮಾತನಾಡಿದರು. ಹವಾಮಾನ ಬದಲಾವಣೆ ಕುರಿತು ನಿಖರ ಸಂಶೋಧನೆ ಮಾಡಬೇಕು ಎಂದರು.

ಕೃಷಿ ವಿಜ್ಞಾನಿಗಳ ನೇಮಕಾತಿ ಮಂಡಳಿ ಸದಸ್ಯ ಮೇಜರ್ ಸಿಂಗ್ ಮಾತನಾಡಿ, 'ವೈರಸ್-ವೆಕ್ಟರ್ ಸಂಬಂಧಗಳ ಮೇಲೆ ತೀವ್ರವಾದ ಸಂಶೋಧನೆ ಅಗತ್ಯ' ಎಂದು ಪ್ರತಿಪಾದಿಸಿದರು.

ಕೇಂದ್ರೀಯ ಕೀಟನಾಶಕ ಮಂಡಳಿ ಮತ್ತು ನೋಂದಣಿ ಸಮಿತಿ ಕಾರ್ಯದರ್ಶಿ ಅರ್ಚನಾ ಸಿನ್ಹಾ ಅವರು ರಾಷ್ಟ್ರೀಯ ಮಟ್ಟದಲ್ಲಿ ಜೈವಿಕ ಕೀಟನಾಶಕಗಳ ನೋಂದಣಿಗೆ ಹೊಸದಾಗಿ ಸರಳೀಕೃತ ಮಾರ್ಗ ಸೂಚಿಗಳ ಕುರಿತು ಮಾತನಾಡಿದರು. ಪ್ರಗತಿಪರ ರೈತರನ್ನು ಸನ್ಮಾನಿಸಿ, ಕೃಷಿ ಸಾಮಗ್ರಿ ವಿತರಿಸಲಾಯಿತು. 'ತಾಯಿಯ ಹೆಸರಿನಲ್ಲಿ ಒಂದು ಮರ' ಅಭಿಯಾನ ನಡೆಸಲಾಯಿತು.

ಐಸಿಎಆರ್–ಎನ್‌ಬಿಎಐಆರ್‌ನ ನಿರ್ದೇಶಕ ಎಸ್‌.ಎನ್‌. ಸುಶೀಲ್ ಅಧ್ಯಕ್ಷತೆ ವಹಿಸಿದ್ದರು. ಅಖಿಲ ಭಾರತ ಕೃಷಿ ಯಂತ್ರೋಪಕರಣ ತಯಾರಕರ ಸಂಘದ (ಅಮ್ಮ) ಅಧ್ಯಕ್ಷ ಜ್ಞಾನೇಶ್ವರ ವಾಘಚೌರೆ, ವಿಜ್ಞಾನಿಗಳಾದ ಶ್ರೀದೇವಿ ಮತ್ತು ದೀಪಾ ಭಗತ್ ಭಾಗವಹಿಸಿದ್ದರು.



ಶನಿವಾರ ನಡೆದ 'ಬಯೋಕಂಟ್ರೋಲ್ ಎಕ್ಸ್‌ಪೋ' 32ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ರೈತರನ್ನು ಸನ್ಮಾನಿಸಲಾಯಿತು

ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರೀಯ) ಸಂಘದ ಸಮಾರಂಭದಲ್ಲಿ ಡಿಸಿಎಂ

'ಸಮಾಜದ ಮೂಲ ಮರೆಯದಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಹ್ನಿಕುಲ ಕ್ಷತ್ರೀಯ ಸಮಾಜದ ವಿದ್ಯಾರ್ಥಿಗಳು ತಮ್ಮ ಮೂಲವನ್ನು ಮರೆಯಬಾರದು. ಮೂಲ ಮರೆತರೆ ಯಶಸ್ಸು ಸಾಧ್ಯವಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶನಿವಾರ ಸಲಹೆ ಮಾಡಿದರು.

ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರೀಯ) ಸಂಘ ಏರ್ಪಡಿಸಿದ್ದ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಈ ಸಮಾಜಕ್ಕೆ ನಿಮ್ಮದೇ ಆದ ಇತಿಹಾಸವಿದೆ. ನೀವು ಅದನ್ನು ಬಿಟ್ಟುಕೊಡಬೇಡಿ' ಎಂದು ಹೇಳಿದರು

ಸಮಾಜದ ಮುಖಂಡರಿಂದ ಮನವಿ ಸ್ವೀಕರಿಸಿದ ಅವರು, 'ಉಪಚುನಾವಣೆ ಮುಗಿದ ಬಳಿಕ ಸಮಾಜದ ಮುಖಂಡರನ್ನು ಕರೆಸಿ ಬೇಡಿಕೆಗಳ ಕುರಿತು ಚರ್ಚಿಸುತ್ತೇನೆ. ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡುತ್ತೇನೆ' ಎಂದರು.

'ಬೆಂಗಳೂರಿನ ಕರಗ ಬಹಳ ದೊಡ್ಡ ಉತ್ಸವ. ಇದು ನಿಮಗೆ ಪರಂಪರೆಯಾಗಿ ಬಂದಿರುವ ಸಂಸ್ಕೃತಿ ಹಾಗೂ ಪದ್ಧತಿ. ಬೆಂಗಳೂರಿನ ಕರಗ ಉತ್ಸವ ದೇಶದ ಆಕರ್ಷಣೆ. ನೀವು ಅದನ್ನು ಉಳಿಸಿ, ಬೆಳೆಸಿಕೊಂಡು ಹೋಗುತ್ತಿದ್ದೀರಿ' ಎಂದು ಶ್ಲಾಘಿಸಿದರು. 'ತಿಗಳ ಸಮಾಜ, ನಂಬಿಕೆ ಹಾಗೂ ದುಡಿಮೆಗೆ ಹೆಸರಾಗಿದೆ. ಈ ಸಮಾಜದವರಿಗೂ ಪ್ರಕೃತಿಗೂ ಅವಿನಾಭಾವ ಸಂಬಂಧವಿದೆ. ನಿಮ್ಮ ಆಂತರಿಕ ವಿಚಾರದ ಬಗ್ಗೆ ಮಾತನಾಡುವುದಿಲ್ಲ. ಆದರೆ, ಜತೆಗೂಡಿ ಚರ್ಚಿಸಿ, ಕೆಲಸ ಮಾಡುವುದರಿಂದ ಯಶಸ್ಸು ಸಾಧ್ಯವಾಗುತ್ತದೆ. ನಿಮ್ಮಲ್ಲಿ ಏನೇ ಭಿನ್ನಾಭಿಪ್ರಾಯ ಇದ್ದರೂ ಒಟ್ಟಾಗಿ ಸೇರಿ ಕೆಲಸ ಮಾಡಬೇಕು' ಎಂದು ಹೇಳಿದರು.

ದೇವನಹಳ್ಳಿ ತಾಲ್ಲೂಕು ಬುಳ್ಳಹಳ್ಳಿ ಗ್ರಾಮದ ದ್ರೌಪದಿ ಆದಿ ಪರಾ ಶಕ್ತಿಮಹಾಸಂಸ್ಥಾನಪೀಠದ ಬಾಲಯೋಗಿ ಸಾಯಿ ಮಂಜುನಾಥ ಸ್ವಾಮೀಜಿ, ಹೊಸಕೋಟೆ ತಾಲ್ಲೂಕು ನಂದಗುಡಿ– ಶಿವನಾಪುರದ ವಹ್ನಿಕುಲ ಕ್ಷತ್ರೀಯರ ಗುರುಪೀಠದ ಪ್ರಣವಾನಂದಪುರಿ ಸ್ವಾಮೀಜಿ, ವಿಧಾನಪರಿಷತ್ ಮಾಜಿ ಸದಸ್ಯ ಪಿ.ಆರ್. ರಮೇಶ್, ಸಂಘದ ಅಧ್ಯಕ್ಷ ಮು.ಕೃಷ್ಣಮೂರ್ತಿ, ಉಪಾಧ್ಯಕ್ಷ ಕುಪ್ಪುಸ್ವಾಮಿ ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ತಿಗಳರ ಸಂಘ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಿದರು

'ಬೆಂಗಳೂರು ಕಂಬಳ ಈ ವರ್ಷ ಅನಿಶ್ಚಿತ'

ಮಂಗಳೂರು: ಕಳೆದ ಬಾರಿ ಅದ್ಧೂರಿಯಾಗಿ ನಡೆದಿದ್ದ ಬೆಂಗಳೂರು ಕಂಬಳ ಈ ಬಾರಿ ನಡೆಯುವುದು ಸಂದೇಹ. ವೇಳಾಪಟ್ಟಿಯಂತೆ ಕಂಬಳ ರಾಜಧಾನಿಯಲ್ಲಿ ಇದೇ 26ರಂದು ನಡೆಯಬೇಕಿತ್ತು. ಆದರೆ ಸದ್ಯ ಕಂಬಳ ಆಯೋಜಿಸಲು ಅಲ್ಲಿನ ತುಳು ಕೂಟ ಸಿದ್ಧವಿಲ್ಲ.

ತುಳು ಕೂಟದ 50ನೇ ವರ್ಷಾಚರಣೆ ಅಂಗವಾಗಿ ಕಳೆದ ಋತುವಿನ ಬೆಂಗಳೂರಿನ ಅರಮನೆ ಮೈದಾನದಲ್ಲಿ ಕಂಬಳ ನಡೆದಿತ್ತು. ವರ್ಷದ ಮೊದಲ ಕಂಬಳ ಆಯೋಜಿಸುವ ಅವಕಾಶವನ್ನು ತುಳುಕೂಟಕ್ಕೆ ನೀಡಲಾಗಿತ್ತು. ಆದರೆ ಫೆಬ್ರುವರಿ ಅಥವಾ ಮಾರ್ಚ್‌ನಲ್ಲಿ ಮಾತ್ರ ಸ್ಪರ್ಧೆ ಆಯೋಜಿಸಲು ಸಾಧ್ಯ ಎಂದು ತುಳು ಕೂಟ ತಿಳಿಸಿದೆ. ಆಗ ಪ್ರತಿ ವಾರಾಂತ್ಯದಲ್ಲೂ ಸ್ಥಳೀಯ ಕಂಬಳ ಇದೆ. ಆದ್ದರಿಂದ ಬೆಂಗಳೂರಿಗಾಗಿ ದಿನಾಂಕ ಮರು ನಿಗದಿ ಮಾಡುವುದು ಸವಾಲಾಗಿದೆ ಎನ್ನುತ್ತವೆ ಜಿಲ್ಲಾ ಕಂಬಳ ಸಮಿತಿಯ ಮೂಲಗಳು.

'ಬೆಂಗಳೂರಲ್ಲಿ ಕಂಬಳ ಆಯೋಜಿಸುವುದು ಖಚಿತ. ಆದರೆ ಸದ್ಯ ಅನುಮತಿ ಪಡೆಯಲು ಪೂರಕ ವಾತಾವರಣ ಇಲ್ಲ. ಹೀಗಾಗಿ ಮುಂದಿನ ವರ್ಷದಲ್ಲಿ ನಡೆಸುವ ಕುರಿತು ಚಿಂತನೆ ನಡೆದಿದೆ' ಎಂದು ತುಳು ಕೂಟದ ಅಧ್ಯಕ್ಷ ಸುಂದರರಾಜ್ ರೈ ತಿಳಿಸಿದರು.

ಬ್ಯಾಡ್ಮಿಂಟನ್: ರಾಮನಗರ, ಚಿತ್ರದುರ್ಗ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಕನಕಪುರ: ಬೆಂಗಳೂರು ವಿಭಾಗ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಯ 14 ವರ್ಷದ ಒಳಗಿನ ಬಾಲಕರ ವಿಭಾಗದಲ್ಲಿ ರಾಮನಗರ ಜಿಲ್ಲೆ ಪ್ರಥಮ ಮತ್ತು ಬಾಲಕಿಯರ ವಿಭಾಗದಲ್ಲಿ ಚಿತ್ರದುರ್ಗ ತಂಡ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದೆ.

ಬಾಲಕರ ವಿಭಾಗದಲ್ಲಿ ಬೆಂಗಳೂರು ಉತ್ತರ ದ್ವಿತೀಯ ಸ್ಥಾನ ಹಾಗೂ ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ದಕ್ಷಿಣ ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾದವು.

ಶುಕ್ರವಾರ ಮುಕ್ತಾಯವಾದ ಬೆಂಗಳೂರು ವಿಭಾಗ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ರಾಜ್ಯದ ನಾನಾ ಜಿಲ್ಲೆಗಳ 14 ವರ್ಷದ ಒಳಗಿನ ಬಾಲಕ ಮತ್ತು ಬಾಲಕಿಯರ ಹಲವು ತಂಡಗಳು ಭಾಗವಹಿಸಿದ್ದವು.

ರಾಮನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಇಲಾಖೆ ಜಂಟಿಯಾಗಿ ಕನಕಪುರದ ಟೌನ್ ಟೆನ್ನಿಸ್ ಕ್ಲಬ್‌ನಲ್ಲಿ ಹಮ್ಮಿಕೊಂಡಿದ್ದ ಪಂದ್ಯಾವಳಿ ಅ.14 ರಿಂದ 18 ರವರೆಗೆ ನಡೆಯಿತು.



ಕನಕಪುರ ಟೌನ್ ಟೆನ್ನಿಸ್ ಕ್ಲಬ್ ನಲ್ಲಿ ನಡೆದ ವಿಭಾಗ ಮಟ್ಟದ ಬ್ಯಾಡ್ಮಿಂಟನ್ ನಲ್ಲಿ ವಿಜೇತರಾಗಿ ರಾಜ್ಯಮಟ್ಟಕ್ಕೆ ಆಯ್ಕೆಯಾದ ರಾಮನಗರ ಜಿಲ್ಲಾ ಬಾಲಕರ ತಂಡ

ರಾಷ್ಟ್ರೀಯ ಎಸ್‌ಸಿ ಆಯೋಗದ ಅಧ್ಯಕ್ಷ ಕಿಶೋರ ಮಕ್ವಾನಾ ಭರವಸೆ

ಪರಿಶಿಷ್ಟ ಜಾತಿ ಲೈಂಗಿಕ ಕಾರ್ಯಕರ್ತೆಯರಿಗೆ ಸೌಲಭ್ಯ

ಪ್ರಜಾವಾಣಿ ವಾರ್ತೆ

ಮೈಸೂರು: 'ಪರಿಶಿಷ್ಟ ಜಾತಿಯ ಲೈಂಗಿಕ ಕಾರ್ಯಕರ್ತೆಯರು ಹಾಗೂ ಅಪಾಯದ ಅಂಚಿನಲ್ಲಿರುವ ಮಹಿಳೆಯರು ಸಾಮಾಜಿಕ ಭದ್ರತಾ ಯೋಜನೆಗಳನ್ನು ಪಡೆಯಲು ಸಮಸ್ಯೆ ಎದುರಿಸುತ್ತಿದ್ದು, ಅವರಿಗೆ ಅಗತ್ಯವಿರುವ ಗುರುತಿನ ಚೀಟಿಗಳನ್ನು ದೊರಕಿಸಲಾಗುವುದು' ಎಂದು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ಅಧ್ಯಕ್ಷ ಕಿಶನ್ ಮಕ್ವಾನ ಭರವಸೆ ನೀಡಿದರು.

ಶನಿವಾರ ಇಲ್ಲಿ ಆಶೋದಯ ಸಮಿತಿಯು ಏರ್ಪಡಿಸಿದ್ದ, ಪರಿಶಿಷ್ಟ ಜಾತಿಯ ಲೈಂಗಿಕ ಕಾರ್ಯಕರ್ತೆಯರು ಹಾಗೂ ಅಪಾಯದ ಅಂಚಿನಲ್ಲಿರುವ ಮಹಿಳೆಯರ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಸರ್ಕಾರಿ ದಾಖಲೆಗಳಿಲ್ಲದೆ ಲೈಂಗಿಕ ಕಾರ್ಯಕರ್ತೆಯರು ಕೇಂದ್ರ ಸರ್ಕಾರದ ಅನೇಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ದಾಖಲೆಗಳನ್ನು ಮಾಡಿಸಲು ಅವರಿಗೆ ಮನೆ ವಿಳಾಸ ಹಾಗೂ ಇನ್ನಿತರ ಗೋಪ್ಯ ಮಾಹಿತಿ ನೀಡಲು ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿದೆ. ಆ ಬಗ್ಗೆ ತಿದ್ದುಪಡಿ ತರಲು ಸರ್ಕಾರದ ಗಮನ ಸೆಳೆಯಲಾಗುವುದು' ಎಂದರು.

'ಈ ಭಾಗದ ಕೆಲವು ಲೈಂಗಿಕ ಕಾರ್ಯಕರ್ತೆಯರ ಮನೆಗೆ ಭೇಟಿ ನೀಡಿ ಅವರ ಸಮಸ್ಯೆ ಬಗ್ಗೆ ತಿಳಿದುಕೊಂಡಿದ್ದೇನೆ. ಅವರ ಬಳಿ ರೇಷನ್ ಕಾರ್ಡ್, ಆಧಾರ್ ಕಾರ್ಡ್, ಆಯುಷ್ಮಾನ್ ಕಾರ್ಡ್‌ಗಳೇ ಇಲ್ಲ. ಹೀಗಾಗಿ ಸರ್ಕಾರದ ಯೋಜನೆಗಳು ತಲುಪುತ್ತಿಲ್ಲ. ಎಚ್‌ಐವಿ ಸೋಂಕಿತರಾದ ಅನೇಕರಿಗೆ ಸರ್ಕಾರದ ಸೌಲಭ್ಯಗಳ ಅರಿವೇ ಇಲ್ಲ' ಎಂದು ವಿಷಾದಿಸಿದರು.

'ಈ ಸಮಸ್ಯೆಗಳ ಬಗ್ಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರೊಂದಿಗೆ ಚರ್ಚಿಸಿ, ಇಂದಿನ ಕಾರ್ಯಕ್ರಮದಲ್ಲೇ ಲೈಂಗಿಕ ಕಾರ್ಯಕರ್ತೆಯರಿಂದ ಸರ್ಕಾರಿ ದಾಖಲೆಗಾಗಿ ಅರ್ಜಿ ಪಡೆಯಲಾಗಿದೆ. ಮುಂದಿನ ದಿನಗಳಲ್ಲಿ ಅವರನ್ನು ಸಮಾಜದ ಮುನ್ನೆಲೆಗೆ ತರಲು ಕ್ರಮ ವಹಿಸಲಾಗುವುದು' ಎಂದರು. ಆಶೋದಯ ಸಮಿತಿಯ ನಿರ್ದೇಶಕಿ ಲಕ್ಷ್ಮಿ ಇದ್ದರು.



ಮೈಸೂರಿನಲ್ಲಿ ಆಶೋದಯ ಸಮಿತಿಯು ಶನಿವಾರ ಏರ್ಪಡಿಸಿದ್ದ, ಪರಿಶಿಷ್ಟ ಜಾತಿ ಲೈಂಗಿಕ ಕಾರ್ಯಕರ್ತೆಯರ ಮತ್ತು ಅಪಾಯದ ಅಂಚಿನಲ್ಲಿರುವ ಮಹಿಳೆಯರ ಸಮ್ಮಿಲನ ಕಾರ್ಯಕ್ರಮದಲ್ಲಿ ಕಿಶೋರ ಮಕ್ವಾನಾ ಮಾತನಾಡಿದರು. ಲಕ್ಷ್ಮಿ ವೇಣುಕುಮಾರ್ ಭಾಗವಹಿಸಿದರು

ಮುಖ್ಯಾಂಶಗಳು
- ಗುರುತಿನ ಚೀಟಿ ವಿತರಿಸಲು ಕ್ರಮ
- ಸರ್ಕಾರದ ಯೋಜನೆಗಳನ್ನು ತಲುಪಿಸಲು ಆದ್ಯತೆ
- ಮುನ್ನೆಲೆಗೆ ತರಲು ಕ್ರಮ

ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸುವ ಭರವಸೆ ನೀಡಿದ ಮುಖ್ಯಮಂತ್ರಿ

ಒಳ ಮೀಸಲಿಗೆ ಎಡಗೈ ಬಣ ಪಟ್ಟು

ಪ್ರಜಾವಾಣಿ ವಾರ್ತೆ



ಒಳ ಮೀಸಲಾತಿ ಜಾರಿ ಬೇಡಿಕೆ ಕುರಿತು ಪರಿಶಿಷ್ಟ ಎಡಗೈ ಸಮುದಾಯದ ಮುಖಂಡರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚರ್ಚೆ ನಡೆಸಿದರು. ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು

ಬೆಂಗಳೂರು: 'ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ಘೋಷಣೆ ಆಗಿರುವುದರಿಂದ ನೀತಿ ಸಂಹಿತೆ ಜಾರಿಯಲ್ಲಿದೆ. ಹೀಗಾಗಿ, ಒಳ ಮೀಸಲಾತಿ ಜಾರಿ ವಿಚಾರದಲ್ಲಿ ಸದ್ಯ ಮಾತನಾಡುವುದಿಲ್ಲ. ಆದರೆ, ನಾನು ಒಳ ಮೀಸಲಾತಿ ಪರವಾಗಿದ್ದೇನೆ' ಎಂದು ಪರಿಶಿಷ್ಟ ಎಡಗೈ ಸಮುದಾಯದ ಮುಖಂಡರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಒಳ ಮೀಸಲಾತಿ ಬೇಡಿಕೆ ಕುರಿತು ತಮ್ಮ ಗೃಹ ಕಚೇರಿ ಕೃಷ್ಣದಲ್ಲಿ ಎಡಗೈ ಸಮುದಾಯದ ಮುಖಂಡರ ಜೊತೆ ಮುಖ್ಯಮಂತ್ರಿ ಶನಿವಾರ ಚರ್ಚೆ ನಡೆಸಿದರು. ಸಚಿವರಾದ ಕೆ.ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪುರ, ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ, ಮಾಜಿ ಸಚಿವರಾದ ಎಚ್. ಆಂಜನೇಯ, ಶಿವಣ್ಣ, ವಿಧಾನ ಪರಿಷತ್ ಸದಸ್ಯರಾದ ಡಾ. ತಿಮ್ಮಯ್ಯ, ಶಾಸಕ ಬಸಂತಪ್ಪ ಇದ್ದರು.

ಸಭೆಯ ಬಳಿಕ ಮಾತನಾಡಿದ ಮುನಿಯಪ್ಪ, 'ಒಳ ಮೀಸಲಾತಿ ಜಾರಿ ಕುರಿತು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಅಲ್ಲಿಯವರೆಗೆ ಯಾವುದೇ ನೇಮಕಾತಿಗಳನ್ನು ಮಾಡದಂತೆ ನಾವು ಮನವಿ ಮಾಡಿದ್ದೇವೆ. ನಮ್ಮ ಬೇಡಿಕೆಗೆ ಮುಖ್ಯಮಂತ್ರಿ ಸ್ಪಂದಿಸಿದ್ದಾರೆ' ಎಂದರು.

'ಸುಪ್ರೀಂ ಕೋರ್ಟ್ ತೀರ್ಪಿನಂತೆ, ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ನಮ್ಮ ಸಮುದಾಯದ ಎಲ್ಲ ಸಚಿವರು, ಶಾಸಕರು, ಮಾಜಿ ಸಚಿವರು, ಮಾಜಿ ಸಂಸದರು ಮುಖ್ಯಮಂತ್ರಿ ಜೊತೆ ಚರ್ಚಿಸಿದ್ದೇವೆ' ಎಂದರು.

'ನಮ್ಮ ಬೇಡಿಕೆ ವಿಚಾರದಲ್ಲಿ ಸಚಿವ ಸಂಪುಟ ಸಭೆ ತೀರ್ಮಾನ ತೆಗೆದುಕೊಳ್ಳಬೇಕು. ಅದಕ್ಕೆ ಸಹಮತ ವ್ಯಕ್ತಪಡಿಸಿರುವ ಮುಖ್ಯಮಂತ್ರಿ, ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳೋಣ ಎಂದಿದ್ದಾರೆ. ಜಾತಿ ಜನಗಣತಿ ವರದಿಯನ್ನೂ ಸಚಿವ ಸಂಪುಟ ಸಭೆಯ ಮುಂದಿಟ್ಟು ಒಪ್ಪಿಗೆ ಪಡೆಯಬೇಕು. ಈ ವಿಷಯಕ್ಕೆ ಎಲ್ಲರ ವಿಶ್ವಾಸ ಗಳಿಸಬೇಕು. ಯಾವುದೇ ಸಮುದಾಯದ ವಿರೋಧ ಇಲ್ಲ' ಎಂದರು.

ಎಚ್. ಆಂಜನೇಯ ಮಾತನಾಡಿ, 'ಮಾದಿಗ ಸಮುದಾಯಕ್ಕೆ ಮೀಸಲಾತಿ ಸಿಕ್ಕಿಲ್ಲ. ನಮ್ಮದು ಸಫಾಯಿ ಕರ್ಮಚಾರಿ ಉದ್ಯೋಗ. ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ನಾವು ಹಿಂದುಳಿದಿದ್ದೇವೆ. ಒಳ ಮೀಸಲಾತಿ ವಿಚಾರದಲ್ಲಿ ರಾಜ್ಯ ಸರ್ಕಾರವೇ ತೀರ್ಮಾನ ತೆಗೆದುಕೊಳ್ಳಬಹುದು ಎಂದು ಸುಪ್ರೀಂಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ. ಒಳ ಮೀಸಲಾತಿಗಾಗಿ 30 ವರ್ಷಗಳಿಂದ ನಾವು ಹೋರಾಟ ಮಾಡುತ್ತಿದ್ದೇವೆ. ನ್ಯಾಯ ಕೊಡಿಸಲು ನ್ಯಾಯಮೂರ್ತಿ ಎ.ಜಿ. ಸದಾಶಿವ ಆಯೋಗವನ್ನು ಸರ್ಕಾರ ರಚಿಸಿತ್ತು. ನೀತಿ ಸಂಹಿತೆ ನೋಡಿ ಮುಂದುವರೆಯುತ್ತೇವೆ ಎಂದು ಮುಖ್ಯಮಂತ್ರಿ ನಮಗೆ ಭರವಸೆ ನೀಡಿದ್ದಾರೆ. ಏನು ಮಾಡುತ್ತಾರೆಂದು ನೋಡೋಣ' ಎಂದರು.

> **ಒಳ ಮೀಸಲಾತಿ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಅಂತಿಮವಾಗಿ ಹೈಕಮಾಂಡ್ ಒಪ್ಪಿಗೆ ಪಡೆದು ಜಾರಿಗೊಳಿಸಲು ಬದ್ಧ ಎಂದು ಸಿ.ಎಂ ಹೇಳಿದ್ದಾರೆ**
> **ಕೆ.ಎಚ್. ಮುನಿಯಪ್ಪ,** ಸಚಿವ

> **ನಾವು ಹಸಿವಿನಿಂದ ಸಾಯುತ್ತಿದ್ದೇವೆ. ಒಳ ಮೀಸಲಾತಿ ಕೇಳುತ್ತಿದ್ದೇವೆ. ಇದಕ್ಕೆ ಯಾರೂ ವಿರೋಧ ವ್ಯಕ್ತಪಡಿಸಿಲ್ಲ. ಮೌನ ವಹಿಸಿದರೆ ಒಪ್ಪಿಗೆಯಿದೆ ಎಂದರ್ಥ**
> **ಎಚ್. ಆಂಜನೇಯ,** ಮಾಜಿ ಸಚಿವ

ಎಸ್.ಎಂ.ಕೃಷ್ಣ ಆಸ್ಪತ್ರೆಗೆ ದಾಖಲು

ಬೆಂಗಳೂರು: ವಯೋಸಹಜ ಅನಾರೋಗ್ಯ ಸಮಸ್ಯೆ ಕಾರಣ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಮಣಿಪಾಲ್ ಆಸ್ಪತ್ರೆಗೆ ಶನಿವಾರ ದಾಖಲಾಗಿದ್ದಾರೆ.



ಡಾ. ಸತ್ಯನಾರಾಯಣ ಹಾಗೂ ಡಾ. ಸುನೀಲ್ ಕಾರಂತ ನೇತೃತ್ವದ ವೈದ್ಯರ ತಂಡವು 92 ವರ್ಷದ ಕೃಷ್ಣ ಅವರಿಗೆ ಚಿಕಿತ್ಸೆ ನೀಡುತ್ತಿದೆ. ಅವರ ಆರೋಗ್ಯ ಸ್ಥಿರವಾಗಿದ್ದು, ಸೋಮವಾರ ಮನೆಗೆ ತೆರಳಲಿದ್ದಾರೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ. ಕೆಲ ತಿಂಗಳ ಹಿಂದೆ ಶ್ವಾಸಕೋಶದ ಸೋಂಕಿನಿಂದಾಗಿ ಉಸಿರಾಟದ ಸಮಸ್ಯೆ ಎದುರಿಸಿದ್ದ ಅವರು, ನಿರಂತರ 4 ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಆ. 28ರಂದು ಚೇತರಿಸಿಕೊಂಡು ಮಣಿಪಾಲ್ ಆಸ್ಪತ್ರೆಯಿಂದ ಮನೆಗೆ ತೆರಳಿದ್ದರು.

'ಮುಂದಿನ ವರ್ಷದಿಂದ ಮಕ್ಕಳಿಗೆ ಮೌಲ್ಯ ಶಿಕ್ಷಣ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಮನುಷ್ಯರಾಗಿ ನಾವು ಸುತ್ತಲಿನ ಪರಿಸರದಲ್ಲಿ ಯಾವೆಲ್ಲಾ ಕರ್ತವ್ಯ ನಿಭಾಯಿಸಬೇಕು ಎಂಬುದನ್ನು ಮಕ್ಕಳಿಗೆ ಹೇಳಿಕೊಡಲು ಅವರಲ್ಲಿ ಸಾಮಾಜಿಕ ಪರಿಜ್ಞಾನ ಮೂಡಿಸಲು ಮುಂಬರುವ ಶೈಕ್ಷಣಿಕ ವರ್ಷದಿಂದ ಶಾಲೆಗಳಲ್ಲಿ ವಾರಕ್ಕೊಮ್ಮೆ ಪ್ರತ್ಯೇಕ ಮೌಲ್ಯ ಶಿಕ್ಷಣ ತರಗತಿ ನಡೆಸಲಾಗುವುದು' ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ನಿರ್ಮಲ ತುಂಗಭದ್ರಾ ಅಭಿಯಾನದ ಅಂಗವಾಗಿ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಿಂದ ಕೊಪ್ಪಳ ಜಿಲ್ಲೆಯ ಕಿಷ್ಕಿಂಧೆವರೆಗೆ ಹಮ್ಮಿಕೊಂಡಿರುವ ಪಾದಯಾತ್ರೆಯ ಪೂರ್ವಭಾವಿ ಸಭೆಯಲ್ಲಿ ಶನಿವಾರ ಮಾತನಾಡಿದರು.

'ಈ ತರಗತಿಯಲ್ಲಿ ಒಂದರಿಂದ ಎಸ್‌ಎಸ್‌ಎಲ್‌ಸಿವರೆಗಿನ ವಿದ್ಯಾರ್ಥಿಗಳಿಗೆ ದೈನಂದಿನ ವಿದ್ಯಮಾನಗಳಿಗೆ ಸ್ಪಂದಿಸುವ ಬಗೆಯನ್ನು ಕಲಿಸಲಾಗುವುದು. ಸಂಚಾರ ನಿಯಮಗಳು, ಆರೋಗ್ಯದ ಸಂಗತಿ, ಪರಿಸರ ಸಂರಕ್ಷಣೆ, ಕೃಷಿ ಸೇರಿ ಸಾಮಾನ್ಯ ಜ್ಞಾನಕ್ಕೆ ಆದ್ಯತೆ ನೀಡಲಾಗುವುದು' ಎಂದರು.



ಮಧು ಬಂಗಾರಪ್ಪ

'ವ್ಯವಸ್ಥೆಯಲ್ಲಿ ಬದುಕುವ ರೀತಿ, ಹಾಳಾಗಿರುವ ವ್ಯವಸ್ಥೆಯನ್ನು ಸರಿಪಡಿಸುವ ಕ್ರಮದ ಕುರಿತೂ ಹೇಳಿಕೊಡಲಾಗುವುದು. ಇದಕ್ಕೆ ಪಠ್ಯಕ್ರಮದ ಚೌಕಟ್ಟು ಹೇಗಿರಬೇಕು ಎಂಬುದರ ಬಗ್ಗೆ ತಜ್ಞರ ಸಮಿತಿ ಅಧ್ಯಯನ ನಡೆಸುತ್ತಿದೆ. ಶೀಘ್ರ ಅದು ಅಂತಿಮಗೊಳ್ಳಲಿದೆ. ಈ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ಪರೀಕ್ಷೆ ಇರುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ವೈದ್ಯಕೀಯ ಸೀಟು ಅ. 22 ಕೊನೆಯ ದಿನ

ಬೆಂಗಳೂರು: ಮಾಪ್‌ಅಪ್ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾದ ವಿದ್ಯಾರ್ಥಿಗಳು ಅ. 22ರ ಒಳಗೆ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಈ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾಗಿರುವ 703 ವಿದ್ಯಾರ್ಥಿಗಳಲ್ಲಿ ಮೂಲ ದಾಖಲೆ ಸಲ್ಲಿಸಿದ 223 ವಿದ್ಯಾರ್ಥಿಗಳಿಗೆ ದಾಖಲೆ ಸಲ್ಲಿಕೆಗೆ ಅ.21ರ ಬೆಳಿಗ್ಗೆ 11.30ರಿಂದ 1.30ರವೆಗೆ ಅವಕಾಶ ನೀಡಲಾಗಿದೆ. ಶುಲ್ಕ ಪಾವತಿಸದವರು 21ರೊಳಗೆ ಕಟ್ಟಬೇಕು.

ಸಿಇಟಿ: ಅ.21 ಕೊನೆಯ ದಿನ: ಎಂಜಿನಿಯರಿಂಗ್ ಸೇರಿದಂತೆ ವಿವಿಧ ಕೋರ್ಸ್‌ಗಳ ಸೀಟು ಹಂಚಿಕೆ ಆದವರು ಅ.21ರ ಮಧ್ಯಾಹ್ನ 2ರ ಒಳಗೆ ಶುಲ್ಕ ಪಾವತಿಸಿ, ಅದೇ ದಿನ ಸಂಜೆ 5.30ರೊಳಗೆ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು ಎಂದು ಸೂಚಿಸಿದ್ದಾರೆ.

ತುಂಗಭದ್ರಾ ಜಲಾಶಯದಿಂದ 63 ಸಾವಿರ ಕ್ಯುಸೆಕ್ ನೀರು ನದಿಗೆ

ಮಳೆ: 150 ಎಕರೆಯಲ್ಲಿ ಕೊಳೆತ ಈರುಳ್ಳಿ

ಪ್ರಜಾವಾಣಿ ವಾರ್ತೆ



ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬನ್ನಿಗೋಳ ಗ್ರಾಮದಲ್ಲಿ ಅಧಿಕ ಮಳೆಯಿಂದ ಕೊಳೆತಿರುವ ಈರುಳ್ಳಿ –ಪ್ರಜಾವಾಣಿ ಚಿತ್ರ

ಹೊಸಪೇಟೆ (ವಿಜಯನಗರ): ಜಿಲ್ಲೆಯಲ್ಲಿ ಮಳೆ ಸ್ವಲ್ಪ ಬಿಡುವು ಕೊಟ್ಟಿದ್ದರೂ ಕೆಲವು ದಿನಗಳಿಂದ ಸುರಿದ ಮಳೆಯಿಂದ ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ 150 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಬೆಳೆದಿದ್ದ ಹಾಗೂ ಕಟಾವಿಗೆ ಬಂದಿದ್ದ ಈರುಳ್ಳಿ ಕೊಳೆತಿದೆ. ಇದರಿಂದ ರೈತರಿಗೆ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ.

ಹೊಸಪೇಟೆ ತಾಲ್ಲೂಕಿನಲ್ಲಿ ಕಟಾವಿನ ಹಂತಕ್ಕೆ ಬಂದಿದ್ದ ನೂರಾರು ಎಕರೆ ಭತ್ತ ಕೂಡ ನೆಲಕಚ್ಚಿದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಐದು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಕಾನಹೊಸಹಳ್ಳಿ ಸಮೀಪದ ಹುಲಿಕೆರೆಯ ಕೆರೆ ಐದು ದಶಕಗಳ ನಂತರ ಶುಕ್ರವಾರ ರಾತ್ರಿ ಕೋಡಿ ಬಿದ್ದಿದೆ.

ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ 73,241 ಕ್ಯುಸೆಕ್ ಇದ್ದು, ಅಣೆಕಟ್ಟೆಯಿಂದ 63 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ. ಹೀಗಾಗಿ ಹಂಪಿಯ ಪುರಂದರ ಮಂಟಪ ಬಹುತೇಕ ಮುಳುಗಿದ ಸ್ಥಿತಿಯಲ್ಲೇ ಇದೆ.

ಆಲಮಟ್ಟಿ (ವಿಜಯಪುರ ಜಿಲ್ಲೆ) ವರದಿ: ಕರ್ನಾಟಕದ ಕೃಷ್ಣಾ ಅಚ್ಚುಕಟ್ಟು ಪ್ರದೇಶದಲ್ಲಿ ಮೂರು-ನಾಲ್ಕು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಆಲಮಟ್ಟಿ ಜಲಾಶಯದ ಒಳಹರಿವು ಶನಿವಾರ 62,581 ಕ್ಯುಸೆಕ್‌ಗೆ ಹೆಚ್ಚಳವಾಗಿದೆ.

ಆಗಸ್ಟ್‌ನಲ್ಲಿ ಆಲಮಟ್ಟಿ ಜಲಾಶಯ ತನ್ನ ಗರಿಷ್ಠ ಸಂಗ್ರಹ ಸಾಮರ್ಥ್ಯ 519.60 ಮೀಟರ್ ಎತ್ತರ ತಲುಪಿತ್ತು. ಅಂದಿನಿಂದ ನಿತ್ಯ 10 ರಿಂದ 20 ಸಾವಿರ ಕ್ಯುಸೆಕ್ ನೀರು ಜಲಾಶಯಕ್ಕೆ ಹರಿದು ಬರುತ್ತಲೇ ಇದೆ. ಇದೇ ನೀರನ್ನು ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಎಲ್ಲಾ ಕಾಲುವೆಗಳಿಗೆ ಮುಂಗಾರು ಹಂಗಾಮಿಗೆ ನಿತ್ಯ ಹರಿಸಲಾಗುತ್ತಿದೆ. ಶುಕ್ರವಾರದಿಂದ ಜಲಾಶಯಕ್ಕೆ ಒಳಹರಿವು ಮತ್ತಷ್ಟು ಹೆಚ್ಚಾಗಿದೆ.

ಕೋಡಿ ಬಿದ್ದ ದ್ವಾರಸಮುದ್ರ ಕೆರೆ (ಹಳೇಬೀಡು ವರದಿ): ಶುಕ್ರವಾರ ಸುರಿದ ರಭಸದ ಮಳೆಯಿಂದ ಇಲ್ಲಿನ ದ್ವಾರಸಮುದ್ರ ಕೆರೆ ಕೋಡಿ ಬಿದ್ದು, ರಸ್ತೆ ಹಾಗೂ ಗದ್ದೆಗಳಿಗೆ ನೀರು ನುಗ್ಗಿದೆ.

ಹಾಲಿನ ಡೇರಿ ಸಮೀಪದ ಗದ್ದೆ ಬಯಲಿನಲ್ಲಿ ಬಂದೋಬಸ್ತ್ ಹಾಗೂ ವಿಸ್ತಾರವಾದ ನಾಲೆಗಳಿಲ್ಲದೆ ನೀರು ಹರಿಯುತ್ತಿದ್ದು, ಹಳೇಬೀಡು ಹಾಗೂ ಮಲ್ಲಾಪುರ ಗ್ರಾಮಸ್ಥರ ಜಮೀನುಗಳಲ್ಲಿ ನೀರು ತುಂಬಿದೆ. ಜಮೀನುಗಳ ರಸ್ತೆಯಲ್ಲೂ ನೀರು ಹರಿಯುತ್ತಿದೆ.

ರಾಜ್ಯದಲ್ಲಿ ನಾಲ್ಕು ದಿನ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಭಾನುವಾರದಿಂದ ನಾಲ್ಕು ದಿನಗಳು ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಬಳ್ಳಾರಿ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು, ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ನಗರ ಜಿಲ್ಲೆಗೆ ಭಾನುವಾರ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಒಂದೆರಡು ಕಡೆ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಂಭವವಿದೆ. ಕರಾವಳಿ, ದಕ್ಷಿಣ ಹಾಗೂ ಉತ್ತರ ಒಳನಾಡಿನ ಉಳಿದ ಜಿಲ್ಲೆಗಳ ಹಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮಾಹಿತಿ ನೀಡಿದೆ.

ಕರಾವಳಿಯಲ್ಲಿ ಪ್ರತಿ ಗಂಟೆಗೆ 35 ಕಿ.ಮೀ.ನಿಂದ 55 ಕಿ.ಮೀ.ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದ್ದು, ಚಂಡಮಾರುತದ ವಾತಾವರಣ ಇರಲಿದೆ. ಆದ್ದರಿಂದ, ಮೀನುಗಾರರು ಎಚ್ಚರ ವಹಿಸಬೇಕು ಎಂದು ಇಲಾಖೆ ತಿಳಿಸಿದೆ.

ಇದೇ 23ರವರೆಗೂ ರಾಜ್ಯದ ವಿವಿಧೆಡೆ ಭಾರಿ ಮಳೆ ಮುಂದುವರಿಯುವ ಬಗ್ಗೆ ಇಲಾಖೆ ಮುನ್ಸೂಚನೆ ನೀಡಿದೆ. 21ರಂದು ಎಂಟು ಜಿಲ್ಲೆಗಳಿಗೆ, 22ರಂದು 12 ಜಿಲ್ಲೆಗಳಿಗೆ ಹಾಗೂ 23ರಂದು ಐದು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಪ್ರಜ್ವಲ್ ರೇವಣ್ಣ ಜಾಮೀನು ಅರ್ಜಿ: 21ಕ್ಕೆ ಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ಮಾಜಿ ಸಂಸದ ಜೆಡಿಎಸ್‌ನ ಪ್ರಜ್ವಲ್ ರೇವಣ್ಣ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಗಳ ಮೇಲಿನ ಆದೇಶವನ್ನು ಹೈಕೋರ್ಟ್ ಇದೇ 21ಕ್ಕೆ ಪ್ರಕಟಿಸಲಿದೆ.

ಒಂದು ಪ್ರಕರಣದಲ್ಲಿ ಜಾಮೀನು ಹಾಗೂ ಇನ್ನೆರಡು ಪ್ರಕರಣಗಳಲ್ಲಿ ನಿರೀಕ್ಷಣಾ ಜಾಮೀನು ಕೋರಿದ ಅರ್ಜಿಗಳನ್ನು ವಿಚಾರಣೆ ನಡೆಸಿ ಕಾಯ್ದಿರಿಸಲಾಗಿದ್ದ ಆದೇಶವನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪ್ರಕಟಿಸಲಿದೆ.

ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಜಾಮೀನು ಕೋರಿದ್ದರೆ, ಸಿಐಡಿ ಸೈಬರ್ ಸೆಲ್‌ನಲ್ಲಿ ದಾಖಲಾಗಿದ್ದ ಇನ್ನೆರಡು ಪ್ರಕರಣಗಳಲ್ಲಿ ನಿರೀಕ್ಷಣಾ ಜಾಮೀನು ಕೋರಿದ್ದಾರೆ.

ಪ್ರಜ್ವಲ್ ರೇವಣ್ಣ ನಾಲ್ಕು ತಿಂಗಳಿಂದ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಾರಾಗೃಹದ ಇಬ್ಬರು ಅಧಿಕಾರಿಗಳು ಅಮಾನತು

ಕಲಬುರಗಿ: ಇಲ್ಲಿನ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಮೊಬೈಲ್‌ಗಳು ಪತ್ತೆ, ವಿಡಿಯೊ ಕಾಲ್ ಮೂಲಕ ಹನಿಟ್ರ್ಯಾಪ್ ಆರೋಪ ಹಾಗೂ ಕೈದಿಗಳ ಹೊಡೆದಾಟ ಪ್ರಕರಣಗಳ ಸಂಬಂಧ ಜೈಲಿನ ಇಬ್ಬರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕಾರಾಗೃಹದ ಅಧಿಕಾರಿಗಳಾದ ಸೈನಾಜ್ ನೀಗೆವಾನ್ ಮತ್ತು ಪರಮಾನಂದ ಅವರು ಅಮಾನತುಗೊಂಡಿದ್ದಾರೆ. ಕರ್ತವ್ಯ ಲೋಪದಡಿ ಕಾರಾಗೃಹ ಇಲಾಖೆಯ ಡಿಜಿ ಮಾಲಿನಿ ಕೃಷ್ಣಮೂರ್ತಿ ಅವರು ಈ ಇಬ್ಬರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

ಜೈಲಿನಲ್ಲಿ ಮೊಬೈಲ್ ಬಳಕೆ, ಐಷಾರಾಮಿ ಜೀವನದ ಜತೆಗೆ ಹನಿಟ್ರ್ಯಾಪ್ ಆರೋಪದ ಕುರಿತು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಆ ಬಳಿಕ ಮಾಲಿನಿ ಕೃಷ್ಣಮೂರ್ತಿ ಅವರು ಕಾರಾಗೃಹಕ್ಕೆ ಭೇಟಿ ಕೊಟ್ಟು, ಪರಿಶೀಲಿಸಿ ತನಿಖೆಗೆ ಆದೇಶಿಸಿದ್ದರು. ಎಸ್ಪಿ ಯಶೋಧಾ ವಂಟಗೋಡಿ ಅವರೂ ಭೇಟಿ ನೀಡಿದ್ದರು.

'ಜೈಲಿನಲ್ಲಿ ನಡೆದ ಸರಣಿ ಪ್ರಕರಣಗಳ ಕುರಿತು ತನಿಖೆ ನಡೆಯುತ್ತಿದ್ದು, ಇನ್ನಷ್ಟು ಅಧಿಕಾರಿಗಳ ತಲೆದಂಡ ಆಗುವ ಸಾಧ್ಯತೆ ಇದೆ' ಎಂದು ಮೂಲಗಳು ಹೇಳಿವೆ.

ದಾಖಲೆ ಇಲ್ಲದ ₹2.73 ಕೋಟಿ ಹಣ ವಶ

ಬೆಳಗಾವಿ: ದಾಖಲೆಗಳಿಲ್ಲದೇ ಸರಕು ಸಾಗಣೆ ವಾಹನದಲ್ಲಿ ಸಾಗಿಸಲಾಗುತ್ತಿದ್ದ ₹2.73 ಕೋಟಿ ಹಣವನ್ನು ಇಲ್ಲಿನ ನಗರ ಅಪರಾಧ ವಿಭಾಗದ (ಸಿಸಿಬಿ) ಪೊಲೀಸರು ಶುಕ್ರವಾರ ವಶಕ್ಕೆ ಪಡೆದು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

'ವಾಹನ ಚಾಲಕ ಸಾಂಗ್ಲಿಯ ಸಚಿನ್ ಮೇಬಕುದಳಿ ಮತ್ತು ಕ್ಲೀನರ್ ಮಾರುತಿ ಮಾರಗುಡೆ ಎಂಬ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ವಾಹನದ ಕ್ಯಾಬಿನ್ ಭಾಗವನ್ನು ಕೊಂಚ ಮಾರ್ಪಡಿಸಿ, ಅದರಡಿ ಹಣ ಬಚ್ಚಿಡಲಾಗಿತ್ತು. ತಪಾಸಣೆ ನಡೆಸಿದಾಗ, ₹500, ₹200 ಹಾಗೂ ₹100 ಮುಖಬೆಲೆಯ ಕಂತೆ ಕಂತೆ ಹಣ ಸಿಕ್ಕಿತು. ವಾಹನವು ಸಾಂಗ್ಲಿಯಿಂದ ಹುಬ್ಬಳ್ಳಿಗೆ ಹೊರಟಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ. ಮಹಾರಾಷ್ಟ್ರದಲ್ಲಿ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಚಟುವಟಿಕೆಗಳು ಬಿರುಸಿನಿಂದ ಸಾಗಿದ್ದು, ಹಣ ಅಕ್ರಮ ಸಾಗಣೆ ತಡೆಗೆ ಬೆಳಗಾವಿ ಜಿಲ್ಲೆಯ ಗಡಿಯುದ್ದಕ್ಕೂ ಪೊಲೀಸರು ನಿಗಾ ವಹಿಸಿದ್ದಾರೆ.

ತೀರ್ಥಹಳ್ಳಿ: ಒಂದೂವರೆ ಕೆ.ಜಿ. ಚಿನ್ನ ಜಪ್ತಿ

ತೀರ್ಥಹಳ್ಳಿ (ಶಿವಮೊಗ್ಗ): ಬೆಂಗಳೂರು ಸಮೀಪದ ಮಾಗಡಿ ಠಾಣೆ ಪೊಲೀಸರು, ಕಳವು ಪ್ರಕರಣದ ಆರೋಪಿಯೊಬ್ಬ ನೀಡಿದ ಮಾಹಿತಿ ಮೇರೆಗೆ ಶೋಧ ಕಾರ್ಯಾಚರಣೆ ನಡೆಸಿ, ಇಲ್ಲಿನ ಬೆಟ್ಟಮಕ್ಕಿಯ ಮನೆಯೊಂದರಲ್ಲಿ ಹೂತಿಟ್ಟಿದ್ದ ಅಂದಾಜು ಒಂದೂವರೆ ಕೆ.ಜಿ. ಚಿನ್ನವನ್ನು ಶನಿವಾರ ವಶಪಡಿಸಿಕೊಂಡಿದ್ದಾರೆ.

ಮಾಗಡಿ ತಾಲ್ಲೂಕಿನಲ್ಲಿ ನಡೆದ ಚಿನ್ನಾಭರಣ ಕಳವು ಪ್ರಕರಣಕ್ಕೆ ಸಂಬಂಧಿಸಿ ತಾಲ್ಲೂಕಿನಲ್ಲಿ ಮೂರು ದಿನಗಳಿಂದ ಪೊಲೀಸರು ಶೋಧ ನಡೆಸುತ್ತಿದ್ದಾರೆ. ಪ್ರಕರಣದ ಆರೋಪಿ, ಗುಡ್ಡೇಕೇರಿಯ ಅಮೀರ್ ಹಮ್ಜಾ (40) ಎಂಬಾತನನ್ನು ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ಕರೆದೊಯ್ದು, ಆತ ಬೆಟ್ಟಮಕ್ಕಿಯಲ್ಲಿ ಹೂತಿಟ್ಟಿದ್ದ ಚಿನ್ನ ಜಪ್ತಿ ಮಾಡಿದ್ದಾರೆ.

ಅಮೀರ್ ಹಮ್ಜಾ ಹತ್ತಾರು ಹೆಸರಿನಿಂದ ಗುರುತಿಸಿಕೊಂಡಿದ್ದು, ಈತನ ವಿರುದ್ಧ 80ಕ್ಕೂ ಹೆಚ್ಚು ಅಪರಾಧ ಪ್ರಕರಣಗಳಿವೆ. ಕಮ್ಮರಡಿಯಲ್ಲಿ ನಡೆದ ಹೊಸಹಳ್ಳಿ ವೆಂಕಟೇಶ್ ಕೊಲೆ ಸೇರಿ ವಿವಿಧ ಪ್ರಕರಣಗಳಲ್ಲಿ ಆರೋಪಿ ಭಾಗಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಿ.ಎ.ಶಂಕರ್, ಶಂಕರ್ ಸಿಹಿಮೊಗ್ಗೆಗೆ 'ಶಾ.ಬಾಲುರಾವ್ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 'ಶಾ. ಬಾಲೂರಾವ್ ಅನುವಾದ ಪ್ರಶಸ್ತಿ'ಗೆ ಅನುವಾದಕ ಡಿ.ಎ. ಶಂಕರ್ ಅವರ 'ಡಾಕ್ಟರ್ ಫಾಸ್ಟಸ್' ನಾಟಕ ಹಾಗೂ 'ಶಾ. ಬಾಲುರಾವ್ ಯುವ ಬರಹಗಾರ ಪ್ರಶಸ್ತಿ'ಗೆ ಯುವ ಬರಹಗಾರ ಶಂಕರ್ ಸಿಹಿಮೊಗ್ಗೆ ಅವರ 'ಇರುವೆ ಮತ್ತು ಗೋಡೆ' ಕವನ ಸಂಕಲನ ಆಯ್ಕೆಯಾಗಿವೆ.



ಡಿ.ಎ. ಶಂಕರ್



ಶಂಕರ್ ಸಿಹಿಮೊಗ್ಗೆ

ಈ ಪ್ರಶಸ್ತಿಗಳು ತಲಾ ₹ 25 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿವೆ. 2023ರಲ್ಲಿ ಮೊದಲ ಮುದ್ರಣಗೊಂಡ ಕೃತಿಗಳನ್ನು ಈ ಪ್ರಶಸ್ತಿಗಳಿಗೆ ಆಯ್ಕೆ ಮಾಡಲಾಗಿದೆ.

ಇದೇ 26ರಂದು ಎನ್. ಆರ್. ಕಾಲೊನಿಯ ಬಿಎಂಶ್ರೀ ಪ್ರತಿಷ್ಠಾನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



2022ರಲ್ಲಿ ಬೆಂಗಳೂರಿನಲ್ಲಿ ನೆಲಸಿದ್ದ ಅಕ್ರಮ ವಾಸಿಗಳ ಪತ್ತೆ	
600	ಅಕ್ರಮವಾಗಿ ನೆಲಸಿದ್ದವರ ಪತ್ತೆ
34	ತಮ್ಮ ದೇಶಕ್ಕೆ ವಾಪಸ್ ಕಳುಹಿಸಿದವರು
50	ಅಕ್ರಮವಾಗಿ ನೆಲಸಿದ್ದವರ ಬಂಧನ

2023ರಲ್ಲಿ ನಡೆದ ಕಾರ್ಯಾಚರಣೆ ವಿವರ	
92	ಅಕ್ರಮವಾಗಿ ನೆಲಸಿದ್ದವರ ಪತ್ತೆ
247	ತಮ್ಮ ದೇಶಕ್ಕೆ ವಾಪಸ್ ಕಳುಹಿಸಿದವರು
126	ಅಕ್ರಮವಾಗಿ ನೆಲಸಿದ್ದವರ ಬಂಧನ

‘ಅಕ್ರಮ ವಲಸೆ’: ನೆಲೆ ವಿಸ್ತಾರ

ಒಂದನೇ ಪುಟದಿಂದ..

‘ಈಶಾನ್ಯ ಹಾಗೂ ಉತ್ತರ ಭಾರತ ರಾಜ್ಯಗಳ ಹೆಸರಿನಲ್ಲಿ ಬೆಂಗಳೂರು ಸೇರಿದಂತೆ ಮಲೆನಾಡು ಜಿಲ್ಲೆಗಳಲ್ಲಿ ಬಾಂಗ್ಲಾ ಅಕ್ರಮ ವಲಸಿಗರು ಬೀಡುಬಿಟ್ಟಿದ್ದಾರೆ. ಅಕ್ರಮ ವಲಸೆ ಕಾರ್ಮಿಕರಿಂದ ಕಾಫಿ, ಅಡಿಕೆ, ಟೀ ಬೆಳೆಯುವ ಪ್ರದೇಶಗಳು ಸಮಸ್ಯೆ ಎದುರಿಸುತ್ತಿವೆ’ ಎಂದು ಪೊಲೀಸರೇ ಒಪ್ಪಿಕೊಳ್ಳುತ್ತಾರೆ. ‘ಬೆಂಗಳೂರಿನ ವೈಟ್‌ಫೀಲ್ಡ್ ಹಾಗೂ ಆಗ್ನೇಯ ವಿಭಾಗದಲ್ಲೂ ಅಕ್ರಮ ವಲಸಿಗರ ಹಾವಳಿ ಮಿತಿಮೀರಿದೆ. ನಕಲಿ ನೋಟುಗಳ ಚಲಾವಣೆ, ಕಳ್ಳತನ, ಚಿಂದಿ ಆಯುವ ನೆಪದಲ್ಲಿ ಸುಲಿಗೆ ಪ್ರಕರಣಗಳಲ್ಲಿ ಬಾಂಗ್ಲಾ ವಲಸಿಗರು ಸಿಕ್ಕಿ ಬೀಳುತ್ತಿದ್ದಾರೆ. ಅವರನ್ನೂ ಪತ್ತೆಹಚ್ಚಿ ಅವರ ದೇಶಕ್ಕೆ ಕಳುಹಿಸುವುದೂ ಸವಾಲಿನಿಂದ ಕೂಡಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಉಡುಪಿಯ ಮಲ್ಪೆಯಲ್ಲಿ ಅಕ್ರಮವಾಗಿ ನೆಲಸಿದ್ದ ಏಳು ಮಂದಿ ಬಾಂಗ್ಲಾದೇಶದ ಪ್ರಜೆಗಳನ್ನು ಅಕ್ಟೋಬರ್ 12ರಂದು ಪೊಲೀಸರು ಬಂಧಿಸಿದ್ದಾರೆ. ಈ ವೇಳೆ ಬಂಧಿತರು ನಕಲಿ ಆಧಾರ್ ಕಾರ್ಡ್ ಹಾಗೂ ಪಾಸ್‌ಪೋರ್ಟ್ ಹೊಂದಿರುವುದೂ ಪತ್ತೆಯಾಗಿದೆ. ಕರಾವಳಿ ಜಿಲ್ಲೆಗಳಲ್ಲೂ ದೊಡ್ಡ ಸಂಖ್ಯೆಯಲ್ಲಿ ಅಕ್ರಮ ವಲಸಿಗರು ಇದ್ದಾರೆ. ಕರಾವಳಿ ಪ್ರದೇಶವು ಸಹ ಅಕ್ರಮ ವಲಸಿಗರು, ಮಾನವ ಕಳ್ಳಸಾಗಣೆ ಏಜೆಂಟರಿಗೆ ಕಾರ್ಯ ಸ್ಥಾನ ಆಗುತ್ತಿದೆ ಎಂದು ಸ್ಥಳೀಯರು ಅನುಮಾನ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅವರು ರಾಜ್ಯ ರಾಜಕಾರಣದಲ್ಲಿದ್ದ ಅವಧಿಯಲ್ಲಿ ಅಕ್ರಮ ವಲಸಿಗರ ಬಗ್ಗೆ ಗಮನ ಸೆಳೆದಿದ್ದರು.

‘ಬಾಂಗ್ಲಾದೇಶ ಪ್ರಜೆಗಳು ಬೆಂಗಳೂರಿನಲ್ಲಿ ಅಕ್ರಮವಾಗಿ ನೆಲಸಿರುವುದು ರಾಜ್ಯ, ರಾಷ್ಟ್ರ ಎರಡಕ್ಕೂ ಅಪಾಯ ತಂದೊಡ್ಡಿದೆ’ ಎಂದು ಬಸವರಾಜ ಬೊಮ್ಮಾಯಿ ಗುಡುಗಿದ್ದರು. ಇದಕ್ಕೆ ಧ್ವನಿಗೂಡಿಸಿದ್ದ ಬೆಂಗಳೂರಿನ ಮಾಜಿ ಪೊಲೀಸ್ ಕಮಿಷನರ್, ಬಿಜೆಪಿ ನಾಯಕ ಬಿ.ಭಾಸ್ಕರ್ ರಾವ್ ಅವರೂ ‘ಬಾಂಗ್ಲಾದೇಶದ ಪ್ರಜೆಗಳಿಗೆ ರಾಜಕೀಯ ಬೆಂಬಲ ಇರುವುದರಿಂದ ಅವರನ್ನು ಗಡೀಪಾರು ಮಾಡಲು ಸಾಧ್ಯವಾಗುತ್ತಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು.

ಇನ್ನೊಂದೆಡೆ ಮಲೆನಾಡು ಭಾಗಕ್ಕೆ ಉತ್ತರ ಭಾರತದ ಕಾರ್ಮಿಕರು ವಲಸೆ ಬಂದ ಬಳಿಕ, ಕಾರ್ಮಿಕರ ಸಮಸ್ಯೆ ತಕ್ಕಮಟ್ಟಿಗೆ ನೀಗಿದೆ. ತೋಟಗಳ ನಿರ್ವಹಣೆಯೂ ಸುಲಭವಾಗಿದೆ. ಸ್ಥಳೀಯ ಕಾರ್ಮಿಕರು, ದಿನಕ್ಕೆ ₹500ರಿಂದ ₹600 ಕೂಲಿ ಕೇಳುತ್ತಾರೆ. ಕೆಲಸ ಮಾಡುವ ಅವಧಿಯೂ ಕಡಿಮೆ. ಆದರೆ, ಹೊರರಾಜ್ಯದ ಕಾರ್ಮಿಕರಿಗೆ ದಿನಕ್ಕೆ ₹380 ಕೂಲಿ ನೀಡಲಾಗುತ್ತಿದೆ. ಈ ಕಾರ್ಮಿಕರು ತೋಟಗಳಲ್ಲಿಯೇ ವಾಸ ಇರುವುದರಿಂದ ಹೆಚ್ಚಿನ ಸಮಯ ಕೆಲಸ ಮಾಡುತ್ತಾರೆ. ಹೀಗಾಗಿ, ಕಾಫಿ ತೋಟಗಳ ಮಾಲೀಕರು, ಹೊರರಾಜ್ಯದ ಕಾರ್ಮಿಕರನ್ನೇ ಅವಲಂಬಿಸಿದ್ದಾರೆ. ಅವರಿಗೆ ಪ್ರಾಮುಖ್ಯತೆ ನೀಡುತ್ತಾರೆ. ರಾಜ್ಯದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ನಡೆಯುತ್ತಿರುವ ಹೈನುಗಾರಿಕೆಯಲ್ಲೂ ಅಸ್ಸಾಂ ಹಾಗೂ ಒಡಿಶಾದ ಕಾರ್ಮಿಕರೂ ನೆರವಾಗುತ್ತಿದ್ದಾರೆ. ಅವರ ವಲಸೆಯಿಂದ ಆಗಿರುವ ಪ್ರಯೋಜನಗಳ ಬಗ್ಗೆಯೂ ಸ್ಥಳೀಯರು ಹೆಮ್ಮೆಯಿಂದ ಮಾತನಾಡುತ್ತಾರೆ. ಆದರೆ, ಬಾಂಗ್ಲಾ ಅಕ್ರಮ ವಲಸಿಗರ ವಿರುದ್ಧ ಅಷ್ಟೇ ಆಕ್ರೋಶದಿಂದ ಕಿಡಿಕಾರುತ್ತಾರೆ.



ಸಕಲೇಶಪುರ ತಾಲ್ಲೂಕಿನ ಕಾಫಿ ತೋಟವೊಂದರಲ್ಲಿ ಅಸ್ಸಾಂ ಕಾರ್ಮಿಕರು ಗಿಡದಿಂದ ಕಾಫಿ ಹಣ್ಣುಗಳ ಕೊಯ್ಲು ಮಾಡುತ್ತಿರುವುದು ಪ್ರಜಾವಾಣಿ ಚಿತ್ರ: ಜಾನೇಕೆರೆ ಆರ್.ಪರಮೇಶ್

‘ಪಶ್ಚಿಮ ಬಂಗಾಳದ ಗಡಿಪ್ರದೇಶದಲ್ಲಿ ಅಕ್ರಮವಾಗಿ ವಲಸಿಗರು ನುಸುಳಿ ದೇಶದ ನಾನಾ ಕಡೆ ನೆಲೆ ಕಂಡುಕೊಂಡಿದ್ದಾರೆ. ಗಡಿಯಲ್ಲಿ ಅವರನ್ನು ಒಳಕ್ಕೆ ಕರೆತರುವ ಮಧ್ಯವರ್ತಿಗಳಿದ್ದಾರೆ. ಅಲ್ಲಿಂದ ರೈಲು ಮೂಲಕ ಬೆಂಗಳೂರಿಗೆ ಬರುತ್ತಾರೆ. ರಾಜ್ಯದ ಮಧ್ಯವರ್ತಿಗಳು ಅವರನ್ನು ಕೆಂಪೇಗೌಡ ಬಸ್ ನಿಲ್ದಾಣದಿಂದ ಕೊಡಗು, ಚಿಕ್ಕಮಗಳೂರು, ಹಾಸನಕ್ಕೆ ರಾತ್ರೋರಾತ್ರಿ ಕಳುಹಿಸಿಕೊಡುತ್ತಿದ್ದಾರೆ. ಬಸ್ ನಿಲ್ದಾಣಗಳಲ್ಲಿ ಯಾವುದೇ ದಾಖಲೆಗಳ ಪರಿಶೀಲನೆ ನಡೆಯುವುದಿಲ್ಲ. ಇದರಿಂದ ಸುಲಭವಾಗಿ ಬಾಂಗ್ಲಾ ಅಕ್ರಮ ವಲಸಿಗರು ಕಾಫಿ ಎಸ್ಟೇಟ್ ಸೇರುತ್ತಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಅಕ್ರಮ ವಲಸಿಗರನ್ನು ಕರೆತರುವುದು, ಅವರಿಗೆ ನಕಲಿ ಆಧಾರ್ ಕಾರ್ಡ್ ಮಾಡಿಸಿಕೊಡುವುದು, ಕೂಲಿ ನಿಗದಿ ಮಾಡುವುದು ಎಲ್ಲವನ್ನೂ ಮಧ್ಯವರ್ತಿಗಳೇ ನೋಡಿಕೊಳ್ಳುತ್ತಾರೆ. ಇನ್ನು ಕೊಡಗು, ಚಿಕ್ಕಮಗಳೂರಿನ ದೊಡ್ಡ ಕಂಪನಿ ಎಸ್ಟೇಟ್‌ಗಳಲ್ಲಿ ನೆಲಸಿರುವ ಕಾರ್ಮಿಕರ ಪರಿಶೀಲನೆಯೂ ಕಷ್ಟ’ ಎಂದು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಅಭಿಪ್ರಾಯಪಡುತ್ತಾರೆ.

ಬೆಂಗಳೂರು ಸುತ್ತಮುತ್ತ ಹಾಗೂ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಹೆಚ್ಚಾಗಿ ನೆಲಸಿರುವ ಅಕ್ರಮ ವಲಸಿಗರಿಗೆ ಆಧಾರ್ ಸೇರಿ ಅಗತ್ಯ ದಾಖಲೆಗಳು ಸುಲಭವಾಗಿ ಸಿಗುತ್ತಿವೆ. ಹಾಸನ ಜಿಲ್ಲಾಧಿಕಾರಿ ಕಚೇರಿಯಲ್ಲೇ ಬಾಂಗ್ಲಾ ವಲಸಿಗರಿಗ ನಕಲಿ



ಅಡಿಕೆ ಹಾಗೂ ಕಾಫಿ ಗಿಡಗಳಿಗೆ ಅಸ್ಸಾಂ ಕಾರ್ಮಿಕರು ಕೀಟ ನಾಶಕ ಸಿಂಪಡಣೆ ಮಾಡುತ್ತಿರುವುದು

ದಾಖಲೆ ಮಾಡಿಕೊಡುತ್ತಿದ್ದ ಕಂಪ್ಯೂಟರ್ ಆಪರೇಟರ್ ಅನುಶ್ರೀ ಎಂಬುವವರನ್ನು ಪೊಲೀಸರು ಇತ್ತೀಚೆಗೆ ಬಂಧಿಸಿದ್ದರು. ಈ ಅಕ್ರಮವನ್ನು ಪತ್ತೆ ಹಚ್ಚಿದ್ದ ಜಿಲ್ಲಾಧಿಕಾರಿ ಕಚೇರಿಯ ಸಿಬ್ಬಂದಿಯೇ ಆರೋಪಿಯನ್ನು ಪೊಲೀಸರಿಗೆ ಒಪ್ಪಿಸಿದ್ದರು.

‘ಹಾಸನಕ್ಕೆ ಬಂದ ಬಾಂಗ್ಲಾ ಅಕ್ರಮ ವಲಸಿಗರಿಗೆ ಅನುಶ್ರೀ ಅವರು ನಕಲಿ ದಾಖಲೆ ಸೃಷ್ಟಿಸಿ ಕೊಡುತ್ತಿದ್ದರು. ಜಿಲ್ಲಾಧಿಕಾರಿ ಕಚೇರಿಯ ಕಟ್ಟಡದಲ್ಲಿದ್ದ ಆಧಾರ್ ಕೇಂದ್ರದಲ್ಲಿ ಅವರು ಕೆಲಸ ಮಾಡುತ್ತಿದ್ದರು. ಜನ್ಮ ದಿನಾಂಕ ತಿಳಿಸಿದರೆ ಸಾಕು, ಅಕ್ರಮ ವಲಸಿಗರಿಗೆ ಆಧಾರ್ ಸೇರಿದಂತೆ ಇತರೆ ದಾಖಲೆಗಳನ್ನು ತಯಾರಿಸಿ ಕೊಡುತ್ತಿದ್ದರು. ತಲಾ ₹5ರಿಂದ ₹10 ಸಾವಿರ ಪಡೆದುಕೊಳ್ಳುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಬೆಂಗಳೂರಿನಲ್ಲೂ ನಕಲಿ ದಾಖಲೆ ಸೃಷ್ಟಿಸುವ ದಂಧೆ ಅವ್ಯಾಹತವಾಗಿ ನಡೆಯುತ್ತಿದೆ. ಈ ರೀತಿ ನಕಲಿ ದಾಖಲೆ ಪಡೆದು ನೆಲಸಿರುವ ಕಾರ್ಮಿಕರ ಅಪರಾಧ ಕೃತ್ಯಗಳಲ್ಲಿ ಭಾಗಿ ಆಗುತ್ತಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

2018ರಲ್ಲಿ ಅಕ್ರಮ ವಲಸಿಗರ ಪತ್ತೆ ಕಾರ್ಯಕ್ಕೆ ಕೊಡಗು ಜಿಲ್ಲೆಯಲ್ಲಿ ಚಾಲನೆ ಸಿಕ್ಕಿತ್ತು. ಆಯಾ ವ್ಯಾಪ್ತಿಯ ಪೊಲೀಸರು, ಕೆಲವು ಎಸ್ಟೇಟ್‌ಗಳಿಗೆ ತೆರಳಿ ಆಧಾರ್ ಪರಿಶೀಲನೆ ಕಾರ್ಯಕ್ಕೆ ಮುಂದಾಗಿದ್ದರು. ವಲಸಿಗರ ಹಾವಳಿ ಸ್ವಲ್ಪಮಟ್ಟಿಗೆ ನಿಯಂತ್ರಣಕ್ಕೆ ಬರುವ ಮುನ್ಸೂಚನೆ ಲಭಿಸಿತ್ತು. ಆದರೆ, ಇತರೆ ಜಿಲ್ಲೆಗಳಲ್ಲಿ ಆ ಕೆಲಸ ನಡೆಯಲಿಲ್ಲ. ಇದೇ ಕಾರಣಕ್ಕೆ ಸಮಸ್ಯೆ ತೀವ್ರವಾಗಿದೆ ಎನ್ನುವ ಅಭಿಪ್ರಾಯವಿದೆ.

‘ಚಿಕ್ಕಮಗಳೂರಿನಲ್ಲಿ ಅಕ್ರಮ ವಲಸಿಗರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು, ದಿನದಿಂದ ದಿನಕ್ಕೆ ಅವರ ನೆಲೆ ವಿಸ್ತಾರವಾಗುತ್ತಿದೆ. ಇಡೀ ಮಲೆನಾಡಿನ ಕಾಫಿತೋಟಗಳನ್ನು ಅಸ್ಸಾಂ ರಾಜ್ಯದ ಕಾರ್ಮಿಕರು ಆವರಿಸಿಕೊಂಡಿದ್ದಾರೆ. ಹೆಸರಿಗಷ್ಟೇ ಅವರು ಅಸ್ಸಾಂ ಕಾರ್ಮಿಕರು. ಅವರ ಹೆಸರಿನಲ್ಲಿ ಬಾಂಗ್ಲಾ ವಲಸಿಗರೂ ತೋಟಗಳಿಗೆ ನುಸುಳುತ್ತಿದ್ದಾರೆ ಎಂಬ ಅನುಮಾನ ಸ್ಥಳೀಯರಲ್ಲಿ ವ್ಯಾಪಕವಾಗಿದೆ. ಆದರೆ, ಅಕ್ರಮ ಬಾಂಗ್ಲಾ ವಲಸಿಗರಿಗೆ ಸಂಬಂಧಿಸಿದ ಯಾವುದೇ ಪ್ರಕರಣ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದುವರೆಗೆ ದಾಖಲಾಗಿಲ್ಲ’ ಎಂದು ಪೊಲೀಸರು ತಿಳಿಸಿದರು.

ವಲಸೆ ಕಾರ್ಮಿಕರ ನೋಂದಣಿಗೆ ಚಿಕ್ಕಮಗಳೂರಿನಲ್ಲಿ ಪೊಲೀಸ್ ಇಲಾಖೆ ವೆಬ್‌ಸೈಟ್ ತೆರೆದಿದೆ. ವರ್ಷಕ್ಕೊಮ್ಮೆ ತೋಟಗಳ ಮಾಲೀಕರ ಸಭೆ ನಡೆಸಿ, ಎಲ್ಲ ಕಾರ್ಮಿಕರ ದಾಖಲೆ ಸಹಿತ ವಿಳಾಸ ನೋಂದಾಯಿಸಬೇಕು ಎಂದು ಸೂಚಿಸಲಾಗಿದೆ. ಆದರೆ, ನೋಂದಣಿ ಪ್ರಮಾಣ ಶೇ 1ರಷ್ಟೂ ನಡೆದಿಲ್ಲ. ಇದರ ಬಗ್ಗೆ ಪೊಲೀಸ್ ಇಲಾಖೆಯಾಗಲಿ ಅಥವಾ ಕಾರ್ಮಿಕ ಇಲಾಖೆಯಾಗಲಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿ 203 ದೊಡ್ಡ ದೊಡ್ಡ ತೋಟಗಳಿವೆ ಎಂದು ಕಾರ್ಮಿಕ ಇಲಾಖೆ ಅಧಿಕಾರಿಗಳು ಪಟ್ಟಿ ಸಿದ್ಧಪಡಿಸಿದ್ದಾರೆ. ಈ ಎಸ್ಟೇಟ್‌ಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಒಂದು ಲಕ್ಷಕ್ಕೂ ಅಧಿಕ. ಆದರೆ, ಪೊಲೀಸ್ ಇಲಾಖೆಯ ವೆಬ್‌ಸೈಟ್‌ನಲ್ಲಿ ನೋಂದಣಿ ಆಗಿರುವುದು 1,843 ಕಾರ್ಮಿಕರು ಮಾತ್ರ.

‘ಕಾಫಿ–ಟೀ ತೋಟಗಳಲ್ಲದೆ, ಟಿಂಬರ್ ಸಾಗಣೆ, ಗಾರೆ ಕೆಲಸ, ಅಡಿಕೆ ತೋಟ, ಹೋಟೆಲ್, ಬಾರ್‌ಗಳಲ್ಲೂ ವಲಸೆ ಕಾರ್ಮಿಕರೇ ಆವರಿಸಿಕೊಂಡಿದ್ದಾರೆ. ಮಲೆನಾಡಿನಲ್ಲಿ ನಡೆಯುವ ಸಂತೆಗಳಲ್ಲಿ ಈಗ ವಲಸೆ ಕಾರ್ಮಿಕರಿಗೆ ಬೇಕಿರುವ ವಸ್ತುಗಳದ್ದೇ ಪ್ರತ್ಯೇಕ ಸಾಲುಗಳು ಕಾಣಿಸಿಕೊಳ್ಳುತ್ತಿವೆ. ನಾಲ್ಕೈದು ವರ್ಷಗಳ ಹಿಂದೆ ಜಿಲ್ಲೆಗೆ ಬಂದವರು ಈಗ ಹಳಬರಾಗಿದ್ದಾರೆ. ಅವರಿಗೆ ತಮ್ಮವರಿಗೆ ಬೇಕಿರುವ ವಸ್ತುಗಳೇನು ಎಂಬುದು ಗೊತ್ತಿದೆ. ಅವನ್ನು ತಂದಿಟ್ಟುಕೊಂಡು ಪ್ರತ್ಯೇಕವಾಗಿ ಮಾರಾಟ ಮಾಡುತ್ತಾರೆ. ಕಳ್ಳತನ, ಅತ್ಯಾಚಾರ, ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ಚಿಕ್ಕಮಗಳೂರಿನಲ್ಲಿ ಹೆಚ್ಚಾಗುತ್ತಿವೆ. ಪೋಕ್ಸೊ ಪ್ರಕರಣಗಳು ಹೆಚ್ಚಾಗುತ್ತಿದ್ದು, ಶೇ 99ರಷ್ಟು ವಲಸೆ ಕಾರ್ಮಿಕರ ನಡುವೆಯೇ ದೌರ್ಜನ್ಯಗಳು ನಡೆಯುತ್ತಿವೆ. ಇವುಗಳ ನಿಯಂತ್ರಣವೇ ಕಷ್ಟವಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕೊಡಗು ಜಿಲ್ಲೆಯಲ್ಲಿ ಕಾರ್ಮಿಕರ ಮಧ್ಯೆ ಗಲಾಟೆ ಪ್ರಕರಣಗಳು ಹೆಚ್ಚುತ್ತಿವೆ. ಇಂತಹ ಪ್ರಕರಣಗಳಲ್ಲಿ ಭಾಗಿಯಾದವರು ಬಾಂಗ್ಲಾ ದೇಶದಿಂದ ಅಕ್ರಮವಾಗಿ ಬಂದವರು ಇರಬಹುದು ಎಂಬ ಅನುಮಾನವೂ ಸ್ಥಳೀಯರಲ್ಲಿ ಬಲವಾಗುತ್ತಿದೆ. ಪೊಲೀಸ್ ಇಲಾಖೆ, ತೋಟದ ಮಾಲೀಕರು ಹಾಗೂ ಕಾರ್ಮಿಕ ಇಲಾಖೆ ನಿಯಂತ್ರಣಕ್ಕೆ ಕ್ರಮ ತೆಗೆದುಕೊಂಡಿಲ್ಲ. ಗೋಣಿಕೊಪ್ಪಲಿನಲ್ಲಿ ಇತ್ತೀಚೆಗೆ ವಲಸಿಗರು ಪರಸ್ಪರ ಕಿತ್ತಾಟ ನಡೆಸಿದ್ದರು. ಮಡಿಕೇರಿ ದೇವಸ್ಥಾನದಲ್ಲಿ ನಡೆದ ಕಳ್ಳತನ ಪ್ರಕರಣದಲ್ಲೂ ವಲಸಿಗರು ಕೈಚಳಕ ತೋರಿದ್ದರು.

‘ಕೊಡ್ಲಿಪೇಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಕಾರ್ಮಿಕರು ಬಂದಿದ್ದು, ಅವರು ರಾತ್ರಿ 1 ಗಂಟೆಯವರೆಗೂ ರಸ್ತೆಯಲ್ಲಿ ತಿರುಗಾಡುತ್ತಿದ್ದಾರೆ. ಇದರಿಂದ ಸಾರ್ವಜನಿಕರು ನಿರ್ಭೀತಿಯಿಂದ ಸಂಚರಿಸಲು ತೊಂದರೆಯಾಗುತ್ತಿದೆ’ ಎಂದು ಕೊಡ್ಲಿಪೇಟೆಯ ಒಕ್ಕಲಿಗರ ಯುವ ವೇದಿಕೆ ಪದಾಧಿಕಾರಿಗಳು ಪೊಲೀಸರ ಎದುರು ಅಳಲು ತೋಡಿಕೊಂಡಿದ್ದರು.

‘ಇಬ್ಬರು ಅಕ್ರಮ ಬಾಂಗ್ಲಾ ವಲಸಿಗರನ್ನು ನಾಲ್ಕು ವರ್ಷಗಳ ಹಿಂದೆಯೇ ಕೊಡಗಿನಿಂದ ಗಡೀಪಾರು ಮಾಡಿರುವುದು ಬಿಟ್ಟರೆ ಇಲ್ಲಿಯವರೆಗೂ ಅಂತಹವರು ಸಿಕ್ಕಿಲ್ಲ. ಅಸ್ಸಾಂ ಕಾರ್ಮಿಕರ ವೇಷದಲ್ಲಿ ಬಾಂಗ್ಲಾ ದೇಶದ ಪ್ರಜೆಗಳು ಇರುವುದಕ್ಕೆ ನಮ್ಮಲ್ಲಿ ಯಾವುದೇ ಆಧಾರಗಳೂ ಇಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳುತ್ತಾರೆ. ಆದರೆ, ಕೆಲವು ವಲಸೆ ಕಾರ್ಮಿಕರ ಭಾಷೆ, ಅವರ ಚಲನವಲನ, ಹಾವಭಾವ ಗಮನಿಸಿದ ಸ್ಥಳೀಯರು ಪೊಲೀಸರ ಮಾತನ್ನು ನಂಬುತ್ತಿಲ್ಲ.

ಎರಡು ವರ್ಷದ ಹಿಂದೆ ರಾಮನಗರ ಜಿಲ್ಲೆಯಲ್ಲಿ ಅಕ್ರಮವಾಗಿ ನೆಲಸಿದ್ದ ಬಾಂಗ್ಲಾದೇಶದ 7 ಮಂದಿಯನ್ನು ಪೊಲೀಸರು ಬಂಧಿಸಿದ್ದರು. ಈಶಾನ್ಯ ರಾಜ್ಯದವರೆಂದು ಹೇಳಿಕೊಂಡು ಕಾರ್ಖಾನೆ ಸೇರಿದಂತೆ ವಿವಿಧೆಡೆ ಕೆಲಸಕ್ಕೆ ಬರುವವರ ಮೇಲೆ ವಿಶೇಷ ನಿಗಾ ಇಡಲಾಗಿದೆ ಎಂದು ರಾಮನಗರ ಜಿಲ್ಲಾ ಪೊಲೀಸರು ಹೇಳುತ್ತಾರೆ.

‘ಜಿಲ್ಲೆಯ ಬಿಡದಿ ಮತ್ತು ಹಾರೋಹಳ್ಳಿ ಕೈಗಾರಿಕಾ ಪ್ರದೇಶ ಸೇರಿದಂತೆ ವಿವಿಧೆಡೆ ಕೆಲಸ ಮಾಡುವವರಲ್ಲಿ ಹೊರ ರಾಜ್ಯದವರು ಇದ್ದಾರೆ. ಅದರಲ್ಲೂ ಈಶಾನ್ಯ ರಾಜ್ಯದವರು ಎಂದು ಹೇಳಿಕೊಂಡು ಕೆಲಸಕ್ಕೆ ಬರುವವರ ಹಿನ್ನೆಲೆ ಪರಿಶೀಲಿಸಿದ ಬಳಿಕವೇ ಕೆಲಸ ನೀಡಬೇಕೆಂದು ಸೂಚನೆ ನೀಡಲಾಗಿದೆ’ ಎಂದು ರಾಮನಗರದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಟಿ.ವಿ.ಸುರೇಶ್ ತಿಳಿಸಿದರು.

ದಿನ ಕಳೆದಂತೆ ಸ್ಥಳೀಯರಿಗೆ ಅಸ್ಸಾಂ ಕಾರ್ಮಿಕರು ಹಾಗೂ ಬಾಂಗ್ಲಾ ವಲಸಿಗರ ವಿರುದ್ಧ ದ್ವೇಷ, ಆತಂಕದ ಭಾವನೆಗಳು ಬಲವಾಗುತ್ತಿವೆ. ಇನ್ನೂ ಸ್ಥಳೀಯ ಕಾರ್ಮಿಕರು, ಆದಿವಾಸಿಗಳಲ್ಲಿ ಅಸ್ಸಾಂನವರು ಬಂದು ನಮ್ಮ ಕೂಲಿ ಕಿತ್ತುಕೊಂಡರು ಎಂಬ ಆಕ್ರೋಶವೂ ಇದೆ. ಕಾಫಿ ಪ್ಲಾಂಟರ್‌ಗಳಲ್ಲಿ ಕಡಿಮೆ ದಿನಗೂಲಿಗೆ ಕಾರ್ಮಿಕರು ಸಿಗುತ್ತಿದ್ದಾರೆ ಎನ್ನುವ ಕಾರಣದಿಂದ ವಲಸಿಗರು ಎಲ್ಲಿಂದ ಬರುತ್ತಿದ್ದಾರೆ ಎನ್ನುವ ತಪಾಸಣೆ ಪೂರ್ಣವಾಗಿ ಮಾಡುತ್ತಿಲ್ಲ ಎನ್ನಲಾಗಿದೆ. ಈ ಸಮಸ್ಯೆಗೆ ರಾಜ್ಯ ಸರ್ಕಾರದ ಪೊಲೀಸ್ ಮತ್ತು ಕಾರ್ಮಿಕ ಇಲಾಖೆಯೇ ಪರಿಹಾರ ಕಂಡುಕೊಳ್ಳಬೇಕಿದೆ.

ಪೂರಕ ಮಾಹಿತಿ: ವಿಜಯಕುಮಾರ್ ಎಸ್‌.ಕೆ., ಕೆ.ಎಸ್‌.ಗಿರೀಶ್, ಚಿದಂಬರ ಪ್ರಸಾದ್, ಓದೇಶ ಸಕಲೇಶಪುರ, ಜಿ.ಎಚ್‌.ವೆಂಕಟೇಶ್

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ

ಪಾಕಿಸ್ತಾನದ ಪ್ರಜೆಗಳ ಅಕ್ರಮ ವಾಸ: ದೇಶದಾದ್ಯಂತ ಜಾಲ

ಆನೇಕಲ್‌ನ ಜಿಗಣಿ, ಬೆಂಗಳೂರಿನ ಪೀಣ್ಯದ ಕೈಗಾರಿಕಾ ಪ್ರದೇಶ ಹಾಗೂ ದೆಹಲಿ, ರಾಜಸ್ತಾನದ ಹಲವೆಡೆ ಮೂಲ ಹೆಸರು ಬದಲಿಸಿಕೊಂಡು ನೆಲಸಿದ್ದ ಪಾಕಿಸ್ತಾನದ 20 ಮಂದಿಯನ್ನು ಜಿಗಣಿ ಪೊಲೀಸರು ಇತ್ತೀಚೆಗೆ ಕಾರ್ಯಾಚರಣೆ ನಡೆಸಿ ಬಂಧಿಸಿದ್ದರು.

ಪಾಕಿಸ್ತಾನದಿಂದ ಬಂದಿರುವ ಅಕ್ರಮ ವಾಸಿಗಳ ಜಾಲ ದೇಶದಾದ್ಯಂತ ವ್ಯಾಪಿಸಿರುವುದು ತನಿಖೆಯಿಂದ ಗೊತ್ತಾಗಿದ್ದು, ಅಕ್ರಮ ವಾಸಿಗಳ ಪತ್ತೆ ಕಾರ್ಯವನ್ನು ಪೊಲೀಸರು ಚುರುಕುಗೊಳಿಸಿದ್ದಾರೆ.

ಚೆನ್ನೈ ವಿಮಾನ ನಿಲ್ದಾಣದಲ್ಲಿ ನಾಲ್ವರು ಅಕ್ರಮ ವಾಸಿಗಳನ್ನು ವಲಸೆ ಅಧಿಕಾರಿಗಳು ಬಂಧಿಸಿದ್ದರು. ಅವರನ್ನು ವಿಚಾರಣೆ ನಡೆಸಿದಾಗ ಅಕ್ರಮ ವಾಸಿಗಳ ಜಾಲ ವಿಸ್ತಾರಗೊಂಡಿರುವುದು ಪತ್ತೆಯಾಯಿತು ಎಂದು ಪೊಲೀಸರು ತಿಳಿಸಿದರು. ‘ಬಂಧಿತರು ಪಾಕಿಸ್ತಾನದ ಧರ್ಮ ಪ್ರಚಾರಕ ರಶೀದ್ ಅಲಿ ಸಿದ್ದಿಕಿ ಅಲಿಯಾಸ್ ಶಂಕರ್ ಹಾಗೂ ಪರ್ವೇಜ್ ಅಹ್ಮದ್ ಅವರ ಸಂಪರ್ಕದಲ್ಲಿ ಇರುವುದು ತನಿಖೆಯಿಂದ ಗೊತ್ತಾಗಿದೆ. ಅಲ್ಲದೇ ‘ಮೆಹದಿ ಫೌಂಡೇಶನ್’ ಮೂಲಕ ಆರೋಪಿಗಳು ಧರ್ಮ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರು. ಸಾಮಾಜಿಕ ಜಾಲತಾಣಗಳಲ್ಲಿಯೂ ಫೌಂಡೇಶನ್ ಕುರಿತು ಪ್ರಚಾರ ನಡೆಸುತ್ತಿದ್ದರು. ಫೌಂಡೇಶನ್ ಅನ್ನು ಭಾರತದಲ್ಲಿ ಗಟ್ಟಿಗೊಳಿಸುವ ಪ್ರಯತ್ನದಲ್ಲಿದ್ದರು. ಧರ್ಮ ಪ್ರಚಾರಕ್ಕೆ ಆರ್ಥಿಕ ಸಂಪನ್ಮೂಲವನ್ನೂ ಕ್ರೋಡೀಕರಿಸುತ್ತಿದ್ದರು. ಇದೇ ಕಾರಣಕ್ಕೆ ಆರೋಪಿಗಳು ಭಾರತದ ವಿವಿಧೆಡೆ ನೆಲಸಿದ್ದರು. ಪ್ರಕರಣದ ತನಿಖೆ ಮುಂದುವರಿದಿದ್ದು, ಆರೋಪಿಗಳ ಅನ್ಯ ಉದ್ದೇಶವನ್ನೂ ಪತ್ತೆ ಹಚ್ಚಲಾಗುತ್ತಿದೆ’ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದರು.

‘ಉತ್ತರ ಪ್ರದೇಶದ ಪರ್ವೇಜ್ ಅಹ್ಮದ್ ಎಂಬಾತ ಭಾರತದಲ್ಲಿ ಮೆಹದಿ ಫೌಂಡೇಶನ್‌ನ ಉಸ್ತುವಾರಿ ವಹಿಸಿಕೊಂಡಿದ್ದಾನೆ. ಆತನೇ ಪಾಕಿಸ್ತಾನದ ಪ್ರಜೆಗಳನ್ನು ಭಾರತಕ್ಕೆ ಕರೆತಂದು, ಅವರಿಗೆ ಆಧಾರ್ ಸೇರಿದಂತೆ ಅಗತ್ಯ ದಾಖಲೆಗಳನ್ನು ಒದಗಿಸುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.



ಪಾಕಿಸ್ತಾನದ ಅಕ್ರಮ ವಾಸಿಗಳನ್ನು ಬಂಧಿಸಿದ್ದ ಜಿಗಣಿ ಪೊಲೀಸರು

ಅಭಿಪ್ರಾಯಗಳು...

ಆಸ್ತಿ ಹಕ್ಕಿಗೂ ಬೇಡಿಕೆ ಸಾಧ್ಯತೆ

ಅಕ್ರಮ ವಲಸಿಗರು, ಕಾಫಿ ತೋಟದ ಲೈನ್‌ಮನೆ ತೊರೆದು ನಗರ, ಪಟ್ಟಣ ಪ್ರದೇಶದಲ್ಲಿ ಬಾಡಿಗೆ ಮನೆ ಪಡೆಯುತ್ತಿದ್ದಾರೆ. ಮುಂದಿನ ಕೆಲವೇ ವರ್ಷಗಳಲ್ಲಿ ಅವರೂ ಭಾಷೆ ಕಲಿತು ಸ್ಥಳೀಯರಾಗುತ್ತಾರೆ. ಸರ್ಕಾರ ವಿವಿಧ ಯೋಜನೆಗಳಲ್ಲಿ ನೀಡುವ ನಿವೇಶನ, ಆಸ್ತಿ ಹಕ್ಕುಗಳಿಗೆ ಬೇಡಿಕೆ ಸಲ್ಲಿಸುತ್ತಾರೆ. ಕ್ರಮೇಣ ಸಂಘಟಿತರಾಗಿ ಹೋರಾಟಕ್ಕೆ ಇಳಿಯುತ್ತಾರೆ

ಸಂಜಯ್, ಸಾಮಾಜಿಕ ಕಾರ್ಯಕರ್ತ, ಕೊಟ್ಟಿಗೆಹಾರ, ಚಿಕ್ಕಮಗಳೂರು

ಮಾಲೀಕರಿಗೆ ಸೂಚನೆ



ತಮ್ಮ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ದಾಖಲೆಗಳನ್ನು ಮಾಲೀಕರು ಪಡೆದುಕೊಳ್ಳಬೇಕೆಂದು ಸೂಚನೆ ನೀಡಲಾಗಿದೆ. ಕಾರ್ಮಿಕರ ಪೂರ್ವಾಪರ ತಿಳಿದಿರಬೇಕು ಎಂದೂ ತಿಳಿಸಲಾಗಿದೆ. ಅನುಮಾನಾಸ್ಪದವಾಗಿ ಓಡಾಡುವವರ ಮೇಲೆ ನಿಗಾ ಇರಿಸಲಾಗಿದೆ

ಕೆ.ರಾಮರಾಜನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಕೊಡಗು

ನೋಂದಣಿ ಕಡ್ಡಾಯ

ವಲಸೆ ಕಾರ್ಮಿಕರ ನೋಂದಣಿ ಕಡ್ಡಾಯ ಎಂದು ತೋಟಗಳ ಮಾಲೀಕರಿಗೆ ಎಚ್ಚರಿಕೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಅವರ ವಿರುದ್ಧ ಕ್ರಮ ಜರುಗಿಸಲಾಗುವುದು

ಕೆ.ಎಲ್‌.ರವಿಕುಮಾರ್, ಸಹಾಯಕ ಕಾರ್ಮಿಕ ಆಯುಕ್ತ, ಚಿಕ್ಕಮಗಳೂರು

ಅಕ್ರಮ ವಲಸಿಗರ ಪತ್ತೆ ಕಾರ್ಯ

ಜಿಲ್ಲೆಯಲ್ಲಿ ಅಕ್ರಮ ವಲಸಿಗರು ಎಷ್ಟಿದ್ದಾರೆ ಎಂಬುದನ್ನು ಪತ್ತೆ ಹಚ್ಚಲಾಗುವುದು. ಸಕಲೇಶಪುರ ಸೇರಿದಂತೆ ವಿವಿಧೆಡೆ ತೋಟದ ಕಾರ್ಮಿಕರಾಗಿ ಹಲವರು ಕೆಲಸ ಮಾಡುತ್ತಿದ್ದು, ಅಪರಿಚಿತರ ಬಗ್ಗೆ ಸಾರ್ವಜನಿಕರು ಎಚ್ಚರ ವಹಿಸಬೇಕು

ಸಿ.ಸತ್ಯಭಾಮಾ, ಜಿಲ್ಲಾಧಿಕಾರಿ, ಹಾಸನ

ದಾಖಲೆಗಳ ಪರಿಶೀಲನೆ

ಕಾಫಿ ತೋಟಗಳು ಸೇರಿದಂತೆ ವಿವಿಧ ಕಾರ್ಖಾನೆಗಳಲ್ಲಿ ನೇಮಕ ಮಾಡಿಕೊಂಡಿರುವ ಕಾರ್ಮಿಕರ ಮಾಹಿತಿ ನೀಡುವಂತೆ ಮಾಲೀಕರಿಗೆ ಸೂಚಿಸಲಾಗಿದೆ. ಕೆಲಸಕ್ಕೆ ನೇಮಕ ಮಾಡಿಕೊಳ್ಳುವ ಮೊದಲು ಅವರ ದಾಖಲೆ ಪರಿಶೀಲಿಸುವಂತೆ ತಿಳಿಸಲಾಗಿತ್ತು. ಇಲಾಖೆ ವತಿಯಿಂದ ದಾಖಲೆಗಳ ಪರಿಶೀಲನೆ ನಿರಂತರವಾಗಿ ನಡೆಯುತ್ತಿದೆ

ಪ್ರಮೋದ್‌ಕುಮಾರ್, ಡಿವೈಎಸ್ಪಿ, ಸಕಲೇಶಪುರ

ಶಿವಮೊಗ್ಗದಲ್ಲಿ 12 ಮಂದಿ ಬಂಧನ

ಬಾಂಗ್ಲಾ ದೇಶದಿಂದ ಅಕ್ರಮವಾಗಿ ವಲಸೆ ಬಂದು ಶಿವಮೊಗ್ಗ ಜಿಲ್ಲೆಯಲ್ಲಿ ನೆಲಸಿದ್ದ 12 ಮಂದಿಯನ್ನು ಶುಕ್ರವಾರ ಪೊಲೀಸರು ಬಂಧಿಸಿದ್ದಾರೆ.

‘ಶಿವಮೊಗ್ಗದಲ್ಲಿ ಎಂಟು ಹಾಗೂ ತೀರ್ಥಹಳ್ಳಿಯಲ್ಲಿ ನಾಲ್ವರು ನೆಲಸಿದ್ದರು. ಎಲ್ಲರೂ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು. ವಿಚಾರಣೆ ವೇಳೆ ಬಾಂಗ್ಲಾ ದೇಶದಿಂದ ಭಾರತಕ್ಕೆ ಉದ್ಯೋಗ ಅರಸಿ ಬಂದಿರುವುದಾಗಿ ಒಪ್ಪಿಕೊಂಡಿದ್ದಾರೆ. ಬಂಧಿತರನ್ನು ಬೆಂಗಳೂರಿನ ನೆಲಮಂಗಲ ಸಮೀಪದ ಸೊಂಡೇಕೊಪ್ಪದಲ್ಲಿರುವ ಅಕ್ರಮ ವಲಸಿಗರ ಕೇಂದ್ರದಲ್ಲಿ ಇರಿಸಲಾಗಿದೆ. ಅವರನ್ನು ಬಾಂಗ್ಲಾಕ್ಕೆ ವಾಪಸ್ ಕಳುಹಿಸುವ ಪ್ರಕ್ರಿಯೆ ನಡೆಯುತ್ತಿದೆ’ ಎಂದು ಮೂಲಗಳು ತಿಳಿಸಿವೆ.



‘ಅಕ್ರಮ ವಲಸಿಗರಿಗೆ ಕೆಲಸ ಕೊಟ್ಟಿದ್ದ ಮೇಸ್ತ್ರಿಗಳನ್ನೂ ವಿಚಾರಣೆಗೆ ಒಳಪಡಿಸಲಾಗಿದೆ. ಅವರನ್ನು ಶಿವಮೊಗ್ಗಕ್ಕೆ ಕರೆತಂದವರು ಯಾರು? ಆಶ್ರಯ ನೀಡಿದ್ದು ಯಾರು? ಎಂಬುದರ ಬಗ್ಗೆ ಹೆಚ್ಚಿನ ವಿಚಾರಣೆ ನಡೆಸುತ್ತಿದ್ದೇವೆ’ ಎಂದು ಶಿವಮೊಗ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ತಿಳಿಸಿದ್ದಾರೆ.

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 20-10-1999

- **ಬಳ್ಳಾರಿ ಕೈಬಿಟ್ಟ ಸೋನಿಯಾ**

ಪ್ರಜಾವಾಣಿ ವಾರ್ತೆ, ನವದೆಹಲಿ, ಅ.19– ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ತಮ್ಮ ಪತಿ ರಾಜೀವ್ ಗಾಂಧಿ ಪ್ರತಿನಿಧಿಸುತ್ತಿದ್ದ ಅಮೇಥಿ ಕ್ಷೇತ್ರವನ್ನು ಉಳಿಸಿಕೊಂಡು ಬಳ್ಳಾರಿ ಲೋಕಸಭಾ ಕ್ಷೇತ್ರಕ್ಕೆ ರಾಜೀನಾಮೆ ನೀಡಿದ್ದು, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕಿಯಾಗಿಯೂ ಕಾರ್ಯನಿರ್ವಹಿಸಲು ನಿರ್ಧರಿಸಿದ್ದಾರೆ.

- **ನಿಸರ್ಗದ ಸಹಕಾರದೊಡನೆ ವೈಭವದ ದಸರಾ**

ಮೈಸೂರು, ಅ.19– ಬೆಳಿಗ್ಗೆಯಿಂದ ಸುರಿಯುತ್ತಿದ್ದ ಜಿಟಿ ಜಿಟಿ ಮಳೆ ಮಧ್ಯಾಹ್ನದ ವೇಳೆಗೆ ನಿಂತು ಬಿಸಿಲು ಬಂದದ್ದರಿಂದ ಜಂಬೂಸವಾರಿ ತೊಂದರೆಗಳಿಲ್ಲದೆ ನಡೆಯಿತು.

50 ವರ್ಷಗಳ ಹಿಂದೆ

ಭಾನುವಾರ, 20-10-1974

- **ಜೆ.ಪಿ. ಚಳವಳಿ ದಮನಕ್ಕೆ ರಾಷ್ಟ್ರಾದ್ಯಂತ ಕಾಂಗ್ರೆಸ್ಸಿನ ‘ಪ್ರತಿ ಕಾರ್ಯಕ್ರಮ’**

ವರದಿ: ನಾರಾಯಣಸ್ವಾಮಿ ನವದೆಹಲಿ, ಅ. 19– ಬಿಹಾರದಲ್ಲಿ ಜಯಪ್ರಕಾಶ್ ನಾರಾಯಣ್ ಅವರು ಆರಂಭಿಸಿರುವ ಚಳವಳಿಯ ವಿರುದ್ಧ ರಾಷ್ಟ್ರಾದ್ಯಂತ ‘ಪ್ರತಿ ಚಳವಳಿ’ ಆರಂಭಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಇಂದು ನಿರ್ಧರಿಸಿತು.

- **ಪ್ರಧಾನಿ ಜೊತೆ ಅರಸು ಚರ್ಚೆ**

ನವದೆಹಲಿ, ಅ.19– ಕರ್ನಾಟಕದ ಮುಖ್ಯಮಂತ್ರಿ ದೇವರಾಜ ಅರಸು ತಮ್ಮ ಮಂತ್ರಿಮಂಡಳದ ಪುನರ್‌ರಚನೆ ಕುರಿತು ಇಂದು ಇಲ್ಲಿ ಪ್ರಧಾನಿ ಇಂದಿರಾಗಾಂಧಿ ಅವರ ಜೊತೆ ಅರ್ಧಗಂಟೆ ಮಾತುಕತೆ ನಡೆಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಅಕ್ಟೋಬರ್ 20, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿಜ ಕೃಷ್ಣತೃತೀಯ ಗಂ.06-47 ನಂತರ ಚತುರ್ಥಿ ಗಂ.28-18 **ನಕ್ಷತ್ರ:** ಕೃತ್ತಿಕಾ ಗಂ.8-32 **ಯೋಗ:** ವ್ಯತೀಪಾತ ಗಂ.14-12 **ಕರಣ:** ವಿಷ್ಟಿ ಗಂ.06-47, ತುಲಾ ಮಾಸದ 03 ನೇ ದಿನ, **ಮಳೆನಕ್ಷತ್ರ:** ಚಿತ್ರ 4.
ರಾಹುಕಾಲ: ಸಾಯಂಕಾಲ 04-30–06-00
ಸೂರ್ಯೋದಯ: 06-25 **ಸೂರ್ಯಾಸ್ತ:** 06-05
ಮುಸ್ಲಿಂ ದಿನಾಂಕ: 16 ರಬಿಯುಸ್ಸಾನಿ
ದಿನ ವಿಶೇಷ: ಸಂಕಷ್ಟಹರ ಚತುರ್ಥಿ **ಅದೃಷ್ಟ ಸಂಖ್ಯೆ:** 12, 4

ಮೇಷ: ತರಕಾರಿ ವ್ಯಾಪಾರಿಗಳು ತಾಳ್ಮೆಯಿಂದ ವರ್ತಿಸಿದಲ್ಲಿ ವ್ಯವಹಾರ ಸುಗಮವಾಗಿ ನಡೆಯಲಿದೆ. ಕೆಲಸದ ವೇಳೆ ತಂಡದ ನಾಯಕತ್ವ ವಹಿಸುವುದು ಅಗತ್ಯ. ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು.

ವೃಷಭ: ಮನೆ ನಿರ್ಮಾಣದ ಕೆಲಸದಲ್ಲಿರುವ ಅಡೆತಡೆಗಳು ಸಹೋದರ ವರ್ಗದವರ ನೆರವಿನಿಂದ ಪರಿಹಾರವಾಗಲಿವೆ. ವಿದೇಶದಲ್ಲಿ ಉದ್ಯೋಗ ಪಡೆಯಲು ನೀವು ಮಾಡಿದ ಪ್ರಯತ್ನ ಫಲಿಸಲಿದೆ.

ಮಿಥುನ: ಸ್ವಂತ ಉದ್ಯೋಗ ಮಾಡುವವರು ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವ ಬಗ್ಗೆ ಆಲೋಚಿಸುವುದು ಉತ್ತಮ. ಉದ್ಯಮದಲ್ಲಿ ಸ್ವಲ್ಪ ತಡವಾಗಿಯಾದರೂ, ಲಾಭ ದೊರೆಯುವುದರಿಂದ ಸಂತಸವಾಗಲಿದೆ.

ಕರ್ಕಾಟಕ: ಸಾಮರಸ್ಯದಿಂದ ಕೂಡಿದ ನಿಮ್ಮ ಕುಟುಂಬದ ಮೇಲೆ ಹಿತೈಷಿಗಳಂತಿದ್ದವರೇ ಅಸೂಯೆ ಪಡಲಿದ್ದಾರೆ. ಏಕಕಾಲದಲ್ಲಿ ಹಲವು ಜವಾಬ್ದಾರಿ ನಿಭಾಯಿಸುವ ಬದಲು, ಒಂದೇ ಕೆಲಸವನ್ನು ಶ್ರದ್ಧೆಯಿಂದ ಮಾಡಿ.

ಸಿಂಹ: ಸರ್ಕಾರಿ ಉದ್ಯೋಗ ಪಡೆಯಲು ಪರಿಪೂರ್ಣ ಪ್ರಯತ್ನ ಹಾಕುವುದು ಅಗತ್ಯ. ಸಂಶೋಧನೆಯಲ್ಲಿ ತೊಡಗಿರುವವರಿಗೆ ಈ ದಿನ ದೊರಕುವ ಮಾಹಿತಿಯಿಂದಾಗಿ ಅನುಕೂಲವುಂಟಾಗುವುದು.

ಕನ್ಯಾ: ಬದಲಾವಣೆಗಳಿಗೆ ಸುಲಭವಾಗಿ ಹೊಂದುಕೊಳ್ಳಲು ಆಗದಿರಬಹುದು. ಆಲೋಚನೆಗಳು ಹೊಸತನದಿಂದ ಕೂಡಿರಲಿವೆ. ಕೊಟ್ಟ ಮಾತು ಉಳಿಸಿಕೊಳ್ಳುವತ್ತ ಪ್ರಾಮಾಣಿಕವಾಗಿ ಪ್ರಯತ್ನಿಸಿ.

ತುಲಾ: ಪರರಿಗೆ ಸಹಾಯ ಮಾಡುವಾಗ ಬಲಗೈಯಲ್ಲಿ ಕೊಟ್ಟದ್ದು ಎಡಗೈಗೆ ತಿಳಿಯದಂತೆ ವ್ಯವಹರಿಸಿ. ಪ್ರಯತ್ನಗಳು ಎಂದಿಗೂ ವ್ಯರ್ಥವಾಗುವುದಿಲ್ಲ ಎಂಬುದು ಅರಿವಾಗಲಿದೆ. ಸಹಕಾರ ಸಂಘದ ಸಹಾಯ ದೊರಕಬಹುದು.

ವೃಶ್ಚಿಕ: ಭಾವನೆಗಳನ್ನು ಅರ್ಥೈಸಿಕೊಂಡು, ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲ ವ್ಯಕ್ತಿಗಳ ಪರಿಚಯವಾಗಲಿದೆ. ಜೀವನದ ಅಭಿವೃದ್ಧಿಗೆ ಬೇಕಾದ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿವೆ.

ಧನು: ತಂದೆ–ತಾಯಿ, ಗುರು–ಹಿರಿಯರ ಹಿತವಚನಗಳನ್ನು ಕೇಳುವುದು ಉತ್ತಮ. ದೇಹದ ಉಷ್ಣಾಂಶ ಹೆಚ್ಚಳಗೊಂಡು, ಆರೋಗ್ಯದಲ್ಲಿ ಏರುಪೇರಾಗಬಹುದು. ನೈಜ ಗೆಳೆಯ ಯಾರೆಂದು ಅರಿವಾಗಲಿದೆ.

ಮಕರ: ಕಷ್ಟದ ದಿನಗಳನ್ನು ಎದುರಿಸುತ್ತಿರುವ ನೀವು, ಸ್ವಲ್ಪಮಟ್ಟಿಗೆ ಚೇತರಿಕೆಯನ್ನು ಕಾಣುವಿರಿ. ಕುಟುಂಬದಲ್ಲಿ ಮಕ್ಕಳೊಂದಿಗೆ ಸಮಯ ಕಳೆಯುವಿರಿ. ದಂತ ವೈದ್ಯರಿಗೆ ಶುಭ ದಿನ.

ಕುಂಭ: ಜವಾಬ್ದಾರಿಯನ್ನು ಹೊರುವ ಮೊದಲು ಅದರ ಬಗೆಗಿನ ಸಾಮಾನ್ಯ ಜ್ಞಾನ, ಲಾಭ- ನಷ್ಟ, ಸತ್ಯಾಸತ್ಯತೆಗಳನ್ನು ಅರಿಯುವ ಬಗ್ಗೆ ಹೆಚ್ಚಿನ ಗಮನವಿರಲಿ. ಚಿಲ್ಲರೆ ವ್ಯಾಪಾರಿಗಳಿಗೆ ಉತ್ತಮ ಲಾಭ ಸಿಗಲಿದೆ.


ಮೀನ: ಒರಟು ವ್ಯಕ್ತಿತ್ವ, ಮಾತುಗಳಿಂದ ಪತ್ನಿ, ಮಕ್ಕಳಿಗೆ ನೋವಾಗಬಹುದು. ಗುರಿ ಮುಟ್ಟುವ ವಿಚಾರದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಶ್ರಮ ಹಾಕುವುದು ಅತ್ಯಗತ್ಯ. ಆಪಾದನೆಗಳು ಬರುವ ಸಾಧ್ಯತೆಗಳಿವೆ.

ಪದಬಂಧ 5837

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇವರ ಸ್ತುತಿಯನ್ನು ಹಾಡುವುದು (3)
4.ತನ್ನ ಗುರಿಯನ್ನು ನೆರವೇರಿಸಲು ಪ್ರತಿಜ್ಞಾಬದ್ಧನಾದವನು (5)
8.ನೀರು ಒಸರುವ ಜಾಗ (2)
10.ಹೆಂಗಸು ಇಲ್ಲಿದ್ದಾಳೆ (3)
11.ರಾಗಬದ್ಧವಾಗಿ ಕಾವ್ಯವನ್ನು ಓದುವುದು (3)
12.ವೇದದ ಕಡೆಯ ಭಾಗ ಉಲ್ಟಾ ಆಗಿದೆ (3)
13.ಶುನಕವಿಲ್ಲಿ ಉಲ್ಟಾ ನಿಂತಿದೆ (2)
15.ನೀರಿನಿಂದಾದ ಅನಿಲ (5)
18.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)

ಮೇಲಿಂದ ಕೆಳಕ್ಕೆ
1.ನಡುವೆ ವರ ತಿರುಗಿ ನೀಡಿದ ಆಶ್ವಾಸನೆ (4)
2.ನೆನಪಲ್ಲೇ ಇರುವ ಕಾರಣ (2)
3.ಲೋಹದ ತಂತಿಯಿಲ್ಲಿ ತಿರುವು ಮುರುವಾಗಿದೆ (2)
5.ತಾನಾಗಿ ಕಲ್ಪಿಸಿಕೊಂಡಿದ್ದು (6)
6.ದಬ ದಬನೆ ಸುರಿದ ತರಕಾರಿಯಿದು! (5)
7.ವಿಶೇಷ ಅಭ್ಯಾಸಕ್ಕಾಗಿ ಪ್ರೋತ್ಸಾಹ ರೂಪದಲ್ಲಿ ಕೊಡುವ ವೇತನ (6)
9.ಕಾವ್ಯ ಸಂಗೀತ ಮುಂತಾದ ಕಲೆಯಿಲ್ಲಿ ಉಲ್ಟಾ ಕಾಣುತ್ತಿದೆ (5)
14.ಮನಸ್ಸಿಗೆ ತಾಗುವಂತೆ ಹೇಳಿದ ಮಾತು (4)
16.ಮಾಡುವವನು ಇಲ್ಲಿದ್ದಾನೆ (2)
17.ನೀರಿನಿಂದ ಸುತ್ತುವರೆದ ಭೂ ಭಾಗ (2)



5836ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಪಾರ್ಥಿವ 5.ಸಮಯ 6.ಲವಾಜಮೆ 7.ಉರಿ 8.ಸಹಾಯ 10.ಸಚಿವ 12.ಬಾಗಲಕೋಟೆ 13.ಸಲಿಲ 14.ಉಯಿಲು 16.ವರ್ಗ 17.ಬಿದಿಗಾಸು 18.ನಜರು 19.ಕುಹಕ

ಮೇಲಿಂದ ಕೆಳಕ್ಕೆ:
1.ನಸರಿ 2.ಪಾಯಸ 3.ವಲಯ 4.ಆಮೆ 7.ಉಪವಾಸ 9.ಹಾಗಲಕಾಯಿ 10.ಸಟೆ 11.ವನದುರ್ಗೆ 12.ಬಾಲ 14.ಉಸುಕು 15.ಲುನಕ 16.ವರುಣ 17.ಬಿಲ

ಸುಡೊಕು 6222

4			3		8			2
	7	1					8	
9					2			6
							6	
	2	6	9		7			
	4		6		1		7	5
			1					7
8		7					9	1
1	9		8		6	4		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6221 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100ಕ್ಕೆ ₹550
12 ಕ್ಕೆ ₹75
ಮೈಸೂರು
100ಕ್ಕೆ ₹555

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)
₹200-444
ದ್ವಿತಳಿ (ಬಿ.ವಿ)
₹245-636

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4
₹188
ಆರ್‌ಎಸ್‌ಎಸ್-5
₹183
ಗುಡ್ ಲಾಟ್
₹178
(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)
ತಿಪಟೂರು
ಕನಿಷ್ಠ ₹13000
ಗರಿಷ್ಠ ₹15500
ಮಾದರಿ ₹14236

ಆರೋಗ್ಯ ವಿಮಾ ಕಂತಿಗೆ ಜಿಎಸ್‌ಟಿ ರದ್ದು: ಸಚಿವರ ಸಮಿತಿ ಶಿಫಾರಸು

ಹಿರಿಯ ನಾಗರಿಕರಿಗೆ ವಿನಾಯಿತಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಟರ್ಮ್ ಲೈಫ್ ಇನ್ಶೂರೆನ್ಸ್ (ಅವಧಿ ವಿಮೆ) ಮತ್ತು ಹಿರಿಯ ನಾಗರಿಕರ ಆರೋಗ್ಯ ವಿಮಾ ಕಂತಿನ ಮೇಲೆ ವಿಧಿಸುತ್ತಿರುವ ಜಿಎಸ್‌ಟಿ ಹಿಂಪಡೆಯುವ ಸಾಧ್ಯತೆಯಿದೆ.

ಆರೋಗ್ಯ ಮತ್ತು ಜೀವ ವಿಮೆ ಕಂತಿನ ಮೇಲೆ ವಿಧಿಸಿರುವ ಶೇ 18ರಷ್ಟು ಜಿಎಸ್‌ಟಿ ಕಡಿಮೆಗೊಳಿಸುವುದಕ್ಕೆ ಸಂಬಂಧಿಸಿದಂತೆ ರಚಿಸಿರುವ 13 ಸಚಿವರ ಸಮಿತಿ ಸಭೆಯು ಶನಿವಾರ ನಡೆಯಿತು. ಹಲವು ಸಚಿವರು ಜನಸಾಮಾನ್ಯರ ಮೇಲಿನ ತೆರಿಗೆ ಭಾರ ಇಳಿಸುವ ಬಗ್ಗೆ ಶಿಫಾರಸು ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವೈಯಕ್ತಿಕ ವಿಮೆದಾರರ ₹5 ಲಕ್ಷದ ಒಳಗಿರುವ ಆರೋಗ್ಯ ವಿಮಾ ಕಂತಿನ ಮೇಲೆ ವಿಧಿಸುವ ತೆರಿಗೆಗೆ ವಿನಾಯಿತಿ ನೀಡಲು ಸಭೆಯಲ್ಲಿ ಚರ್ಚಿಸಲಾಗಿದೆ. ಆದರೆ, ₹5 ಲಕ್ಷಕ್ಕೂ ಹೆಚ್ಚು ಮೊತ್ತದ ಆರೋಗ್ಯ ವಿಮಾ ಕಂತಿನ ಮೇಲೆ ಸದ್ಯ ವಿಧಿಸುತ್ತಿರುವ ಶೇ 18ರಷ್ಟು ತೆರಿಗೆ ಮುಂದುವರಿಯಲಿದೆ ಎಂದು ಹೇಳಲಾಗಿದೆ.

ಮುಖ್ಯಾಂಶಗಳು

- ಅವಧಿ ವಿಮೆ ಕಂತಿಗೆ ತೆರಿಗೆ ವಿನಾಯಿತಿ ಕುರಿತು ಚರ್ಚೆ
- ₹5 ಲಕ್ಷದೊಳಗಿನ ಆರೋಗ್ಯ ವಿಮೆ ಕಂತಿಗೆ ತೆರಿಗೆ ರದ್ದು ನಿರೀಕ್ಷೆ
- ₹5 ಲಕ್ಷ ಮೇಲ್ಪಟ್ಟ ಕಂತಿಗೆ ಶೇ 18ರಷ್ಟು ತೆರಿಗೆ ಮುಂದುವರಿಕೆ ಸಾಧ್ಯತೆ



ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ನವೆಂಬರ್‌ನಲ್ಲಿ ನಡೆಯಲಿರುವ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಈ ಕುರಿತು ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ.

ಸಭೆಯ ಬಳಿಕ ಮಾತನಾಡಿದ ಸಮಿತಿ ಅಧ್ಯಕ್ಷ ಸಾಮ್ರಾಟ್ ಚೌಧರಿ ಅವರು, 'ಜನರ ಮೇಲಿನ ತೆರಿಗೆ ಹೊರೆಯನ್ನು ಕಡಿಮೆಗೊಳಿಸುವುದೇ ಪ್ರತಿಯೊಬ್ಬ ಸಚಿವರ ಆಶಯವಾಗಿದೆ. ಹಿರಿಯ ನಾಗರಿಕರ ಮೇಲಿನ ಭಾರ ತಗ್ಗಿಸುವ ಗುರಿ ಹೊಂದಲಾಗಿದೆ. ಜಿಎಸ್‌ಟಿ ಮಂಡಳಿಗೆ ವರದಿ ಸಲ್ಲಿಸ ಲಾಗುವುದು. ಮಂಡಳಿಯು ಅಂತಿಮ ತೀರ್ಮಾನ ಕೈಗೊಳ್ಳಲಿದೆ' ಎಂದರು.

ಸಚಿವರ ಸಮಿತಿಯ ಮೊದಲ ಸಭೆ ಇದಾಗಿದ್ದು, ಈ ತಿಂಗಳ ಅಂತ್ಯಕ್ಕೆ ಮಂಡಳಿಗೆ ವರದಿ ಸಲ್ಲಿಸಲಿದೆ.

ಉತ್ತರ ಪ್ರದೇಶ, ರಾಜಸ್ಥಾನ, ಪಶ್ಚಿಮ ಬಂಗಾಳ, ಕರ್ನಾಟಕ, ಕೇರಳ, ಆಂಧ್ರಪ್ರದೇಶ, ಗೋವಾ, ಗುಜರಾತ್, ಮೇಘಾಲಯ, ಪಂಜಾಬ್, ತಮಿಳುನಾಡು ಮತ್ತು ತೆಲಂಗಾಣದ ಸಚಿವರು ಈ ಸಮಿತಿಯಲ್ಲಿ ಇದ್ದಾರೆ.

ವೃತ್ತಿ ತರಬೇತಿ 250 ಕಂಪನಿ ನೋಂದಣಿ

ನವದೆಹಲಿ (ಪಿಟಿಐ): ಪಿಎಂ ಇಂಟರ್ನ್‌ಶಿಪ್ ಯೋಜನೆಯಡಿ ದೇಶದ ಪ್ರಮುಖ 250 ಕಂಪನಿಗಳು ನೋಂದಣಿ ಮಾಡಿಕೊಂಡಿದ್ದು, 1.25 ಲಕ್ಷ ಯುವಜನರಿಗೆ ವಿವಿಧ ವೃತ್ತಿ ತರಬೇತಿ ನೀಡಲಿವೆ ಎಂದು ಮೂಲಗಳು ತಿಳಿಸಿವೆ.

ಅಕ್ಟೋಬರ್ 12ರಿಂದ ಯುವಜನರ ನೋಂದಣಿಗೆ ಪೋರ್ಟಲ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಡಿಸೆಂಬರ್ 2ರಿಂದ ಪ್ರಾಯೋಗಿಕವಾಗಿ ಇಂಟರ್ನ್‌ಶಿಪ್ ಆರಂಭವಾಗಲಿದೆ.

21ರಿಂದ 24 ವಯೋಮಾನದವರು ಅರ್ಜಿ ಸಲ್ಲಿಸಲು ಅರ್ಹರು. ಕೇಂದ್ರ ಕಾರ್ಪೊರೇಟ್ ವ್ಯವಹಾರ ಸಚಿವಾಲಯದ ಪೋರ್ಟಲ್‌ನಲ್ಲಿ (www.pminternship.mca.gov.in) ಅರ್ಜಿ ಸಲ್ಲಿಸಬಹುದಾಗಿದೆ.

ಮುಂದಿನ ಐದು ವರ್ಷದಲ್ಲಿ ಹಂತ ಹಂತವಾಗಿ ಒಂದು ಕೋಟಿ ಯುವಜನರಿಗೆ ವೃತ್ತಿ ತರಬೇತಿ ನೀಡುವುದು ಕೇಂದ್ರ ಸರ್ಕಾರದ ಗುರಿಯಾಗಿದೆ. ಆಯ್ಕೆ ಆದವರಿಗೆ 12 ತಿಂಗಳು ತರಬೇತಿ ನೀಡಲಾಗುತ್ತದೆ. ಮಾಸಿಕ ₹5 ಸಾವಿರ ಭತ್ಯೆ ಸಿಗಲಿದೆ. ಅಲ್ಲದೆ, ಸರ್ಕಾರವು ಒಂದು ಬಾರಿಗೆ ₹6 ಸಾವಿರ ಆರ್ಥಿಕ ನೆರವು ನೀಡಲಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರ್ಕಾರವು ಈ ಯೋಜನೆಗೆ ₹800 ಕೋಟಿ ಅನುದಾನವನ್ನು ಮೀಸಲಿಟ್ಟಿದೆ.

ತುಮಕೂರು: ಧಾರಣೆ ಕುಸಿತಕ್ಕೆ ಕಂಗಾಲು

ರಸ್ತೆಗೆ ಹೂವು ಸುರಿದ ರೈತರು

ಪ್ರಜಾವಾಣಿ ವಾರ್ತೆ

ತುಮಕೂರು: ಹೂವಿನ ಬೆಲೆ ತೀವ್ರವಾಗಿ ಕುಸಿದ ಕಾರಣ ಶನಿವಾರ ನಗರದ ಅಂತರಸನಹಳ್ಳಿ ಮಾರುಕಟ್ಟೆಗೆ ಸೇವಂತಿಗೆ, ಚೆಂಡು ಹೂವು ತಂದಿದ್ದ ರೈತರು ತಾವು ತಂದಿದ್ದ ಹೂವುಗಳನ್ನು ರಸ್ತೆಗೆ ಚೆಲ್ಲಿ ನಿರಾಸೆಯಿಂದ ಮನೆಗೆ ಮರಳಿದರು.

ಆರಂಭದಲ್ಲಿ ಕೆ.ಜಿ ₹5ರಿಂದ ₹10ರವರೆಗೆ ಮಾರಾಟ ನಡೆಯಿತಾದರೂ ನಂತರ ಕೊಳ್ಳುವವರೇ ಇರಲಿಲ್ಲ. ಮಾರುಕಟ್ಟೆಗೆ ತಂದಿದ್ದ ರೈತರು ರಸ್ತೆಗೆ ಹೂವು ಸುರಿದರು. ಇನ್ನೂ ಕೆಲವರು ಜನರಿಗೆ ಉಚಿತವಾಗಿ ಹೂವು ಹಂಚಿದರು. ಮಾರುಕಟ್ಟೆಗೆ ಬಂದವರು ಉಚಿತವಾಗಿ ಸಿಕ್ಕ ಹೂವುಗಳನ್ನು ಚೀಲಗಳಿಗೆ ತುಂಬಿಕೊಂಡರು.

ಏಕಾಏಕಿ ಬೆಲೆ ಕುಸಿತ ಕಂಡು ರೈತರು ಆಕ್ರೋಶ ವ್ಯಕ್ತಪಡಿಸಿದರು. ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗುವುದಿಲ್ಲ ಎಂದು ನೊಂದುಕೊಂಡರು. ಮಾರುಕಟ್ಟೆಗೆ ಸಾಗಣೆ ಮಾಡಿದ ವೆಚ್ಚವೂ ಸಿಗದೆ ಬರಿಗೈನಲ್ಲಿ ತೆರಳಿದರು.



ತುಮಕೂರಿನ ಅಂತರಸನಹಳ್ಳಿ ಮಾರುಕಟ್ಟೆಯಲ್ಲಿ ಶನಿವಾರ ಉಚಿತವಾಗಿ ಸಿಕ್ಕ ಹೂವನ್ನು ಚೀಲಕ್ಕೆ ತುಂಬಿಸಿಕೊಂಡ ಜನರು

'ಜಿಲ್ಲೆಯ ವಿವಿಧ ಗ್ರಾಮ ಹಾಗೂ ದಾಬಸ್‌ಪೇಟೆ ಸುತ್ತಮುತ್ತಲಿನ ರೈತರು ಮಾರುಕಟ್ಟೆಗೆ ಹೂವು ತಂದಿದ್ದರು. ಬೆಲೆ ಕುಸಿದು, ಕೇಳುವವರೇ ಇಲ್ಲದೆ ಅನಿವಾರ್ಯವಾಗಿ ಉಚಿತವಾಗಿ ನೀಡಬೇಕಾಯಿತು. ಮಾರುಕಟ್ಟೆಗೆ ಸಾಗಣೆ ಮಾಡಿದ ವೆಚ್ಚವನ್ನೂ ಕೈನಿಂದ ಕೊಟ್ಟು ನಷ್ಟ ಅನುಭವಿಸಬೇಕಾಯಿತು. ರೈತರಿಗೆ ಎಂತಹ ಸ್ಥಿತಿ ಬಂದಿದೆ ನೋಡಿ' ಎಂದು ಮಾರುಕಟ್ಟೆಗೆ ಹೂವು ತಂದಿದ್ದ ಕೊರಟಗೆರೆ ತಾಲ್ಲೂಕು ತೋವಿನಕೆರೆ ಗ್ರಾಮದ ರೈತ ಅಭಿನಯ್ ಅಸಹಾಯಕತೆ ವ್ಯಕ್ತಪಡಿಸಿದರು.

'ದಸರಾ, ಆಯುಧ ಪೂಜೆ ಸಮಯದಲ್ಲಿ ಉತ್ತಮ ಬೆಲೆ ಸಿಕ್ಕಿತ್ತು. ಈಗ ಯಾವುದೇ ಹಬ್ಬ, ಪೂಜೆ, ಶುಭ ಕಾರ್ಯಗಳು ನಡೆಯುತ್ತಿಲ್ಲ. ಹಾಗಾಗಿ ಹೂವಿಗೆ ಬೇಡಿಕೆ ಇಲ್ಲವಾಗಿದ್ದು, ಬೆಲೆ ಕುಸಿದಿದೆ. ಹೂವು ಖರೀದಿಸಲು ಯಾರೂ ಮುಂದಾಗುತ್ತಿಲ್ಲ. ದೀಪಾವಳಿ ವೇಳೆಗೆ ಸ್ವಲ್ಪ ಮಟ್ಟಿಗೆ ಚೇತರಿಸಿಕೊಳ್ಳ ಬಹುದು' ಎಂದು ವರ್ತಕ ರಮೇಶ್ ಪ್ರತಿಕ್ರಿಯಿಸಿದರು.

ಸ್ವಸಹಾಯ ಸಂಘದ ಸದಸ್ಯೆಯರಿಗೆ ನೆರವು

ಚೆನ್ನೈ (ಪಿಟಿಐ): ಮಹಿಳಾ ಉದ್ಯಮಿಗಳ ಸಬಲೀಕರಣಕ್ಕಾಗಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಶನಿವಾರ 'ಮಹಿಳಾ ಸಕ್ಷಮ್' ಯೋಜನೆಯನ್ನು ಅನುಷ್ಠಾನಗೊಳಿಸಿದೆ.



ಕೇಂದ್ರದ ದೀನದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್‌ನಡಿ ರಚಿಸಿರುವ ಸ್ವಸಹಾಯ ಗುಂಪುಗಳ ಸದಸ್ಯೆಯರಿಗೆ ಆರ್ಥಿಕ ನೆರವು ನೀಡುವುದು ಈ ಯೋಜನೆಯ ಗುರಿಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಅನುಷ್ಠಾನಗೊಳಿಸಿರುವ ಲಖ್‌ಪತಿ ದೀದಿ ಯೋಜನೆಯ ಮಾದರಿಯಲ್ಲಿಯೇ ಈ ಯೋಜನೆಯನ್ನು ರೂಪಿಸಲಾಗಿದೆ. ಸ್ವಸಹಾಯ ಗುಂಪುಗಳ ಆರ್ಥಿಕ ಬಲವರ್ಧನೆಗೆ ಒತ್ತು ನೀಡುವುದು ಇದರ ಉದ್ದೇಶವಾಗಿದೆ ಎಂದು ಹೇಳಿದೆ.

ಆರ್ಥಿಕ ನೆರವು ಮತ್ತು ಉದ್ಯಮ ಬೆಂಬಲದ ಮೂಲಕ ಮಹಿಳೆಯ ಕುಟುಂಬವು ವಾರ್ಷಿಕವಾಗಿ ಕನಿಷ್ಠ ₹1 ಲಕ್ಷ ಆದಾಯಗಳಿಸುವಂತೆ ಮಾಡಲಾಗುತ್ತದೆ. ಉದ್ಯಮಶೀಲತೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸ್ವಸಹಾಯ ಗುಂಪಿನ ಪ್ರತಿ ಸದಸ್ಯೆಗೆ ₹10 ಲಕ್ಷ ಆರ್ಥಿಕ ನೆರವು ನೀಡಲಾಗುತ್ತದೆ ಎಂದು ವಿವರಿಸಿದೆ.

ಸಂಕ್ಷಿಪ್ತ ಸುದ್ದಿ

ಟೆಕ್ ಮಹೀಂದ್ರ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಐ.ಟಿ ಸೇವಾ ಕಂಪನಿ ಟೆಕ್ ಮಹೀಂದ್ರ, 2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹1,250 ಕೋಟಿ ನಿವ್ವಳ ಲಾಭಗಳಿಸಿದೆ.

ಕಳೆದ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹493 ಕೋಟಿ ಲಾಭಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 153ರಷ್ಟು ಏರಿಕೆಯಾಗಿದೆ ಎಂದು ಶನಿವಾರ ಕಂಪನಿಯು ಮಾಹಿತಿ ನೀಡಿದೆ.

ವರಮಾನದಲ್ಲಿ ಶೇ 3.49ರಷ್ಟು ಏರಿಕೆಯಾಗಿದ್ದು, ಒಟ್ಟು ₹13,313 ಕೋಟಿ ಗಳಿಸಿದೆ. 'ಜಾಗತಿಕ ಮಟ್ಟದಲ್ಲಿ ಮಾಹಿತಿ ತಂತ್ರಜ್ಞಾನ ವಲಯದ ಬೆಳವಣಿಗೆ ಮಂದಗತಿಯಲ್ಲಿದೆ. ಇದರ ನಡುವೆಯೂ ಕಾರ್ಯತಂತ್ರದ ಸುಧಾರಣೆ ಫಲವಾಗಿ ಉತ್ತಮ ಪ್ರಗತಿ ಸಾಧಿಸಲಾಗಿದೆ. ಪ್ರತಿ ಷೇರಿಗೆ ₹15 ಮಧ್ಯಂತರ ಲಾಭಾಂಶ ನೀಡಲು ಆಡಳಿತ ಮಂಡಳಿಯು ಅನುಮೋದನೆ ನೀಡಿದೆ' ಎಂದು ಕಂಪನಿಯ ಸಿಇಒ ಮೋಹಿತ್ ಜೋಶಿ ತಿಳಿಸಿದ್ದಾರೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ₹16,821 ಕೋಟಿ ಲಾಭ

ನವದೆಹಲಿ (ಪಿಟಿಐ): ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್ 2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹16,821 ಕೋಟಿ ನಿವ್ವಳ ಲಾಭಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹15,976 ಕೋಟಿ ಲಾಭಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 5ರಷ್ಟು ಏರಿಕೆಯಾಗಿದೆ. ಒಟ್ಟು ₹85,500 ಕೋಟಿ ವರಮಾನಗಳಿಸಲಾಗಿದೆ ಎಂದು ಬ್ಯಾಂಕ್, ಶನಿವಾರ ಷೇರುಪೇಟೆಗೆ ತಿಳಿಸಿದೆ. ಬಡ್ಡಿ ವರಮಾನ ₹74,017 ಕೋಟಿ ಆಗಿದೆ. ನಿವ್ವಳ ಬಡ್ಡಿ ವರಮಾನ ₹30,110 ಕೋಟಿ ಆಗಿದ್ದು, ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 10ರಷ್ಟು ಏರಿಕೆಯಾಗಿದೆ.

ಕೋಟಕ್ ಮಹೀಂದ್ರ ಬ್ಯಾಂಕ್ ಲಾಭ ಏರಿಕೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕೋಟಕ್ ಮಹೀಂದ್ರ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಶೇ 5ರಷ್ಟು ಏರಿಕೆಯಾಗಿದ್ದು, ಒಟ್ಟು ₹3,344 ಕೋಟಿ ಗಳಿಸಿದೆ.

ಕಳೆದ ವರ್ಷದ ಇದೇ ತ್ರೈಮಾಸಿಕ ದಲ್ಲಿ ₹3,191 ಕೋಟಿ ಲಾಭಗಳಿಸ ಲಾಗಿತ್ತು. ಒಟ್ಟು ₹15,900 ಕೋಟಿ ವರಮಾನಗಳಿಸಲಾಗಿದೆ ಎಂದು ಬ್ಯಾಂಕ್, ಶನಿವಾರ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ₹11,193 ಕೋಟಿ ಬಡ್ಡಿ ವರಮಾನ ಗಳಿಸಿತ್ತು. ಈ ಅವಧಿಯಲ್ಲಿ ₹13,216 ಕೋಟಿ ಗಳಿಸಿದೆ. ನಿವ್ವಳ ಬಡ್ಡಿ ವರಮಾನದಲ್ಲಿ ಶೇ 11ರಷ್ಟು ಏರಿಕೆಯಾಗಿದ್ದು, ಒಟ್ಟು ₹7,020 ಕೋಟಿ ಗಳಿಸಿದೆ. ಬ್ಯಾಂಕ್‌ನ ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 1.72ರಿಂದ ಶೇ 1.49ಕ್ಕೆ ಇಳಿಕೆಯಾಗಿದೆ. ಆದರೆ, ನಿವ್ವಳ ಎನ್‌ಪಿಎ ಶೇ 0.37ರಿಂದ ಶೇ 0.43ಕ್ಕೆ ಏರಿಕೆಯಾಗಿದೆ.

ಹಿಂಗಾರು ಅವಧಿಗೆ ರಸಗೊಬ್ಬರ ಕೊರತೆ ಇಲ್ಲ: ಕೇಂದ್ರ

ನವದೆಹಲಿ (ಪಿಟಿಐ): 'ದೇಶದಲ್ಲಿ ಹಿಂಗಾರು ಅವಧಿಗೆ ರಸಗೊಬ್ಬರದ ಕೊರತೆ ಇಲ್ಲ. ಸಾಕಷ್ಟು ದಾಸ್ತಾನಿದೆ. ಈ ಅವಧಿಯಲ್ಲಿ ಅತಿಹೆಚ್ಚು ಆಹಾರ ಧಾನ್ಯಗಳ ಉತ್ಪಾದನೆಗೆ ಒತ್ತು ನೀಡಲಾಗುತ್ತಿದೆ' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಧ್ಯಪ್ರಾಚ್ಯ ಬಿಕ್ಕಟ್ಟಿನ ನಡುವೆಯೂ ಯೂರಿಯಾ ಮತ್ತು ಡಿಎಪಿ ಸಾಕಷ್ಟು ಲಭ್ಯವಿದೆ. ಈ ಅವಧಿಗೆ ಅಗತ್ಯವಿರುವಷ್ಟು ಗೊಬ್ಬರ ಪೂರೈಕೆಗೆ ಕ್ರಮವಹಿಸಲಾಗಿದೆ' ಎಂದು ತಿಳಿಸಿದರು.

ಹಿಂಗಾರು ಅವಧಿಯಲ್ಲಿ 164.55 ಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆಗೆ ಕೃಷಿ ಸಚಿವಾಲಯ ಗುರಿ ನಿಗದಿಪಡಿಸಿದೆ. ಈ ಪೈಕಿ 115 ಲಕ್ಷ ಟನ್ ಗೋಧಿ ಮತ್ತು 18.15 ಲಕ್ಷ ಟನ್ ಬೇಳೆಕಾಳುಗಳ ಉತ್ಪಾದನೆಗೆ ಗುರಿ ನಿಗದಿಯಾಗಿದೆ. ದೀಪಾವಳಿ ಹಬ್ಬದ ಬಳಿಕ ಹಿಂಗಾರು ಕೃಷಿ ಚಟುವಟಿಕೆ ಬಿರುಸುಗೊಳ್ಳಲಿದೆ.

ಸಿದ್ದೀಕಿ ಹತ್ಯೆಗಾಗಿ ₹50 ಲಕ್ಷ ಕೇಳಿದ್ದರು

ಮುಂಬೈ (ಪಿಟಿಐ): ಬಾಬಾ ಸಿದ್ದೀಕಿ ಹತ್ಯೆ ಪ್ರಕರಣದಲ್ಲಿ ಹೊಸದಾಗಿ ಬಂಧಿಸಲಾದ ಐವರು, ಹತ್ಯೆಗೆ ₹50 ಲಕ್ಷ ಕೇಳಿದ್ದರು ಎಂಬುದನ್ನು ಪೊಲೀಸರು ಪತ್ತೆ ಮಾಡಿದ್ದಾರೆ.

ಆದರೆ, ಹಣ ಪಾವತಿ ವಿಚಾರದಲ್ಲಿ ಭಿನ್ನಾಭಿಪ್ರಾಯ ಇದ್ದುದರಿಂದ ಸಿದ್ದೀಕಿ ಅವರು ಹೊಂದಿದ್ದ ಪ್ರಭಾವವನ್ನು ಕಂಡು ಹತ್ಯೆಗೆ ಒಪ್ಪಿಕೊಂಡಿರಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಆದರೆ, ಸಿದ್ದೀಕಿ ಹಂತಕರಿಗೆ ಈ ಐದು ಮಂದಿ ಪ್ರಯಾಣಕ್ಕೆ ನೆರವು ಹಾಗೂ ಇತರ ಕೆಲವು ಸಹಾಯ ಒದಗಿಸಿದ್ದರು ಎಂದು ಅವರು ತಿಳಿಸಿದ್ದಾರೆ. ಈ ಐವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಸಿದ್ದೀಕಿ ಹತ್ಯೆ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಒಟ್ಟು ಒಂಬತ್ತಾಗಿದೆ.

ಕಾರ್ಯಾಚರಣೆಗೆ ಅಡ್ಡಿ: ಹಲವು ವಿಮಾನಗಳ ಸಂಚಾರ, ಮಾರ್ಗ ಬದಲಾವಣೆ

30 ವಿಮಾನಗಳಿಗೆ ಬಾಂಬ್ ಬೆದರಿಕೆ



ನವದೆಹಲಿ: ಶನಿವಾರ ಒಂದೇ ದಿನ ದೇಶದ ವಿವಿಧ ವಿಮಾನಯಾನ ಸಂಸ್ಥೆಗೆ ಸೇರಿದ ಸುಮಾರು 30 ವಿಮಾನಗಳಿಗೆ ಬಾಂಬ್ ಬೆದರಿಕೆ ಹಾಕಲಾಗಿದೆ. ಇದರಿಂದಾಗಿ ಹಲವು ವಿಮಾನಗಳ ಕಾರ್ಯಾಚರಣೆಗೆ ಅಡಚಣೆ ಉಂಟಾಗಿದ್ದು, ವಿಮಾನ ನಿಲ್ದಾಣಗಳಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಏರ್ ಇಂಡಿಯಾ, ಇಂಡಿಗೊ, ಆಕಾಶ ಏರ್, ವಿಸ್ತಾರ, ಸ್ಪೈಸ್‌ಜೆಟ್, ಸ್ಟಾರ್ ಏರ್ ಹಾಗೂ ಅಲಯನ್ಸ್ ಏರ್ ಸಂಸ್ಥೆಗಳಿಗೆ ಸೇರಿದ 30 ವಿಮಾನಗಳಿಗೆ ಶನಿವಾರ ಬೆದರಿಕೆ ಹಾಕಲಾಗಿದೆ. ಇದರಲ್ಲಿ ಬೆಂಗಳೂರಿನಿಂದ ಮುಂಬೈಗೆ ಶನಿವಾರ ತೆರಳಬೇಕಿದ್ದ ಆಕಾಶ ಏರ್ ಸಂಸ್ಥೆಯ ವಿಮಾನವೂ ಸೇರಿದೆ.

ತುರ್ತು ಸಭೆ: ಹುಸಿ ಬಾಂಬ್ ಬೆದರಿಕೆ ಬೆನ್ನಲ್ಲೇ, ನಾಗರಿಕ ವಿಮಾನಯಾನ ಸಚಿವಾಲಯವು ವಿಮಾನಯಾನ ಸಂಸ್ಥೆಗಳ ಸಿಇಒಗಳ ಜತೆ ಶನಿವಾರ ಸಭೆ ನಡೆಸಿದ್ದು, ಸಾಮಾನ್ಯ ಕಾರ್ಯನಿರ್ವಹಣಾ ವಿಧಾನ ಅನುಸರಿಸುವಂತೆ ಸೂಚನೆ ನೀಡಿದೆ. ಸೋಮವಾರದಿಂದ ಒಟ್ಟು 70 ವಿಮಾನಗಳಿಗೆ ಹುಸಿ ಬಾಂಬ್ ಕರೆ ಮಾಡಲಾಗಿದ್ದು, ಕಠಿಣ ಕ್ರಮ ಕೈಗೊಳ್ಳಲು ಸಚಿವಾಲಯವು ನಿರ್ಧರಿಸಿದೆ.

ಯಾವ ವಿಮಾನಗಳಿಗೆ ಬೆದರಿಕೆ?: ಮುಂಬೈನಿಂದ ಇಸ್ತಾಂಬುಲ್‌ಗೆ ತೆರಳಬೇಕಿದ್ದ ಹಾಗೂ ದೆಹಲಿಯಿಂದ ಇಸ್ತಾಂಬುಲ್‌ಗೆ ಹೊರಟಿದ್ದ ಇಂಡಿಗೊ ಸಂಸ್ಥೆಗೆ ಸೇರಿದ ವಿಮಾನಗಳಿಗೆ ಶನಿವಾರ ಬೆದರಿಕೆ ಹಾಕಲಾಗಿದೆ. ಅಲ್ಲದೆ, ಜೋಧ್‌ಪುರದಿಂದ ದೆಹಲಿಗೆ ತೆರಳುತ್ತಿದ್ದ ವಿಮಾನವನ್ನು ಮುನ್ನೆಚ್ಚರಿಕೆಯೊಂದಿಗೆ ದೆಹಲಿಯಲ್ಲಿ ಹಾಗೂ ಹೈದರಾಬಾದ್‌ನಿಂದ ಚಂಡೀಗಢಕ್ಕೆ ತೆರಳುತ್ತಿದ್ದ ವಿಮಾನವನ್ನು ಚಂಡೀಗಢದಲ್ಲಿ ಸುರಕ್ಷಿತವಾಗಿ ಇಳಿಸಲಾಗಿದೆ ಎಂದು ಇಂಡಿಗೊ ಪ್ರಕಟಣೆ ತಿಳಿಸಿದೆ.

ಸಿಂಗಪುರ- ಮುಂಬೈ, ದೆಹಲಿ- ಬ್ಯಾಂಕಾಕ್, ಮುಂಬೈ- ಫ್ರಾಂಕ್‌ಫರ್ಟ್, ಮುಂಬೈ- ಸಿಂಗಪುರ, ಮುಂಬೈ- ಕೊಲಂಬೊ ಹಾಗೂ ಉದಯಪುರ- ಮುಂಬೈ ನಡುವೆ ಸಂಚರಿಸುವ ವಿಸ್ತಾರಾ ಸಂಸ್ಥೆಯ ವಿಮಾನಕ್ಕೂ ಬೆದರಿಕೆ ಹಾಕಲಾಗಿದೆ. ಈ ಪೈಕಿ ಉದಯಪುರದಿಂದ ಮುಂಬೈಗೆ ತೆರಳುತ್ತಿದ್ದ ವಿಮಾನವನ್ನು ಮುಂಬೈನಲ್ಲಿ ಸುರಕ್ಷಿತವಾಗಿ ಇಳಿಸಿ, ತಪಾಸಣೆ ನಡೆಸಲಾಗಿದೆ ಎಂದು ವಿಸ್ತಾರಾ ಸಂಸ್ಥೆ ತಿಳಿಸಿದೆ.

ದುಬೈನಿಂದ ಜೈಪುರಕ್ಕೆ ಬರುತ್ತಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಕ್ಕೆ ಬಾಂಬ್ ಬೆದರಿಕೆ ಬಂದಿತ್ತು. ಮುಂಬೈನಿಂದ ಸಿಲಿಗುರಿಗೆ ತೆರಳಬೇಕಿದ್ದ ಆಕಾಸ ಏರ್ ಸಂಸ್ಥೆಯ ವಿಮಾನಕ್ಕೂ ಬೆದರಿಕೆ ಹಾಕಲಾಗಿದೆ.

ಸುದ್ದಿ 2 ನಿಮಿಷ

ಮಹಿಳಾ ಆಯೋಗದ ಅಧ್ಯಕ್ಷೆಯಾಗಿ ವಿಜಯಾ ನೇಮಕ

ನವದೆಹಲಿ (ಪಿಟಿಐ): ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) ಅಧ್ಯಕ್ಷರನ್ನಾಗಿ ವಿಜಯಾ ಕಿಶೋರ್ ರಹಾಟ್ಕರ್ ಅವರನ್ನು ಕೇಂದ್ರ ಸರ್ಕಾರ ಶನಿವಾರ ನೇಮಕ ಮಾಡಿದೆ. ವಿಜಯಾ ಅವರೊಂದಿಗೆ ಆಯೋಗಕ್ಕೆ ಕೆಲವು ಸದಸ್ಯರನ್ನೂ ಕೇಂದ್ರ ಸರ್ಕಾರ ನೇಮಕ ಮಾಡಿದೆ. ಡಾ. ಅರ್ಚನಾ ಮಜುಂದಾರ್ ಅವರು ಆಯೋಗದ ನೂತನ ಸದಸ್ಯರಾಗಿ ನೇಮಕಗೊಂಡಿದ್ದಾರೆ. ಈ ಬಗ್ಗೆ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ವಿಜಯಾ ಅವರು ಮುಂದಿನ ಮೂರು ವರ್ಷಗಳಿಗೆ ಆಯೋಗದ ಅಧ್ಯಕ್ಷೆಯಾಗಿ ಇರಲಿದ್ದಾರೆ ಅಥವಾ ಅವರಿಗೆ 65 ವರ್ಷ ತುಂಬುವವರೆಗೆ ಅಧ್ಯಕ್ಷ ಸ್ಥಾನದಲ್ಲಿ ಇರಲಿದ್ದಾರೆ. ಅರ್ಚನಾ ಅವರು ಕೂಡ ಮುಂದಿನ ಮೂರು ವರ್ಷಗಳವರೆಗೆ ಸದಸ್ಯೆಯಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.



ಆನ್‌ಲೈನ್ ಮೂಲಕ ಭಾರತದ ಯುವಕ, ಪಾಕ್ ಯುವತಿ ವಿವಾಹ

ಲಖನೌ: ಭಾರತ ಮತ್ತು ಪಾಕಿಸ್ತಾನ ನಡುವೆ ಗಡಿ ಸೇರಿದಂತೆ ವಿವಿಧ ವಿಚಾರಗಳಿಗೆ ಸಂಬಂಧಿಸಿ ನಿರಂತರ ಸಂಘರ್ಷವಿದೆ. ಆದರೆ, ಭಾರತದ ಯುವಕ ಹಾಗೂ ಪಾಕಿಸ್ತಾನದ ಯುವತಿ ವಿವಾಹಕ್ಕೆ ಇದು ಅಡ್ಡಿಯಾಗಿಲ್ಲ.

ಉತ್ತರ ಪ್ರದೇಶದ ಜೌನ್‌ಪುರ ಜಿಲ್ಲೆಯ ಪಾಲಿಕೆಯೊಂದರ ಬಿಜೆಪಿ ಸದಸ್ಯ ತೆಹ್ಸೀನ್ ಶಾಹಿದ್ ಎಂಬುವವರ ಪುತ್ರ ಮೊಹಮ್ಮದ್ ಅಬ್ಬಾಸ್ ಹೈದರ್ ಅವರ ವಿವಾಹವು ಲಾಹೋರ್ ನಿವಾಸಿ ಅಂದಲೀಬ್ ಜಹಾರಾ ಅವರೊಂದಿಗೆ ಶುಕ್ರವಾರ ಆನ್‌ಲೈನ್ ಮೂಲಕ ನೆರವೇರಿದೆ.

ಅಂದಲೀಬ್ ಜಹಾರಾ ಅವರು ತೆಹ್ಸೀನ್ ಶಾಹಿದ್ ಅವರ ಸಂಬಂಧಿಯ ಪುತ್ರಿ. ಹೈದರ್ ಮತ್ತು ಜಹಾರಾ ಅವರ ಮದುವೆಯ ಕಳೆದ ವರ್ಷ ನಿಶ್ಚಯವಾಗಿತ್ತು. ಹೈದರ್ ಕುಟುಂಬ ಕಳೆದ ವರ್ಷವೇ ವೀಸಾಕ್ಕೆ ಅರ್ಜಿ ಸಲ್ಲಿಸಿದ್ದರೂ, ಸಿಕ್ಕಿರಲಿಲ್ಲ.

ಕೆಲ ದಿನಗಳ ಹಿಂದೆ, ಜಹಾರಾ ಅವರ ತಾಯಿ ರಾಣಾ ಯಾಸ್ಮೀನ್ ಝೈದಿ ಅವರ ಆರೋಗ್ಯ ಕ್ಷೀಣಿಸಿ, ಸ್ಥಿತಿ ಗಂಭೀರವಾಯಿತು.

ರಾಣಾ ಯಾಸ್ಮೀನ್ ಅವರು, ಆದಷ್ಟು ಬೇಗನೆ ಮಗಳ ಮದುವೆ ನೆರವೇರಿಸಬೇಕು, ಅದನ್ನು ಕಣ್ತುಂಬಿಕೊಳ್ಳಬೇಕು ಎಂಬ ಇಚ್ಛೆ ವ್ಯಕ್ತಪಡಿಸಿದ್ದರು. ಇದಕ್ಕೆ ಸಮ್ಮತಿಸಿದ ಎರಡೂ ಕುಟುಂಬಗಳು, ಆನ್‌ಲೈನ್ ಮೂಲಕವೇ ಮದುವೆ ಮಾಡಲು ನಿರ್ಧರಿಸಿದ್ದವು.

ಶುಕ್ರವಾರ ಆನ್‌ಲೈನ್ ಮೂಲಕ ಮದುವೆ ನಡೆದಿದೆ. ವಧುವಿನ ಕಡೆಯವರು, ಟಿವಿ ಪರದೆ ಮೇಲೆ ವಿಧಿ-ವಿಧಾನಗಳನ್ನು ವೀಕ್ಷಿಸಿ ಮದುವೆಗೆ ಸಾಕ್ಷಿಯಾಗಿದ್ದಾರೆ. ಪತ್ನಿಗೆ ತ್ವರಿತವಾಗಿ ವೀಸಾ ನೀಡುವಂತೆ ಮೊಹಮ್ಮದ್ ಅಬ್ಬಾಸ್ ಹೈದರ್, ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ದೂರದರ್ಶನದ ತಮಿಳು ಸುವರ್ಣ ಮಹೋತ್ಸವದಲ್ಲಿ ಹಿಂದಿ ಮಾಸಾಚರಣೆ


ರಾಜ್ಯಪಾಲ ರವಿ ವಿರುದ್ಧ ಪೋಸ್ಟ್ ಕಾರ್ಡ್ ಅಭಿಯಾನ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡು ರಾಜ್ಯಪಾಲ ಆರ್. ಎನ್. ರವಿ ಭಾಗವಹಿಸಿದ್ದ ದೂರದರ್ಶನ ತಮಿಳು ಸುವರ್ಣ ಮಹೋತ್ಸವದಲ್ಲಿ ಹಿಂದಿ ಮಾಸಾಚರಣೆ ಸಮಾರೋಪ ಆಯೋಜನೆ, ರಾಜ್ಯದ ನಾಡಗೀತೆಯಿಂದ 'ದ್ರಾವಿಡ' ಪದ ಕೈ ಬಿಟ್ಟು ಹಾಡಿದ್ದು ವಿವಾದಕ್ಕೆ ಕಾರಣವಾಗಿದೆ.

ಈ ಬೆಳವಣಿಗೆಯಿಂದ ಆಕ್ರೋಶಗೊಂಡಿರುವ ಡಿಎಂಕೆ ಮಾತೃಪಕ್ಷ 'ದ್ರಾವಿಡರ್ ಕಳಗಂ' ಕಾರ್ಯಕರ್ತರು 'ಸರಿಯಾಗಿ ನಡೆದುಕೊಳ್ಳಿ'- ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಜತೆಗೆ ಸಂಘರ್ಷ ಬೇಡ' ಎಂದು ಸಂದೇಶ ಹೊಂದಿದ ಪೋಸ್ಟರ್, ಗೋಡೆ ಬರಹಗಳನ್ನು ನಗರದ ವಿವಿಧೆಡೆಗಳಲ್ಲಿ ಶನಿವಾರ ಅಳವಡಿಸಿದ್ದಾರೆ.

'ನರಿಯಂತೆ ವರ್ತಿಸಬೇಡಿ, ಆರ್ಯನ್ ರವಿ ಅವರೇ, ದ್ರಾವಿಡ ಹಿರೋ ಸ್ಟಾಲಿನ್ ಜತೆ ಸಂಘರ್ಷ ಬೇಡ' ಎಂದು ಸಂದೇಶವನ್ನೂ ಪ್ರಕಟಿಸಲಾಗಿದೆ. ಆದರೆ ಬರಹ ಬರೆದವರ ಹೆಸರು ಉಲ್ಲೇಖಿಸಿಲ್ಲ.



ಆರ್.ಎನ್.ರವಿ

ಅಲ್ಲದೇ, ಪ್ರತಿಭಟನಾರ್ಥವಾಗಿ 100ಕ್ಕೂ ಅಧಿಕ ಪೋಸ್ಟ್ ಕಾರ್ಡ್‌ಗಳನ್ನು ರಾಜಭವನಕ್ಕೆ ಕಳುಹಿಸಿದ್ದಾರೆ. 'ರಾಜ್ಯಪಾಲರ ನಡವಳಿಕೆಯನ್ನು ಖಂಡಿಸಿ ಎಲ್ಲರೂ ಇಲ್ಲಿ ಒಟ್ಟಿಗೆ ಸೇರಿದ್ದೇವೆ. ನಾವು ಕಳುಹಿಸಿರುವ ಪೋಸ್ಟ್ ಕಾರ್ಡ್‌ಗಳು ರಾಜ್ಯಪಾಲರಿಗೆ ತಲುಪುವ ವಿಶ್ವಾಸವಿದೆ' ಎಂದು ಪ್ರತಿಭಟನಕಾರರು ತಿಳಿಸಿದರು.

ಆರೋಪ–ಪ್ರತ್ಯಾರೋಪ

'ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ತಮ್ಮ ಹುದ್ದೆಯಲ್ಲಿ ಮುಂದುವರಿಯಬೇಕಾದರೆ, ವಿಭಜನಕಾರಿ ಶಕ್ತಿಗಳಿಂದ ದೂರವಿರಬೇಕು. ಸಂವಿಧಾನದ ಪ್ರಕಾರ, ಕರ್ತವ್ಯಗಳನ್ನು ನಿರ್ವಹಿಸಬೇಕು' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಪ್ರತಿಕ್ರಿಯಿಸಿದ್ದಾರೆ. ರಾಜಭವನವನ್ನು ರಾಜಕೀಯ ಪಕ್ಷದ ಕಚೇರಿಯನ್ನಾಗಿ ಮಾಡುವ ಪ್ರಯತ್ನವನ್ನೂ ಕೂಡಲೇ ನಿಲ್ಲಿಸಬೇಕು ಎಂದು ಈ ವೇಳೆ ಒತ್ತಾಯಿಸಿದ್ದಾರೆ.



ನಾಡಗೀತೆಯಿಂದ 'ದ್ರಾವಿಡ' ಪದ ಕೈ ಬಿಟ್ಟ ವಿಚಾರ ತಮಿಳುನಾಡು ಮುಖ್ಯಮಂತ್ರಿ–ರಾಜ್ಯಪಾಲರ ನಡುವೆ ತಿಕ್ಕಾಟಕ್ಕೆ ಕಾರಣವಾಗಿದೆ.

'ತಮಿಳು ನಾಡಗೀತೆಯನ್ನು ಅತ್ಯಂತ ಭಕ್ತಿಯಿಂದ ಹಾಡಿರುವುದಾಗಿ ತಿಳಿಸಿದ್ದೀರಿ. ಹಾಗಿದ್ದರೆ, ದ್ರಾವಿಡ ಪದ ಕೈ ಬಿಟ್ಟ ಕುರಿತು ಸ್ಥಳದಲ್ಲೇ ಏಕೆ ಖಂಡಿಸಿಲ್ಲ' ಎಂದು ಸ್ಟಾಲಿನ್ ಪ್ರಶ್ನಿಸಿದ್ದಾರೆ. ಇದಕ್ಕೆ ತಿರುಗೇಟು ನೀಡಿರುವ ರಾಜ್ಯಪಾಲ ಆರ್.ಎನ್.ರವಿ, 'ಆಧಾರರಹಿತ ಅತ್ಯಂತ ಕೀಳುಮಟ್ಟದ ಆರೋಪ' ಎಂದು ತಿಳಿಸಿದ್ದಾರೆ.

ಸುಲಿಗೆ ಪ್ರಕರಣದಲ್ಲಿ ವಿಕಾಸ್ ಬಂಧಿಸಿದ್ದ ದೆಹಲಿ ಪೊಲೀಸರು

ನವದೆಹಲಿ(ಪಿಟಿಐ): ಸಿಖ್ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನು ಹತ್ಯೆಗೆ ಸಂಚು ರೂಪಿಸಿದ್ದ ಆರೋಪ ಎದುರಿಸುತ್ತಿರುವ ವಿಕಾಸ್ ಯಾದವ್ ಅವರನ್ನು ಸುಲಿಗೆ ಮತ್ತು ಅಪಹರಣ ಪ್ರಕರಣಕ್ಕೆ ಸಂಬಂಧಿಸಿ ದೆಹಲಿ ಪೊಲಿಸರು ಕಳೆದ ಡಿಸೆಂಬರ್‌ನಲ್ಲಿ ಬಂಧಿಸಿದ್ದರು.

ದೆಹಲಿಯ ರೋಹಿಣಿ ಪ್ರದೇಶದ ಉದ್ಯಮಿಯೊಬ್ಬರನ್ನು ಅಪಹರಿಸಿ, ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ ಹೆಸರಿನಲ್ಲಿ ಹಣಕ್ಕಾಗಿ ಬೇಡಿಕೆ ಇಟ್ಟಿದ್ದ ಆರೋಪವನ್ನು ಯಾದವ್ ಎದುರಿಸುತ್ತಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ ಯಾದವ್ ಅವರನ್ನು ಡಿ.18ರಂದು ಬಂಧಿಸಲಾಗಿತ್ತು. ನ್ಯಾಯಾಲಯ ಏ. 22ರಂದು ಜಾಮೀನು ನೀಡಿತ್ತು.

ಹಿಂದೂ ಕಾರ್ಯಕರ್ತರ ಮೇಲೆ ಲಾಠಿ ಪ್ರಹಾರ

ಹೈದರಾಬಾದ್ (ಪಿಟಿಐ): ದೇವರ ವಿಗ್ರಹ ಅಪವಿತ್ರಗೊಳಿಸಿದ್ದನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ), ಬಜರಂಗ ದಳ ಮತ್ತು ಇತರ ಹಿಂದೂ ಸಂಘಟನೆಗಳ ಕಾರ್ಯಕರ್ತರನ್ನು ಚದುರಿಸಲು ಪೊಲೀಸರು ಶನಿವಾರ ಲಾಠಿ ಪ್ರಹಾರ ನಡೆಸಿದರು.

ಎಂಜಿನಿಯರಿಂಗ್ ಪದವೀಧರ, ಮಹಾರಾಷ್ಟ್ರದ ಸಲ್ಮಾನ್ ಸಲೀಂ ಠಾಕೂರ್ ಅಲಿಯಾಸ್ ಸಲ್ಮಾನ್ ಎನ್ನುವವನು ಸಿಕಂದರಾಬಾದ್‌ನ ಮುತ್ಯಾಲಮ್ಮ ದೇವಸ್ಥಾನದ ಪ್ರಮುಖ ವಿಗ್ರಹವನ್ನು ಅಪವಿತ್ರಗೊಳಿಸಿದ್ದ. ಇದನ್ನು ಖಂಡಿಸಿ ಸ್ಥಳೀಯರು, ಹಿಂದೂ ಸಂಘಟನೆಗಳು ಹಾಗೂ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು.

ದೇವಸ್ಥಾನಗಳ ವಿಚಾರದಲ್ಲಿ ತೆಲಂಗಾಣ ಸರ್ಕಾರ ತೋರುತ್ತಿರುವ 'ಧೋರಣೆ'ಯನ್ನು ಖಂಡಿಸಿ ರಾಜ್ಯವ್ಯಾಪಿ ಪ್ರತಿಭಟನೆಗೆ ವಿಎಚ್‌ಪಿ ಶನಿವಾರ ಕರೆ ನೀಡಿತ್ತು. ಕಾರ್ಯಕರ್ತರು ಪ್ರತಿಭಟನೆ ನಡೆಸಿ, ದೇವಸ್ಥಾನದ ಎದುರು ಜಮಾಯಿಸಿದ್ದರು. ಅವರು ಕೇಸರಿ ಧ್ವಜ ಹಿಡಿದಿದ್ದರು.



ಮುತ್ಯಾಲಮ್ಮ ದೇವಸ್ಥಾನದ ವಿಗ್ರಹ ಅಪವಿತ್ರಗೊಳಿಸಿದ್ದನ್ನು ಖಂಡಿಸಿ ಪ್ರತಿಭಟನೆ ನಡೆಸಿದ ಹಿಂದೂ ಸಂಘಟನೆಗಳ ಕಾರ್ಯಕರ್ತರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು ಪಿಟಿಐ ಚಿತ್ರ

'ಜೈ ಶ್ರೀರಾಮ್', 'ನ್ಯಾಯ ಬೇಕು' ಎಂಬ ಘೋಷಣೆಗಳನ್ನು ಅವರು ಕೂಗಿದರು. ಪ್ರತಿಭಟನಕಾರರು ಪೊಲೀಸರತ್ತ ನೀರಿನ ಪೊಟ್ಟಣಗಳನ್ನು ಎಸೆದಿದ್ದು ಕ್ಯಾಮೆರಾಗಳಲ್ಲಿ ಸೆರೆಯಾಗಿದೆ. ಲಾಠಿ ಪ್ರಹಾರದ ಕಾರಣದಿಂದಾಗಿ ಕೆಲವರಿಗೆ ಗಾಯಗಳಾಗಿವೆ.

ಲಾಠಿ ಪ್ರಹಾರವನ್ನು ಬಿಜೆಪಿಯು ಖಂಡಿಸುವುದಾಗಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಬಂಡಿ ಸಂಜಯ್ ಕುಮಾರ್ ಹೇಳಿದ್ದಾರೆ.

ನಕಲಿ ಮದ್ಯ: ಮೃತರ ಸಂಖ್ಯೆ 37ಕ್ಕೆ ಏರಿಕೆ

ಪಟ್ನಾ (ಪಿಟಿಐ): ಬಿಹಾರದಲ್ಲಿ ನಕಲಿ ಮದ್ಯ ಸೇವಿಸಿ ಮೃತಪಟ್ಟವರ ಸಂಖ್ಯೆ 37ಕ್ಕೆ ಏರಿಕೆಯಾಗಿದೆ.

ದುರಂತ ಸಂಭವಿಸಿರುವ ಸಿವಾನ್ ಮತ್ತು ಸಾರಣ್ ಜಿಲ್ಲೆಗಳೊಂದಿಗೆ ಗಡಿ ಹಂಚಿಕೊಂಡಿರುವ ಗೋಪಾಲ್‌ಗಂಜ್‌ನಲ್ಲಿ ಶನಿವಾರ ಮತ್ತೆ ಇಬ್ಬರು ಸಾವಿಗೀಡಾಗಿದ್ದಾರೆ. ಇದುವರೆಗೆ ಸಿವಾನ್‌ನಲ್ಲಿ 28, ಸಾರಣ್‌ನಲ್ಲಿ 7 ಹಾಗೂ ಗೋಪಾಲ್ ಗಂಜ್‌ನಲ್ಲಿ ಇಬ್ಬರು ಸೇರಿ ಒಟ್ಟು 37 ಜನ ಸಾವಿಗೀಡಾಗಿದ್ದಾರೆ.

ಮಹಾಕುಂಭ: 'ಸನಾತನಿ' ಅಧಿಕಾರಿಗಳ ನಿಯೋಜನೆಗೆ ಮಠಾಧೀಶರ ಒತ್ತಾಯ

ಪ್ರಜಾವಾಣಿ ವಾರ್ತೆ

ಲಖನೌ: ಪ್ರಯಾಗ್‌ರಾಜ್‌ದಲ್ಲಿ ಮುಂದಿನ ವರ್ಷ ನಡೆಯಲಿರುವ 'ಮಹಾಕುಂಭ'ದ ವೇಳೆ 'ಸನಾತನಿ' ಅಧಿಕಾರಿಗಳನ್ನು ಮಾತ್ರ ನಿಯೋಜನೆ ಮಾಡುವಂತೆ ಮಠಾಧೀಶರು ಆಗ್ರಹಿಸಿದ್ದಾರೆ.

ಮಠಾಧೀಶರ ಸಂಘಟನೆಯಾದ ಅಖಿಲ ಭಾರತ ಅಖಾಡಾ ಪರಿಷತ್(ಎಐಎಪಿ) ಈ ಬೇಡಿಕೆ ಇಟ್ಟಿದೆ.

ಎಐಎಪಿ, 13 'ಅಖಾಡಾ'ಗಳನ್ನು ಪ್ರತಿನಿಧಿಸುವ ಸಂಘಟನೆಯಾಗಿದೆ. ಸನಾತನ ಧರ್ಮ ರಕ್ಷಣೆಗಾಗಿ 8ನೇ ಶತಮಾನದಲ್ಲಿ ಆದಿ ಶಂಕರಾಚಾರ್ಯರು ಸಾಧು–ಸಂತರು ಹಾಗೂ ಮಠಾಧೀಶರ ಏಕತೆಗಾಗಿ 'ಅಖಾಡಾ'ಗಳನ್ನು ಸ್ಥಾಪಿಸಿದ್ದರು.

ಕುಂಭಮೇಳವು ಮುಂದಿನ ಜನವರಿ 14ರಂದು ಆರಂಭವಾಗಿ, ಫೆಬ್ರುವರಿ 26ಕ್ಕೆ ಮುಕ್ತಾಯಗೊಳ್ಳುವುದು. ಈ ವೇಳೆ, ಜನರು ಗಂಗಾ, ಯಮುನಾ ಹಾಗೂ ಸರಸ್ವತಿ ನದಿಗಳ ಸಂಗಮ ಸ್ಥಳದಲ್ಲಿ 'ಪುಣ್ಯ ಸ್ನಾನ' ವಿಧಿ ಪೂರೈಸುತ್ತಾರೆ. ದೇಶ– ವಿದೇಶಗಳ ಬರುವ ಲಕ್ಷಾಂತರ ಜನರು ಈ ಮೇಳದಲ್ಲಿ ಪಾಲ್ಗೊಳ್ಳುವರು.

'ಕುಂಭ ಮೇಳ (ಮಹಾಕುಂಭ) ನಡೆಯುವ ಪ್ರದೇಶದಲ್ಲಿ ಕೇವಲ ಸನಾತನಿ ಅಧಿಕಾರಿಗಳನ್ನು ನಿಯೋಜನೆ ಮಾಡಬೇಕು. ಸನಾತನಿಯಲ್ಲದ ಅಧಿಕಾರಿಗೆ ಈ ಪ್ರದೇಶದಲ್ಲಿ ಪ್ರವೇಶ ನೀಡಬಾರದು' ಎಂದು ಎಐಎಪಿ ಪ್ರಧಾನ ಕಾರ್ಯದರ್ಶಿ ಹಾಗೂ 'ಜುನಾ ಅಖಾಡಾ'ದ ಮಹಾಪೋಷಕ ಮಹಂತ ಹರಿ ಗಿರಿ ಅವರು ಇತ್ತೀಚೆಗೆ ನಡೆದ ಪರಿಷತ್ ಸಭೆಯಲ್ಲಿ ಹೇಳಿದರು.

ಶನಿವಾರ ರಾತ್ರಿವರೆಗೆ ಕಚೇರಿಯಲ್ಲೇ ಬೀಡುಬಿಟ್ಟ ತನಿಖಾಧಿಕಾರಿಗಳು

ಮುಡಾ: ದಾಖಲೆ ಜಾಲಾಡಿದ ಇ.ಡಿ.

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ 50:50 ಅನುಪಾತದ ಅಡಿ ಬದಲಿ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಜಾಲಾಡಿರುವ ಜಾರಿ ನಿರ್ದೇಶನಾಲ ಯದ (ಇ.ಡಿ) ಅಧಿಕಾರಿಗಳು, ಪ್ರಕರಣಕ್ಕೆ ತಿರುವು ನೀಡಬಲ್ಲ ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ.



ಮುಡಾ ಕಚೇರಿ ಪ್ರವೇಶ ದ್ವಾರದಲ್ಲಿ ಶನಿವಾರ ಕಾವಲಿಗೆ ನಿಂತ ಸಿಆರ್‌ಪಿಎಫ್ ಸಿಬ್ಬಂದಿ — ಪ್ರಜಾವಾಣಿ ಚಿತ್ರ

ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ಎರಡನೇ ದಿನವಾದ ಶನಿವಾರ ರಾತ್ರಿ 11.30ರ ವರೆಗೆ ಅಧಿಕಾರಿಗಳು ಹಾಗೂ ಸಿಬ್ಬಂದಿಯ ವಿಚಾರಣೆ ನಡೆಸಿದ ಇ.ಡಿ. ತಂಡವು, ಕೆಸರೆ ಸರ್ವೆ ಸಂಖ್ಯೆ 464ಕ್ಕೆ ಸಂಬಂಧಿಸಿದ ಪ್ರತಿ ಕಡತವನ್ನೂ ಪಡೆಯಿತು. ಮೂಲ ದಾಖಲೆಗಳೇ ನಾಪತ್ತೆಯಾಗಿರುವ ಕುರಿತು ಆಯುಕ್ತ ರಘುನಂದನ್ ಸೇರಿದಂತೆ ಹಿರಿಯ ಅಧಿಕಾರಿಗಳ ಬೆವರಿಳಿಸಿತು. ಕಚೇರಿಯ ಮುಖ್ಯದ್ವಾರವನ್ನು ಬಂದ್ ಮಾಡಿ, ಸಿಆರ್‌ಪಿಎಫ್ ಸಿಬ್ಬಂದಿ ಭದ್ರತೆಯಲ್ಲಿ ವಿಚಾರಣೆ ನಡೆಸಿತು.

ವೈಟ್ನರ್ ಮೇಲೆ ಕಣ್ಣು!: ಬದಲಿ ನಿವೇಶನ ಕೋರಿ ಪಾರ್ವತಿ ಅವರು ಮುಡಾಕ್ಕೆ ಸಲ್ಲಿಸಿದ್ದ, ನಂತರ ವೈಟ್ನರ್ ಹಚ್ಚಿ ತಿದ್ದುಪಡಿ ಮಾಡಲಾಗಿದೆ ಎನ್ನಲಾದ ಪತ್ರ ಕೂಡ ಇ.ಡಿ.ಗೆ ಸಿಕ್ಕಿದೆ ಎನ್ನಲಾಗಿದೆ. ಎರಡನೇ ಪುಟದಲ್ಲಿ ವೈಟ್ನರ್ ಹಾಕಿದ್ದ ಜಾಗದಲ್ಲಿ ಏನಿತ್ತು ಎಂಬುದರ ಕುರಿತು ಪರಿಣಿತರು ಅಲ್ಲೇ ಪರಿಶೀಲಿಸಿದ್ದಾರೆ. ಇಬ್ಬರು ಪರಿಣತರಿದ್ದ ಎಫ್‌ಎಸ್‌ಎಲ್ ತಂಡವೂ ಪತ್ರದ ನೈಜತೆ ಪರಿಶೀಲಿಸಿತು ಎನ್ನಲಾಗಿದೆ.

2004–05ರಲ್ಲಿ ಈ ಜಮೀನು ಮಲ್ಲಿಕಾರ್ಜುನ ಸ್ವಾಮಿಯವರಿಗೆ ನೋಂದಣಿಯಾಗುವ ಮುನ್ನ ಯಾರಿಗೆಲ್ಲ ನಿವೇಶನ ಹಂಚಿಕೆಯಾಗಿತ್ತು? ಹಂಚಿಕೆ ಯಾಗಿದ್ದರೂ ಕೃಷಿ ಜಮೀನು ಎಂದು ನೋಂದಣಿ ಮಾಡಿದ್ದು ಹೇಗೆ? ಎಂಬುದನ್ನು ಇ.ಡಿ. ಪ್ರಶ್ನಿಸಿದೆ.

ದಾಖಲೆಗಳ ಸಂಗ್ರಹ: ಈ ಪ್ರಕರಣದ ಜೊತೆಗೇ, 2015ರಿಂದ 2024ರವರೆಗೆ 50:50 ಅನುಪಾತದಲ್ಲಿ ಹಂಚಿಕೆಯಾಗಿರುವ ಅಷ್ಟೂ ನಿವೇಶನಗಳ ದಾಖಲೆಗಳನ್ನು ಇ.ಡಿ. ಸಂಗ್ರಹಿಸಿದೆ. ಯಾವ ಶಿಫಾರಸಿನ ಮೇಲೆ ನಿವೇಶನಗಳನ್ನು ಹಂಚಲಾಯಿತು? ಯಾವ ಸಭೆಯಲ್ಲಿ ನಿರ್ಣಯಿಸಲಾಯಿತು? ಯಾರೆಲ್ಲಾ ಸಭೆಯಲ್ಲಿದ್ದರು? ಜನಪ್ರತಿನಿಧಿಗಳು ಪತ್ರ ಕೊಟ್ಟಿದ್ದರೆ? ಹಣದ ವಹಿವಾಟು ನಡೆದಿದೆಯೇ? ಎಂಬ ಮಾಹಿತಿಯನ್ನು ಕಲೆಹಾಕಿದೆ. ಆಯುಕ್ತರ ಆದೇಶಪತ್ರಗಳು, ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಸರ್ಕಾರಕ್ಕೆ ಬರೆದಿದ್ದ ಪತ್ರಗಳು ಸಹ ಇ.ಡಿ. ಕೈ ಸೇರಿವೆ.

> **ಮುಡಾ ಕಚೇರಿ ಮೇಲಿನ ಇ.ಡಿ ದಾಳಿ, ಕಡತಗಳ ನಾಪತ್ತೆ ಪ್ರಕರಣವು ಸಿದ್ದರಾಮಯ್ಯ ಅವರಿಗೆ ಸಂಬಂಧಪಟ್ಟಿಲ್ಲ. ಸಿಬಿಐ ತನಿಖೆ ನಡೆಸಿದರೂ ಅವರು ರಾಜೀನಾಮೆ ನೀಡುವ ಪ್ರಶ್ನೆ ಉದ್ಭವಿಸಲ್ಲ**
> **ಸತೀಶ್ ಜಾರಕಿಹೊಳಿ**, ಸಚಿವ

ಇಬ್ಬರು ತಜ್ಞರನ್ನು ಕರೆಯಿಸಿಕೊಂಡು, ಎಲ್ಲ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಪಡೆದು, ಅಲ್ಲೇ ಸ್ಕ್ಯಾನ್ ಮಾಡಿಸಿ ಡಿಜಿಟಲ್ ರೂಪದಲ್ಲಿ ಸಾಕ್ಷ್ಯಗಳನ್ನು ಇಡಿ ಅಧಿಕಾರಿಗಳು ಸಂಗ್ರಹಿಸಿದರು. ಅದನ್ನು ಆಧರಿಸಿ ಮುಡಾದ ಹಿಂದಿನ ಆಯುಕ್ತರಾದ ಜಿ.ಟಿ. ದಿನೇಶ್‌ಕುಮಾರ್ ಹಾಗೂ ಡಿ.ಬಿ. ನಟೇಶ್ ಅವರನ್ನು ವಿಚಾರಣೆಗೊಳಪಡಿಸುವ ಸಾಧ್ಯತೆ ಇದೆ.

ತಹಶೀಲ್ದಾರ್ ಕಚೇರಿಯಲ್ಲಿ ಶೋಧ: ಮೈಸೂರು ತಹಶೀಲ್ದಾರ್ ಕಚೇರಿಯಲ್ಲಿ ಶನಿವಾರ ತಡರಾತ್ರಿವರೆಗೂ ಶೋಧ ನಡೆಸಿದ್ದ ಇ.ಡಿ. ಅಧಿಕಾರಿಗಳು, 100 ಪುಟದಷ್ಟು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಕೆಸರೆ ಸರ್ವೆ ಸಂಖ್ಯೆ 464 ಹಾಗೂ 462ರ ಎಲ್ಲ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಕೊಂಡೊಯ್ದಿದ್ದು, ಕೇಳಿದಾಗ ಮೂಲ ದಾಖಲೆಗಳನ್ನು ಹಾಜರುಪಡಿಸಬೇಕು ಹಾಗೂ ವಿಚಾರಣೆಗೆ ಬರಬೇಕೆಂದು ತಹಶೀಲ್ದಾರ್ ಮಹೇಶ್ ಅವರಿಗೆ ಸೂಚಿಸಿದ್ದಾರೆ.

ವಿಳಂಬ ಕಾರಣ: ಇ.ಡಿ. ಅಧಿಕಾರಿಗಳು ವಾರದ ಹಿಂದೆಯೇ ಮುಡಾಕ್ಕೆ 4 ಪುಟಗಳ ಪತ್ರ ನೀಡಿದ್ದು, ಕೆಲವು ದಾಖಲೆಗಳು ಹಾಗೂ ಪೂರಕ ಮಾಹಿತಿ ನೀಡುವಂತೆ ಸೂಚಿಸಿದ್ದರು. ಆದರೆ, ಅಧಿಕಾರಿಗಳು ವಿಳಂಬ ಮಾಡಿದ್ದು, ತಡವಾದರೆ ಇನ್ನಷ್ಟು ದಾಖಲೆ ಕೈತಪ್ಪಬಹುದೆಂದು ಇ.ಡಿ. ದಾಳಿ ನಡೆಸಿತು ಎನ್ನಲಾಗಿದೆ.

ಸಂಸದ ಕುಮಾರ ನಾಯಕ ವಿಚಾರಣೆ

ಈ ಹಿಂದೆ ಮೈಸೂರು ಜಿಲ್ಲಾಧಿಕಾರಿಯಾಗಿದ್ದ, ಹಾಲಿ ರಾಯಚೂರು ಕ್ಷೇತ್ರದ ಕಾಂಗ್ರೆಸ್ ಸಂಸದ ಜಿ. ಕುಮಾರ ನಾಯಕ ಅವರನ್ನು ಲೋಕಾಯುಕ್ತ ಎಸ್‌.ಪಿ. ಟಿ.ಜೆ. ಉದೇಶ್ ನೇತೃತ್ವದ ತಂಡವು ಶನಿವಾರ ಸತತ ಮೂರ್ನಾಲ್ಕು ತಾಸು ವಿಚಾರಣೆಗೆ ಒಳಪಡಿಸಿತು.

ವಿವಾದಿತ ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ರಲ್ಲಿನ 3 ಎಕರೆ 16 ಗುಂಟೆ ಜಮೀನನ್ನು 2004ರಲ್ಲಿ ಸಿದ್ದರಾಮಯ್ಯ ಭಾಮೈದ ಬಿ.ಎಂ. ಮಲ್ಲಿಕಾರ್ಜುನ ಸ್ವಾಮಿ ಖರೀದಿಸಿ, ಭೂಪರಿವರ್ತನೆ ಕೋರಿ 2005ರಲ್ಲಿ ಅರ್ಜಿ ಸಲ್ಲಿಸಿದ್ದ ವೇಳೆ, ಜಿಲ್ಲಾಧಿಕಾರಿಯಾಗಿದ್ದ ಕುಮಾರ ನಾಯಕ ಖಾಲಿ ಜಮೀನು ಎಂದು ನಮೂದಿಸಿ ಅನ್ಯಕ್ರಾಂತ ಆದೇಶ ಹೊರಡಿಸಿದ್ದರು.

2004–05ರ ವೇಳೆಗಾಗಲೇ ಈ ಜಮೀನಿನಲ್ಲಿ ಬಡಾವಣೆ ರಚನೆಯಾಗಿ ಫಲಾನುಭವಿಗಳಿಗೆ ನಿವೇಶನ ಹಂಚಿಕೆಯಾಗಿತ್ತು. ಹೀಗಿದ್ದೂ ಸ್ಥಳ ಪರಿಶೀಲಿಸದೆ ಅನ್ಯಕ್ರಾಂತ ಆದೇಶ ಹೊರಡಿಸಿದ ಆರೋಪ ಕುಮಾರ ನಾಯಕ ಅವರ ಮೇಲಿದೆ.

‘ಅಂದು ಸ್ಥಳ ಪರಿಶೀಲನೆ ಸಂದರ್ಭ ನೀವು ಹಾಜರಿದ್ದಿರಾ? ಅಲ್ಲಿ ಬಡಾವಣೆ ರಚನೆ ಆಗಿರಲಿಲ್ಲವೇ? ರಸ್ತೆ, ಚರಂಡಿ ನಿರ್ಮಾಣ ಆಗಿರಲಿಲ್ಲವೇ? ಯಾವ ಅಂಶಗಳನ್ನು ಪರಿಗಣಿಸಿ ಅನ್ಯಕ್ರಾಂತ ಆದೇಶ ಹೊರಡಿಸಿದಿರಿ?’ ಎಂಬ ಬಗ್ಗೆ ಲೋಕಾಯುಕ್ತ ಅಧಿಕಾರಿಗಳು ಪ್ರಶ್ನಿಸಿ ಮಾಹಿತಿ ಪಡೆದಿದ್ದಾರೆ.

ರಸ್ತೆ ಜಾಗ ಸೇರಿಸಿ ಕ್ರಯಪತ್ರ!

ಸಿ.ಎಂ ಪತ್ನಿ ಪಾರ್ವತಿ ವಿರುದ್ಧ ಮತ್ತೊಂದು ಆರೋಪ

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಅವರು ಮುಡಾದಿಂದ ಪಡೆದ 14 ಬದಲಿ ನಿವೇಶನಗಳ ಕುರಿತು ಲೋಕಾಯುಕ್ತ ಹಾಗೂ ಇ.ಡಿ. ತನಿಖೆ ಚುರುಕಾದ ಬೆನ್ನಲ್ಲೇ, ಅವರ ವಿರುದ್ಧ ನಿವೇಶನದ ಜೊತೆಗೆ ರಸ್ತೆ ಜಾಗವನ್ನು ಸೇರಿಸಿ ಕ್ರಯಪತ್ರ ಮಾಡಿಸಿಕೊಂಡ ಆರೋಪ ಕೇಳಿಬಂದಿದೆ.

‘ಬಿ.ಎಂ. ಪಾರ್ವತಿ ಅವರು ಕಳೆದ ವರ್ಷ ನಗರದ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಖರೀದಿಸಿದ್ದು, ಅದರೊಂದಿಗೆ ರಸ್ತೆಗೆ ಮೀಸಲಿಟ್ಟಿದ್ದ ಜಾಗವನ್ನೂ ಸೇರಿಸಿ ಕ್ರಯಪತ್ರ ಮಾಡಿಸಿಕೊಂಡಿದ್ದರು. ಈ ಸಂಗತಿ ಬಯಲಾಗುತ್ತಲೇ, ವಿವಾದಿತ ಜಾಗವನ್ನು ಮುಡಾಕ್ಕೆ ವಾಪಸ್ ನೀಡಿ ತಿದ್ದುಪಡಿ ಕ್ರಯಪತ್ರ ಮಾಡಿಸಿಕೊಂಡಿದ್ದಾರೆ’ ಎಂದು ಆರ್‌ಟಿಐ ಕಾರ್ಯಕರ್ತ ಗಂಗರಾಜು ದೂರಿದ್ದಾರೆ. ಈ ಕುರಿತ ದಾಖಲೆಗಳನ್ನು ಶನಿವಾರ ಅವರು ಮಾಧ್ಯಮಗಳಿಗೆ ಬಿಡುಗಡೆ ಮಾಡಿದರು.

ಹೆಬ್ಬಾಳದ ಸರ್ವೆ ಸಂಖ್ಯೆ 445ರಲ್ಲಿ ಒಟ್ಟು 4 ಎಕರೆ 11 ಗುಂಟೆ ಜಾಗವಿದ್ದು, ಅದರಲ್ಲಿ 20 ಗುಂಟೆಯನ್ನು ಮಾಲೀಕರು 2014ರಲ್ಲಿ ಕೈಗಾರಿಕಾ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಮುಡಾದಲ್ಲಿ ಭೂ ಉಪಯೋಗ ಬದಲಾವಣೆ ಮಾಡಿಸಿಕೊಂಡಿದ್ದರು. 2018ರಲ್ಲಿ ಅದೇ ಜಮೀನಿಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಭೂ ಪರಿವರ್ತನೆ ಮಾಡಿಕೊಡಲಾಗಿದ್ದು, 20 ಗುಂಟೆ ಪೈಕಿ 1.5 ಗುಂಟೆಯನ್ನು ನೀರಿನ ಪೈಪ್‌ಲೈನ್ ಕಾಮಗಾರಿಗಾಗಿ ಬಿಟ್ಟು ಉಳಿದ 18.5 ಗುಂಟೆಗೆ ಮಾತ್ರ ವಸತಿ ಉಪಯೋಗಕ್ಕೆ ಪರಿವರ್ತಿಸಲಾಗಿತ್ತು.

ಅದೇ ಜಾಗಕ್ಕೆ 2019ರಲ್ಲಿ ಮುಡಾದಿಂದ ಏಕ ನಿವೇಶನ ನಕ್ಷೆ ಅನುಮೋದನೆಯಾಗಿದ್ದು, ಒಟ್ಟು 21,771 ಚದರ ಅಡಿ ಜಾಗದಲ್ಲಿ ರಸ್ತೆ ವಿಸ್ತರಣೆಗೆ ಸುಮಾರು 8,980 ಚದರ ಅಡಿ ಜಾಗ ಬಿಟ್ಟು ಉಳಿದ 12,782 ಚದರ ಅಡಿಗೆ ಮಾತ್ರ ನಕ್ಷೆ ಅನುಮೋದನೆ ಮಾಡಿ ಕೊಡಲಾಗಿತ್ತು. ಮಾಲೀಕ ಎ.ಎಸ್. ಗಣೇಶ್ ಅವರು 2019ರ ಅಕ್ಟೋಬರ್ 31ರಂದು ನೋಂದಾಯಿತ ಪರಿತ್ಯಾಜನ ಪತ್ರದ ಮೂಲಕ 8,980 ಚದರ ಅಡಿ ಜಾಗವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿದ್ದರು.



ಪಾರ್ವತಿ ಅವರು ಅದೇ ಜಾಗವನ್ನು 2023ರ ಸೆಪ್ಟೆಂಬರ್ 29 ರಂದು ₹1.85 ಕೋಟಿಗೆ ಖರೀದಿಸಿದ್ದರು. ಮೂಲ ಮಾಲೀಕರು ರಸ್ತೆ, ಪೈಪ್‌ಲೈನ್‌ಗೆಂದು ಬಿಟ್ಟುಕೊಟ್ಟಿದ್ದ ಜಾಗವನ್ನೂ ಸೇರಿಸಿ 20 ಗುಂಟೆಯನ್ನು (21,771 ಚ.ಅಡಿ) ತಮ್ಮ ಹೆಸರಿಗೆ ಕ್ರಯಪತ್ರ ಮಾಡಿಸಿಕೊಂಡಿದ್ದರು. ಇದು ಕಾನೂನಿನ ಉಲ್ಲಂಘನೆ ಎಂಬುದು ಅವರ ಮೇಲಿರುವ ಆರೋಪ.

ದೂರುದಾರರು ಹೇಳುವುದೇನು?: ‘ಅಕ್ರಮದ ಮಾಹಿತಿ ಸಿಗುತ್ತಲೇ ನಾನು ಮಾಹಿತಿ ಹಕ್ಕಿನ ಅಡಿ ದಾಖಲೆಗಳನ್ನು ಕೋರಿ ಮುಡಾಕ್ಕೆ ಕಳೆದ ಆಗಸ್ಟ್ 20ರಂದು ಅರ್ಜಿ ಸಲ್ಲಿಸಿದ್ದೆ. 22ರಂದು ಮುಡಾ ದಾಖಲೆಗಳನ್ನು ನೀಡಿತು. ಅದನ್ನು ತಿಳಿದು ಪಾರ್ವತಿಯವರು ಆಗಸ್ಟ್ 30ರಂದು ಮುಡಾ ಆವರಣದಲ್ಲಿರುವ ಉಪನೋಂದಣಾಧಿಕಾರಿ ಕಚೇರಿಯಲ್ಲಿ ತಮ್ಮ ಆಸ್ತಿಯ ಕ್ರಯಪತ್ರದ ತಿದ್ದುಪಡಿ ಮಾಡಿಕೊಂಡು 21,771 ಚದರ ಅಡಿ ಜಾಗದ ಪೈಕಿ 13,292 ಚದರ ಅಡಿ ಜಾಗವನ್ನು ಮಾತ್ರ ನೋಂದಣಿ ಮಾಡಿಕೊಂಡಿದ್ದಾರೆ. ಮರುದಿನವೇ ಮತ್ತೊಂದು ತಿದ್ದುಪಡಿ ಕ್ರಯಪತ್ರ ಮಾಡಿಕೊಂಡಿದ್ದು, ಅದರಲ್ಲಿ ನಿವೇಶನದ ವಿಸ್ತೀರ್ಣವನ್ನು 12,782 ಚದರ ಅಡಿಗೆ ಇಳಿಸಲಾಗಿದೆ’ ಎಂದು ಗಂಗರಾಜು ದೂರಿದ್ದಾರೆ.


‘ಮುಡಾಕ್ಕೆ ಪರಿತ್ಯಾಜ್ಯನ ಪತ್ರದ ಮೂಲಕ ಬಿಟ್ಟುಕೊಟ್ಟಿದ್ದ ಜಾಗವನ್ನೂ ಸೇರಿಸಿ ಮಾಲೀಕರು ನೋಂದಣಿ ಮಾಡಿಕೊಟ್ಟಿದ್ದು, ಏನನ್ನೂ ಪರಿಶೀಲಿಸದೇ ಪಾರ್ವತಿ ಅವರು ತಮ್ಮ ಹೆಸರಿಗೆ ಕ್ರಯಪತ್ರ ಮಾಡಿಕೊಂಡಿರುವುದು ನಿಯಮ ಬಾಹಿರ. ಅಧಿಕಾರಿಗಳೂ ಅದರಲ್ಲಿ ಶಾಮೀಲಾಗಿದ್ದಾರೆ. ಪ್ರಕರಣ ಬೆಳಕಿಗೆ ಬರುತ್ತಲೇ ತಿದ್ದುಪಡಿ ಮಾಡಿಕೊಳ್ಳುವ ಮೂಲಕ ಪಾರ್ವತಿ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಈ ಬಗ್ಗೆ ತನಿಖೆ ನಡೆಸುವಂತೆ ರಾಜ್ಯಪಾಲರಿಗೆ ದೂರು ಸಲ್ಲಿಸುತ್ತೇನೆ’ ಎಂದು ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ವಲ್ಲ್ಯಾಪುರ ಮನೆಯಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ ಪ್ರಕರಣ ಸಂಬಂಧ ವಿಧಾನ ಪರಿಷತ್ ಸದಸ್ಯ ಸುನಿಲ್ ವಲ್ಲ್ಯಾಪುರ ಅವರ ಮನೆ ಮೇಲೆ ಸಿಐಡಿ ಅಧಿಕಾರಿಗಳು ಶನಿವಾರ ದಾಳಿ ನಡೆಸಿ, ದಾಖಲೆಗಳ ಶೋಧ ನಡೆಸಿದರು.

ನಿಗಮದಲ್ಲಿನ ₹ 12 ಕೋಟಿ ದುರ್ಬಳಕೆ ಆರೋಪದಡಿ ಕಾಳಗಿ ಪೊಲೀಸ್ ಠಾಣೆಯಲ್ಲಿ (2022) ಪ್ರಕರಣ ದಾಖಲಾಗಿತ್ತು. ಇದರಲ್ಲಿ ಸುನಿಲ್ ವಲ್ಲ್ಯಾಪುರ ಅವರ ಪುತ್ರ ವಿನಯ್ ವಲ್ಲ್ಯಾಪುರ ಅವರ ಹೆಸರೂ ಕೇಳಿಬಂದಿತ್ತು. ನಕಲಿ ಫಲಾನುಭವಿಗಳನ್ನು ಸೃಷ್ಟಿಸಿ ನಿಗಮದ ಹಣವನ್ನು ವಿನಯ್ ಅವರು ತಮ್ಮ ಒಡೆತನದ ಸೋಮನಾಥೇಶ್ವರ ಎಂಟರ್‌ಪ್ರೈಸಸ್‌ಗೆ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂಬ ಆರೋಪವಿದೆ.



ಸಿಐಡಿ ತನಿಖಾ ಅಧಿಕಾರಿ ಅಸ್ಲಾಂ ಪಾಷಾ ಹಾಗೂ ನಾಲ್ವರು, ಕೋರ್ಟ್‌ನ ಸರ್ಚ್ ವಾರೆಂಟ್‌ನೊಂದಿಗೆ ಸಂತೋಷ ಕಾಲೊನಿಯಲ್ಲಿನ ವಲ್ಲ್ಯಾಪುರ ಅವರ ಮನೆ ಪ್ರವೇಶಿಸಿದರು. ಮನೆಯ ಇಂಚಿಂಚು ಜಾಲಾಡಿದರು. ದಾಖಲೆ ಪತ್ರಗಳು, ಕಂಪ್ಯೂಟರ್‌ಗಳ ತಪಾಸಣೆಯೂ ನಡೆಸಿದರು.

ಸದನದಲ್ಲಿ ಕೇಳಿದ್ದಕ್ಕೆ ಮನೆಗೆ ಬಂದಿದ್ದಾರೆ: ‘ಕೋಟ ಶ್ರೀನಿವಾಸ ಪೂಜಾರಿ ಸಚಿವರಾಗಿದ್ದಾಗ ಭೋವಿ ಅಭಿವೃದ್ಧಿ ನಿಗಮದಲ್ಲಿನ ಅವ್ಯವಹಾರದ ಬಗ್ಗೆ ಸದನದಲ್ಲಿ ಪ್ರಶ್ನೆ ಎತ್ತಿದ್ದೇ ನಾನು. ಈಗ ನನ್ನ ಮನೆಗೆ ಬಂದು ಶೋಧ ಮಾಡುತ್ತಿದ್ದಾರೆ. ಇದರಲ್ಲಿ ನನ್ನ ಹಾಗೂ ನನ್ನ ಮಗನ ತಪ್ಪಿಲ್ಲ. ತನಿಖೆಗೆ ಎಲ್ಲ ರೀತಿಯ ಸಹಕಾರ ಕೊಡುತ್ತೇನೆ’ ಎಂದು ಸುನಿಲ್ ವಲ್ಲ್ಯಾಪುರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

ಸಿ.ಎಂ ರಾಜೀನಾಮೆಗೆ ಆಗ್ರಹ

ಬೆಂಗಳೂರು: ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ಶೋಧ ಕಾರ್ಯಾಚರಣೆ ಮುಂದುವರಿಸಿರುವ ಬೆನ್ನಲ್ಲೇ, ಬಿಜೆಪಿ ನಾಯಕರು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಬಂಧನಕ್ಕೆ ಒತ್ತಾಯಿಸಿದ್ದಾರೆ.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಭಂಡತನ, ಹುಡುಗಾಟಿಕೆ ಬಿಟ್ಟು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ದೆಹಲಿಯ ಅರವಿಂದ ಕ್ರೇಜಿವಾಲ್ ಅವರಿಗಾದ ಪರಿಸ್ಥಿತಿ ಅನುಭವಿಸಬೇಕಾಗುತ್ತದೆ ಎಂದರು.

‘ಬೈರತಿ ಸುರೇಶ್ ಬಂಧನಕ್ಕೆ ಆಗ್ರಹ: ಮುಖ್ಯಮಂತ್ರಿ ಪರಮಾಪ್ತ ಮರಿಗೌಡರ ರಾಜೀನಾಮೆ ಪಡೆದು ಅವರನ್ನು ಆರೋಪಿ ಮಾಡಲು ಹೊರಟಿದ್ದಾರೆ. ತಕ್ಷಣ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು. ಸಚಿವ ಬೈರತಿ ಸುರೇಶ್ ಅವರನ್ನು ಬಂಧಿಸಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಗ್ರಹಿಸಿದರು.

> **ಮುಡಾ ದಾಖಲೆಗಳನ್ನು ಕಾರು ಮತ್ತು ಹೆಲಿಕಾಪ್ಟರ್‌ನಲ್ಲಿ ತಂದ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ನಿಜವಾದ ಕಳ್ಳ**
> **ಛಲವಾದಿ ನಾರಾಯಣಸ್ವಾಮಿ**
> ವಿಧಾನಪರಿಷತ್ ವಿರೋಧ ಪಕ್ಷದ ನಾಯಕ

ಬೈರತಿ ಸುರೇಶ್ 1997ರ ನಂತರದ ಎಲ್ಲ ಕಡತಗಳನ್ನು ತಂದಿದ್ದಾರೆ. ಅವುಗಳನ್ನು ಸುಟ್ಟು ಹಾಕಿರುವ ಸಾಧ್ಯತೆ ಇದೆ ಎಂದು ದೂರಿದರು.



ವಾಹನ ದಟ್ಟಣೆ... ಮೈಸೂರಿನಲ್ಲಿ ದಸರಾ ಉತ್ಸವ ಮುಗಿದ ಬಳಿಕವೂ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿಲ್ಲ. ವಿದ್ಯುತ್ ದೀಪಾಲಂಕಾರ ವೀಕ್ಷಿಸಲು ಜನ ಬರುತ್ತಿದ್ದು, ಶನಿವಾರ ರಾತ್ರಿ ದೇವರಾಜ ಅರಸು ರಸ್ತೆಯಲ್ಲಿ ವಾಹನಗಳ ದಟ್ಟಣೆ ಕಂಡುಬಂತು ಪ್ರಜಾವಾಣಿ ಚಿತ್ರ: ಹಂಪಾ ನಾಗರಾಜ್

₹2 ಕೋಟಿ ಸುಲಿಗೆ ಪ್ರಕರಣ: ಪುಣೆಯಲ್ಲಿ ಅಜಯ್ ಜೋಶಿ ವಶಕ್ಕೆ ಪಡೆದು ವಿಚಾರಣೆ?

ಮಹಾರಾಷ್ಟ್ರದಲ್ಲಿ ಗೋಪಾಲ ಜೋಶಿ ಬಂಧನ

ಪ್ರಜಾವಾಣಿ ವಾರ್ತೆ



ಗೋಪಾಲ ಜೋಶಿ

ಬೆಂಗಳೂರು: ಲೋಕಸಭೆ ಚುನಾವಣೆಗೆ ಬಿಜೆಪಿ ಟಿಕೆಟ್ ಕೊಡಿಸುವ ಆಮಿಷವೊಡ್ಡಿ ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ದೇವಾನಂದ್ ಫೂಲ್ ಸಿಂಗ್ ಚವ್ಹಾಣ್ ಅವರಿಂದ ₹2 ಕೋಟಿ ಸುಲಿಗೆ ಮಾಡಿದ್ದ ಆರೋಪದಡಿ ದಾಖಲಾಗಿದ್ದ ಪ್ರಕರಣದಲ್ಲಿ ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರ ಅಣ್ಣ ಗೋಪಾಲ ಜೋಶಿ ಅವರನ್ನು ಮಹಾರಾಷ್ಟ್ರದಲ್ಲಿ ಶನಿವಾರ ಬಂಧಿಸಲಾಗಿದೆ.

‘ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ತಲೆಮರೆಸಿಕೊಂಡಿದ್ದ ಖಚಿತ ಮಾಹಿತಿ ಬಂದಿತ್ತು. ಲಾಡ್ಜ್‌ವೊಂದರಲ್ಲಿ ಗೋಪಾಲ ಜೋಶಿ ವಾಸ್ತವ್ಯ ಮಾಡಿದ್ದರು. ಅಲ್ಲಿಗೆ ತೆರಳಿದ್ದ ಬಸವೇಶ್ವರ ನಗರ ಠಾಣೆಯ ವಿಶೇಷ ಪೊಲೀಸ್ ತಂಡವು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದೆ’ ಎಂದು ಮೂಲಗಳು ಖಚಿತಪಡಿಸಿವೆ.

‘ಗೋಪಾಲ ಜೋಶಿ ಅವರ ಪುತ್ರ ಅಜಯ್ ಜೋಶಿ ಅವರ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ. ಮತ್ತೊಂದು ಪೊಲೀಸ್ ತಂಡವು ಅವರನ್ನು ಪುಣೆಯಲ್ಲಿ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದೆ. ಪ್ರಕರಣದಲ್ಲಿ ಅವರ ಪಾತ್ರ ಕಂಡುಬಂದರೆ ಬಂಧಿಸಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿ ಗೋಪಾಲ ಜೋಶಿ ಅವರನ್ನು ಬೆಂಗಳೂರಿಗೆ ಕರೆ ತರಲಾಗುತ್ತಿದೆ. ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ ಪೊಲೀಸ್ ವಶಕ್ಕೆ ಕೇಳಲಾಗುವುದು’ ಎಂದು ಮೂಲಗಳು ತಿಳಿಸಿವೆ.

‘ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಆಮಿಷವೊಡ್ಡಿ ಒಮ್ಮೆ ₹25 ಲಕ್ಷ, ಮತ್ತೊಮ್ಮೆ ₹1.75 ಕೋಟಿಯನ್ನು ಗೋಪಾಲ ಜೋಶಿ ಮತ್ತು ಸಹಚರರು ಪಡೆದಿದ್ದರು ಎಂದು ದೇವಾನಂದ್ ಚವ್ಹಾಣ್ ಅವರ ಪತ್ನಿ ಸುನಿತಾ ಚವ್ಹಾಣ್ ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಪ್ರಕರಣದಲ್ಲಿ ಇದುವರೆಗೂ ಮೂವರನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇಬ್ಬರು ಜೈಲಿಗೆ: ‘ಅಥಣಿಯ ಎಂಜಿನಿಯರ್ ಸೋಮಶೇಖರ್ ಹಾಗೂ ಬೆಂಗಳೂರಿನ ಬಸವೇಶ್ವರ ನಗರ ನಿವಾಸಿ ವಿಜಯಕುಮಾರಿ ಅವರನ್ನು ಶನಿವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಇಬ್ಬರನ್ನೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ ಬಾಡಿ ವಾರಂಟ್ ಮೇಲೆ ಮತ್ತೆ ವಶಕ್ಕೆ ನೀಡುವಂತೆ ನ್ಯಾಯಾಲಯಕ್ಕೆ ಸೋಮವಾರ ಮನವಿ ಮಾಡಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮನೆಯಲ್ಲಿ ಶೋಧ: ದಾಖಲೆ ಜಪ್ತಿ

ಹುಬ್ಬಳ್ಳಿ: ಕೊಲ್ಹಾಪುರದಿಂದ ಗೋಪಾಲ ಜೋಶಿ ಅವರನ್ನು ಶನಿವಾರ ಮಧ್ಯಾಹ್ನ ಹುಬ್ಬಳ್ಳಿಗೆ ಕರೆತಂದ ಪೊಲೀಸ್ ತಂಡ ಪ್ರಕರಣದ ಸಂಬಂಧ ಮಾಹಿತಿ ಕಲೆಹಾಕಿತು.

ಬೆಂಗಳೂರು ಪಶ್ಚಿಮ ವಿಭಾಗದ ಎಸಿಪಿ ಚಂದನ ಕುಮಾರ್ ನೇತೃತ್ವದ ಪೊಲೀಸ್ ತಂಡವು ಸ್ಥಳೀಯ ಪೊಲೀಸರ ನೆರವಿನಿಂದ ಕೇಶ್ವಾಪುರದ ಇಂದಿರಾ ಕಾಲೊನಿಯಲ್ಲಿರುವ ಗೋಪಾಲ ಜೋಶಿ ಅವರ ಮನೆಗೆ ತೆರಳಿ, ಎರಡು ಗಂಟೆ ಪರಿಶೀಲಿಸಿತು.

ಹಣಕಾಸಿನ ವ್ಯವಹಾರ ಮತ್ತು ಚೆಕ್ ವಹಿವಾಟಿನ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಗಿದೆ. ದಾಖಲೆ ಹಾಗೂ ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಂತರ, ಗೋಪಾಲ ಜೋಶಿ ಅವರನ್ನು ಕೇಶ್ವಾಪುರ ಪೊಲೀಸ್ ಠಾಣೆಗೆ ಕರೆದೊಯ್ದು, ವಿಚಾರಣೆ ನಡೆಸಿದರು. ದೂರುದಾರರಾದ ಸುನಿತಾ ಚವ್ಹಾಣ್ ಅವರ ಸಮ್ಮುಖದಲ್ಲಿ ಮಾಹಿತಿ ಪಡೆದಿರುವುದಾಗಿ ತಿಳಿದು ಬಂದಿದೆ.

ಜೋಶಿ ಹೆಸರು ದುರ್ಬಳಕೆ: ಚವ್ಹಾಣ್



ಹುಬ್ಬಳ್ಳಿ: ‘ಲೋಕಸಭಾ ಟಿಕೆಟ್ ನೀಡುವುದಾಗಿ ವಂಚಿಸಿದ ಪ್ರಕರಣದಲ್ಲಿ ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಅಮಿತ್ ಶಾ ಅವರ ಹೆಸರನ್ನು ಅನಗತ್ಯ ಎಳೆದು ತರಲಾಗುತ್ತಿದೆ. ಈ ಪ್ರಕರಣದಲ್ಲಿ ಅವರ ಪಾತ್ರ ಇಲ್ಲ. ಪ್ರಲ್ಹಾದ ಜೋಶಿ ಅವರ ಹೆಸರನ್ನು ಗೋಪಾಲ ಜೋಶಿ ದುರ್ಬಳಕೆ ಮಾಡಿಕೊಂಡಿದ್ದಾರೆ’ ಎಂದು ಪ್ರಕರಣದ ದೂರುದಾರರಾದ ಸುನಿತಾ ಚವ್ಹಾಣ್ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪಕ್ಷದಿಂದ ನಮಗೆ ಟಿಕೆಟ್ ಸಿಗುವ ಸಾಧ್ಯತೆ ಇತ್ತು. ಶೇಖರನಾಯಕ್ ಎಂಬ ವ್ಯಕ್ತಿ ನನಗೆ ಕರೆ ಮಾಡಿ, ಉತ್ತರ ಕರ್ನಾಟಕ ಭಾಗದಲ್ಲಿ ಬಿಜೆಪಿ ನಿಮ್ಮನ್ನು ಕೈಬಿಡುತ್ತಿಲ್ಲ ಎಂದಿದ್ದರು. ಆದರೆ, ವಿಜಯಪುರದಿಂದ ಬೇರೆಯವರಿಗೆ ಟಿಕೆಟ್ ಸಿಕ್ಕಿದೆ ಎಂದು ಗೊತ್ತಾದಾಗ ಸುಮ್ಮನಿದ್ದೆ. ಆಗ ಗೋಪಾಲ ಜೋಶಿ ಅವರು ಕರೆ ಮಾಡಿ, ವಿಜಯಪುರ ಸಂಸದರಿಗೆ ಅನಾರೋಗ್ಯ ಕಾಡುತ್ತಿದ್ದು, ಟಿಕೆಟ್ ಕೊಡಿಸುವುದಾಗಿ ಭರವಸೆ ನೀಡಿದ್ದರು. ಆಗ ₹25 ಲಕ್ಷ ಕೊಟ್ಟಿದ್ದೆ. ಅವರು ₹2 ಕೋಟಿಯಿಂದ ₹3 ಕೋಟಿವರೆಗೂ ಬೇಡಿಕೆ ಇಟ್ಟಿದ್ದರು’ ಎಂದು ಹೇಳಿದರು.

‘ಯಾರ ವಿರುದ್ಧ ನಾನು ದೂರು ಕೊಟ್ಟಿದ್ದೇನೋ, ಅವರ ಬಗ್ಗೆ ಮಾತ್ರ ಮಾಧ್ಯಮದವರು ವಿಷಯ ಪ್ರಸ್ತಾಪಿಸಬೇಕು. ಪ್ರಕರಣದಲ್ಲಿ ಇಲ್ಲದವರ ಹೆಸರು ಕೇಳಿ ಬರುತ್ತಿರುವುದು ಸರಿಯಲ್ಲ. ಪ್ರಲ್ಹಾದ ಜೋಶಿ ಅವರು ಒಳ್ಳೆಯವರು. ಪ್ರಕರಣದಲ್ಲಿ ಅವರ ಪಾತ್ರವೇನೂ ಇಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

‘₹200 ಕೋಟಿ ಯೋಜನೆ ಸಿಕ್ಕಿದ್ದೇಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಸೋದರ ಗೋಪಾಲ ಜೋಶಿ ಮಧ್ಯಮವರ್ಗದ ಸಾಮಾನ್ಯ ವ್ಯಕ್ತಿ. ಅಂತಹವರಿಗೆ ₹200 ಕೋಟಿ ಮೊತ್ತದ ಯೋಜನೆಗಳು ದೊರೆತದ್ದು ಹೇಗೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಟಿಕೆಟ್ ಹೆಸರಿನ ವಂಚನೆ ಪ್ರಕರಣದಲ್ಲಿ ತಮಗೂ ತಮ್ಮ ಸೋದರ ಗೋಪಾಲ ಜೋಶಿಗೂ ಸಂಬಂಧವಿಲ್ಲ ಎಂದು ಪ್ರಲ್ಹಾದ ಜೋಶಿ ನೀಡಿರುವ ಹೇಳಿಕೆ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, ‘ಗೋಪಾಲ ಜೋಶಿ ಅವರು ₹200 ಕೋಟಿ ಮೊತ್ತದ ಬಿಲ್‌ಗಳಿಗೆ ಸಂಬಂಧಿಸಿದ ದಾಖಲೆಗಳನ್ನು ತೋರಿಸಿದ್ದಾರೆ ಎಂಬುದು ಎಫ್‌ಐಆರ್‌ನಲ್ಲಿ ದಾಖಲಾಗಿದೆ. ಪ್ರಲ್ಹಾದ ಜೋಶಿ ಮತ್ತು ಅಮಿತ್ ಶಾ ಹೆಸರಿನಲ್ಲಿ ವಂಚನೆ ನಡೆದಿದೆ. ಇದಕ್ಕೆ ಅವರು ಉತ್ತರದಾಯಿಯಲ್ಲವೇ?’ ಎಂದರು.

‘ಅವರಿಬ್ಬರ ಮಧ್ಯೆ ಸಂಬಂಧ ಇಲ್ಲ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ಅದಕ್ಕೂ ಮುನ್ನ ₹200 ಕೋಟಿ ಮೊತ್ತದ ಯೋಜನೆ ಯಾವುದು? ಯೋಜನೆ ಕೊಟ್ಟಿದ್ದು ಯಾರು? ಅಷ್ಟು ದೊಡ್ಡ ಮೊತ್ತದ ಯೋಜನೆಯ ಗುತ್ತಿಗೆ ಅವರಿಗೆ ಹೇಗೆ ದೊರೆಯಿತು ಎಂಬುದನ್ನು ವಿವರಿಸಬೇಕು’ ಎಂದು ಪ್ರಿಯಾಂಕ್ ಖರ್ಗೆ ಅವರು ಒತ್ತಾಯಿಸಿದರು.

‘ವಾರದಲ್ಲಿ ನನಗೂ ನೋಟಿಸ್’



‘ಇನ್ನೊಂದು ವಾರದಲ್ಲಿ ಜಾರಿ ನಿರ್ದೇಶನಾಲಯವು ನನಗೂ ನೋಟಿಸ್ ನೀಡಲಿದೆ’ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

‘ಮೊದಲು, ಅಕ್ರಮ ನಡೆದಿದೆ ಎಂದು ಸುದ್ದಿ ಹಬ್ಬಿಸುತ್ತಾರೆ. ಆನಂತರ ಲೋಕಾಯುಕ್ತಕ್ಕೆ ಖಾಸಗಿ ದೂರು ಕೊಡಿಸುತ್ತಾರೆ. ಕಡೆಗೆ ಇ.ಡಿ ಅಥವಾ ಆದಾಯ ತೆರಿಗೆ ಇಲಾಖೆಯನ್ನು ಕಳುಹಿಸುತ್ತಾರೆ. ಸಿದ್ದರಾಮಯ್ಯ ವಿರುದ್ಧ ಹೀಗೇ ಮಾಡಿದರು. ದೇಶದೆಲ್ಲೆಡೆ ವಿಪಕ್ಷ ನಾಯಕರ ವಿರುದ್ಧ ಹೀಗೇ ಮಾಡಿದ್ದಾರೆ. ನನಗೂ, ಡಿ.ಕೆ. ಶಿವಕುಮಾರ್ ಅವರಿಗೂ ಇ.ಡಿ ನೋಟಿಸ್ ನೀಡಿದರೆ ಆಶ್ಚರ್ಯವಿಲ್ಲ’ ಎಂದರು.

‘ಗಂಜೀಫಾ ಭಟ್ಟ’ರಿಗೆ ಕಾಳಿದಾಸ ಸಮ್ಮಾನ್

ಒಂದನೇ ಪುಟದಿಂದ...

ಮೈಸೂರಿನ ಲಕ್ಷಣ ಶಾಸ್ತ್ರದ ಅನ್ವಯ ಚಿತ್ರ ರಚಿಸುವಲ್ಲಿ ಪರಿಣತರಾಗಿದ್ದಾರೆ. ಅಳಿವಿನಂಚಿನಲ್ಲಿದ್ದ ಗಂಜೀಫಾ ಚಿತ್ರಕಲೆ ಹಾಗೂ ಕರಾವಳಿ ಭಾಗದ ಕಾವಿ ಕಲೆಯನ್ನು ಪುನರುಜ್ಜೀವನಗೊಳಿಸುವ ಮೂಲಕ ಹೆಚ್ಚು ಪ್ರಸಿದ್ಧಿ ಪಡೆದಿದ್ದಾರೆ. ಅವರು ‘ಕಾವಿ ಚಿತ್ರ ಕಲೆ ರಚನಾ ವಿಧಾನ’ ಕೃತಿಯನ್ನೂ ರಚಿಸಿದ್ದಾರೆ.

ಗಂಜೀಫಾ ನಂಟು: ಶಾಸ್ತ್ರೀಯ ಕಲಾಕೃತಿ ರಚನೆಯಲ್ಲಿ ತೊಡಗಿದ್ದ ರಘುಪತಿ ಭಟ್ಟರು, ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಪ್ರಸಿದ್ಧವಾಗಿದ್ದ ಚಿಕಣಿ ಕಲೆಗಳ ಬಗ್ಗೆ ಆಸಕ್ತಿ ರೂಢಿಸಿಕೊಂಡ ಬಳಿಕ, ಗಂಜೀಫಾ ಚಿತ್ರಕಲೆಯಲ್ಲಿ ತೊಡಗುತ್ತಾರೆ. ಆ ಕಲೆಯ ಉಳಿವಿಗೆ ಪ್ರಯತ್ನಿಸಿದ್ದರಿಂದಲೇ ಗಂಜೀಫಾ ಎಂಬುದು ಅವರ ಹೆಸರಿನೊಂದಿಗೆ ಜತೆಯಾಗಿದೆ.

ಮೈಸೂರಿನ ಜಗತ್‌ಪ್ರಸಿದ್ಧ ಅಂಬಾವಿಲಾಸ ಅರಮನೆಯ ದರ್ಬಾರ್ ಸಭಾಂಗಣ, ಖಾಸಗಿ ದರ್ಬಾರ್ ಹಾಲ್ ಹಾಗೂ ಕಲ್ಯಾಣ ಮಂಟಪದ ಗೋಡೆಯ ಚಿತ್ರಕಲೆಗಳು ಮತ್ತು ಚಿನ್ನದ ಎಲೆಗಳ ಬಣ್ಣದ ಕೆಲಸಗಳ ಮರುನಿರ್ಮಾಣದಲ್ಲೂ ಅವರು ತೊಡಗಿಸಿಕೊಂಡಿದ್ದರು.

ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮ ಅವರಿಂದ 1993ರಲ್ಲಿ ರಾಷ್ಟ್ರ ಪ್ರಶಸ್ತಿಯನ್ನೂ ಪಡೆದಿದ್ದಾರೆ. ‘ಪ್ರಶಸ್ತಿ ದೊರೆತಿರುವುದು ಸಂತಸ ತಂದಿದೆ. ಯಾವುದೇ ಸೂಚನೆ ಇಲ್ಲದೆ ಈ ರೀತಿ ನಡೆಯುವ ಆಯ್ಕೆ ಪ್ರಕ್ರಿಯೆ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತದೆ’ ಎಂದು ಸಂತಸ ವ್ಯಕ್ತಪಡಿಸಿದರು.

ಶಿಗ್ಗಾವಿಗೆ ಭರತ್, ಸಂಡೂರಿಗೆ ಬಂಗಾರು

ಒಂದನೇ ಪುಟದಿಂದ...

ಪಕ್ಷದ ವರಿಷ್ಠರನ್ನು ಭೇಟಿ ಮಾಡಲು ದೆಹಲಿಗೆ ತೆರಳಿದ್ದ ಬಸವರಾಜ ಬೊಮ್ಮಾಯಿ, ಸುದ್ದಿಗಾರರ ಜತೆ ಮಧ್ಯಾಹ್ನ ಮಾತನಾಡಿದ್ದರು. ‘ಉದ್ಯಮಿಯೂ ಆದ ತಮ್ಮ ಪುತ್ರ ಭರತ್‌ಗೆ ವೈಯಕ್ತಿಕ ಕಾರಣಗಳಿಂದ ಶಿಗ್ಗಾವಿ ಕ್ಷೇತ್ರದ ಟಿಕೆಟ್ ನೀಡುವುದು ಬೇಡ ಎಂದು ವಿನಂತಿಸಿದ್ದೇನೆ. ಬದಲಿ ಆಯ್ಕೆ ಕುರಿತು ಮನವಿ ಮಾಡಿದ್ದೇನೆ’ ಎಂದಿದ್ದರು. ಅವರು ಹೇಳಿಕೆ ನೀಡಿದ ಕೆಲ ಗಂಟೆಗಳಲ್ಲೇ ಅವರ ಪುತ್ರನ ಹೆಸರನ್ನು ಬಿಜೆಪಿ ಪ್ರಕಟಿಸಿದೆ.

ಸಂಡೂರು ಕ್ಷೇತ್ರದ ಅಭ್ಯರ್ಥಿ ಆಯ್ಕೆಗೆ ಜನಾರ್ದನ ರೆಡ್ಡಿ ಹಾಗೂ ಶ್ರೀರಾಮುಲು ಸೇರಿದಂತೆ ಪಕ್ಷದ ಸ್ಥಳೀಯ ನಾಯಕರ ಅಭಿಪ್ರಾಯ ಪಡೆದು ಅಭ್ಯರ್ಥಿ ಆಯ್ಕೆ ಅಂತಿಮಗೊಳಿಸುವ ಭರವಸೆಯನ್ನು ರಾಜ್ಯ ನಾಯಕರು ನೀಡಿದ್ದರು.

2023ರ ಚುನಾವಣೆಯಲ್ಲಿ ಸ್ಪರ್ಧಿಸಿ ಕಾಂಗ್ರೆಸ್‌ನ ತುಕಾರಾಂ ವಿರುದ್ಧ ಸೋಲುಕಂಡಿದ್ದ ಶಿಲ್ಪಾ ರಾಘವೇಂದ್ರ, ಅದೇ ಚುನಾವಣೆಯಲ್ಲಿ ಜನಾರ್ದನ ರೆಡ್ಡಿ ಸ್ಥಾಪಿಸಿದ್ದ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದಿಂದ ಸ್ಪರ್ಧಿಸಿದ್ದ ದಿವಾಕರ್, 2018ರ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ಬಂಗಾರು ಹನುಮಂತು, ಮಾಜಿ ಸಂಸದ ದೇವೇಂದ್ರಪ್ಪ ಟಿಕೆಟ್ ಆಕಾಂಕ್ಷಿಗಳಾಗಿದ್ದರು. ಹನುಮಂತು ಅವರಿಗೆ ಟಿಕೆಟ್ ಸಿಕ್ಕಿದೆ. ಹನುಮಂತು 2023ರ ಚುನಾವಣೆಯಲ್ಲಿ ಕೂಡ್ಲಿಗಿ ಕ್ಷೇತ್ರದ ಟಿಕೆಟ್ ಸಿಗಲಿಲ್ಲ ಎನ್ನುವ ಕಾರಣಕ್ಕೆ ತಮ್ಮ ಗುರುವಿನ ವಿರುದ್ಧ ಮುನಿಸಿಕೊಂಡಿದ್ದರು. ನಂತರ ಜನಾರ್ದನ ರೆಡ್ಡಿ ಜತೆ ಗುರುತಿಸಿಕೊಂಡಿದ್ದರು. ಅವರ ಆಯ್ಕೆಯ ಹಿಂದೆ ರೆಡ್ಡಿ ಪ್ರಭಾವ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಸಂಡೂರಿಗೆ ಅನ್ನಪೂರ್ಣ: 2 ಕ್ಷೇತ್ರಕ್ಕೆ ‘ಕೈ’ ಬಾಕಿ

ಒಂದನೇ ಪುಟದಿಂದ...

ಸಂಡೂರು ಟಿಕೆಟ್ ಕುರಿತು ಶನಿವಾರ ಪ್ರತಿಕ್ರಿಯಿಸಿರುವ ಸಚಿವ ಸಂತೋಷ್ ಲಾಡ್, ‘ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ. ಎಲ್ಲವೂ ಬಗೆಹರಿದಿದೆ. ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ್ದೇವೆ. ಪಕ್ಷ ಯಾರಿಗೇ ಟಿಕೆಟ್ ಕೊಟ್ಟರೂ ಒಟ್ಟಿಗೆ ಕೆಲಸ ಮಾಡಬೇಕಿದೆ’ ಎಂದರು.

ಚನ್ನಪಟ್ಟಣ ಕ್ಷೇತ್ರದಿಂದ ಬಿಜೆಪಿ– ಜೆಡಿಎಸ್ ಅಭ್ಯರ್ಥಿಯಾಗಿ ಸಿ.ಪಿ. ಯೋಗೇಶ್ವರ್ ಕಣಕ್ಕಿಳಿದರೆ ಮಾಜಿ ಶಾಸಕ ಎಂ.ಸಿ. ಅಶ್ವಥ್ ಅಥವಾ ರಘುನಂದನ್ ರಾಮಣ್ಣ ಅವರಿಗೆ ಟಿಕೆಟ್ ನೀಡುವ ಬಗ್ಗೆ ಕಾಂಗ್ರೆಸ್‌ನಲ್ಲಿ ಚರ್ಚೆ ನಡೆದಿದೆ. ಸಿ.ಪಿ. ಯೋಗೇಶ್ವರ್ ಅವರು ‘ಮೈತ್ರಿ’ ಅಭ್ಯರ್ಥಿ ಆಗದಿದ್ದರೆ ಡಿ.ಕೆ. ಸುರೇಶ್ ಅವರನ್ನು ಹುರಿಯಾಳಾಗಿಸಲು ಚಿಂತನೆ ನಡೆದಿದೆ.

ಚನ್ನಪಟ್ಟಣ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಸಂಬಂಧ ಸ್ಥಳೀಯ ನಾಯಕರು ಮತ್ತು ಕಾರ್ಯಕರ್ತರಿಂದ ಶನಿವಾರ ಅಭಿಪ್ರಾಯ ಸಂಗ್ರಹಿಸಿದ ಬಳಿಕ ಮಾತನಾಡಿದ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಪಕ್ಷದಿಂದ ಯಾರೇ ನಿಂತರೂ ನಾನೇ ಅಭ್ಯರ್ಥಿ ಎಂದು ಪಕ್ಷದ ನಾಯಕರು ಮತ್ತು ಕಾರ್ಯಕರ್ತರಿಗೆ ಹೇಳಿದ್ದೇನೆ’ ಎಂದರು.

ಶಿಗ್ಗಾವಿ ಟಿಕೆಟ್ ವಿಚಾರದಲ್ಲಿ ಡಿ.ಕೆ. ಶಿವಕುಮಾರ್ ಅವರು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಮತ್ತು ಜಿಲ್ಲೆಯ ಶಾಸಕರು, ವಿಧಾನ ಪರಿಷತ್ ಸದಸ್ಯರು, ಟಿಕೆಟ್ ಆಕಾಂಕ್ಷಿಗಳ ಜೊತೆ ಚರ್ಚೆ ನಡೆಸಿದ್ದಾರೆ. ಮಾಜಿ ಶಾಸಕ ಅಜ್ಜಂಪೀರ್ ಖಾದ್ರಿ, ಯಾಸೀರ್ ಖಾನ್ ಪಠಾಣ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ಸೋಮಣ್ಣ ಬೇವಿನಮರದ, ಮಾಜಿ ಸಚಿವ ಆರ್. ಶಂಕರ್ ಟಿಕೆಟ್‌ಗಾಗಿ ಪ್ರಯತ್ನ ಮುಂದುವರಿಸಿದ್ದಾರೆ.

ಚನ್ನಪಟ್ಟಣ: ಎಚ್‌ಡಿಕೆ ನಿರ್ಧಾರಕ್ಕೆ

ಒಂದನೇ ಪುಟದಿಂದ...

‘ಯೋಗೇಶ್ವರ್ ಅವರು ಟಿಕೆಟ್ ಕೇಳಿದ್ದರಲ್ಲಿ ತಪ್ಪಿಲ್ಲ. ವರಿಷ್ಠರ ಜತೆ ಮಾತನಾಡುವಾಗ ಯೋಗೇಶ್ವರ್ ಅವರ ಹೆಸರನ್ನೂ ಪರಿಗಣಿಸಲಿ. ಯಾರು ಅಭ್ಯರ್ಥಿಯಾದರೂ ಅವರ ಗೆಲುವಿಗೆ ಎಲ್ಲರೂ ಶ್ರಮಿಸುತ್ತೇವೆ. ಭಿನ್ನಮತಕ್ಕೆ ಅವಕಾಶ ನೀಡುವುದಿಲ್ಲ’ ಎಂದು ಅವರಿಬ್ಬರು ಭರವಸೆ ಕೊಟ್ಟರು ಎನ್ನಲಾಗಿದೆ.

ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸುರೇಶ ಬಾಬು, ‘ಕುಮಾರಸ್ವಾಮಿ ಅವರೇ ನಿರ್ಧಾರ ಮಾಡಲಿ ಎಂದು ಬಿಜೆಪಿ ವರಿಷ್ಠರು ಹೇಳಿದ್ದಾರೆ. ಅದರಲ್ಲಿ ಬದಲಾವಣೆ ಇಲ್ಲ. ಜೆಡಿಎಸ್‌ನಿಂದ ಎನ್‌ಡಿಎ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುತ್ತೇವೆ. ಯಾರನ್ನು ಅಭ್ಯರ್ಥಿ ಮಾಡಬೇಕು ಎಂಬುದನ್ನು ಭಾನುವಾರ ಅಂತಿಮಗೊಳಿಸಲಾಗುತ್ತದೆ’ ಎಂದರು.

ಪಂಚಾಯತ್ ರಾಜ್ ಅಧಿಕಾರಿಗಳ ಸಮ್ಮೇಳನದಲ್ಲಿ ಪ್ರಿಯಾಂಕ್ ಅಸಮಾಧಾನ

‘ಪಂಚಾಯಿತಿ: ಪರಿಣಾಮಕಾರಿ ಕೆಲಸ ಆಗುತ್ತಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಂಚಾಯತ್ ರಾಜ್ ಇಲಾಖೆಯಲ್ಲಿ ಎಲ್ಲ ಸವಲತ್ತು ಇದೆ, ಸಿಬ್ಬಂದಿಯೂ ಇದ್ದಾರೆ. ಆದರೆ ಸರಿಯಾದ ರೀತಿಯಲ್ಲಿ ಮತ್ತು ಸರಿಯಾದ ಸಮಯದಲ್ಲಿ ಕೆಲಸಗಳು ಆಗುತ್ತಿಲ್ಲ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ಆಯೋಜಿಸಲಾಗಿದ್ದ ‘ಪಂಚಾಯತ್ ರಾಜ್ ಅಧಿಕಾರಿಗಳ ಸಮ್ಮೇಳನ’ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಅಧಿಕಾರಿಗಳು ಹೇಗೆ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಒಂದೂವರೆ ವರ್ಷದ ಅವಧಿಯಲ್ಲಿ ಗಮನಿಸಲಾಗಿದೆ. ಪ್ರತಿ ತಿಂಗಳೂ ಪರಿಶೀಲನಾ ಸಭೆ ನಡೆಸಿ, ಸಲಹೆ ನೀಡಲಾಗುತ್ತಿದೆ. ಆದರೂ ಕಾರ್ಯವೈಖರಿಯಲ್ಲಿ ಸುಧಾರಣೆಯಾಗಿಲ್ಲ. ಹೀಗಾಗಿಯೇ ಈ ಸಮ್ಮೇಳನ ಆಯೋಜಿಸಲಾಗಿದೆ’ ಎಂದರು.



‘ಪಂಚಾಯತ್ ರಾಜ್ ಅಧಿಕಾರಿಗಳ ಸಮ್ಮೇಳನ’ದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

‘ನಾವು ನಮ್ಮ ಕರ್ತವ್ಯದ ಬಗ್ಗೆ ಆಸಕ್ತಿ ವಹಿಸದೇ ಇದ್ದರೆ ಜನರ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ. ಪ್ರತಿದಿನ ಜನರೊಂದಿಗೆ ವ್ಯವಹರಿಸುವ ಇಲಾಖೆ ನಮ್ಮದು. ಆದರೆ ನಮ್ಮ ಅಧಿಕಾರಿಗಳಿಗೆ ಕೇಳಿಸಿಕೊಳ್ಳುವ ಪ್ರವೃತ್ತಿಯೇ ಇಲ್ಲ ಎಂಬುದನ್ನು ಹಲವು ಬಾರಿ ಗಮನಿಸಿದ್ದೇನೆ. ಅಧಿಕಾರಿಗಳು ಆಳುವ ಮನಸ್ಥಿತಿಯಿಂದ ಹೊರಗೆ ಬರಬೇಕು ಮತ್ತು ಆಲಿಸುವ ಪ್ರವೃತ್ತಿಯನ್ನು ರೂಢಿಸಿಕೊಳ್ಳಬೇಕು’ ಎಂದರು.

‘ಇದು ಯಾರೊ ಒಬ್ಬ ಸಚಿವ, ಕಾರ್ಯದರ್ಶಿ, ಹೆಚ್ಚುವರಿ ಕಾರ್ಯದರ್ಶಿಗೆ ಅನ್ವಯವಾಗುದಿಲ್ಲ. ಇಲಾಖೆಯ ಪ್ರತಿ ಸಿಬ್ಬಂದಿಯೂ ಇದನ್ನು ರೂಢಿಸಿಕೊಳ್ಳಬೇಕು. ಪ್ರತಿಯೊಬ್ಬರೂ ಪರಿಣಾಮಕಾರಿಯಾಗಿ ಕೆಲಸ ಮಾಡಿದರೆ ಮಾತ್ರ ಜನರಿಗೆ ಉತ್ತಮ ಸೇವೆ ನೀಡಲು ಸಾಧ್ಯವಾಗುತ್ತದೆ. ಅದರಿಂದ ಇಲಾಖೆಗೂ ಒಳ್ಳೆಯದಾಗುತ್ತದೆ. ಸರ್ಕಾರದ ಯೋಜನೆ ಮತ್ತು ಕಲ್ಯಾಣ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರುತ್ತವೆ’ ಎಂದರು.

ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಮಾತನಾಡಿ, ‘ಪಂಚಾಯತಿಗಳ ಕೆಲಸಗಳನ್ನು ಸುಲಭ ಮತ್ತು ಸರಳವಾಗಿಸಲು ಹಲವು ತಂತ್ರಾಂಶ ಮತ್ತು ಪೋರ್ಟಲ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ. ಅವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರೆ, ಸೇವೆಯನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯವಿದೆ’ ಎಂದರು.

ಮೊಬೈಲ್ ಬಳಕೆಗೆ ತರಾಟೆ

ಸಮ್ಮೇಳನದಲ್ಲಿ ಮೊಬೈಲ್ ಬಳಸುತ್ತಿದ್ದ ಅಧಿಕಾರಿ ಗಳನ್ನು ಸಚಿವ ಪ್ರಿಯಾಂಕ್ ಖರ್ಗೆ ತರಾಟೆಗೆ ತೆಗೆದುಕೊಂಡರು. ಅಧಿಕಾರಿಗಳನ್ನು ಉದ್ದೇಶಿಸಿ ಸಚಿವ ಮಾತನಾಡುವಾಗ ಮುಂದಿನ ಸಾಲಿನಲ್ಲಿ ಕುಳಿತಿದ್ದ ಕೆಲವರು ಮೊಬೈಲ್ ನೋಡುತ್ತಿದ್ದರು. ಅದನ್ನು ಗಮನಿಸಿದ ಅವರು, ‘ಇಂಥದ್ದನ್ನು ನೋಡಿದರೆ ನನಗೆ ಬೇಸರವಾಗುತ್ತದೆ. ಕೆಆರ್‌ಐಡಿಎಲ್ ಎಂ.ಡಿ ಬಸವರಾಜ್, ಮೊಬೈಲ್ ನೋಡುವುದನ್ನು ಬಿಡಿ. ಇಲ್ಲಿ ಕೇಳಿಸಿಕೊಳ್ಳಿ’ ಎಂದರು.



ಬೆಂಗಳೂರಲ್ಲಿ ನೋಡಿ ನಿಮ್ಮೂರ! 13



ಕಾಲುದಾರಿಯ ಬೈಕ್ ಸವಾರಿ ಅನುಭವಗಳ ಹೆದ್ದಾರಿ 15






ಯಕ್ಷಗಾನ ಕಲಾರಂಗದ ಆಶ್ರಯದಲ್ಲಿ ನಡೆದ ಕಿಶೋರ ಯಕ್ಷಗಾನ

ಕಲಾರಂಗ ಕಲಾ ಕುಟುಂಬಗಳ ಆಲಯ

ಸದಭಿರುಚಿ ಕಲೆಯನ್ನು ಪ್ರೋತ್ಸಾಹಿಸುವ ಉದ್ದೇಶದೊಂದಿಗೆ ಆರಂಭವಾದ ಉಡುಪಿಯ ಯಕ್ಷಗಾನ ಕಲಾರಂಗ ಕಲೆ ಮತ್ತು ಶಿಕ್ಷಣ ಕ್ಷೇತ್ರಗಳೆರಡರಲ್ಲೂ ಕೆಲಸ ಮಾಡುತ್ತ ಬೃಹತ್ತಾಗಿ ಬೆಳೆದು ನಿಂತ ಸಂಸ್ಥೆ. ಸುವರ್ಣ ಮಹೋತ್ಸವದ ಸಂಭ್ರಮದಲ್ಲಿರುವ ಸಂಸ್ಥೆಯ ಸಮಾಜಮುಖಿ ಕೆಲಸಗಳ ಇಣುಕು ನೋಟ ಇಲ್ಲಿದೆ.

ಕೋಡಿಬೆಟ್ಟು ರಾಜಲಕ್ಷ್ಮಿ

ಕುಂದಾಪುರದ ಕಟ್ಕೆರೆ ಎಂಬ ಹಳ್ಳಿಯಲ್ಲಿ ವಾಸಿಸುತ್ತಿರುವ ಸತ್ಯವತಿಯ ಕಣ್ಣಲ್ಲಿ ಈಗ ಹೊಳಪಿದೆ. ಅವಳೀಗ ಪಿಯುಸಿ ಓದುತ್ತಿರುವ ವಿದ್ಯಾರ್ಥಿನಿ. ಕಳೆದ ವರ್ಷವಷ್ಟೇ ಎಸ್ಸೆಸ್ಸೆಲ್ಸಿಯಲ್ಲಿ ಅತ್ಯುತ್ತಮ ಅಂಕಗಳು ಬಂದಾಗ, ಮುಂದೇನು ಎಂದು ತೋಚದೆ ಆಕೆ ಕಂಗಾಲಾಗಿ ಕುಳಿತಿದ್ದಳು. ಮನೆಯಲ್ಲಿ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲವೆಂದ ಮೇಲೆ ಓದು ಮುಂದುವರೆಸುವುದಾದರೂ ಹೇಗೆ? ಅಷ್ಟರಲ್ಲಿ ಪರಿಚಿತರೊಬ್ಬರು ಉಡುಪಿಯಲ್ಲಿರುವ ಯಕ್ಷಗಾನ ಕಲಾರಂಗವು ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ನೆರವು ನೀಡುತ್ತಿದೆ ಎಂಬ ವಿಷಯ ತಿಳಿಸಿದರು. ಸತ್ಯವತಿ ಶಾಲೆಯ ಮುಖ್ಯೋಪಾಧ್ಯಾಯರ ಮೂಲಕ ಅರ್ಜಿ ಸಲ್ಲಿಸಿದಳು. ಅರ್ಜಿ ಪರಿಶೀಲಿಸಿದ ಯಕ್ಷಗಾನ ಕಲಾರಂಗದ ಸ್ವಯಂಸೇವಕರ ತಂಡವು, ಸತ್ಯವತಿಯ ಮನೆಗೆ ಭೇಟಿ ನೀಡಿದಾಗ, ಮನೆಯ ಪರಿಸ್ಥಿತಿಯೇ ವಾಸ್ತವವನ್ನು ತಿಳಿಸುವಂತಿತ್ತು. ಯಕ್ಷಗಾನ ಕಲಾರಂಗ ಸಂಸ್ಥೆಯ ಆಶ್ರಯದಲ್ಲಿಯೇ ನಡೆಯುತ್ತಿರುವ 'ವಿದ್ಯಾ ಪೋಷಕ್' ಯೋಜನೆಯಡಿ ಆಕೆಯ ಶಿಕ್ಷಣಕ್ಕೆ ನೆರವು ನೀಡಲು ನಿರ್ಧರಿಸಲಾಯಿತು.



ಕಲೆ ಮತ್ತು ಕಲಾವಿದರ ಏಳ್ಗೆ, ಮಕ್ಕಳಿಗೆ ಸೂಕ್ತ ಶಿಕ್ಷಣ ಕೊಡುವ ನಿಟ್ಟಿನಲ್ಲಿ ಯಕ್ಷಗಾನ ಕಲಾರಂಗ ನಿರಂತರವಾಗಿ ಶ್ರಮಿಸುತ್ತ ಬಂದಿದೆ. ಇದೇ ಆಶಯವನ್ನು ಹೊತ್ತ ಅನೇಕ ದಾನಿಗಳು ಈ ಸಂಸ್ಥೆಯ ಕೆಲಸ ವ್ಯಾಪಕವಾಗಿ ಬೆಳೆಯುವಂತೆ ಮಾಡಿದ್ದಾರೆ. ಪಾರದರ್ಶಕವಾಗಿ ನಿರ್ವಹಿಸವ ಸಮಾಜ ಸೇವೆಗೆ ಸಂಪನ್ಮೂಲದ ಕೊರತೆ ಇರುವುದಿಲ್ಲ. ಇಲ್ಲಿ ನೆರವು ಪಡೆದು ಓದಿದ ವಿದ್ಯಾರ್ಥಿಗಳಲ್ಲಿ ಅನೇಕರು ಉದ್ಯೋಗ ದೊರೆತನಂತರ ಈ ಸಂಸ್ಥೆಯ ಸೇವಾಕಾರ್ಯಕ್ಕೆ ಕೈ ಜೋಡಿಸಲು ಮುಂದಾಗಿದ್ದಾರೆ.

ಮುರಲಿ ಕಡೆಕಾರ್ ಕಾರ್ಯದರ್ಶಿ, ಯಕ್ಷಗಾನ ಕಲಾರಂಗ, ಉಡುಪಿ

ಸತ್ಯವತಿಯಂತಹ ನೂರಾರು ಮಂದಿ ವಿದ್ಯಾರ್ಥಿಗಳಿಗೆ ಆಸರೆಯಾಗಿರುವ ಕಲಾರಂಗವು ಆರಂಭವಾಗಿದ್ದು 1975ರಲ್ಲಿ. ಯಕ್ಷಗಾನ ಆಸಕ್ತರಾದ ಅಮ್ಮುಂಜೆ ನಾಗೇಶ್ ನಾಯಕ್, ನಿಟ್ಟೂರು ಸುಂದರಶೆಟ್ಟಿ, ಎಂ.ಎಸ್.ಕೃಷ್ಣನ್, ವಿಶ್ವಜ್ಞ ಶೆಟ್ಟಿ ಮುಂತಾದವರು ಸೇರಿ ಡಾ.ಬಿ. ಬಿ.ಶೆಟ್ಟಿ ಅಧ್ಯಕ್ಷತೆಯಲ್ಲಿ ರೂಪಿಸಿದ ಈ ಸಂಸ್ಥೆಯನ್ನು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಕೆ. ಶಿವರಾಮ ಕಾರಂತರು ಉದ್ಘಾಟಿಸಿದ್ದರು. ಸಂಸ್ಥೆಯ ಆರಂಭಿಕ ಉದ್ದೇಶ ಸದಭಿರುಚಿಯ ಕಲೆಯನ್ನು ಪ್ರೋತ್ಸಾಹಿಸುವುದು. ಆದರೆ ಸಮಾನ ಮನಸ್ಕರು ಒಂದೆಡೆ ಸೇರಿ ಒಳ್ಳೆಯ ಕೆಲಸಗಳನ್ನು ಇನ್ನಷ್ಟು ಮಾಡಬೇಕು ಎಂಬ ಉತ್ಸಾಹದ ಪರಿಣಾಮ ಈ ಸಂಸ್ಥೆಯು ಆಲದಮರದಂತೆ ಬೆಳೆಯಿತು. ಕಲೆಗೆ ಸೀಮಿತವಾಗದೇ ಸಮಾಜಮುಖಿಯಾಗಿ ಹರಿಯಿತು.

ಪ್ರಸ್ತುತ ಯಕ್ಷಗಾನ ಕಲಾರಂಗವು ಸುವರ್ಣ ಮಹೋತ್ಸವದ ಸಂಭ್ರಮದಲ್ಲಿದೆ. ಇದರ ಆಸರೆಯಲ್ಲಿಯೇ 1999–2000ನೇ ಇಸವಿಯಲ್ಲಿ ಹುಟ್ಟಿಕೊಂಡ 'ಪ್ರೊ. ಬಿ.ವಿ. ಆಚಾರ್ಯ ಯಕ್ಷನಿಧಿ'ಗೆ ಈಗ ರಜತ ಸಂಭ್ರಮ. 2005ರಲ್ಲಿ 'ವಿದ್ಯಾ ಪೋಷಕ್' ಅಂಗಸಂಸ್ಥೆಯಾಗಿ ಕಲಾರಂಗದೊಡನೆ ಸೇರಿಕೊಂಡಿತು. ಅಂದರೆ ಯಕ್ಷಗಾನ ಕಲಾರಂಗ ಎಂಬ ಮಾತೃಸಂಸ್ಥೆಯ ನೆರಳಿನಲ್ಲಿ ಯಕ್ಷನಿಧಿ, ವಿದ್ಯಾ ಪೋಷಕ್ ಮತ್ತು ಯಕ್ಷ ಶಿಕ್ಷಣ ಎಂಬ ಮೂರು ಪ್ರಧಾನ ಶಾಖೆಗಳು ಕೆಲಸ ಮಾಡುತ್ತಿವೆ. ಸುವರ್ಣ ಮಹೋತ್ಸವದ ಸಂಭ್ರಮದಲ್ಲಿ ಸಂಸ್ಥೆಯು ನಡೆದು ಬಂದ ದಾರಿಯತ್ತ ಕಣ್ಣು ಹಾಯಿಸಿದರೆ ಕಾಣುವುದು ನೂರಾರು ಸುಂದರ ಚಿತ್ರಗಳು. ಕೇಳುವುದು ಸಾವಿರಾರು ಸಂತೃಪ್ತಿಯ ದನಿಗಳು.

ಇತ್ತೀಚೆಗಷ್ಟೇ ಸತ್ಯವತಿಯ ಕುಟುಂಬಕ್ಕೆ ಕಷ್ಟಗಳು ಸರಮಾಲೆಯಂತೆಯೇ ಬಂದಾಗ ಕಲಾರಂಗವೇ ಆಸರೆಯಾಗಿ ನಿಂತಿದ್ದು. ಅನಾರೋಗ್ಯಪೀಡಿತರಾದ ಅಮ್ಮ ತೀರಿಕೊಂಡು, ಅರ್ಧಕಟ್ಟಿದ ಮನೆ ಹಾಗೆಯೇ ಗಾಳಿಮಳೆಗೆ ತೆರೆದುಕೊಂಡಿತ್ತು. ಕಲಾರಂಗದ ಕಾರ್ಯದರ್ಶಿ ಮುರಲಿ ಕಡೆಕಾರ್ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಮುಂದುವರೆದರು. ಸೂಕ್ತ ಪ್ರಾಯೋಜಕರನ್ನು ಹುಡುಕಿ ಹೊಸ ಮನೆಯನ್ನು ಕಟ್ಟಿಸಿಕೊಡಲು ನಿರ್ಧರಿಸಿದರು. ಅಕ್ಟೋಬರ್ 18ರಂದು ಮನೆಯನ್ನು ಹಸ್ತಾಂತರಿಸುವ ಕಾರ್ಯಕ್ರಮ ನಡೆಯಿತು. ಈ ದೀರ್ಘ ಪಯಣದಲ್ಲಿ ಒಟ್ಟು 70 ಮನೆಗಳನ್ನು ಅರ್ಹರಿಗೆ ಕಲಾರಂಗ ಕಟ್ಟಿಕೊಟ್ಟಿದೆ.

ವರ್ಣರಂಜಿತ ಬಣ್ಣಗಾರಿಕೆ, ಚೆಂಡೆಮದ್ದಳೆಯ ಅಬ್ಬರ ಮತ್ತು ಭಾಗವತಿಕೆಯ ಹಿನ್ನೆಲೆಯಲ್ಲಿ ರಂಗಸ್ಥಳದಲ್ಲಿ ವಿಜೃಂಭಿಸುವ ಯಕ್ಷಗಾನ ಕಲಾವಿದರ ವೈಯಕ್ತಿಕ ಬದುಕು ಭಿನ್ನ. ವೃತ್ತಿಮೇಳದಲ್ಲಿ ತಿರುಗಾಟ ನಡೆಸುವ ಕಲಾವಿದರು ರಂಗದಲ್ಲಿ ದೇವಲೋಕವನ್ನೇ ಆಳ್ವಿಕೆ ಮಾಡುವರು. ಆದರೆ ಬಣ್ಣಕಳಚಿ ವಿಶ್ರಮಿಸುವಷ್ಟರಲ್ಲಿ ವಾಸ್ತವ ಅವರನ್ನು ಕೈಬೀಸಿ ಕರೆಯುವುದು. ವೇಷಧರಿಸಿ ಗೆಯ್ಮೆ ಮಾಡುವ ಕಲಾವಿದರ ಮನೆಯಲ್ಲಿ ವೈಭವವಿದೆಯೇ? ಮನೆ ಕಟ್ಟಿಕೊಳ್ಳಲು, ಹೆಣ್ಮಗಳಿಗೆ ಮದುವೆ ಮಾಡಲು, ಅನಾರೋಗ್ಯವಿದ್ದಾಗ ಚಿಕಿತ್ಸೆ–ಆರೈಕೆ ಮಾಡಲು ಹಣಕಾಸಿನ ಬೆಂಬಲವಿಲ್ಲದೆ ಕಂಗಾಲಾಗುತ್ತಾರೆ. ನಿರಂತರ ಪ್ರಯಾಣ, ನಿದ್ದೆ ಕೊರತೆ, ವಯೋಸಹಜ ಸಮಸ್ಯೆಗಳಿಂದ ಕಲಾವಿದರು ಅಗತ್ಯ ಚಿಕಿತ್ಸೆ ಪಡೆದುಕೊಳ್ಳುವುದು ಕಷ್ಟ. ಅಂತಹ ಪರಿಸ್ಥಿತಿಯಲ್ಲಿ ಕಲಾವಿದರನ್ನು ಅಮ್ಮನಂತೆ ಪೊರೆಯುವ ಕೆಲಸ ವಹಿಸಿಕೊಂಡಿದೆ ಈ ಯಕ್ಷಗಾನ ಕಲಾರಂಗ. ಕರಾವಳಿಯ ಕಾಸರಗೋಡು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಹಾಗೂ ಚಿಕ್ಕಮಗಳೂರು, ಶಿವಮೊಗ್ಗದ ಕಲಾವಿದರ ಪರವಾಗಿ ಹೆಸರು, ಆರ್ಥಿಕ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡುವ 40 ಜನರ ತಂಡವಿದೆ. ಸಂಸ್ಥೆಯ ಅಧ್ಯಕ್ಷರಾಗಿ ಎಂ. ಗಂಗಾಧರ ರಾವ್ ಮಾರ್ಗದರ್ಶನ ಮಾಡುತ್ತಿದ್ದಾರೆ.

ಯಕ್ಷನಿಧಿ ಯೋಜನೆಯಡಿ ಕಲಾವಿದರಿಗೆ ವೈದ್ಯಕೀಯ ನೆರವು ನೀಡುವುದು, ಅವರ ಪ್ರಯಾಣಕ್ಕೆ ಖಾಸಗಿ ಬಸ್‌ಗಳಲ್ಲಿ ರಿಯಾಯಿತಿ ದರದಲ್ಲಿ ಬಸ್‌ಪಾಸ್ ಒದಗಿಸುವುದು, ಮಕ್ಕಳ ಶಿಕ್ಷಣಕ್ಕೆ ನೆರವು ನೀಡುವುದು, ಬಡ ಕಲಾವಿದರಿಗೆ ಮನೆ ಕಟ್ಟಿಕೊಡುವುದು, ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಮಾಡುವುದು... ಹೀಗೆ ವೃತ್ತಿಮೇಳದಲ್ಲಿ ಕನಿಷ್ಠ ಮೂರು ವರ್ಷ ಸೇವೆ ಸಲ್ಲಿಸಿದ ಕಲಾವಿದರು ಯಕ್ಷನಿಧಿಯ ಸದಸ್ಯತ್ವ ಪಡೆದು ಈ ಸೌಲಭ್ಯಗಳನ್ನು ಪಡೆಯುವ ಅವಕಾಶ ಕಲ್ಪಿಸಿದೆ.

'ವೃತ್ತಿಮೇಳದಲ್ಲಿ ತಿರುಗಾಟ ಮಾಡುವಾಗ ದೈನಂದಿನ ಜೀವನ ನಿರ್ವಹಣೆ, ಮನೆಯ ಸದ್ಯದ ಅಗತ್ಯಗಳನ್ನು ಪೂರೈಸುವ ಬಗ್ಗೆಯಷ್ಟೇ ಯೋಚನೆ ಮಾಡಲು ಸಾಧ್ಯ. ದೀರ್ಘಕಾಲದ ಹೂಡಿಕೆ ನಮ್ಮ ಸಂಪಾದನೆಯ ಮಟ್ಟದಲ್ಲಿ ಸಾಧ್ಯವಾಗುವುದಿಲ್ಲ. ಕೌಟುಂಬಿಕವಾಗಿ ಹತ್ತಾರು ಸಮಸ್ಯೆಗಳಿದ್ದಾಗಲಂತೂ ಕಲಾವಿದರು, ತಲೆಗೆಳೆದರೆ ಕಾಲಿಗೆ ಸಾಲದು, ಕಾಲಿಗೆಳೆದರೆ ತಲೆಗೆ ಸಾಲದು ಎಂಬಂತೆ ಬದುಕು ಸಾಗಿಸಬೇಕಾಗುತ್ತದೆ. ನನ್ನ ಬದುಕಿನಲ್ಲಿಯೂ ಹಾಗೆಯೇ ಆಯಿತು' ಎನ್ನುತ್ತ ಮಾತು ಶುರು ಮಾಡಿದರು ಸಾಲಿಗ್ರಾಮ ಮೇಳದ ವೇಷಧಾರಿ ಪ್ರವೀಣ್ ಗಾಣಿಗ ಕೆಮ್ಮಣ್ಣು.

14ನೇ ಪುಟಕ್ಕೆ..



ನರಸಿಂಹ ತುಂಗ ಅವರ ಮಾರ್ಗದರ್ಶನದಲ್ಲಿ ಅಭ್ಯಾಸನಿರತ ವಿದ್ಯಾರ್ಥಿನಿಯರು



ಅಣಬೆ ಹುಡುಕಾಟದಲ್ಲಿ

ಬನ, ಬಯಲಲ್ಲಿ ಅಣಬೆ ಬೇಟೆ

ಸ್ವರೂಪ್ ಕೊಟ್ಟೂರು

ಇಡೀ ಗ್ರಾಮ ನಿದ್ರೆಯಲ್ಲಿತ್ತು. ಆದರೆ ಒಂದಿಬ್ಬರು ಮಾತ್ರ ಹಣೆಗೆ ಬ್ಯಾಟರಿ ಕಟ್ಟಿಕೊಂಡು ಕಾಡಿನತ್ತ ಹೊರಟಿದ್ದರು. 'ಬೇಗ ಬೇಗ ಬಾರೋ, ಯಾರಾದ್ರೂ ನೋಡಿದ್ರೆ ಕಷ್ಟ. ಬೇರೆಯವ್ರು ಬರುವಷ್ಟರಲ್ಲಿ ನಾವ್ ಕಾಡಿಗೆ ಬೆನ್ನು ಮಾಡಿರಬೇಕು....' ಎನ್ನುತ್ತಾ ತಮ್ಮ ನಡಿಗೆಯನ್ನು ಮತ್ತಷ್ಟು ಬಿರಿಸುಗೊಳಿಸಿದರು. ನೋಡ ನೋಡುತ್ತಿದ್ದಂತೆ ಅವರು ಕಾಡಿನಲ್ಲಿ ಲೀನವಾಗಿಬಿಟ್ಟರು!.

'ಅಲ್ನೋಡೋ, ಕೀಳು... ಕೀಳು, ನಿಧಾನ... ನಿಧಾನ, ಬಗ್ಗಿ ಕೀಳೋ ಶ್...! ಮೆತ್ತಗೆ ಮಾತ್ನಾಡೋ...' ಕಾಡಿನ ಎಲ್ಲೆಡೆಯಿಂದ ಹೆಚ್ಚುಕಮ್ಮಿ ಇವೇ ಮಾತುಗಳು ತೇಲಿ ಬರತೊಡಗಿದವು. ನನಗೆ ಅಚ್ಚರಿ, ಆತಂಕ ಒಟ್ಟೊಟ್ಟಿಗೇ ಆದವು. ಹೋಗಿದ್ದು ಇಬ್ಬರೇ. ಅದು ಈ ಕಡೆ. ಅದ್ಹೇಗೆ ಎಲ್ಲೆಡೆಯಿಂದ ಇಂತಹ ಮಾತುಗಳು ಕೇಳಿ ಬರುತ್ತಿವೆ!? ಕುತೂಹಲಕ್ಕೆ ಅಲ್ಲೇ ಇದ್ದ ಪುಟ್ಟ ಮರವನ್ನೇರಿ ಕಾಡಿನೊಳಗೆ ದೃಷ್ಟಿ ನೆಟ್ಟೆ. ಅಡವಿ ತುಂಬಾ ಬರೀ ಬ್ಯಾಟರಿ, ಮೊಬೈಲ್ ಬೆಳಕು!.

ಇದು ಅಣಬೆ ಬೇಟೆ

ಅವರೆಲ್ಲ ಬ್ಯಾಟರಿ ಬೆಳಕಿನಲ್ಲಿ ಹುಡುಕುತ್ತಿದ್ದದ್ದು ನಾಟಿ ಅಣಬೆಗಳನ್ನು!. ಹಳ್ಳಿ ಕಡೆ ಮಳೆಗಾಲದ ಈ ದಿನಗಳಲ್ಲಿ ಅಣಬೆ ಎದ್ದೇಳುವ ಮಳೆ, ತಿಥಿಗೆ ಕಾದಿದ್ದು ಕಾಡಿನತ್ತ ಚಿತ್ತ, ದೃಷ್ಟಿ ನೆಟ್ಟಿರುತ್ತಾರೆ. ಹೀಗಾಗಿ ಈ ಋತುವಿನಲ್ಲಿ ಅಣಬೆಗಳನ್ನು ಅರಸಿಕೊಂಡು ಬರುವವರು ಕಾಡಿನ ಗಿಡಕ್ಕೊಬ್ಬರಂತೆ ಸಿಗುತ್ತಾರೆ. ಇವರೆಲ್ಲರೂ ಗಾಢ ಕತ್ತಲು, ಪೊದೆಗಳನ್ನು ಸೀಳಿಕೊಂಡು, ತೆಗ್ಗು-ದಿನ್ನೆಗಳನ್ನು ದಾಟಿಕೊಂಡು, ಏದುಸಿರು ಬಿಡುತ್ತಾ ಅಣಬೆಗಳನ್ನು ಹುಡುಕುತ್ತಾ, ಕೀಳುತ್ತಾ ಪಾದರಸದಂತೆ ಓಡಾಡುತ್ತಿದ್ದರು.

ಇದೇ ಮಳೆಗೆ, ಇದೇ ಜಾಗದಲ್ಲಿ ಅಣಬೆಗಳು ಎದ್ದೇಳುತ್ತವೆ ಎನ್ನುವ ಪಾರಂಪರಿಕ ಜ್ಞಾನ ಹಳ್ಳಿಗರಲ್ಲಿ ಇರುತ್ತದೆ. ಆದರೆ ಇಂತಹದ್ದೇ ದಿನ ಎದ್ದೇಳುತ್ತವೆ ಎಂದು ಕರಾರುವಕ್ಕಾಗಿ ಹೇಳುವುದು ಕಷ್ಟ. ಹೀಗಾಗಿ ಭಾಗಶಃ ಮಳೆಯ ಸರಿಪಾದಕ್ಕೆ, ಎರಡು ಮಳೆಗಳು ಸಂಧಿಸುವ ವೇಳೆ ಕಾಡು, ಹೊಲಗಳಲ್ಲಿ ಒಮ್ಮೆ ಅಡ್ಡಾಡಿಕೊಂಡು ಬರುತ್ತಾರೆ. ವಿಶೇಷವಾಗಿ ಕುರಿ ಕಾಯೋರು, ದನ ಮೇಯಿಸೋರು, ಕಾಡಿನ ಉತ್ಪನ್ನ ಸಂಗ್ರಹಿಸೋರು.. ಇವುಗಳು ಎದ್ದೇಳುವ ಮುನ್ಸೂಚನೆ ಹೊತ್ತು



ಅಣಬೆ ಸಿಕ್ಕ ಖುಷಿಯಲ್ಲಿ

ತರುತ್ತಾರೆ. ಇಂತಹವರು ತಮ್ಮ ಆಪ್ತರಿಗಷ್ಟೇ ಈ ಸುದ್ದಿ ಮುಟ್ಟಿಸುತ್ತಾರೆ. ಸುದ್ದಿ ತಿಳಿದವರು ಗುಟ್ಟಾಗಿ ಇಡುತ್ತಾರೆ. ಇಂತಹವರು, ನಾವೊಬ್ಬರೇ ಅಣಬೆ ಬೇಟೆಗೆ ಹೋಗೋದು ಎನ್ನೋ ಭಾವದಲ್ಲಿ ಕಾಡಿಗೆ ಬಂದಿರುತ್ತಾರೆ. ಆದರೆ ಅಲ್ಲಿ ಇಡೀ ಊರೇ ನೆರೆದಿರುತ್ತದೆ!.

ಎಷ್ಟೇ ಆಪ್ತರಿದ್ದರೂ ಅಣಬೆ ಬೇಟೆಗೆ ಹೋಗುವ ಗುಟ್ಟನ್ನು ಬಿಟ್ಟು ಕೊಡುವುದಿಲ್ಲ. ಮತ್ತೊಬ್ಬರನ್ನು ಕರೆದೊಯ್ದರೆ ತಮಗೆ ಸಿಗುವ ಪಾಲು ಕಮ್ಮಿ ಆಗುತ್ತದೆ ಎನ್ನುವ ಲೆಕ್ಕಚಾರ. ಎಲ್ಲರಿಗಿಂತ ಮೊದಲು ಕಾಡಿನಲ್ಲಿರಬೇಕು, ಕಿತ್ತುಕೊಂಡು ಬರಬೇಕು ಎನ್ನುವ ಉಮೇದಿನಲ್ಲಿ ಹಲವರು ರಾತ್ರಿಯೆಲ್ಲಾ ನಿದ್ದೆಯನ್ನೇ ಮಾಡುವುದಿಲ್ಲ. ಕತ್ತಲು, ಕಲ್ಲು-ಮುಳ್ಳು, ಪೊದೆಗಳು, ಕಾಡು ಪ್ರಾಣಿಗಳೆನ್ನದೆ ಕಾಡುಮೇಡಿನ ಯಾವ ಮೂಲೆಯನ್ನೂ ಬಿಡದೇ ಅಣಬೆ ಬೆದಕುತ್ತಾರೆ.

ಮಳೆಗಾಲದ ಅತಿಥಿ

ಅಣಬೆಯಲ್ಲಿ ಅಂದಾಜು 125 ಜಾತಿಗಳೂ, 4,000 ಪ್ರಭೇದಗಳಿವೆ. ಕಾಡು ಅಣಬೆಗಳು ಕೆಂಪು, ಕಲ್ಲು ಮಿಶ್ರಿತ ಮಸಾರೆ, ಮಿದು, ಸಾವಯವ ಭೂಮಿಯಲ್ಲಿ ಹಾಗೆ ಹೆಚ್ಚು ತೇವಾಂಶ ಮತ್ತು ಆರ್ದ್ರತೆ ಇರುವ ಕಡೆ ಗುಂಪು ಗುಂಪಾಗಿ ಹುಟ್ಟುತ್ತವೆ. ಆರಿದ್ರಾ ಮಳೆಗೆ ಮೊದಲು ಹುಟ್ಟಿ ಆಶ್ಲೇಷ ಮಳೆಯಲ್ಲಿ ಸಮೃದ್ಧವಾಗಿ, ಮಘಾ ಮಳೆಯಲ್ಲಿ ಸಾಧಾರಣವಾಗಿ, ಹಸ್ತ ಚಿತ್ತ ಮಳೆಗೆ ವಿರಳವಾಗಿ ಸಿಕ್ಕು ಕೊನೆಯಾಗುತ್ತವೆ. ಬಳ್ಳಾರಿ, ವಿಜಯನಗರ, ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ.. ಹೀಗೆ ಬಯಲು ಸೀಮೆ, ಅರೆ ಮಲೆನಾಡು ಭಾಗಗಳಲ್ಲಿ ಅಡವಿ ಅಣಬೆ ಬೇಟೆಗೆ ಹೋಗುತ್ತಾರೆ. ಅಣಬೆಗೆ ಸಸ್ಯಗಳ ರಾಜ, ಕಾಡು ಬುತ್ತಿ, ಕಾಡಿನ ಬಂಗಾರವೆಂತಲೂ ಕರೆಯಲಾಗುತ್ತದೆ.

13ನೇ ಪುಟಕ್ಕೆ

ನವರೂಪದಲ್ಲಿ ನವರಂಗ ದರವಾಜ!

ಈರಣ್ಣ ಬೆಂಗಾಲಿ

ರಾಯಚೂರು ಜಿಲ್ಲೆಯು ಕೃಷ್ಣೆ-ತುಂಗೆಯ ಮಧ್ಯೆ ನಿಂತಿರುವ ದೋಅಬ್ ಪ್ರದೇಶ. ಇದು ಭೌಗೋಳಿಕವಾಗಿ ಫಲವತ್ತಾಗಿದೆ, ಅಷ್ಟೇ ಸಂಪದ್ಭರಿತವಾಗಿದೆ. ಈ ಕಾರಣಕ್ಕಾಗಿಯೇ ರಾಯಚೂರನ್ನು ವಶಪಡಿಸಿಕೊಳ್ಳಲು ಅನೇಕ ಅರಸು ಮನೆತನಗಳು ಕದನಗಳನ್ನು ನಡೆಸಿದ್ದವು. ಇಂದಿಗೂ ರಾಯಚೂರಿನ ಸುತ್ತಮುತ್ತ ಕೋಟೆ-ಕೊತ್ತಲಗಳು, ಶಾಸನಗಳು, ಸ್ಮಾರಕಗಳನ್ನು ಕಾಣಬಹುದು. ಒಂದು ಕಾಲದಲ್ಲಿ ರಾಯಚೂರು ನಗರದ ಹೆಮ್ಮೆಯ ಸ್ಮಾರಕ ನವರಂಗ ದರವಾಜ ಹೊಲಸಿನಿಂದ ಕೂಡಿ, ಗಬ್ಬು ನಾರುತ್ತಿತ್ತು, ಶಿಥಿಲಾವಸ್ಥೆಯಲ್ಲಿತ್ತು. ಈಗ ಜೀರ್ಣೋದ್ಧಾರದಿಂದ ನವರಂಗ ದರವಾಜ ಇತಿಹಾಸದ ಮಾಹಿತಿ ಒದಗಿಸುವ ತಾಣವಾಗಿದೆ. ಅಂದರೆ ಇಲ್ಲಿ ವಸ್ತುಸಂಗ್ರಹಾಲಯ ತಲೆ ಎತ್ತಿ ನಿಂತಿದೆ.

ಈ ವಸ್ತುಸಂಗ್ರಹಾಲಯವು ಶಿಲ್ಪಕಲಾಕೃತಿಗಳ ಸಂಗ್ರಹವಾಗಿರದೇ ಇತಿಹಾಸ, ವೈಜ್ಞಾನಿಕ ಸಂಶೋಧನೆ, ಶೈಕ್ಷಣಿಕ ಮಾಹಿತಿಯನ್ನು ಒದಗಿಸುತ್ತದೆ. ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ, ಇತಿಹಾಸ ಸಂಶೋಧಕರಿಗೆ, ಇತಿಹಾಸ ಅಧ್ಯಯನಕಾರರಿಗೆ ಅಲ್ಲದೆ ಜನಸಾಮಾನ್ಯರಿಗೂ ಉಪಯುಕ್ತವಾಗಿದೆ. ಇಲ್ಲಿ ರಾಯಚೂರು, ಲಿಂಗಸೂಗೂರು, ದೇವದುರ್ಗ, ಮಾನ್ವಿ, ಮಸ್ಕಿ, ಸಿಂಧನೂರು, ಗಬ್ಬೂರು, ಕರಡಕಲ್, ಜಾವೂರು, ಕೊಪ್ಪಳ, ಕುಷ್ಟಗಿ, ಯಲಬುರ್ಗ, ಗಂಗಾವತಿ, ಆನೆಗುಂದಿ ಇಲ್ಲೆಲ್ಲಾ ದೊರೆತ, ಅನಾಥವಾಗಿ ಬಿದ್ದ ಶಿಲ್ಪಗಳನ್ನು, ಶಾಸಗಳನ್ನು ನವರಂಗ ದರವಾಜದಲ್ಲಿ ಸಂಗ್ರಹಿಸಿ ಇಡಲಾಗಿದೆ. ಈ ವಸ್ತುಸಂಗ್ರಹಾಲಯವು ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸುಪರ್ದಿಯಲ್ಲಿದೆ.

1985ರಲ್ಲಿ ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆಯ ಡಾ.ಆರ್.ಸುಂದರ್, 1994ರಲ್ಲಿ ಜಿಲ್ಲಾಧಿಕಾರಿಯಾಗಿದ್ದ ಸಂಜಯದಾಸ ಗುಪ್ತ ಅವರಿಗೂ ನವರಂಗ ದರವಾಜ ಜೀರ್ಣೋದ್ಧಾರ ಮಾಡುವ ಉದ್ದೇಶವಿತ್ತು, ಜೀರ್ಣೋದ್ಧಾರದ ಪ್ರಕಿಯೆ ಜಾರಿಯ ಮೊದಲ ಹಂತದಲ್ಲಿ ಇರುವಾಗಲೇ ಜಿಲ್ಲೆಯಿಂದ ವರ್ಗವಾದರು. 1997ರಲ್ಲಿ ರಾಯಚೂರು ಜಿಲ್ಲಾಧಿಕಾರಿಯಾಗಿದ್ದ ಅಶೋಕ ದಳವಾಯಿ ಅವರು ಮೆಕ್ಕ ದರವಾಜ ಹಾಗೂ ನವರಂಗ ದರವಾಜಗಳನ್ನು ಸ್ವಚ್ಛಗೊಳಿಸಿದರು. ಈ ಕಾರ್ಯದಲ್ಲಿ ನೂರಾರು ಕೈಗಳು ಸೇರಿದ್ದವು. ಇದರ ಪರಿಣಾಮವಾಗಿ ನಿರ್ಲಕ್ಷ್ಯಕ್ಕೆ ಒಳಪಟ್ಟ ನವರಂಗ ದರವಾಜವು ಸುಂದರ ಸ್ಮಾರಕವಾಗಿ, ವಸ್ತು ಸಂಗ್ರಹಾಲಯವಾಗಿ ಮಾರ್ಪಟ್ಟಿದೆ.

ನವರಂಗ ದರವಾಜದ ಇತಿಹಾಸವನ್ನು ನೋಡುವುದಾದರೆ ಕ್ರಿ.ಶ. 1520, ಮೇ 14ರಲ್ಲಿ ಯೂಸಫ್ ಆದಿಲ್ ಶಾಹನೊಂದಿಗೆ ಶ್ರೀಕೃಷ್ಣದೇವರಾಯ ಕದನ ನಡೆಸಿ ಜಯ ಸಾಧಿಸಿದಾಗ ರಾಯಚೂರು ವಶವಾಗುತ್ತದೆ. ಕೃಷ್ಣದೇವರಾಯ ಉತ್ತರ ದಿಕ್ಕಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದಾನೆ. ಉತ್ತರ ದಿಕ್ಕಿನಿಂದ ಬರುವ ವೈರಿಗಳನ್ನು ತಡೆಗಟ್ಟಲು ಗೋಡೆಗೆ ನಾಲ್ಕು ಹೊಸ ಕೊತ್ತಲುಗಳನ್ನು ನಿರ್ಮಿಸಿದನು. ಇದೇ ಹಂತದಲ್ಲಿ ಉತ್ತರ ದ್ವಾರವನ್ನು ಮುಂದುವರೆಸಿ ನವರಂಗ ದರವಾಜವನ್ನು ನಿರ್ಮಿಸಿದನು. ಇಸ್ಲಾಮಿಕ್ ಮತ್ತು ಹಿಂದು ಕಲಾಶೈಲಿಯ ಮಿಶ್ರಣವಾಗಿದೆ. ಹೊರನೋಟಕ್ಕೆ ಇಸ್ಲಾಮಿಕ್ ಸ್ಮಾರಕದಂತೆ ಕಂಡರೂ ಕೋಟೆಯ ಒಳಗೆ ಅನೇಕ ಹಿಂದು ಶಿಲ್ಪಗಳು ಇದ್ದು ಇದೊಂದು ಇಂಡೋಸಾರ್ಸೆನಿಕ್ ಶೈಲಿಯಾಗಿದೆ ಎಂಬುದು ವಾಸ್ತುಶಿಲ್ಪಿಗಳ ಅಭಿಪ್ರಾಯ. ಸಭೆಗಳು ಜರುಗಲು, ದೇವಾಲಯದಲ್ಲಿ ಭಕ್ತರು ಕುಳಿತುಕೊಳ್ಳಲು ಅನುವು ಮಾಡಿಕೊಡುವ ಕಟ್ಟಡ ವಿನ್ಯಾಸಕ್ಕೆ ನವರಂಗ ಎಂದು ಕರೆಯಲಾಗುತ್ತದೆ. ಆದ ಕಾರಣ ಉತ್ತರ ದಿಕ್ಕಿನ ಈ ಅಗಸಿಗೆ ಅಂದರೆ ಎರಡನೇ ಸುತ್ತಿನ ಕೋಟೆಯ ಈ ಅಗಸಿಗೆ ನವರಂಗ ದರವಾಜ ಎಂದು ಕರೆಯುತ್ತಾರೆ.

ಮೂರು ಅಂಕಣಗಳನ್ನು ಹೊಂದಿರುವ ನವರಂಗ ದರವಾಜ ನಾಲ್ಕು ದರವಾಜಗಳನ್ನು, ಒಂದು ಚಿಕ್ಕ ದ್ವಾರವನ್ನು ಮತ್ತೊಂದು ದಿಡ್ಡಿ ದ್ವಾರವನ್ನು ಒಳಗೊಂಡಿದೆ. ರಾಯಚೂರಿನ ಕೋಟೆಗಳ ವೈಶಿಷ್ಟ್ಯವೆಂದರೆ ಪಶ್ಚಿಮಕ್ಕೆ ಮುಖ್ಯ ಪ್ರವೇಶ ದ್ವಾರ ಹೊಂದಿರುವುದು. ಇದರಂತೆ ಇಲ್ಲಿಯೂ ಕೂಡ ಕೋಟೆಯ ಹೊರಗೆ ತೆರೆದುಕೊಂಡಿರುವ ದ್ವಾರವು ಪಶ್ಚಿಮಾಭಿಮುಖವಾಗಿದ್ದರೆ, ಕೋಟೆಯ ಒಳಗೆ ತೆರೆದುಕೊಂಡಿರುವ ದ್ವಾರವು ದಕ್ಷಿಣ ದಿಕ್ಕಿಗಿದೆ. ಈ ಮಹಾದ್ವಾರ ಅತಿ ಎತ್ತರವಾಗಿದ್ದು, ಇದರ ಮೇಲೆ ಇರುವ ಶಿಲ್ಪಕಲಾ ಕೌಶಲ್ಯ ದೃಷ್ಟಿಯಿಂದ ಮನೋಹರವಾಗಿದ್ದು, ಉತ್ತರದ ಮಹಾದ್ವಾರವನ್ನು ರಾಯಚೂರು ವಿಜಯದ ಸಂಕೇತವಾಗಿ ಶ್ರೀಕೃಷ್ಣದೇವರಾಯ ನಿರ್ಮಿಸಿದನಂತೆ. ದಕ್ಷಿಣ ದ್ವಾರವು ಬಾವಿ ಹಾಗೂ ಕೆರೆಯ ಮಧ್ಯೆ ನೀರಿನಲ್ಲಿ ನಿಂತುಕೊಂಡಿದೆ. ದೂರದಿಂದ ನೋಡಲು ಇದೊಂದು ಕಮಾನಿನಾಕಾರದ ದ್ವಾರವಾಗಿದ್ದು ಎರಡು ಬದಿಯಲ್ಲಿ ಅದೇ ಆಕಾರದ ಗೂಡುಗಳಿವೆ.

ಭೂಕಂಪ ನಿರೋಧಕ ತಂತ್ರದ ಆಧಾರದ ಮೇಲೆ ನಿರ್ಮಿತವಾದ ಈ ಕೋಟೆಯ ಮಧ್ಯಮ ಅಂಕಣ ವಿವಿಧ ಸುಂದರ ಶಿಲ್ಪಕಲಾಕೃತಿಗಳಿಂದ ಗಮನ ಸೆಳೆಯುತ್ತದೆ. ಸುತ್ತಲೂ ಕಮಲಪುಷ್ಪಗಳ ಸಾಲುಗಳು ಜೊತೆಗೆ ಸಮುದ್ರ ಮಂಥನ, ವಿಷ್ಣುವಿನ ದಶಾವತಾರಗಳು, ಶ್ರೀರಾಮನು ವೃಕ್ಷಗಳನ್ನು ಭೇದಿಸುತ್ತಿರುವುದು, ವಾಲಿ-ಸುಗ್ರೀವರ ಹೋರಾಟ, ಗೋವರ್ಧನ ಗಿರಿಧಾರಿ ಶ್ರೀಕೃಷ್ಣ, ಜಾನಪದ ಕಲಾಶಿಲ್ಪಗಳು, ಶ್ರೀಕೃಷ್ಣದೇವರಾಯನು ಆಸ್ಥಾನ ಸುಭಾಷಿಣಿಯರೊಂದಿಗೆ ಸಂಭಾಷಿಸುವ ಉಬ್ಬುಶಿಲ್ಪ ಮನಮೋಹಕವಾಗಿವೆ. ಇಷ್ಟೆ ಅಲ್ಲದೆ ರಾಮಾಯಣದ ಪ್ರಸಂಗಗಳು, ಆನೆ ಕಲಾತ್ಮಕ ಶಿಲ್ಪಗಳು, ಶೇಷಶಯನ ರಂಗನಾಥ, ಭೂದೇವಿ, ಶ್ರೀದೇವಿ, ರಾಮಾನುಜಾಚಾರ್ಯ, ಶಿಲಾ ಫಲಕಗಳು, ಕೋಟೆಗೆ ನರಬಲಿಯಾದ ಬಸರೆಡ್ಡಿ, ಮಲ್ಲಮ್ಮ ದಂಪತಿಯ ಉಬ್ಬುಶಿಲ್ಪಗಳು, ಮಿಥುನ ಶಿಲ್ಪಗಳು ಇನ್ನು ಅನೇಕ ಘಟನೆಗಳ ಉಬ್ಬುಶಿಲ್ಪಗಳನ್ನು ಕಾಣಬಹುದು.

ಈ ವಸ್ತುಸಂಗ್ರಹಾಲಯದ ಮೂಲಕ ರಾಯಚೂರಿನ ಘನತೆ ಮತ್ತಷ್ಟು ಹೆಚ್ಚಿದೆ. ಇತಿಹಾಸವನ್ನು ಹೇಳುವ ನವರಂಗ ದರವಾಜವನ್ನು ಸರ್ಕಾರಿ ರಜಾದಿನಗಳನ್ನು ಹೊರತುಪಡಿಸಿ ಪ್ರತಿದಿನ ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ವೀಕ್ಷಿಸಬಹುದು.



ರಾಯಚೂರಿನ ನವರಂಗ ದರವಾಜ ಸ್ಮಾರಕ

ನಮ್ಮ ಕೋಟೆ ನಮ್ಮ ಹೆಮ್ಮೆ

ರಾಯಚೂರು ಜಿಲ್ಲೆಯ ಕೋಟೆ-ಕೊತ್ತಲೆಗಳನ್ನು, ಶಾಸನ-ಸ್ಮಾರಕಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಜನಸಾಮಾನ್ಯರು, ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು, ಇತಿಹಾಸ ಪ್ರಜ್ಞೆಯನ್ನು ಬೆಳೆಸಲು, ಕೋಟೆ -ಸ್ಮಾರಕಗಳನ್ನು ರಕ್ಷಿಸುವಲ್ಲಿ ಅವರ ಜವಾಬ್ದಾರಿ ಏನು ಎಂಬುದನ್ನು ತಿಳಿಸಲು 'ನಮ್ಮ ಕೋಟೆ- ನಮ್ಮ ಹೆಮ್ಮೆ' ಘೋಷಣೆಯೊಂದಿಗೆ 'ರಾಯಚೂರು ಕೋಟೆಗಳ ಅಧ್ಯಯನ ಸಮಿತಿ' ರಚನೆಯಾಗಿದೆ. ಶ್ರೀಕೃಷ್ಣದೇವರಾಯನ ಪಟ್ಟಾಭಿಷೇಕವಾಗಿ 500 ವರ್ಷವಾದ ಹಿನ್ನೆಲೆಯಲ್ಲಿ ಇದೇ ನವರಂಗ ದರವಾಜದ ಆವರಣದಲ್ಲಿ ಅದ್ದೂರಿ, ಅರ್ಥಪೂರ್ಣವಾದ ಕಾರ್ಯಕ್ರಮವನ್ನು ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡದ್ದು ಸ್ಮರಣೀಯ.

ಬೆಂಗಳೂರಲ್ಲಿ ನೋಡಿ ನಿಮ್ಮೂರ!



ಮಂಡ್ಯ ಭಾಗದ ತೊಟ್ಟಿಮನೆ

ಮಂಜುನಾಥ ಭದ್ರಶೆಟ್ಟಿ

ನಮ್ಮ ನಾಡಿನ ಬಹುತೇಕ ಹಳ್ಳಿಗಳು ಅವು ಎಷ್ಟೇ ಚಿಕ್ಕದಾದರೂ ಬಹುಸಂಸ್ಕೃತಿ, ಬಗೆಬಗೆಯ ಕಸಬು, ವೈವಿಧ್ಯಮಯ ಆಚಾರ–ವಿಚಾರದೊಂದಿಗೆ ಬೆಳೆದು ಸಾಮುದಾಯಿಕ ಜೀವನದ ಚಿತ್ರಣವನ್ನು ತೆರೆದಿಟ್ಟಿದ್ದವು.

ಯಾವುದೇ ಹಳ್ಳಿಗೆ ಹೋದರೂ ಆ ಊರಿನ ಸುತ್ತಲೂ ಗಿಡ ಮರ, ಹೂಬಳ್ಳಿಗಳು, ಊರಿನ ಅಗಸಿ ಪ್ರವೇಶಿಸಿದಾಗ ಅಲ್ಲೊಂದು ಅರಳಿಕಟ್ಟೆ ಅಥವಾ ಬೇವಿನಕಟ್ಟೆ, ಅದರಲ್ಲಿನ ಹಕ್ಕಿಗಳ ಚಿಲಿಪಿಲಿ, ಆ ಗಿಡಗಳ ಕೆಳಗೆ ಬಸ್ ನಿಲ್ದಾಣ, ಅಲ್ಲಿಯೇ ನೆರಳಲ್ಲಿ ಕೂತು ಧಣಿವಾರಿಸಿಕೊಳ್ಳುವ ಅಜ್ಜಂದಿರು.

ಹಾಗೆಯೇ ಒಳಹೊಕ್ಕರೆ ಆ ಊರಲ್ಲೊಂದು ಹಿರೀಕರ ಮನೆ, ಜೊತೆಗೆ ರೈತರ ಮನೆಗಳು, ಒಂದೆರಡು ಕಿರಾಣಿ ಅಂಗಡಿ, ವಿವಿಧ ಕಸುಬುಗಳನ್ನು ಮಾಡುವವರ ಮನೆಗಳು, ಒಂಚೂರು ದೂರದಲ್ಲಿ ಶಾಲೆ, ಒಂದೋ ಎರಡೋ ಗುಡಿಗಳು.. ಇನ್ನೂ ಸ್ವಲ್ಪ ಕಣ್ಣರಳಿಸಿದಾಗ ಆಚೆಈಚೆ ಕೆರೆತೊರೆ, ಗ್ರಾಮಕ್ಕೆ ಅಂಟಿಕೊಂಡಿರುವ ಹೊಲಗದ್ದೆಗಳಲ್ಲಿ ಕೆಲಸ ಮಾಡುವ ಮಣ್ಣಿನ ಮಕ್ಕಳು, ಅಲ್ಲಿಯೇ ಬದುವಿನಲ್ಲಿ ಮೇಯುವ ಹಸುಕರು ಎಮ್ಮೆಗಳು, ಗೋಧೂಳಿಯಲ್ಲಿ ಮನೆಯತ್ತ ಓಡುವ ದನಗಳು, ದಿನವಿಡೀ ದಣಿದು ನೇಸರನೊಂದಿಗೆ ನಿದ್ದೆಗೆ ಜಾರುವ ಜನಗಳು!

ಆದರೆ, ಭಾರತದಲ್ಲಿ ಜಾಗತೀಕರಣದಿಂದ ಉಂಟಾದ ನಗರೀಕರಣ, ಆಧುನೀಕರಣ ಈ ಎಲ್ಲ ದೃಶ್ಯಗಳನ್ನು ಅದೃಶ್ಯವಾಗುತ್ತಿವೆ. 'ಗ್ರಾಮೀಣ ಸಂಸ್ಕೃತಿ ಭಾರತದ ಆತ್ಮ' ಎಂದು ಗಾಂಧೀಜಿ ಹೇಳುತ್ತಿದ್ದರು. ಆದರೆ, ನಗರದವರು ಅಷ್ಟೇ ಅಲ್ಲ, ಹಳ್ಳಿಗರೂ ಮರೆತು ಹೋಗುತ್ತಿರುವ ಈ ಗ್ರಾಮೀಣ ಬದುಕಿನ ಸೊಗಡನ್ನು ತೋರಿಸುವಲ್ಲಿ ದೇಶದ ಅನೇಕ ನಗರಗಳಲ್ಲಿ 'ಮಾದರಿ ಕಲಾ ಗ್ರಾಮ'ಗಳು ತಲೆ ಎತ್ತುತ್ತಿವೆ. ಹೀಗೆ ನಿರ್ಮಾಣವಾಗುವ ಗ್ರಾಮಗಳಿಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡಲಾಗುತ್ತಿದೆ.

ನಮ್ಮ ಗ್ರಾಮಗಳು ಹೇಗಿರುತ್ತಿದ್ದವು? ಎಂಬುದನ್ನು ಇಂದಿನ ತಲೆಮಾರಿನವರಿಗೆ ತೋರಿಸುವುದಕ್ಕೆ, ಮರೆತಿರುವವರಿಗೆ ಮತ್ತೆ ನೆನಪಿಸುವುದಕ್ಕೆ ಬೆಂಗಳೂರಿನ ಜಕ್ಕೂರು ಬಳಿ ಇರುವ ರಾಚೇನಹಳ್ಳಿ ಕೆರೆಗೆ ಹೊಂದಿಕೊಂಡಿರುವ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ಆವರಣದಲ್ಲಿನ ಮೂರು ಎಕರೆಯಲ್ಲಿ 'ಮಾದರಿ ಪಾರಂಪರಿಕ ಕಲಾ ಗ್ರಾಮ' ರೂಪುಗೊಂಡಿದೆ.

ಈ ಕಲಾ ಗ್ರಾಮದೊಳಗೆ ಕಾಲಿಟ್ಟರೆ ಸಾಕು, ಒಂದೊಂದು ಪ್ರಾತ್ಯಕ್ಷಿಕೆಯೂ ಒಂದೊಂದರ ಹಿನ್ನೆಲೆಯನ್ನು ತೆರೆದಿಡುತ್ತದೆ. ಉತ್ತರ ಕರ್ನಾಟಕದ ಪಾಟೀಲ, ಶೆಟ್ಟರ, ಕುಲಕರ್ಣಿಯರ ಸಾಂಪ್ರಾದಾಯಿಕ ಮನೆಗಳು, ಮಂಡ್ಯ–ಮೈಸೂರು ಭಾಗದ ತೊಟ್ಟಿ ಮನೆಗಳು, ಮಲೆನಾಡಿನ ಪಾರಪಂಪರಿಕ ಚೌಕಿ ಮನೆ, ಕಂಬಾರ, ಕುಂಬಾರರ, ಚಮ್ಮಾರರ, ಬಡಿಗೇರ, ಅಂಬಿಗರ, ಸಿಂಪಿಗರ, ಬಳೆಗಾರರ, ಹೂಗಾರ, ಪೂಜಾರಿ, ನೇಕಾರ, ಗಾಣಿಗ, ಕುರುಬ, ಅಕ್ಕಸಾಲಿಗ, ಮೀನುಗಾರ–ಹೀಗೆ ಹತ್ತಾರು ಕಸುಬು ಮಾಡುವವರ ಮನೆಯ ಮಾದರಿಗಳನ್ನು ನಿರ್ಮಿಸಲಾಗಿದೆ. 'ನಾನು ನಗರದಲ್ಲಿ ಹುಟ್ಟಿ ಬೆಳೆದವಳು. ನಮ್ಮ ಅಜ್ಜ ಅಜ್ಜಿ ಹಳ್ಳಿಯಲ್ಲಿದ್ದರು. ಅವರು ವಾಸಿಸುತ್ತಿದ್ದ ಮನೆ, ಪರಿಸರ ಹೇಗಿತ್ತು ಎಂಬುದಮ್ಮಿ ಇಲ್ಲಿಯ ಕಲಾಕೃತಿಗಳು ನೆನಪಿಸುತ್ತಿವೆ. ಇಲ್ಲಿ ಹಳೆಯ ಹೆಂಚಿನಮನೆ ನೋಡಿ, ನಮ್ಮ ಮನೆ ನೆನಪಿಗೆ ಬಂತು' ಎಂದು ಬೆಂಗಳೂರಿನ ಜಯಶ್ರೀ ಕೆ. ಹೇಳಿದರು.

ಕೇವಲ ಮನೆಯಷ್ಟೇ ನಿರ್ಮಿಸಿಲ್ಲ. ಆ ಮನೆಗಳ ಮುಂದೆ ಸಾಮಾಜಿಕ ವಾತಾವರಣ ಹೇಗಿರುತ್ತಿತ್ತು ಎಂಬುದನ್ನು ತೋರಿಸಲು ಆಯಾ ಕಸುಬುಗಳನ್ನು ಮಾಡುವ ಯಜಮಾನ, ಮನೆಯಲ್ಲಿನ ಹೆಣ್ಣುಮಕ್ಕಳು, ಮಕ್ಕಳು, ವಯೋವೃದ್ಧರು, ಅವರ ಜೊತೆಯಾಗಿರುತ್ತಿದ್ದ ಪ್ರಾಣಿ, ಪಕ್ಷಿ, ಪರಿಕರಗಳಿಗೆ ಜೀವಂತಿಕೆ ಬಂದಿರುವುದು ನೋಡುಗರಲ್ಲಿ ಬೆರಗು ಮೂಡಿಸುತ್ತದೆ.

ನಗರದಲ್ಲಿದ್ದು ತಮ್ಮ ಊರುಕೇರಿ ಮರೆತವರಿಗೆ ಈ ಗ್ರಾಮ ಪ್ರವೇಶಿಸಿದಾಗ ವ್ಹಾ! ಇದು ನಮ್ಮನೆ, ನಮ್ಮೂರು, ನಮ್ಮ ಓಣಿ ಹೀಗಿತ್ತು, ನಮ್ಮ ಕೇರಿ ಹೀಗಿತ್ತು ಎಂದು ಖಂಡಿತವಾಗಿಯೂ ಅನಿಸುತ್ತದೆ.

ಹಳ್ಳಿಯಿಂದ ಬಂದು ನಗರದಲ್ಲಿ ನೆಲೆ ನಿಂತಿರುವವರು ತಮ್ಮ ಮಕ್ಕಳಿಗೆ, ನಿಮ್ಮ ತಾತ ಹೀಗೆ ಕುಳಿತುಕೊಳ್ಳುತ್ತಿದ್ದರು, ಅಜ್ಜಿ ಹೀಗೆ ಅಡುಗೆ ಮಾಡುತ್ತಿದ್ದರು. ನಮ್ಮ ಕೊಟ್ಟಿಗೆ, ಎತ್ತು, ಆಕಳು, ಎಮ್ಮೆ ಹೀಗೆ ಇರುತ್ತಿದ್ದವು. ನಾವು ಹೀಗೆ ಆಟ ಆಡುತ್ತಿದ್ದೆವು ಎಂದು ಹೇಳುವಾಗ ತಮ್ಮಲ್ಲೇ ತಾವು ಕಳೆದು ಹೋಗುತ್ತಾರೆ. 'ಗೂಗಲ್ ನೋಡಿ ಇಲ್ಲಿಗೆ ಭೇಟಿ ಕೊಟ್ಟೆ. ನಮ್ಮ ಹಳ್ಳಿಗಳ ಗತವೈಭವವನ್ನು ಇಲ್ಲಿ ನೆನಪಿಸಲಾಗುತ್ತಿದೆ. ಮನೋರಂಜನೆ ಅಷ್ಟೇ ಅಲ್ಲದೇ ಈಗಿನ ಮಕ್ಕಳಿಗೆ ತಿಳಿವಳಿಕೆ ಮೂಡಿಸಲು ಇದು ಪೂರಕ' ಎಂದು ಬೆಂಗಳೂರಿನ ಸಾಫ್ಟ್‌ವೇರ್ ಎಂಜಿನಿಯರ್ ಕಾರ್ತಿಕ್ ಹೇಳಿದರು.

ಊರಿನಲ್ಲಿ ನಡೆಯುತ್ತಿದ್ದ ಜಾತ್ರೆ, ಆ ಜಾತ್ರೆಯಲ್ಲಿನ ಕುಸ್ತಿ ಪಂದ್ಯಾವಳಿಗಳು, ಕೆರೆಕಟ್ಟೆ ಬಾವಿಗಳ ಕಡೆಗಿನ ಜೀವಂತಿಕೆ, ಹೊಲದಲ್ಲಿ ಗೇಯುವ ಎತ್ತುಗಳು, ಮೇಯುವ ದನಗಳು, ರೈತರು ಬಗ್ಗಿ ದುಡಿದು ಹಿಗ್ಗಿ ಮಾಡುವ ಸುಗ್ಗಿ ಸಂಭ್ರಮ... ಹೀಗೆ ಪ್ರತಿಯೊಂದು ಕಣ್ಣ ಮುಂದೆ ನಡೆಯುತ್ತಿದೆಯೇನೋ ಎಂಬಂತೆ ಭಾಸವಾಗುತ್ತದೆ. ಬಯಲಾಟ, ಯಕ್ಷಗಾನ, ಕಂಬಳ, ಶಾಲೆ ಗುಡಿ, ಸಂತೆ, ರಂಗಮಂದಿರದ ಮಾದರಿಗಳ ನೈಜ ಎನ್ನುವಂತಿದ್ದು, ಸೋಜಿಗವನ್ನು ಉಂಟು ಮಾಡುತ್ತವೆ.

ಈ ರೀತಿಯ 'ಮಾದರಿ ಗ್ರಾಮ'ಗಳನ್ನು ನೋಡಿ ಸಂಭ್ರಮಿಸಬೇಕೋ ಅಥವಾ ಆಧುನೀಕರಣದ ತೆಕ್ಕೆಗೆ ಸಿಕ್ಕು ನಾವು ನಮ್ಮದನ್ನು ಕಳೆದುಕೊಳ್ಳುತ್ತಿದ್ದೇವೋ ಎಂಬ ಗೊಂದಲ ಮೂಡುತ್ತದೆ. ಆದರೆ, ಬಹಳ ವರ್ಷ ನಗರದಲ್ಲಿಯೇ ನೆಲೆಸಿ ತಮ್ಮ ಹಳ್ಳಿಗಳನ್ನು ಮರೆತಿರುವವರು ಒಮ್ಮೆ ಭೇಟಿ ನೀಡಲೇಬೇಕಾದ ಗ್ರಾಮವಿದು.



ಬೆಂಗಳೂರಿನ ಪಾರಂಪರಿಕ ಮಾದರಿ ಕಲಾ ಗ್ರಾಮದಲ್ಲಿರುವ ಕುಸ್ತಿ ಪಂದ್ಯಾಟ ಬಿಂಬಿಸುವ ಕಲಾಕೃತಿ
ಚಿತ್ರಗಳು: ಕೃಷ್ಣ ಕುಮಾರ್ ಪಿ.ಎಸ್.

ಜನಪದ ಕಲಾವಿದನ ಕಲಾಕೃತಿ

ಸೊಲಬಕ್ಕನವರ ಎಂಬ ರೂವಾರಿ

ಬೆಂಗಳೂರಿನಲ್ಲಿ 'ಮಾದರಿ ಪಾರಂಪರಿಕ ಕಲಾ ಗ್ರಾಮ' ನಿರ್ಮಾಣಗೊಳ್ಳುವ ಮುನ್ನ ಶಿಗ್ಗಾವಿ ಬಳಿಯ ಗೋಟಗೋಡಿ 'ರಾಕ್ ಗಾರ್ಡನ್'ನಲ್ಲಿ ಈ ರೀತಿಯ ಯಶಸ್ವಿ ಪ್ರಯತ್ನವನ್ನು ಮಾಡಲಾಗಿದೆ. ಈ ಎಲ್ಲದರ ಹಿಂದಿನ ರೂವಾರಿ ಬಯಲಾಟ ಅಕಾಡೆಮಿಯ ಮಾಜಿ ಅಧ್ಯಕ್ಷ ಶಿಗ್ಗಾವಿ ತಾಲ್ಲೂಕಿನ ಹುಲಿಸೋಗಿಯ ದಿವಂಗತ ಟಿ.ಬಿ. ಸೊಲಬಕ್ಕನವರ.

ಮರೆತು ಹೋಗುತ್ತಿರುವ ನಮ್ಮ ಗ್ರಾಮೀಣ ಸಂಸ್ಕೃತಿಯನ್ನು ಕಲಾಕೃತಿಗಳ ಮೂಲಕ ಜೀವಂತವಾಗಿಡಬೇಕು ಎಂಬ ಆಶಯ ಮತ್ತು ಸೊಲಬಕ್ಕನವರ ಒತ್ತಾಸೆಯಿಂದ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ 'ಕಲಾ ಗ್ರಾಮ'ವನ್ನು ರೂಪಿಸಲು ಕ್ರಮ ಕೈಗೊಂಡಿತು. ಸೊಲಬಕ್ಕನವರ ಅವರ ಪುತ್ರ ರಾಜಹರ್ಷ ಈ ಪಾರಂಪರಿಕ ಗ್ರಾಮವನ್ನು 2020ರಲ್ಲಿ ರೂಪಿಸಿದರು. 'ರಂಗೋಲಿ ಗಾರ್ಡನ್' ಎಂಬ ಸಂಸ್ಥೆ ನಿರ್ವಹಣೆಯ ಹೊಣೆ ಹೊತ್ತಿದೆ.

ಕಿತ್ತೂರು ಚನ್ನಮ್ಮ ಹತ್ತ್ಯಾಳೋ ರಥ...

ಅಕ್ಟೋಬರ್ 23 ರಿಂದ 25 ರವರೆಗೆ ಕಿತ್ತೂರು ವಿಜಯೋತ್ಸವದ 200ನೇ ವರ್ಷಾಚರಣೆ ನಡೆಯಲಿದೆ. ಈ ಸಂಸ್ಥಾನದಲ್ಲಿ ರಥಗಳೂ ಇದ್ದವು ಎನ್ನವುದನ್ನು ಜಾನಪದ ವಿದ್ವಾಂಸರು, ಸಂಶೋಧಕರು ದಾಖಲೆ ಸಹಿತ ಅನಾವರಣಗೊಲಿಸಿದ್ದಾರೆ.

ಸಂತೋಷ ಈ. ಚಿನಗುಡಿ

ಆಂಗ್ಲೋ–ಕಿತ್ತೂರು ಯುದ್ಧದಲ್ಲಿ ರಾಣಿ ಚನ್ನಮ್ಮ ದಾಖಲಿಸಿದ ದಿಗ್ವಿಜಯಕ್ಕೆ ಈಗ ಇನ್ನೂರು ವಸಂತಗಳು. ಇಡೀ ದೇಶವನ್ನು ಆಕ್ರಮಿಸಿಕೊಳ್ಳಲು ದಂಡಯಾತ್ರೆಗೆ ನಿಂತಿದ್ದ ಈಸ್ಟ್ ಇಂಡಿಯಾ ಕಂಪನಿ ಸೈನ್ಯವನ್ನು ಅಟ್ಟಾಡಿಸಿ, ದಿಕ್ಕೆಟ್ಟು ಓಡುವಂತೆ ಮಾಡಿದ ಕಿತ್ತೂರು ಕಲಿತನ ಇತಿಹಾಸದ ಪುಟಗಳಲ್ಲಿದೆ. ಎರಡು ಶತಮಾನಗಳ ಬಳಿಕವೂ ಆ ವಿಜಯದ ರೋಚಕತೆ, ರೋಮಾಂಚನ ಕಡಿಮೆಯಾಗಿಲ್ಲ. ಇಷ್ಟೇ ಭಾವುಕ ಕಂಪನಗಳನ್ನು ಆ ಯುದ್ಧ ಇನ್ನೂರು ವರ್ಷಗಳ ಹಿಂದೆಯೂ ಹುಟ್ಟಿಸಿತ್ತು ಎಂಬುದನ್ನು ಜನಪದರು ಪದ ಕಟ್ಟಿ ಹಾಡಿದ್ದಾರೆ.

ಕಿತ್ತೂರು ದೇಸಗತಿಯ ಇತಿಹಾಸ ಹೆಚ್ಚಾಗಿ ದಾಖಲಾಗಿರುವುದು ಜನಕಥನಗಳಲ್ಲೇ. ಇಂಥದ್ದೇ ಒಂದು ಜನಕಥನ ಈಗ ರಾಣಿ ಚನ್ನಮ್ಮ ರಥದಲ್ಲಿ ಸಂಚರಿಸುತ್ತಿದ್ದಳು ಎಂಬುದನ್ನು ದಾಖಲಿಸಿದೆ. ಚನ್ನಮ್ಮನ ಬಳಿ ರಥವೂ ಇತ್ತು, ರಥದಲ್ಲಿ ಸಂಚಾರ ಕೂಡ ಮಾಡುತ್ತಿದ್ದಳು ಎಂಬ ಅಭಿಪ್ರಾಯವನ್ನು ಜಾನಪದ ವಿದ್ವಾಂಸ, ಸಂಶೋಧಕ ಪ್ರೊ.ಸಿ.ಕೆ.ನಾವಲಗಿ ದಾಖಲಿಸಿದ್ದಾರೆ.

ಗಂಡುಗಚ್ಚೆ ಹಾಕಿ, ಕುದುರೆ ಮೇಲೆ ಕುಳಿತು, ಎಡಗೈಯಲ್ಲಿ ಲಗಾಮು, ಬಲಗೈಯಲ್ಲಿ ಖಡ್ಗ ಎತ್ತಿಹಿಡಿದ ಪ್ರತಿಮೆಯನ್ನೇ ನಾವು ರಾಣಿ ಚನ್ನಮ್ಮನ ರೂಪ ಎಂದು ಒಪ್ಪಿಕೊಂಡಿದ್ದೇವೆ. ಇದುವರೆಗೂ ಚನ್ನಮ್ಮನನ್ನು ಕಾಣುವುದು, ನೆನೆಸಿಕೊಳ್ಳುವುದು, ಪೂಜಿಸುವುದು ಇದೇ ರೂಪದಲ್ಲಿ. ಆದರೆ, ಚನ್ನಮ್ಮ ರಥದಲ್ಲೂ ಸಂಚಾರ ಮಾಡಿದ್ದಳು ಎನ್ನುವ ಅಂಶ ಇತಿಹಾಸಕ್ಕೆ ಹೊಸ ಬೆಳಕು ನೀಡುವಂಥದ್ದು.



ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಲಹಳ್ಳಿ ಗ್ರಾಮದಲ್ಲಿ ದೊರೆತ ಕಿತ್ತೂರು ಚನ್ನಮ್ಮ ಸಂಚರಿಸಿದ ರಥದ ಚಕ್ರಗಳ ಅವಶೇಷಗಳು

ಇಲ್ಲಿವೆ ರಥದ ಅವಶೇಷ

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಲಹಳ್ಳಿಯ ಭುಜಬಲ ಹನಮಗೊಂಡ ಅವರ ಮನೆ ಪಕ್ಕದ ಖಾಲಿಜಾಗದಲ್ಲಿ ಈ ರಥದ ಎರಡು ಚಕ್ರಗಳು ಸಿಕ್ಕಿವೆ. ಹನಮಗೊಂಡ ಮನೆತನದವರು ತಲೆತಲಾಂತರಗಳಿಂದ ಈ ಚಕ್ರಗಳನ್ನು 'ಚನ್ನಮ್ಮನ ರಥ' ಎಂದೇ ಪೂಜಿಸುತ್ತ ಬಂದಿದ್ದಾರೆ. ಇದೇ ಜಾಗದಲ್ಲಿ ಪ್ರತಿ ವರ್ಷ ಜಾತ್ರೆ ನಡೆಯುತ್ತದೆ. ಕಾರಹುಣ್ಣಿಮೆಯ ಕರಿಹರಿಯುವ ದಿನದಂದು ಎತ್ತುಗಳ ಪೂಜೆ ಮಾಡುತ್ತ ಬಂದಿದ್ದಾರೆ. ಈಗಲೂ ಅದೇ ಪದ್ಧತಿ ಮುಂದುವರಿದಿದೆ.

ಇದು ಚನ್ನಮ್ಮನದ್ದೇ ರಥ ಎಂಬ ಸಂಗತಿಯನ್ನು ಊರ ಹಿರಿಯರು ಬಾಯಿಯಿಂದ ಬಾಯಿಗೆ ದಾಟಿಸುತ್ತ ಬಂದಿದ್ದಾರೆ. ಗ್ರಾಮಸ್ಥ ಶ್ರೀಶೈಲ ಬಸಪ್ಪ ಸಾವಂತ ಇವುಗಳ ಕುರಿತು ಸಂಶೋಧಕರ ಗಮನ ಸೆಳೆದರು. ಸಾಹಿತಿ, ವಕೀಲರೂ ಆದ ಜಮಖಂಡಿಯ ತಾತಾಸಾಹೇಬ ಬಾಂಗಿ ಪರಿಶೀಲಿಸಿ ಖಾತ್ರಿ ಮಾಡಿಕೊಂಡರು. ಪ್ರೊ.ನಾವಲಗಿ ಅದನ್ನು ಕೆದಕಿ, ಜನಕಥನದ ಸನ್ನಿವೇಶಗಳಲ್ಲಿ ಇದರ ಮಾತು ಇದೆಯೇ ಎಂದು ತಡಕಾಡಿದರು. ತಾರ್ಕಿಕ ಅಂತ್ಯಕ್ಕೆ ತಂದು ನಿಲ್ಲಿಸಿದರು.

ದಶಕಗಳ ಹಿಂದೆ ಈ ಚಕ್ರಗಳು ಪೂರ್ಣಪ್ರಮಾಣದಲ್ಲಿದ್ದವು. ಕಾಲ ಕಳೆದಂತೆ ಶಿಥಿಲಗೊಂಡಿವೆ. ಚಕ್ರದ ಮಧ್ಯಭಾಗ ಅಚ್ಚ ಹಾಕುವ ಗಡ್ಡಿಯು ಕಬ್ಬಿಣ ಮತ್ತು ಮರದಿಂದ ತಯಾರಾಗಿದೆ. ಅದರ ಸುತ್ತಲೂ ವೃತ್ತಾಕಾರದ ಕಟ್ಟಿಗೆಯ ಹಲಗೆ ಇದೆ. ಅದರ ಸುತ್ತಲಿನ ಅಂಚಿಗೆ ಎರಡು ಇಂಚು ದಪ್ಪನಾದ ಕಬ್ಬಿಣದ ಬಳೆ ಆಕಾರದ ಹಳಿ ಹಾಕಲಾಗಿದೆ.

ಜಮಖಂಡಿಯಲ್ಲೇ ಏಕೆ?

ಕಿತ್ತೂರು ಸಂಸ್ಥಾನದ ಸಮೃದ್ಧ ಸಂಪತ್ತಿನ ಮೇಲೆ ಪಟವರ್ಧನ ರಾಜರಿಗೆ ತುಂಬ ವ್ಯಾಮೋಹವಿತ್ತು. ಈಗ ಕಲಹಳ್ಳಿಯಲ್ಲಿ ಸಿಕ್ಕಿರುವ ರಥದ ಗಾಲಿಗಳು ಜಮಖಂಡಿಯ ಪಟವರ್ಧನ ಸಂಸ್ಥಾನದ ದೊರೆಗಳ ಸಂಚಿನಿಂದಾಗಿ ಅಲ್ಲಿಗೆ ಒಯ್ದಿರುವ ಸಾಧ್ಯತೆ ಇದೆ. ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಹಲವಾರು ದಾಖಲೆಗಳು, ಅವಶೇಷಗಳು ಜಮಖಂಡಿ ಸುತ್ತಲಿನ ಪ್ರದೇಶದಲ್ಲಿ ಕಂಡುಬರುತ್ತವೆ.



ಕಿತ್ತೂರು ಚನ್ನಮ್ಮ ಸಂಚರಿಸಿದ ರಥದ ಚಕ್ರಗಳ ಅವಶೇಷಗಳು

ಕಿತ್ತೂರು ಸಂಸ್ಥಾನದ ಪಲ್ಲಕ್ಕಿಯೊಂದು ಜಮಖಂಡಿ ಪಟವರ್ಧನ ಸಂಸ್ಥಾನದ ಅರಸರ ಬಳಿ ಇತ್ತು. ಲಿಲಾವ್ ನಡೆದ ಸಂದರ್ಭದಲ್ಲಿ ಆಗಿನ ನಿಡಸೋಸಿ ಮಠದ ಸ್ವಾಮೀಜಿ ಖರೀದಿಸಿದ್ದರು. ಈಗಲೂ ಆ ಪಲ್ಲಕ್ಕಿ ನಿಡಸೋಸಿ ಮಠದಲ್ಲಿದೆ ಎಂಬುದನ್ನು ಸಂಶೋಧಕರಾದ ಸುಭಾಷ ಹಿರೇಮಠ ಹಾಗೂ ರು.ಮ.ಷಡಕ್ಷರಯ್ಯ ಖಚಿತಪಡಿಸುತ್ತಾರೆ.

ಕಿತ್ತೂರು ಸಂಸ್ಥಾನದಲ್ಲಿ ಸಿಂಹಾಸನ, ಪಲ್ಲಕ್ಕಿಗಳು ಇದ್ದ ಬಗ್ಗೆ ಬ್ರಿಟಿಷ್ ಅಧಿಕಾರಿಗಳು ನಡೆಸಿದ ಪತ್ರ ವ್ಯವಹಾರಗಳಲ್ಲಿ ದಾಖಲೆ ಸಿಕ್ಕಿವೆ. ಅಂಥದ್ದೇ ದಾಖಲೆಗಳು ರಥದ ಬಗ್ಗೆಯೂ ಇರುವ ಸಾಧ್ಯತೆ ಇದೆ. ಆ ಬಗ್ಗೆ ಸಂಶೋಧನೆ ನಡೆಯಬೇಕಿದೆ. ಈ ಸಂಸ್ಥಾನಕ್ಕೆ ಸಂಬಂಧಿಸಿದ ಅಪಾರ ಪ್ರಮಾಣದ ದಾಖಲೆಗಳು, ಪತ್ರಗಳು ಲಂಡನ್ನಿನಲ್ಲಿ, ಮುಂಬೈ ಹಾಗೂ ಪುಣೆಯ ಪತ್ರಾಗಾರದಲ್ಲಿ ಉಳಿದುಕೊಂಡಿವೆ. ಅವುಗಳನ್ನು ಮರಳಿ ತಂದು ಶೋಧಿಸಬೇಕಿದೆ. ದೇವಗಾವಿಯ ಶಾಸನದಲ್ಲಿ ಕಿತ್ತೂರಿನ ರಾಜಬೀದಿಯ ಉಲ್ಲೇಖವಿದೆ. ಲಾವಣಿಗಳಲ್ಲೂ ರಾಜಬೀದಿಯ ಸ್ತುತಿ ಸಾಲುಗಳಿವೆ. ಹಾಗಾಗಿ, ಶೋಧ ಜಿಜ್ಞಾಸೆಯಿಂದ ಹೊರಬಂದು ಮೌಖಿಕ ಆಕರಗಳ ನೆಲೆಯಲ್ಲೇ ಇದನ್ನು ಖಾತ್ರಿಪಡಿಸಬಹುದು' ಎಂಬುದು ನಾವಲಗಿ ಅವರ ವಿವರಣೆ.

ನರಗುಂದ ಬಂಡಾಯ, ಹಲಗಲಿ ಬೇಡರ ಕದನ ಇತ್ಯಾದಿ ಘಟನೆಗಳಲ್ಲಿ ಬ್ರಿಟಿಷರು ನಿಶ್ಶಸ್ತ್ರೀಕರಣ ಕಾಯ್ದೆ ಜಾರಿಗೆ ತಂದು, ನಮ್ಮವರಲ್ಲಿದ್ದ ಶಸ್ತ್ರ–ಅಸ್ತ್ರಗಳನ್ನು ರಥದಲ್ಲಿ ಹೇರಿಕೊಂಡು ಹೋದರು ಎನ್ನುವ ಉಲ್ಲೇಖಗಳಿವೆ. ಆ ಕಾಲದಲ್ಲಿ ನಮ್ಮಲ್ಲಿ ರಥಗಳ ಬಳಕೆ ಇತ್ತು ಎಂಬುದನ್ನು ಈ ಸಾಲು ದೃಢಪಡಿಸುತ್ತದೆ. ಕಿತ್ತೂರು ಸಂಸ್ಥಾನದಲ್ಲಿ ಪಲ್ಲಕ್ಕಿ, ಮೇನೆ, ರಥ ಇರಲೇಬೇಕು. ಕಿತ್ತೂರು ರಾಜಸೀಮೆಯು ಗೋವೆಯವರೆಗೂ ಹರಡಿತ್ತು. ಹಲಸಿ, ನಂದಘಡ, ಖಾನಾಪುರ, ಬೆಳಗಾವಿ, ಸಂಪಗಾವಿ, ಕಾಕತಿ ಮುಂತಾದ ಪ್ರದೇಶಗಳಿಗೆ ಹೋಗಿ ಬರಲು ರಾಜ–ರಾಣಿಯರು ರಥವನ್ನು ಬಳಸಿದ್ದಾರೆ. ಆಂಗ್ಲೋ–ಕಿತ್ತೂರು ಯುದ್ಧದಲ್ಲೂ ರಥ ಬಳಸಿರುವ ಸಾಧ್ಯತೆ ಇದೆ. ಈ ಬಗ್ಗೆ ಸಂಶೋಧನೆಗೆ ಮುಂದಾಗಬೇಕಿದೆ' ಎಂಬುದನ್ನು ಅವರು ತಲಸ್ಪರ್ಶಿ ಅಧ್ಯಯನದಲ್ಲಿ ತಿಳಿಸಿದ್ದಾರೆ.

'ಈ ಚಕ್ರಗಳು ಆ ಕಾಲದ ಜನ ಸಂಚಾರಕ್ಕೆ ಬಳಸುತ್ತಿದ್ದ ಕುದುರೆಗಾಡಿಯ ಗಾಲಿಗಳು ಆಗಿರಬಹುದೇ' ಎಂಬ ಸಂದೇಹವೂ ಸಂಶೋಧಕರನ್ನು ಕಾಡಿದೆ.

'ಟಾಂಗಾದ ಗಾಲಿಗಳ ಆಕಾರ ಚಿಕ್ಕದು ಮತ್ತು ಬಹುಭಾಗ ಕಟ್ಟಿಗೆಯಿಂದ ಮಾಡಲಾಗಿರುತ್ತದೆ. ಕಲಹಳ್ಳಿಯಲ್ಲಿ ಸಿಕ್ಕ ಚಕ್ರಗಳು ಮೆಟಲ್‌ನಿಂದ ಮಾಡಲಾಗಿವೆ. ಗಾತ್ರದಲ್ಲೂ ದೊಡ್ಡದಿವೆ. ಇವುಗಳನ್ನು ರಥದ ಚಕ್ರಗಳೇ ಎಂದು ಸ್ಪಷ್ಟವಾಗಿ ಗುರುತಿಸಲು ಸಾಧ್ಯ' ಎನ್ನುತ್ತಾರೆ ಪ್ರೊ.ನಾವಲಗಿ.

ಕಿತ್ತೂರು ಸಂಸ್ಥಾನದ ಅವಶೇಷಗಳು, ಸಂಪತ್ತು ನಮ್ಮ ಸುತ್ತಲಿನ ಪ್ರದೇಶದಲ್ಲೇ ಅವಿತಿವೆ. ಅವುಗಳನ್ನು ಶೋಧಿಸಿ ವಸ್ತುಸಂಗ್ರಹಾಲಯಕ್ಕೆ ಸೇರಿಸಬೇಕು ಎಂಬುದು ನಾಡಾಭಿಮಾನಿಗಳ ಹಂಬಲ.

ಜನಪದವೇ ನಿಖರ ಆಕರ



ಲಾವಣಿ, ಗೀ ಗೀ, ದುಂದುಮೆ, ಕೋಲುಪದ, ಹಂತಿಪದ, ಗರತಿಹಾಡುಗಳಲ್ಲಿ ಸಿಕ್ಕ ಸಾಲುಗಳು ಈಗ ಕಿತ್ತೂರು ಸಂಸ್ಥಾನ ಇತಿಹಾಸ ಕಟ್ಟಿಕೊಟ್ಟಿವೆ. ಜನಪದರು ಕೇವಲ ಭಾವನಿಷ್ಠರಾಗದೇ, ವೈಚಾರಿಕ ನಿಷ್ಠರಾಗಿಯೂ ಹಾಡಿದ್ದಾರೆ. ರಾಣಿ ಅಥವಾ ರಾಜನ ಬಗ್ಗೆ ಅವರು ಕಂಡದ್ದನ್ನು ಕಂಡಂತೆ ಹಾಡಿದ್ದಾರೆ. ಉಪಮೆಗಳನ್ನು ಬಳಸಿ, ಅಲಂಕಾರಗಳನ್ನು ಪ್ರಯೋಗಿಸಿಲ್ಲ. ಕಿತ್ತೂರು ದೊರೆಗಳು ಜನಪದ ಕಲಾವಿದರಿಗೆ ಆಶ್ರಯ ನೀಡಿದ್ದರು. ಹೀಗಾಗಿ, ಅವರ ಪದಗಳೇ ನಿಖರ ಇತಿಹಾಸ ಹೇಳುತ್ತವೆ ಎಂಬುದನ್ನು ಪ್ರೊ.ಸಿ.ಕೆ. ನಾವಲಗಿ ಅವರು 'ಕಿತ್ತೂರು ಸಂಸ್ಥಾನ; ಜನಕಥನದ ಅನುಸಂಧಾನ' ಕೃತಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಬನ, ಬಯಲಲ್ಲಿ ಅಣಬೆ ಬೇಟೆ

12ನೇ ಪುಟದಿಂದ..

ಅಂದಹಾಗೆ ಶಿಲೀಂಧ್ರ ಜಾತಿಗೆ ಸೇರಿರುವ ಅಣಬೆಗಳಲ್ಲಿ ಖಾದ್ಯ ಮತ್ತು ವಿಷ ಅಣಬೆಗಳು ಎಂಬ ಎರಡು ಬಗೆ. ಬಹುತೇಕ ವರ್ಣರಂಜಿತ ಅಣಬೆಗಳು ವಿಷ ಅಣಬೆಗಳಾದರೆ ಬಿಳಿ ಗುಂಡಿ ಅಣಬೆಗಳು ತಾಜಾ ತರಕಾರಿಗಳಿಗಿಂತ ಹೆಚ್ಚು ಪೋಷಕಾಂಶ ಹೊಂದಿರುತ್ತವೆ. ಇವು ಮೊಟ್ಟೆ, ಮಾಂಸದ ರುಚಿಯನ್ನೂ ಮೀರಿಸಬಲ್ಲದು. ಹೀಗಾಗಿ ರೋಮನ್ನರು ಈ ಅಣಬೆಗಳನ್ನು ದೇವರ ಆಹಾರವೆಂದು ವರ್ಣಿಸಿದ್ದಾರೆ. ಗ್ರಾಮೀಣ ಭಾಗದಲ್ಲಿ ಕೆಲವೆಡೆ ಒರಪು, ನುಚ್ಚು ಅಣಬೆ ಅಂತ ಇವುಗಳನ್ನು ಕರೆಯಲಿದ್ದು, ಇವು ತುಂಬಾ ರುಚಿಕರ ಮತ್ತು ಪುಷ್ಟಿದಾಯಕ. ಇವುಗಳನ್ನು ನೀರಿನಲ್ಲಿ ಉಪ್ಪು ಹಾಕಿ ಚೆನ್ನಾಗಿ ತೊಳೆದು ಎಣ್ಣೆ, ಖಾರ, ದನಿಯಾ ಪುಡಿ, ಹುಣಸೆ ಹುಳಿ ಹಿಂಡಿ ಸಾರು ಮಾಡಿ ಕೊನೆಗೆ ಜೋಳದ ಹಿಟ್ಟನ್ನು ಹದ ಪ್ರಮಾಣದಲ್ಲಿ ಕಲಿಸಿದರೆ ಅದರ ರುಚಿ, ಪರಿಮಳ ಆಹಾ... ಇವು ಪೂರ್ತಿ ಅರಳುವ ಮುಂಚೆ ಬಳಸಬೇಕು. ಇವು ಮರಗಿಡ, ಬೆಳೆಗಳಿಗೆ ಬೇಕಾದ ರಂಜಕ ಮುಂತಾದ ಆಹಾರಾಂಶಗಳನ್ನು ಒದಗಿಸುತ್ತವೆ. ಸಸ್ಯಗಳ ಬೇರುಗಳಿಗೆ ಬರುವ ರೋಗಗಳನ್ನು ತಡೆಗಟ್ಟುತ್ತವೆ.

'ಈಗ ಮುಂಚಿನಂಗೆ ಅಣಬೆ ಸಿಗುತ್ತಿಲ್ಲ. ಮೊದಲೆಲ್ಲ ನಮಗೆ ಹೆಚ್ಚಾಗಿ ಪಟ್ಟಣಗಳಿಗೆ ಒಯ್ದು ಮಾರಿಕೊಂಡು ಬರುತ್ತಿದ್ದೆವು. ಈಗ ನಮಗೇ ಸಾಲ್ದು...' ಎನ್ನುತ್ತಾರೆ ಕೂಡ್ಲಿಗಿ ತಾಲ್ಲೂಕಿನ ಗುಡೇಕೋಟೆಯ ಶಶಿ. ಮಳೆ ಕೊರತೆ, ಹವಾಮಾನ ವೈಪರೀತ್ಯ, ಬೆಳೆಗಳಿಗೆ ವಿಪರೀತ ರಾಸಾಯನಿಕಗಳ ಬಳಕೆ ಇತ್ಯಾದಿಗಳಿಂದ ನಾಟಿ ಅಣಬೆಗಳು ದುರ್ಲಭವಾಗುತ್ತಿವೆ. ಹೀಗಾಗಿ ಒಂದು ವೇಳೆ ಅಣಬೆ ಸಿಗದಿದ್ದರೂ ಒಳ್ಳೆಯ ಪರಿಸರ, ಶುದ್ಧಗಾಳಿ ಜೊತೆಗೆ ಕವಳೆ, ಬುಕ್ಕೆ, ಲೇಬಿ.. ಕಾಡುಹಣ್ಣು, ಹೂವುಗಳಿಗಿಂತೂ ಮೋಸವಿಲ್ಲ.



ಅಣಬೆ ಹುಡುಕಾಟದಲ್ಲಿ ರೈತರು

ಕತ್ತಲಿನಲ್ಲಿ ಅಡವಿ ಅಂಚಿನ ಹೊಲಗಳಿಗೆ ಹೋಗುವುದರಿಂದ ಕಾಡುಪ್ರಾಣಿಗಳು ಮುಖಾಮುಖಿ ಆಗುವ, ಪ್ರಾಣಾಪಾಯಕ್ಕೆ ಸಿಲುಕುವ ಸಾಧ್ಯತೆಗಳಿವೆ. ಈ ಕಾರಣಕ್ಕೆ ಜಾಗೃತವಾಗಿರಬೇಕು. ಇದಕ್ಕಾಗಿ ಕಾಡು ಬಲ್ಲವರು ಇಲ್ಲವೇ ಅರಣ್ಯ ಇಲಾಖೆಯ ಸಿಬ್ಬಂದಿಯವರೊಂದಿಗೆ ತೆರಳಿ. ಇಲ್ಲವೇ ಕಾಡುಪ್ರಾಣಿಗಳ ಉಪಟಳ ಇಲ್ಲದ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳಿ. ಬೆಳಕು ಹರಿದ ಮೇಲೆ ಕಾಡಿಗೆ ಹೋದರೆ ಇನ್ನೂ ಒಳ್ಳೆಯದು.

ಮುನ್ನೋಟ 20-10-2024 ರಿಂದ 26-10-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಿಮ್ಮ ಕಾರ್ಯಚಟುವಟಿಕೆಗಳ ಬಗ್ಗೆ ಹೆಚ್ಚು ಗಮನಹರಿಸುವಿರಿ. ಆದಾಯವು ಬಹಳ ಉತ್ತೇಜನಕಾರಿಯಾಗಿರುತ್ತದೆ. ಬಂಧುಗಳ ಸಹಕಾರ ಸಿಗುವ ಸಾಧ್ಯತೆ ಇದೆ. ಭೂಮಿಗೆ ಸಂಬಂಧಿಸಿದ ವ್ಯವಹಾರಗಳಿಂದ ಹೆಚ್ಚು ಲಾಭವಿರುತ್ತದೆ. ಸಂಸಾರದಲ್ಲಿ ಸಂತೋಷವಿರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಧಾರ್ಮಿಕ ಕಾರ್ಯಗಳಿಗಾಗಿ ಹಣ ಖರ್ಚಾಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ನಿಮ್ಮ ನಿರ್ಧಾರಗಳು ನಿಮಗೆ ಲಾಭವನ್ನು ತರುತ್ತವೆ. ಆದಾಯವು ಕಡಿಮೆ ಇದ್ದರೂ ಹೊಸ ಮೂಲಗಳಿಂದ ಆದಾಯ ತರುವ ಕಲೆ ಸಿದ್ಧಿಸುತ್ತದೆ. ಕೃಷಿಯಿಂದ ಹೆಚ್ಚು ಆದಾಯವಿರುತ್ತದೆ. ನಿಮ್ಮ ಕೆಲಸಕಾರ್ಯಗಳಿಗೆ ಬಂಧುಗಳಿಂದ ಸಹಕಾರ ದೊರೆಯುತ್ತದೆ. ಕಣ್ಣಿನ ತೊಂದರೆ ಇರುವವರು ಹೆಚ್ಚು ಎಚ್ಚರ ವಹಿಸಿರಿ. ಸಂಗಾತಿಯಿಂದ ಆರ್ಥಿಕ ಸಹಕಾರ ನಿರೀಕ್ಷೆ ಮಾಡಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆಕ್ರೋಶ ನಿಮ್ಮಲ್ಲಿ ಮನೆ ಮಾಡಿರುತ್ತದೆ. ಮಾತಿನಲ್ಲಿ ನಯವಿದ್ದರೂ ಕೂಡ ಅದರ ಹಿಂದಿನ ಕೊಂಕು ಎದ್ದು ಕಾಣುತ್ತದೆ. ಆದಾಯದಷ್ಟೇ ಖರ್ಚು ಇರುತ್ತದೆ. ಸರ್ಕಾರದ ಜೊತೆಗಿನ ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚು ಅಭಿವೃದ್ಧಿಯನ್ನು ಕಾಣಬಹುದು. ಸಂಗಾತಿಯ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸ ಕಾಣಬಹುದು. ನಿಮ್ಮ ಸಂಗಾತಿಯ ದುಡಿಮೆಯು ಅವರ ಖರ್ಚಿಗೇ ಆಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಏನೇ ಬಂದರೂ ಎದುರಿಸುವ ಛಲ ನಿಮ್ಮಲ್ಲಿ ತುಂಬಿರುತ್ತದೆ. ಆದಾಯವು ನಿಮ್ಮ ಖರ್ಚನ್ನು ತೂಗಿಸುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಪಡೆಯುವ ಕಾಲವಿದು. ಶೀತಬಾಧೆ ಅಥವಾ ಹೊಟ್ಟೆಯುಬ್ಬರಗಳು ಸ್ವಲ್ಪ ಕಾಡಬಹುದು. ಸಂಗಾತಿಯು ನಿಮಗೆ ಸರಿಯಾಗಿ ಸ್ಪಂದಿಸದಿರಬಹುದು. ವಿದೇಶಕ್ಕೆ ಹೋಗಬೇಕೆಂದು ಆಶಿಸುವವರ ಆಸೆ ಈಗ ಈಡೇರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ನಿಮ್ಮ ಬುದ್ಧಿ ಚಾತುರ್ಯದಿಂದ ಹಿರಿಯರ ಸಹಾಯ ಪಡೆಯುವಿರಿ. ಭೂಮಿ ವ್ಯವಹಾರ ಮಾಡುವವರಿಗೆ ಸ್ವಲ್ಪ ಲಾಭವಿರುತ್ತದೆ. ಮಕ್ಕಳ ವಿಷಯದಲ್ಲಿ ಸಂತೋಷಪಡುವಂತಹ ಸುದ್ದಿಗಳು ಬರುತ್ತವೆ. ಕೆಲವರಿಗೆ ಹಳೆಯ ನೋವುಗಳು ಕಾಡಬಹುದು. ಸಂಗಾತಿಯು ಸಂಸಾರಕ್ಕೆ ಬಹಳ ಸಹಾಯ ಮಾಡುವರು. ವ್ಯಾಪಾರ, ವ್ಯವಹಾರಗಳಲ್ಲಿ ಬಹಳ ಎಚ್ಚರದಿಂದಿರಿ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕೆಲವರಿಗೆ ಧರ್ಮಶ್ರದ್ಧೆ ಹೆಚ್ಚಾಗುತ್ತದೆ. ಆದಾಯದಲ್ಲಿ ಸ್ವಲ್ಪ ಏರಿಕೆ ಕಾಣಬಹುದು. ಹಿರಿಯರ ಜೊತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ. ನಿಮಗೆ ಮಹಿಳೆಯರ ಸಹಕಾರ ದೊರೆಯುತ್ತದೆ. ಹಿರಿಯರ ಆಸ್ತಿಯಲ್ಲಿ ಪಾಲು ದೊರಕುವ ಸಂದರ್ಭವಿದೆ. ಸಾಲ ಕೊಟ್ಟವರ ಕಾಟ ಪ್ರಾರಂಭವಾಗಬಹುದು. ವಿದೇಶಿ ವ್ಯವಹಾರಗಳನ್ನು ಮಾಡುವವರಿಗೆ ಅಭಿವೃದ್ಧಿ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸಾಕಷ್ಟು ವ್ಯವಹಾರಿಕವಾಗಿ ಯೋಚನೆ ಮಾಡುವಿರಿ. ಆದಾಯದಲ್ಲಿ ಸ್ವಲ್ಪಮಟ್ಟಿನ ಚೇತರಿಕೆ ಇರುತ್ತದೆ. ಹಿರಿಯರಿಂದ ನಿಮ್ಮ ಕಾರ್ಯ ಶೈಲಿಯ ಕುರಿತು ವಿರೋಧ ವ್ಯಕ್ತವಾಗುತ್ತದೆ. ಕೃಷಿಭೂಮಿಕೊಳ್ಳಲು ಉತ್ಸುಕತೆಯನ್ನು ತೋರುವಿರಿ. ಕೀಲು ನೋವು ಈಗ ಮರುಕಳಿಸಬಹುದು. ವಿದೇಶಿ ವ್ಯವಹಾರ ಮಾಡುವವರಿಗೆ ನಿರೀಕ್ಷಿತ ಪ್ರಗತಿ ಇರುವುದಿಲ್ಲ. ಸಂಗಾತಿಯಿಂದ ಸೂಕ್ತ ಸಹಕಾರ ದೊರೆಯುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಬಹಳ ಆಕರ್ಷಕ ವ್ಯಕ್ತಿತ್ವವನ್ನು ರೂಢಿಸಿಕೊಳ್ಳುವಿರಿ. ಆದಾಯವು ಚೇತರಿಕೆ ಹಾದಿಯಲ್ಲಿರುತ್ತದೆ. ನಿಮ್ಮ ಬಂಧುಗಳ ನಡುವಿನ ಶತ್ರುಗಳನ್ನು ಹುಡುಕಿ ತೆಗೆಯುವಿರಿ. ಕೃಷಿಯಲ್ಲಿ ನಿಮಗೆ ಅಪಾರವಾದ ನಂಬಿಕೆ ಇರುತ್ತದೆ. ಹೊರದೇಶದಲ್ಲಿ ಓದಬೇಕೆನ್ನುವವರಿಗೆ ಅವಕಾಶಗಳು ದೊರೆಯುತ್ತವೆ. ಹಳೆಯ ಗಾಯಗಳು ಕೆಲವರನ್ನು ಕಾಡಬಹುದು. ಸಂಗಾತಿ ಕಡೆಯಿಂದ ಧನಸಹಾಯ ದೊರೆಯುತ್ತದೆ. ಕೆಲವು ವಿಷಯಗಳಿಗೆ ತಾಯಿಯ ವಿರೋಧವನ್ನು ಕಟ್ಟಿಕೊಳ್ಳಬೇಕಾಗಬಹುದು.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಏನೋ ಒಂದು ಸಾಧಿಸಿದ ಭಾವನೆ ನಿಮ್ಮಲ್ಲಿರುತ್ತದೆ. ಆದಾಯವು ಕಡಿಮೆ ಇದ್ದರೂ ಬೇರೆ ಮೂಲಗಳಿಂದ ಸರಿದೂಗಿಸುವಿರಿ. ವಿದೇಶದಲ್ಲಿ ಪ್ರವಾಸ ಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಆದಾಯ ಹೆಚ್ಚುತ್ತದೆ. ಮಕ್ಕಳ ಅಭಿವೃದ್ಧಿಯಲ್ಲಿ ಯಶಸ್ಸನ್ನು ಕಾಣುವಿರಿ. ಹಣಕಾಸಿನ ಸ್ಥಿತಿಗತಿಗಳನ್ನು ಅರಿತು ಹಿರಿಯರು ಸಹಾಯ ಮಾಡುವರು. ಸಂಗಾತಿಯ ಸಾಹಿತ್ಯ ಕೃಷಿಗೆ ನೀವು ಸಹಕಾರ ನೀಡುವಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಏನೇ ಆದರೂ ಮುನ್ನುಗ್ಗುವ ಛಲ ನಿಮ್ಮಲ್ಲಿ ಇರುತ್ತದೆ. ಆದಾಯ ಕಡಿಮೆ ಇದ್ದರೂ ಅದರಲ್ಲೇ ನಿರ್ವಹಣೆ ಮಾಡುವಿರಿ. ವ್ಯವಹಾರ ಮಾಡುವವರಿಗೆ ಮಂದಗತಿಯ ವ್ಯವಹಾರವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಫಲಿತಾಂಶ ದೊರಕುವ ಸಾಧ್ಯತೆಗಳಿವೆ. ಬಂಧುಗಳ ಜೊತೆ ಮಾಡಿದ ವ್ಯವಹಾರಗಳಲ್ಲಿ ನಷ್ಟವಿರುತ್ತದೆ. ಈಗ ಸಂಗಾತಿಯಿಂದ ಗೌರವದ ಜೊತೆಗೆ ಆರ್ಥಿಕ ಸಹಕಾರ ಸಿಗುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ತಂತ್ರಜ್ಞಾನ ಶಿಕ್ಷಕರಿಗೆ ಗೌರವ ದೊರೆಯುತ್ತದೆ. ಹಿರಿಯರ ಕಾರ್ಯ ನೋಡಿ ಬಂಧುಗಳು ಅವರನ್ನು ಅಭಿನಂದಿಸುವರು. ರಿಯಲ್ ಎಸ್ಟೇಟ್ ಉದ್ಯೋಗ ಮಾಡುವವರಿಗೆ ಲಾಭವಿರುತ್ತದೆ. ದೊಡ್ಡಮಟ್ಟದಲ್ಲಿ ಹೈನುಗಾರಿಕೆ ಮಾಡುತ್ತಿರುವವರಿಗೆ ಆದಾಯ ಹೆಚ್ಚುತ್ತದೆ. ಸಂಸಾರದಲ್ಲಿ ಸಂತೋಷ ಮನೆ ಮಾಡಿರುತ್ತದೆ. ಕಟ್ಟಡಗಳನ್ನು ನಿರ್ಮಿಸುವವರಿಗೆ ಬೇಡಿಕೆ ಹೆಚ್ಚುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಬಂಧುಗಳನ್ನು ಓಲೈಸಿಕೊಂಡು ಅವರಿಂದ ಸಹಾಯ ಪಡೆಯುವಿರಿ. ಕೃಷಿಯಿಂದ ಆದಾಯ ಇರುತ್ತದೆ. ಕೃಷಿಭೂಮಿಯನ್ನು ಮಾರಾಟ ಮಾಡುವವರಿಗೆ ಅಧಿಕ ಲಾಭ ದೊರೆಯುವ ಸಾಧ್ಯತೆ ಇದೆ. ವಿದ್ಯಾರ್ಥಿಗಳು ಅವರ ಶ್ರಮದಿಂದ ಉತ್ತಮ ಫಲಿತಾಂಶವನ್ನು ಪಡೆಯಬಹುದು. ನೇತ್ರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಯ ಧರ್ಮಬೋಧನೆ ನಿಮಗೆ ಹಿಡಿಸದಿರಬಹುದು.

ಪದಬಂಧ 2863



ಮೇಲಿನಿಂದ ಕೆಳಕ್ಕೆ
1. ವರ್ಷವಾಗುವ ಋತು, ಮೋಡ ಕರೆವ ಸಮಯ 4
2. ಶ್ರೀಕೃಷ್ಣ ತೋರಿಸಿದ ಬೃಹದ್ ದರ್ಶನ 5
3. ನಿವಾರಿಸುವ ಶಿವ ಒಳ್ಳೆಯದನ್ನು ಮಾಡುವ ಹಸ್ತವುಳ್ಳವ 5
4. ಹೂವಿನ ಒಂಬತ್ತು ಎಸಳು 4
9. ಹಾಯಲು ಬರುವ ನೆರವು 3
11. ತೆಗೆದುಕೊಂಡು ಬರಲೇ ಎನ್ನುವ ತುಂಟ 3
12. ನಿವಾರಿಸುವ ಈಶ್ವರ ಗಿರಿಸುತೆಯ ಜೊತೆ ಮಿಲನಗೊಂಡ 5
13. ಗ್ರೀಷ್ಮದ ಮೊದಲು ಪಲ್ಲವಿಸುವ ಚೈತ್ರ ವೈಶಾಖ ತಿಂಗಳು 5
14. ಕ್ಷೀರ ಸಮುದ್ರ ಕನ್ಯೆಯ ಕಡಲು 5
15. ಈ ಧ್ವನಿ ಸದೇಹದಿಂದ ಮೂಡಿಬಂದದ್ದು 5

ಎಡದಿಂದ ಬಲಕ್ಕೆ
1. ಪೂಜೆಗೆ ಬರುವ ದೊಡ್ಡ ಸ್ತ್ರೀಶಕ್ತಿ 4
3. ಹಬ್ಬಕ್ಕೆ ಸೇರಿ ಮುಂದೆ ಹೋಗುವ ದಿನ 4
5. ಅರಸನಿಗೆ ಮಾಡುವ ಸಕಲ ಮರ್ಯಾದೆ 5
6. ಸೂತ್ರ ಹಿಡಿದರೆ ವಾಯುವಿನಲ್ಲಿ ಇದು ಹಾರುತ್ತದೆ 4
7. ಸಾಗರೋತ್ಪನ್ನ ಮಾಡುವ ಭೋಂ ಭೋಂ ಎನ್ನುವ ಧ್ವನಿ 4
8. ಸೌಂದರ್ಯ ಹೆಚ್ಚಿಸುವ ಸಾಧನ 5
9. ಬಹಳ ಹತ್ತಿರ 3
10. ಬಿಡುವಿನಲ್ಲಿ ಸಿಗುವ ಬೆಳ್ಳಿ 3
12. ಕುದುರೆ ಮುಖದಲ್ಲಿ ತಯಾರಾಗುವ ವಿಶೇಷ ಸಿಹಿ 4
14. ಎಳ್ಳಷ್ಟೂ ಇದು ಸಂದೇಹಕ್ಕೆಡೆಗೊಡದ ಪದ 4
16. ಮಕ್ಕಳ ಭಾಗ್ಯವನ್ನು ಕೊಡುವ ವಿಷ್ಣುಪ್ರಿಯೆ 5
17. ಕೃಷ್ಣನ ಸತಿಯರು ಬಯಸಿದ ಹೂವು ಹಾರಿಹೋಗುತ್ತದೆಯೇ? 4
18. ಹಣವನ್ನು ಈಸಿ ತೆಗೆದುಕೊಳ್ಳುವವ 4
19. ಕಿವಿಗೆ ಹಿತವಾದ ಆಲಾಪನೆ 5
20. ವಿಜಯನಗರದ ಅಪ್ಪಾಜಿ 4
21. ಹೊಳೆಯುವ ರತ್ನವಾಗಿ ಲಕ್ಷ್ಮೀ ಸ್ವರೂಪ 4

ಪದಬಂಧ ಉತ್ತರ -2862

ಮೇಲಿಂದ ಕೆಳಕ್ಕೆ


1. ಸರಸ್ವತಿ 2.ಮರುಮನವಿ 3.ಕಾಮನಯನಿ 4.ನಿಜಾಯಿತಿ 7.ಲಕ್ಷ್ಮೀದೇಗುಲ 8.ನಿಜಸಂಗತಿ 10.ಸ್ಥಿರಗಂಭೀರ 12.ಜನಸಾಗರ 13.ತಿಮಿರಹರ 14.ಮುಕಾಂಬಿಕೆ 16. ಸಮಭಾವ

ಎಡದಿಂದ ಬಲಕ್ಕೆ

1. ಸರಿಗಮ 3.ಕಾತ್ಯಾಯಿನಿ 5.ರುದ್ರಸಂಗಮ 6.ತಿಲದಾನ 9.ಯಥಾಸ್ಥಿತಿ 11.ವಿಶ್ವಜನನಿ 12.ಜನಗಣತಿ 14.ಮೂಲಧನ 15.ಮಿಶ್ರರಸ 17.ಗಣಸಮೂಹ 18.ಕೆನ್ನಾಗರ 19.ರಥೋತ್ಸವ

ಹೊಳೆದದ್ದು ಸಾಹಿತ್ಯ ಉಳಿದದ್ದು ಸಂಬಂಧ

ಕನ್ನಡದ ಹೆಸರಾಂತ ವಿಮರ್ಶಕ ಜಿ.ಎಸ್. ಆಮೂರ ಅವರ ಜನ್ಮ ಶತಮಾನೋತ್ಸವ ಅಕ್ಟೋಬರ್ 20 ರ ಭಾನುವಾರ ಧಾರವಾಡದಲ್ಲಿ ನಡೆಯಲಿದೆ. ಆಮೂರರೊಂದಿಗೆ ಬಹುಕಾಲ ಒಡನಾಟ ಹೊಂದಿದ್ದ **ಶ್ರೀಧರ ಬಳಗಾರ** ಅವರು ಈ ಸಂದರ್ಭದಲ್ಲಿ ನೆನಪು ಮಾಡಿಕೊಂಡಿದ್ದಾರೆ.


ಜಿ.ಎಸ್.ಆಮೂರ

ಪದವಿ ಶಿಕ್ಷಣಕ್ಕಾಗಿ ನಾನು ಧಾರವಾಡಕ್ಕೆ ಹೋದ ಕೆಲವೇ ದಿನಗಳಲ್ಲಿ ಅಲ್ಲಿಯ ಪರಿಸರದ ಪರಿಚಯವಾಗುತ್ತ ಹುಟ್ಟಿದೂರಿನ ಪ್ರೀತಿಯ ವಿಸ್ತರಣೆಯಾಯಿತು. ಈ ಪ್ರೀತಿಯ ಪ್ರವೇಶಕ್ಕೆ ಕಾರಣರಾದವರಲ್ಲಿ ಕೀರ್ತಿನಾಥ ಕುರ್ತಕೋಟಿ ಮತ್ತು ಜಿ. ಎಸ್. ಆಮೂರವರು ಪ್ರಮುಖರು.

ಕಾಲೇಜಿನಲ್ಲಿ ಪಾಠ ಮಾಡುತ್ತ ವರ್ಷದಲ್ಲಿ ಒಂದೆರೆಡು ಸಲ ಪರೀಕ್ಷೆಯ ಕೆಲಸಕ್ಕೆ ಧಾರವಾಡಕ್ಕೆ ಹೋಗುತ್ತಿದ್ದ ದಿನಗಳಲ್ಲಿ ನಿತ್ಯ ಸಂಜೆ ಬಿಡುವಿನ ಸಮಯ ಮನೋಹರ ಗ್ರಂಥ ಮಾಲೆಯ ಅಟ್ಟಕ್ಕೆ ಮತ್ತು ಆಮೂರವರ ಮನೆಗೆ ಹೋಗುವುದು ವ್ರತವಾಯಿತು. ಅಟ್ಟದ ಮುಸ್ಸಂಜೆಯಲ್ಲಿ ಕುರ್ತಕೋಟಿಯವರೊಂದಿಗೆ ಮಾತು ಮಥಿಸಿ ದೂರದ ದಿಗಂತವಾಗಿದ್ದ ಧಾರವಾಡದ ಪೇಶ್ವೆಯವರು ಕಟ್ಟಿದ ರವಿವಾರ ಪೇಟೆ, ಬಿಜಾಪುರ ಸುಲ್ತಾನರು ಕಟ್ಟಿದ ಕೋಟೆ, ಡೆಪ್ಯೂಟಿ ಚನ್ನಬಸಪ್ಪನವರು ತೆರೆದ ಶಿಕ್ಷಕರ ಟ್ರೇನಿಂಗ್ ಕಾಲೇಜು, ಹಿಂದೂಸ್ತಾನೀ ಸಂಗೀತ ಬೀಜ ಬಿತ್ತಿದ ಭಾಸ್ಕರಬುವಾ, ಮಲ್ಲಿಕಾರ್ಜುನ ಮನಸೂರು ಮತ್ತು ಬೇಂದ್ರೆಯವರ ನಡುವೆ ನಿರ್ಜನ ಬೀದಿಗಳಲ್ಲಿ, ಬೆಳದಿಂಗಳ ರಾತ್ರಿಯಲ್ಲಿ ನಡೆಯುತ್ತಿದ್ದ ಸಂವಾದ, ಮಂಗಳವಾರದ ಸಂತೆಯಲ್ಲಿ ತಿರುಗಾಡಿ ಶಬ್ದಕೋಶವನ್ನು ಸಂಕಲಿಸಿದ ಕಿಟ್ಟೆಲ್, ಗಂಗಾಧರ ತುರಮರಿಯವರು ಮಾಡಿದ ಬಾಣನ ಕಾದಂಬರಿಯ ಭಾಷಾಂತರ, ಬೇಂದ್ರೆಯವರ ಸಾಧನಕೇರಿ, ಅತ್ತಿಕೊಳ್ಳ, ಸೋಮೇಶ್ವರ–ಹೀಗೆ ಹಲವು ಸಂಗತಿಗಳು ಸನಿಹ ಬಂದವು. ಕರ್ನಾಟಕ ಕಾಲೇಜು, ರೊದ್ದ ರಸ್ತೆ, 'ಗೆಳೆಯರ ಗುಂಪು', ವಿದ್ಯಾವರ್ಧಕ ಸಂಘದ ಚರಿತ್ರೆ ಮತ್ತು 'ಜಯಂತಿ ಪತ್ರಿಕೆ'ಯ ಬೆಟಗೇರಿ ಕೃಷ್ಣಶರ್ಮ, ಆರ್ಮಾಂಡೊ ಮೆನೆಝಿಸ್, ರೊದ್ದ ಶ್ರೀನಿವಾಸರಾಯರು, ಸರ್ ಸಿದ್ಧಪ್ಪ ಕಂಬಳಿ, ಶ್ರೀರಂಗರ ಕುರಿತು ಆಮೂರವರು ನೆನಪಿನ ದೀಪ ಹಚ್ಚಿ ನೇಯ್ದ ನಿರೂಪಣೆ ಧಾರವಾಡದ ಕುರಿತಾದ ನನ್ನ ಲೋಕದೃಷ್ಟಿ ಪೂರ್ಣಗೊಳ್ಳಲು ಕಾರಣವಾಯಿತು. ಸ್ಥಳೀಯರು ಮತ್ತು ಹೊರಗಿಂದ ಬಂದ ಮಹನೀಯರು ಸೇರಿ ಸಾಂಸ್ಕೃತಿಕ ಚಿತ್ರಕೂಟವಾಗಿ ಧಾರವಾಡವನ್ನು ಕಟ್ಟಿದ ಕಥೆಯನ್ನು ಆಮೂರರೇ ವಿವರಿಸಿದರು.

ಅವರ ಮನೆಯಲ್ಲಿ ನಮ್ಮ ಸಾಹಿತ್ಯ ಸಲ್ಲಾಪ ಆರಂಭವಾಗುತ್ತಿತ್ತು. ಬಹುಕಾಲ ಹೊರಗಿದ್ದು ಮರಳಿದ ಅವರಿಗೆ ಧಾರವಾಡವನ್ನು ನೆನಪಿಸಿಕೊಳ್ಳುವುದರಲ್ಲಿ ಏನೋ ಸಂತೋಷವಿತ್ತೆಂದು ಕಾಣುತ್ತದೆ. ನನಗೆ ಅದರಿಂದ ಅತ್ಯಮೂಲ್ಯ ಮಾಹಿತಿಗಳು ದೊರಕುತ್ತಿದ್ದವು. ಬಳ್ಳಾರಿಯಿಂದ ಬಂದಿದ್ದ ರೊದ್ದ ಶ್ರೀನಿವಾಸರಾಯರ ದೂರದರ್ಶಿತ್ವದಿಂದ ಸ್ಥಾಪನೆಯಾದ ಕರ್ನಾಟಕ ಕಾಲೇಜಿನ ಕುರಿತು ಸವಿಸ್ತಾರವಾಗಿ ಹೇಳುವುದರಲ್ಲೇ ಅವರೊಳಗೆ ಅಭಿಮಾನ ಉಕ್ಕುತ್ತಿತ್ತು. ಪ್ರತಿಷ್ಠಿತ ವಿದ್ಯಾವರ್ಧಕ ಸಂಘವನ್ನು ಕಟ್ಟುವುದರಲ್ಲಿದ್ದ ಅವರ ಪಾತ್ರವನ್ನು ಹೆಮ್ಮೆಯಿಂದ ವಿವರಿಸಿದರು. ಹಿಂದುಳಿದ ವರ್ಗಗಳ ರಾಜಕೀಯ ಸಂಘಟನೆಗೆ ಶ್ರಮಿಸಿದ ಸರ್ ಸಿದ್ಧಪ್ಪ ಕಂಬಳಿಯವರ ಕೊಡುಗೆಯನ್ನು ನೆನಪಿಸಿಕೊಳ್ಳಲು ಮರೆಯಲಿಲ್ಲ. ಬಡತನದಲ್ಲೇ ಬದುಕಿ, ಅತ್ಯಂತ ಜನಪ್ರಿಯವಾಗಿದ್ದ 'ಜಯಂತಿ' ಮಾಸಪತ್ರಿಕೆಯನ್ನು ಇಪ್ಪತ್ಮೂರು ವರ್ಷಗಳ ಕಾಲ ನಿರಂತರವಾಗಿ ನಡೆಸಿ ಹೊಸ ಲೇಖಕರನ್ನು ಬೆಳಕಿಗೆ ತಂದು ಪತ್ರಿಕೋದ್ಯಮಕ್ಕೆ ಮಾದರಿಯಾಗಿದ್ದ ಬೆಟಗೇರಿ ಕೃಷ್ಣಶರ್ಮರಿಂದ ಧಾರವಾಡ ಪಡೆದ ಪತ್ರಿಕಾ ಪರಂಪರೆಯನ್ನು ಮುಕ್ತ ಮನಸಿನಿಂದ ಕೊಂಡಾಡಿದರು. ಎಲ್ಲ ತಲೆಮಾರುಗಳ ಲೇಖಕರ ಕೃತಿಗಳಿಗೆ ನಿರಂತರ ಬೆಳಕು ನೀಡಿದ ಜಿ.ಬಿ. ಜೋಶಿಯವರು ಹುಟ್ಟು ಹಾಕಿದ ಮತ್ತು 'ಬರೆಯದೇ ಹೋದ ಕವಿತೆಗಳನ್ನೂ ನೆನಪಿಟ್ಟಿಕೊಳ್ಳುವ ಪ್ರತಿಭೆ ಇದ್ದ' ಕುರ್ತಕೋಟಿಯವರ ಶ್ರಮದಿಂದ ಆಯಾಸವಿಲ್ಲದೆ ನಡೆಯುತ್ತಿರುವ ಮನೋಹರ ಗ್ರಂಥ ಮಾಲೆಯ ಐತಿಹಾಸಿಕ ಸಾಧನೆಯ ಹಿನ್ನೆಲೆಯ ಸೂಕ್ಷ್ಮಗಳನ್ನು ಅವರಿಂದ ಅರಿಯುವಂತಾಯಿತು. ಕನ್ನಡವನ್ನು ಕಟ್ಟಿದ ಹುಯಿಲುಗೋಳ ನಾರಾಯಣರಾಯರು, ಆಲೂರು ವೆಂಕಟರಾಯರು ಅವರ ಮಾತಿನಲ್ಲಿ ಹಾಸುಹೊಕ್ಕಾಗಿ ಧಾರವಾಡದ ಪ್ರಾತಃಕಾಲದ ಬೆಳಕಾಗಿ ಕಂಡರು.

ಕುಮಟೆಯ ಕಾಲೇಜಿನಲ್ಲಿ ನಡೆದ ಪ್ರಸಂಗವೊಂದನ್ನು ಅವರು ಸ್ವಲ್ಪ ಮುಜುಗರದಿಂದ ಹೇಳಿದ್ದರು. 1952ರಲ್ಲಿ ಎರಡು ವರ್ಷಗಳ ಕಾಲ ಅವರು ಇಂಗ್ಲಿಷ್ ವಿಭಾಗದಲ್ಲಿ ಗೋಪಾಲಕೃಷ್ಣ ಅಡಿಗರ ಸಹೋದ್ಯೋಗಿಗಳಾಗಿದ್ದರು; ಬಿ. ಎಚ್. ಶ್ರೀಧರ ಮತ್ತು ಡಾ. ಕೆ. ಕೃಷ್ಣಮೂರ್ತಿಯವರು ಜೊತೆಗಿದ್ದರು. ಒಮ್ಮೆ ಟಿ. ಎಸ್. ಎಲಿಯಟ್‌ನ ಸಾಹಿತ್ಯದ ಕುರಿತು ಏರ್ಪಟ್ಟ ವಿಚಾರ ಸಂಕಿರಣವೊಂದರಲ್ಲಿ ಅಡಿಗರು ಕಾವ್ಯದ ಬಗ್ಗೆ, ಶ್ರೀಧರರು ವಿಮರ್ಶೆಯ ಬಗ್ಗೆ ಮತ್ತು ಆಮೂರರು ನಾಟಕಗಳ ಬಗ್ಗೆ ಮಾತಾಡಿದ್ದರು. ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ವರದಿಯ ಬಗ್ಗೆ ಅಡಿಗರು ಖಾರವಾಗಿ ಪ್ರತಿಕ್ರಿಯಿಸುತ್ತ, "ಆಮೂರರೇ ವರದಿ ನೋಡಿದಿರಾ? ನಾನು ವಿಸ್ತಾರವಾಗಿಯೂ ನೀವು ಆಳವಾಗಿಯೂ ಮಾತಾಡಿದವಂತೆ!" ಎಂದರಂತೆ. ಆ ವರದಿಯನ್ನು ಕಳುಹಿಸಿದವರು ಕೆ. ಕೃಷ್ಣಮೂರ್ತಿಯವರಾಗಿದ್ದರು. ಅಡಿಗರ ಸಂಬಂಧ ಕೃಷ್ಣಮೂರ್ತಿಯವರೊಂದಿಗೆ ಸರಿಯಿರದಿದ್ದರಿಂದ ಈ ವರದಿಗೆ ವಿಶೇಷ ಅರ್ಥವನ್ನು ಅಡಿಗರು ಹಚ್ಚಿದ್ದರು. ಸಂಬಂಧ ಹದಗೆಡಲು ಅಡಿಗರ ಆಪ್ತಸಂಬಂಧಿಯಾಗಿದ್ದ ಶ್ರೀಧರರನ್ನು ಕೃಷ್ಣಮೂರ್ತಿಯವರು ನಡೆಸಿಕೊಂಡ ರೀತಿ ಮುಖ್ಯ ಕಾರಣವಾಗಿರಬೇಕೆಂದು ಊಹಿಸಿದ್ದರು.

ಕುಮಟೆಯ ನೆನಪು ಅವರಿಗೆ ಪ್ರಿಯರಾಗಿದ್ದ ವಿ. ಸೀತಾರಾಮಯ್ಯರವರನ್ನು ಹಿಂಬಾಲಿಸುತ್ತಿತ್ತು. ವಿ. ಸೀ. ಆಗ ಹೊನ್ನಾವರ ಕಾಲೇಜಿನ ಪ್ರಿನ್ಸಿಪಾಲಾಗಿದ್ದರು; ಪರೀಕ್ಷೆಯ ನಿರ್ವಹಣೆಗೆ ವಿಶ್ವವಿದ್ಯಾಲಯದವರು ಆಮೂರರನ್ನು ಹೊನ್ನಾವರದ ಕಾಲೇಜಿಗೆ ಕಳುಹಿಸಿದ್ದರು; ವಾಲ್ಮೀಕಿ ರಾಮಾಯಣದ ಮೇಲೊಂದು ಸಭೆ ಏರ್ಪಡಿಸಿ ಅದರಲ್ಲಿ ಆಮೂರರು ಸೀತೆಯ ಪರವಾಗಿಯೂ ವಿ. ಸೀಯವರು ರಾಮನ ಪರವಾಗಿಯೂ ವಾದಿಸಿದರಂತೆ. ರಾಮಾಯಣದ 'ಅರಣ್ಯಕಾಂಡ'ದಲ್ಲಿ ನಡೆದ ಪ್ರಸಂಗವನ್ನು ಆಧರಿಸಿ ಮುನಿಸಂಘದವರನ್ನು ದಂಡಕಾರಣ್ಯದ ರಾಕ್ಷಸರಿಂದ ರಕ್ಷಿಸಲು ವಾಗ್ದಾನ ಮಾಡಿದ ರಾಮನನ್ನು ಸೀತೆ ಕ್ಷತ್ರಿಯ ಧರ್ಮವನ್ನು ಆಚರಿಸಬೇಕಾದದ್ದು ಅಯೋಧ್ಯೆಯಲ್ಲಿ ತಪೋವನದಲ್ಲಲ್ಲ ಎಂದು ವಾದಿಸಿದನ್ನು ಆಮೂರರು ಎತ್ತಿ ಹಿಡಿದರೆ, ವಿ. ಸೀಯವರು ಆರ್ತರನ್ನು ರಕ್ಷಿಸುವುದು ಕ್ಷತ್ರಿಯನಾದ ರಾಮನ ಧರ್ಮ ಎಂದು ಪ್ರತಿವಾದಿಸಿದ್ದರಂತೆ. ಕೊನೆಯಲ್ಲಿ ಸೀತೆ, "ನಿನಗೆ ಧರ್ಮದ ಉಪದೇಶ ಮಾಡಲು ನಾನು ಯಾರು?" ಎಂದು ಖೇದಪಟ್ಟರೆ ರಾಮ, "ನೀನು ನನ್ನ ಮೇಲಿನ ಪ್ರೀತಿಯಿಂದ ಈ ಮಾತುಗಳನ್ನು ಹೇಳುತ್ತಿದ್ದೀಯೆ" ಎಂದು ವಾದ ನಿಲ್ಲಿಸುತ್ತಾನಂತೆ. ಸಂಸಾರದಲ್ಲಿ ಅಭಿಪ್ರಾಯ ಭೇದಗಳಿದ್ದರೂ ವೈಯಕ್ತಿಕ ರಾಗದ್ವೇಷಗಳಿರಲಿಲ್ಲ ಎಂದು ಆಮೂರರು ಅಂದು ನೀಡಿದ ಒತ್ತು ನನಗೆ ಅರ್ಥಪೂರ್ಣವೆನಿಸಿದೆ. ಯಕ್ಷಗಾನಪ್ರಿಯರಾದ ಉತ್ತರಕನ್ನಡದ ಜನರಿಗೆ ಅಂದಿನ ವಾದ ಇಷ್ಟವಾಗಿತ್ತೆಂದು ಹೇಳಿದ್ದರು.

ಧಾರವಾಡ ಅವರನ್ನು ಬೀಳ್ಕೊಟ್ಟ ಸಂದರ್ಭ ಮಹಾನಿರ್ಗಮನದ ಪರ್ವದಂತೆ ಕಂಡಿತ್ತು ನನಗೆ. ಧಾರವಾಡವನ್ನು ಬಿಟ್ಟು ಹೋಗಲು ನಿಮಗೆ ಬೇಸರ ಎನಿಸುವುದಿಲ್ಲವೆ ಎಂದು ಕೇಳಿದ್ದೆ. ಸ್ಥಾನಪಲ್ಲಟವನ್ನು ಕಾಲ ನಿಯಮವೆಂದು ಸ್ವೀಕರಿಸಿದ ತನಗೆ ಹತ್ತಿಳಿಯುವ ಹೊಸ ನಿಲ್ದಾಣಗಳ ಪಯಣದ ಬಗ್ಗೆ ಹಳವಂಡವೇನೂ ಇಲ್ಲವೆಂದು ಹೇಳಿದರು. ಕೊನೆಯ ಸಲ ಧಾರವಾಡದ ಮನೆಯಲ್ಲಿ ಅವರನ್ನು ಮಾತಾಡಿಸಿದಾಗ ಅವರ ಹೆಂಡತಿಯವರ ದೇಹಾಂತ್ಯವಾಗಿತ್ತು. ಮನೆಯ ನೀರವತೆಯಲ್ಲಿನ್ನೂ ಸೂತಕದ ಶೋಕವಿತ್ತು. ಪುಸ್ತಕಕ್ಕೆ ಅಂಟಿಕೊಂಡಿದ್ದ ಅವರು ಒಂಟಿ ಅನಿಸಲಿಲ್ಲ; ವಿಲಕ್ಷಣ ಮೌನದ ನಂತರ ಅವರು ತಮ್ಮ ಸಹಧರ್ಮಿಣಿಯ ಬಗ್ಗೆ ಮಾತಾಡುತ್ತ ಓದು, ಬರೆಹ, ಪಾಠ ಪ್ರವಚನ, ಸಾಹಿತ್ಯ ಕಾರ್ಯಕ್ರಮಗಳ ನಡುವೆ ಹೆಂಡತಿಗೆ ಸಲ್ಲಬೇಕಿದ್ದ ಖಾಸಗಿ ಸಾಂಗತ್ಯವನ್ನು ಗಂಡನಾಗಿ ತನ್ನಿಂದ ನೀಡಲಾಗಲಿಲ್ಲ ಎಂದು ಖೇದಪಟ್ಟರು.

ಹೆಂಡತಿಯ ನಿರ್ಗಮನದ ನಂತರ ಅವರು ಪ್ರಾಪಂಚಿಕ ಆಸಕ್ತಿಯನ್ನು ಕಳೆದುಕೊಂಡು ಅಲೌಕಿಕದತ್ತ ವಾಲಿದ್ದರು. ಒಳ್ಳೆಯ ಮನುಷ್ಯ ಸಂಬಂಧದಿಂದ ಸಾಹಿತ್ಯಕ್ಕೆ ಶ್ರೇಷ್ಠತೆ ಪ್ರಾಪ್ತವಾಗುತ್ತದೆಂದು ನಂಬಿ ನಡೆದ ಆಮೂರರು ಭೌತಿಕವಾಗಿರದ ಧಾರವಾಡ ನನಗೆ ತಾಯಿಯಿರದ ತವರಿನಂತೆ ಕಾಣುತ್ತದೆ. ❖

ಕಲಾರಂಗ ಕಲಾ ಕುಟುಂಬಗಳ ಆಲಯ

12ನೇ ಪುಟದಿಂದ..

'ಬಡಾನಿಡಿಯೂರಿನಲ್ಲಿ ವಾಸವಾಗಿರುವ ನನಗೆ ಇಬ್ಬರು ಮಕ್ಕಳು. ಅವರು ಎಸ್ಸೆಸ್ಸೆಲ್ಸಿಯಲ್ಲಿ ಒಳ್ಳೆಯ ಅಂಕಗಳನ್ನು ಪಡೆದಾಗ ಕಣ್ಣು ತುಂಬಿ ಹೆಮ್ಮೆಯೆನಿಸಿತು. ಆದರೆ ಕಾಲೇಜು ಶಿಕ್ಷಣ ಕೊಡಿಸುವುದು ಹೇಗಪ್ಪಾ ಎಂಬ ಚಿಂತೆಯಾದಾಗ, ಆಶ್ರಯ ದೊರಕಿದ್ದು ಯಕ್ಷಗಾನ ಕಲಾರಂಗದಲ್ಲಿ. ಅವರು ವಿದ್ಯಾ ಪೋಷಕ್ ಯೋಜನೆಯಡಿಯೇ ಫೀಸು ಕಟ್ಟಿದರು. ನಾನು ವೃತ್ತಿಮೇಳದಲ್ಲಿ ಮೂವತ್ತು ವರ್ಷದಿಂದ ತಿರುಗಾಟ ಮಾಡುತ್ತ ವೇಷ ಮಾಡುತ್ತಿರುವೆ. ಕೊನೆಗೂ ಮನೆಕಟ್ಟಿಕೊಳ್ಳಲು ಸಾಧ್ಯವಾಗಲೇ ಇಲ್ಲ. ದಾನಿಯೊಬ್ಬರ ನೆರವಿನಿಂದ ಯಕ್ಷನಿಧಿ ಯೋಜನೆಯಡಿ ಹೊಸ ಮನೆಯಲ್ಲಿ ವಾಸಮಾಡುವ ಯೋಗ ನನಗೆ ದೊರೆಯಿತು. ನಾನಷ್ಟೇ ಅಲ್ಲ, ವೃತ್ತಿಮೇಳದಲ್ಲಿರುವ ಯಾವುದೇ ಕಲಾವಿದರನ್ನು ಯಕ್ಷಗಾನ ಕಲಾರಂಗ ಕೈಬಿಟ್ಟಿಲ್ಲ. ಸದಸ್ಯತ್ವ ಪಡೆದವರ ಮನದಲ್ಲಿ ವಿಶ್ವಾಸ, ಭದ್ರತೆಯನ್ನು ಮೂಡಿಸಿದ ಕಾಮಧೇನು ಈ ಸಂಸ್ಥೆ' ಎಂದು ಕಣ್ಣುತುಂಬಿ ಮಾತನಾಡುತ್ತಾರೆ ಪ್ರವೀಣ್. ಅವರ ಮಕ್ಕಳಿಬ್ಬರೂ ಪದವಿ ಓದುತ್ತಿದ್ದಾರೆ. ವಿದ್ಯಾ ಪೋಷಕ್ ಯೋಜನೆಯಡಿ ಈವರೆಗೆ ಆರು ಸಾವಿರ ಮಕ್ಕಳಿಗೆ ಹತ್ತು ಕೋಟಿ ರೂಪಾಯಿಗೂ ಅಧಿಕ ನೆರವು ಸಂದಿದೆ ಎಂದರೆ ಸಂಸ್ಥೆಯ ಶ್ರಮ ಖಂಡಿತಾ ಸಣ್ಣದಲ್ಲ.

***

ಹಾಗೆಂದು ಯಕ್ಷಗಾನ ಕಲೆಯನ್ನು ಹೊಸ ತಲೆಮಾರಿಗೆ ಪರಿಚಯ ಮಾಡಬೇಕಾದ ಜವಾಬ್ದಾರಿಯನ್ನೂ ಕಲಾರಂಗ ಮರೆತಿಲ್ಲ. ಕರಾವಳಿ ಜಿಲ್ಲೆಗಳ ವಿವಿಧ ಶಾಲೆಗಳಲ್ಲಿ ಹದಿನೈದು ವರ್ಷಗಳಿಂದ ಯಕ್ಷ ಶಿಕ್ಷಣ ಕಾರ್ಯಕ್ರಮ ಪ್ರತೀ ವರ್ಷ ನಡೆಯುತ್ತಿದೆ. ಯಕ್ಷಗಾನ ಕಲಿಸಲು ಆಸಕ್ತಿ ತೋರುವ ಶಾಲೆಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಯಕ್ಷಗಾನ ಗುರುಗಳು ಶಾಲೆಗೆ ತೆರಳಿ ತಂಡವನ್ನು ಕಟ್ಟಿ ಒಂದು ಪ್ರಸಂಗವನ್ನು ಆಡಿಸುವುದು, ಆ ಮೂಲಕ ಮಕ್ಕಳಲ್ಲಿ ಕಲಾಭಿರುಚಿ ಬೆಳೆಯುವಂತೆ ಮಾಡುವುದು ಇದರ ಉದ್ದೇಶ.



'ಯಕ್ಷಗಾನದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಮಾತು ನಡೆನುಡಿಗಳಲ್ಲಿ ಆತ್ಮವಿಶ್ವಾಸ ಎದ್ದು ಕಾಣುತ್ತದೆ. ಅಂಕಗಳ ಹಿಂದೆಯೇ ಓಡದೇ, ಇತರ ವಿಚಾರಗಳನ್ನು ತಿಳಿಸುವ ಪ್ರೇರಣೆ ದೊರೆಯುತ್ತದೆ' ಎಂದು ಹೇಳುತ್ತಾರೆ ಯಕ್ಷಗಾನ ವೇಷಧಾರಿಯೂ ಆಗಿರುವ ಬ್ರಹ್ಮಾವರ ಶಿರಿಯಾರದ ಹೆಸ್ಕತ್ತೂರು ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಅಬ್ದುಲ್ ರೌಫ್. ಅವರ ಶಾಲೆಯಲ್ಲಿ ಪ್ರಸ್ತುತ 44 ಮಕ್ಕಳು ಯಕ್ಷ ಶಿಕ್ಷಣ ತಂಡದಲ್ಲಿದ್ದಾರೆ. ಈ ಸಾಲಿನಲ್ಲಿ 92 ಪ್ರೌಢಶಾಲೆಗಳಲ್ಲಿ ಯಕ್ಷ ಶಿಕ್ಷಣ ನಡೆಯುತ್ತಿದ್ದು ಅಂದಾಜು ಮೂರು ಸಾವಿರ ಮಕ್ಕಳು ಜಾತಿ ಧರ್ಮ ಭೇದವಿಲ್ಲದೆ ಯಕ್ಷಗಾನ ಕಲಿಯುತ್ತಿದ್ದಾರೆ.

***

ಈ ಮೂರು ಪ್ರಧಾನ ಯೋಜನೆಗಳಡಿ ನಿರ್ವಹಿಸುವ ಕೆಲಸಗಳಲ್ಲದೇ, ಕಲಾವಿದರ ಸಮ್ಮೇಳನ ನಡೆಸಿ ಅವರಿಗೆ ಒಡಿಸ್ಸಿ, ಕಥಕ್ ಅಥವಾ ಅಂತಹುದೇ ಇನ್ನೊಂದು ಕಲಾ ಪ್ರಕಾರವನ್ನು ಪರಿಚಯಿಸುವುದು, ತರಬೇತಿ ಕಮ್ಮಟಗಳನ್ನು ಆಗಾಗ ನಡೆಸುವುದು, ಮುಮ್ಮೇಳ, ಹಿಮ್ಮೇಳ ಕಲಾವಿದರು ಮತ್ತು ಚೌಕಿ ಸಹಾಯಕರು ಸೇರಿದಂತೆ, ಕಲಾವಿದರ ಸಾಧನೆಯನ್ನು ಗುರುತಿಸಿ ಪುರಸ್ಕಾರ ನೀಡುವುದು, ಈ ಕ್ಷೇತ್ರದಲ್ಲಿ ಬೆಳೆದು ಬಂದ ವಿದ್ವಾಂಸರನ್ನು ಗೌರವಿಸಿ, ಕಲಾವಿದರಿಗೆ ಮಾದರಿಯನ್ನು ತೋರಿಸಿಕೊಡುವುದು, ಯಕ್ಷಗಾನಕ್ಕೆ ಸಂಬಂಧಿಸಿದ ಉತ್ತಮ ಪುಸ್ತಕಗಳ ಪ್ರಕಟಣೆ ಮುಂತಾದವು ಕಲಾರಂಗ ನಿರ್ವಹಿಸುವ ಪ್ರಮುಖ ಕೆಲಸಗಳು.

ಹೀಗೆ ಕಲೆ, ಕಲಾವಿದರ ಏಳ್ಗೆ ಮತ್ತು ವಿದ್ಯಾರ್ಥಿಗಳ ಶಿಕ್ಷಣದ ಪರವಾಗಿ ನಿರಂತರವಾಗಿ ಶ್ರಮಿಸುತ್ತ ಬಂದಿರುವ ಯಕ್ಷಗಾನ ಕಲಾರಂಗದ ಕೆಲಸವನ್ನು ಗಮನಿಸಿ ಅನೇಕ ಗೌರವ ಪುರಸ್ಕಾರಗಳು ಬಂದಿವೆ. ಮುಖ್ಯವಾಗಿ ಸಂಸ್ಥೆಯು ಖರೀದಿಸಿದ ಜಾಗದಲ್ಲಿ ಇದೀಗ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ 'ಯಕ್ಷಗಾನ ಡೆವಲಪ್‌ಮೆಂಟ್, ಟ್ರೈನಿಂಗ್ ಆಂಡ್ ರಿಸರ್ಚ್ ಸೆಂಟರ್ (ಐವೈಸಿ) ಅನ್ನು ಇನ್‌ಫೋಸಿಸ್ ಫೌಂಡೇಷನ್ ನಿರ್ಮಿಸಿ ಕೊಟ್ಟಿದೆ. ಒಟ್ಟು ₹15.8 ಕೋಟಿ ವೆಚ್ಚದಲ್ಲಿ ಬೃಹತ್ ಸಭಾಭವನ ಸಿದ್ಧವಾಗಿದ್ದು ಕಲಾವಿದರಿಗೆ ಸಿದ್ಧ ವೇದಿಕೆಯೊಂದು ಒದಗಿದಂತಾಗಿದೆ.


ಕಲೆ, ಕಲಾವಿದ, ಕುಟುಂಬ, ಸಮಾಜ ಎಲ್ಲವೂ ಒಂದೇ ಎನ್ನುವಂತೆ ಯಕ್ಷಗಾನ ಕಲಾರಂಗ ಕೆಲಸ ಮಾಡುತ್ತಿದೆ. ಇದರ ಫಲವೇ ಈ ಗಣನೀಯ ಸಾಧನೆಯ ಶಿಖರ ತಲುಪಲು ಸಾಧ್ಯವಾಗಿದೆ. ❖


ಕಲಾರಂಗದ ಈಗಿನ ಕಟ್ಟಡ


ವಿದ್ಯಾರ್ಥಿನಿ ಸಿಂಚನ ಅವರಿಗೆ ಸಹಾಯಾರ್ಥವಾಗಿ ನಿರ್ಮಿಸಿಕೊಟ್ಟ ಮನೆ

ಮೊದಲ ಓದು

ಗ್ರಾಮೀಣ ಭಾರತದ ಕನಸುಗಾರ



ಪು: 340
₹450


ದೇವೇಗೌಡರ ಪ್ರಧಾನಿಯ ದಿನಗಳು
ಲೇ:ಶಿವಾಜಿ ಗಣೇಶನ್
ಪ್ರ: ಶಿಂಷಾ ಲಿಟರರಿ ಅಕಾಡೆಮಿ, ತುಮಕೂರು
ಸಂ: 9845157308

ಹರದನಹಳ್ಳಿಯ ಸಹಕಾರ ಸಂಘದಿಂದ ರಾಜಕಾರಣ ಆರಂಭಿಸಿ ದೇಶದ ಪ್ರಧಾನಿ ಪಟ್ಟದವರೆಗೆ ಬೆಳೆದ ದೇವೇಗೌಡರ ಹೋರಾಟದ ಹಾದಿಯ ಮೈಲುಗಲ್ಲುಗಳನ್ನು ತಿರುಗಿ ನೋಡುವ ಕ್ರಿಯೆಯನ್ನು ಈ ಕೃತಿ ಮಾಡುತ್ತದೆ. ದೇವೇಗೌಡರು ಪ್ರಧಾನಿಯಾಗಿದ್ದಾಗ ಅವರ ನೀತಿ, ನಿರೂಪಣೆ, ಆಡಳಿತ ಸುಧಾರಣೆಗಳನ್ನು ಹತ್ತಿರದಿಂದ ಗಮನಿಸಿದ್ದ ಪತ್ರಕರ್ತ ಶಿವಾಜಿ ಗಣೇಶನ್ ಅವರು ತಮ್ಮ ನೋಟಕ್ಕೆ ದಕ್ಕಿದ ಅಂಶಗಳನ್ನು ಪೂರ್ವಗ್ರಹಗಳಿಲ್ಲದೆ ದಾಖಲಿಸಿದ್ದಾರೆ. ಅವರಿಗೆ ವಡ್ಡರ್ಸೆ ರಘುರಾಮ ಶೆಟ್ಟರು, ಡಿ.ದೇವರಾಜ ಅರಸು ಕುರಿತು ರಚಿಸಿದ 'ಬಹೂರೂಪಿ ಅರಸು' ಕೃತಿ ಪ್ರೇರಣೆ ಎಂದು ಹೇಳುತ್ತಾರೆ.

ದೇವೇಗೌಡರು ಪ್ರಧಾನಿ ಆಗುವ ಸಂದರ್ಭ ವಿಶೇಷವಾಗಿತ್ತು. ಕಮ್ಯುನಿಸ್ಟ್ ಪಕ್ಷದ ನಿಲುವು ಮತ್ತು ವಾಜಪೇಯಿ ಅವರ ರಾಜಧರ್ಮದ ಆದರ್ಶ ಪಾಲನೆ ಕೂಡ ಆ ಸಂದರ್ಭಕ್ಕೆ ಕಾರಣ ಆಗಿತ್ತು. 13 ಪಕ್ಷಗಳ ಬೆಂಬಲದಿಂದ 11 ತಿಂಗಳು ಮೊದಲ ಕನ್ನಡಿಗ ಪ್ರಧಾನಿ ಆಡಳಿತ ಅವಧಿಯ ಹಲವು ಸಂಗತಿಗಳನ್ನು ಬಿಡಿಬಿಡಿಯಾಗಿ ಲೇಖಕ ಕಟ್ಟಿಕೊಟ್ಟಿದ್ದಾರೆ. ಪ್ರಧಾನಿ ದೇವೇಗೌಡರ ಗ್ರಾಮೀಣ ಭಾರತದ ಕನಸು, ಕಾಶ್ಮೀರ ಸಮಸ್ಯೆಯ ಸೌಹಾರ್ದ ಪರಿಹಾರ ಸಂಬಂಧಿ ಪ್ರಯತ್ನವನ್ನೂ ಸ್ಮರಿಸಲಾಗಿದೆ. 40 ವರ್ಷಗಳ ಹೋರಾಟದ ಫಲದಿಂದ ಮುಖ್ಯಮಂತ್ರಿಯಾಗಿದ್ದ ದೇವೇಗೌಡರು ಒಲ್ಲದ ಮನಸಿನಿಂದಲೇ ಪ್ರಧಾನಿ ಆಗುವ ಸನ್ನಿವೇಶವನ್ನು ವಿವರಿಸುವ ಲೇಖಕರು, ಅವತ್ತಿನ ರಾಜಕೀಯ ಪರಿಸ್ಥಿತಿಯನ್ನು ವಿಷಯನಿಷ್ಠವಾಗಿ ನಿರೂಪಿಸುತ್ತಾರೆ.

ಕೃತಿಯ ಬಹುತೇಕ ಲೇಖನಗಳು 'ಪ್ರಜಾವಾಣಿ'ಯ 'ದೆಹಲಿ ದಿನಚರಿ' ಅಂಕಣದಲ್ಲಿ ಪ್ರಕಟಗೊಂಡಿವೆ. ದೇವೇಗೌಡರು ಪ್ರಧಾನಿಯಾದಾಗ ಶಿವಾಜಿ ಗಣೇಶನ್ 'ಸುಧಾ' ಪತ್ರಿಕೆಗೆ 'ಪ್ರಧಾನಿ ಪಟ್ಟಕ್ಕೆ ಮೊದಲ ಕನ್ನಡಿಗ ದೇವೇಗೌಡ' ಎಂಬ ಮುಖಪುಟ ಲೇಖನ ಬರೆದಿದ್ದರು. ಅವರ ಆಡಳಿತಕ್ಕೆ ನೂರುದಿನ ತುಂಬಿದಾಗ ಪ್ರಜಾವಾಣಿಯ 'ಸಾಪ್ತಾಹಿಕ ಪುರವಣಿ'ಗೆ ಬರೆದ ಲೇಖನವೂ ಸೇರಿ 59 ಲೇಖನಗಳು ಇವೆ. ಮಾತ್ರವಲ್ಲದೆ, ಸುದ್ದಿ ವಿಶ್ಲೇಷಣೆ ಮತ್ತು ಅಪರೂಪದ ಚಿತ್ರಗಳನ್ನೂ ಕೃತಿ ಒಳಗೊಂಡಿದೆ.

ಗಮನ ಸೆಳೆಯುವ ಭಾಷಾ ಸೊಗಡು



ಪು: 120
₹150


ಸದರ ಬಜಾರ್
ಲೇ: ಡಿ.ಎಸ್.ಚೌಗಲೆ
ಪ್ರ: ವೀರಲೋಕ
ಸಂ: 70221 22121

ಎಂಬತ್ತರ ದಶಕದಲ್ಲಿ ಬೆಳಗಾವಿ ಮತ್ತು ಗಡಿಯ ಸುತ್ತಲಿನ ಕಥನ ಕಾದಂಬರಿ ಇದು. ವಿಡಿಯೊ ಕೇಂದ್ರಗಳು ಗ್ರಾಮೀಣ ಭಾಗಕ್ಕೆ ಪ್ರವೇಶಿಸಿದಾಗ ಬದುಕಿನಲ್ಲಾದ ಬದಲಾವಣೆಗಳೊಂದಿಗೆ ಕಾದಂಬರಿ ಆರಂಭವಾಗುತ್ತದೆ. ಗ್ರಾಮೀಣ ಬದುಕಿನ ಚಿತ್ರಣ ಕಟ್ಟಿಕೊಡುತ್ತಲೇ ಆ ಭಾಗದ ಭಾಷೆಯ ಸೊಗಡು ಮನಸೆಳೆಯುತ್ತದೆ. ಶಿವು ಪಾತ್ರದಿಂದಲೇ ಕಥೆಯನ್ನು ನಿರೂಪಿಸುತ್ತ ಹೋಗುವ ಕಾದಂಬರಿಕಾರರು ಆ ಕಾಲದಲ್ಲಿ ಗುಳೆ ಹೋಗುವ, ಒಳ ಸಂಬಂಧಗಳಲ್ಲಿ ಮದುವೆಯಾಗುವ, ಬಾಂಧವ್ಯಗಳು ಬಂಧಗಳಾಗುವ, ಸಾಮಾಜಿಕ ಹಂದರವನ್ನು ಕಟ್ಟಿಕೊಡುತ್ತಾರೆ. ಲೈಂಗಿಕ ಕಾರ್ಯಕರ್ತೆಯರ ಬದುಕಿನ ಬಗ್ಗಡವನ್ನೂ ಕದಡಿ, ಬಂದ ಗ್ರಾಹಕರ ಮನ ತಿಳಿಯಾಗಿಸಿಕೊಳ್ಳುವ ದೃಶ್ಯ ಕಣ್ಮುಂದೆ ಕಟ್ಟಿದಂತಾಗುತ್ತದೆ. ಲೇಖಕರು ಚಿತ್ರ ಕಲಾವಿದರೂ ಆಗಿರುವುದರಿಂದ ಚಿತ್ರಕಶಕ್ತಿ ಇಲ್ಲಿ ಕಾಣಿಸಿಕೊಂಡಿದೆ.

ಕಥೆಗಾರರು, ನಾಟಕಕಾರರೂ ಆಗಿರುವ ಲೇಖಕರಿಗೆ ಅಲ್ಲಲ್ಲಿ ಕಾದಂಬರಿ ಹಿಡಿತದಿಂದ ತಪ್ಪಿಸಿಕೊಂಡಂತೆ ಕಾಣುತ್ತದೆ. ನಡುನಡುವೆ ಲೇಖನವೊಂದು ಇಣುಕಿದಂತಾಗುತ್ತದೆ. ಲೈಂಗಿಕ ಘಟನೆಗಳು ಶೃಂಗಾರವೂ ಆಗದೆ, ಮಿಲನವೂ ಆಗದೆ, ನಡುನಡುವೆ ಸಿದ್ಧಸೂತ್ರದಂತೆ ಇಡುಕಿರಿದಂತೆ ಕಾಣಸಿಗುತ್ತವೆ. ಅವು ಬರೆಯದಿದ್ದರೂ ಕಥೆಯ ಓಘಕ್ಕೆ ತೊಂದರೆ ಆಗುತ್ತಿರಲಿಲ್ಲ.

ಮೂಲ ಕಥೆಗಾರರಾಗಿರುವುದರಿಂದ ಪುಟ್ಟ ಪುಟ್ಟ ಕತೆಗಳನ್ನೇ ಹೆಣೆದು ದೊಡ್ಡ ಕ್ಯಾನ್ವಾಸಿನಲ್ಲಿ ತರಲು ಯತ್ನಿಸಿರುವುದು ಢಾಳವಾಗಿ ಕಾಣುತ್ತದೆ.

ಇಂದಿನ ಪತ್ರಿಕೋದ್ಯಮದ ಅವಲೋಕನ



ಪು: 208
₹270

ಪತ್ರಿಕೋದ್ಯಮ ಪಲ್ಲಟಗಳು
ಲೇ: ಪ್ರೊ. ಎ.ಎಸ್. ಬಾಲಸುಬ್ರಹ್ಮಣ್ಯ
ಪ್ರ: ಬಹುರೂಪಿ
ಸಂ: 7019182729

ಕಾಲಕ್ಕೆ ತಕ್ಕಂತೆ ಬದಲಾಗುತ್ತಿರುವ ಪತ್ರಿಕೋದ್ಯಮ ಪರಿಭಾಷೆಯನ್ನು ಅವಲೋಕಿಸುವ ಕೃತಿ 'ಪತ್ರಿಕೋದ್ಯಮದ ಪಲ್ಲಟಗಳು'. ಲೇಖಕ ಪ್ರೊ.ಎ.ಎಸ್.ಬಾಲಸುಬ್ರಹ್ಮಣ್ಯ ಅವರು ನಾಡಿನ ವಿವಿಧ ಪತ್ರಿಕೆಗಳಿಗೆ ಬರೆದ ಲೇಖನಗಳ ಸಂಗ್ರಹ ರೂಪವಿದು. ನಾಲ್ಕು ವಿಭಾಗಗಳಲ್ಲಿ 29 ಲೇಖನಗಳಿವೆ. ಇವುಗಳಲ್ಲಿ ಹೆಚ್ಚಿನವು ಮುದ್ರಣ ಮಾಧ್ಯಮಕ್ಕೆ ಸಂಬಂಧಿತ ಬರಹಗಳು. ತಂತ್ರಜ್ಞಾನ, ದೃಶ್ಯ ಮಾಧ್ಯಮದತ್ತಲೂ ದೃಷ್ಟಿ ಹಾಯಿಸಿದ್ದಾರೆ.

'ಕಾವಲುನಾಯಿಯನ್ನು ಕಾಯುವವರು ಯಾರು?' ಎಂಬ ಶೀರ್ಷಿಕೆಯಡಿಯಲ್ಲಿ ಪ್ರೊ.ಎಚ್.ಎಸ್. ಈಶ್ವರ ಅವರು ಈ ಕೃತಿಗೆ ಬರೆದ ಮುನ್ನುಡಿ ಮಾಧ್ಯಮ ಲೋಕದ ಇಂದಿನ ಸ್ಥಿತಿಗೆ ಹಿಡಿದ ಕನ್ನಡಿಯಂತಿದೆ. 'ಮಾಧ್ಯಮ ಆಸಕ್ತರು ಗಂಭೀರವಾಗಿ ಪರಿಗಣಿಸಬೇಕಾದ ಪುಸ್ತಕವಿದು. ಹೆಸರೇ ಸೂಚಿಸುವಂತೆ ಲೇಖನಗಳ ವಸ್ತು ಅಥವಾ ವಿಚಾರಗಳು ಭಾರತೀಯ ಮಾಧ್ಯಮ ಕ್ಷೇತ್ರದಲ್ಲಿ ಸಂಭವಿಸಿದ ಪ್ರಮುಖ ಘಟ್ಟಗಳಿಗೆ, ಪ್ರವೃತ್ತಿಗಳಿಗೆ ಸಂಬಂಧಿಸಿವೆ' ಎಂದು ಮುನ್ನುಡಿಯಲ್ಲಿ ಬರೆದಿದ್ದಾರೆ.

'ಪತ್ರಿಕೋದ್ಯಮಕ್ಕೆ ಒಬ್ಬರೇ ನಾಡಿಗರು!' ಲೇಖನದಲ್ಲಿ ನಾಡಿಗ ಕೃಷ್ಣಮೂರ್ತಿ ಅವರು ಪತ್ರಿಕೋದ್ಯಮ ಜಗತ್ತಿನಲ್ಲಿ ಮಾಡಿದ ಕೆಲಸಗಳನ್ನು ಮೆಲುಕು ಹಾಕಲಾಗಿದೆ. ಪತ್ರಿಕೋದ್ಯಮ ಲೋಕದಲ್ಲಿ ಅಗಸ್ಟಸ್ ಹಿಕ್ಕಿ, ಹರ್ಮನ್ ಮೊಗ್ಲಿಂಗ್ ಅವರ ಕೊಡುಗೆಗಳನ್ನು ಸ್ಮರಿಸುವ ಲೇಖನಗಳಿವೆ. 'ದಿ ಗಾರ್ಡಿಯನ್', 'ರೀಡರ್ಸ್ ಡೈಜೆಸ್ಟ್' ಮಾಡಿದ ಮೋಡಿ ಕುರಿತಾದ ಬರಹಗಳೂ ಇವೆ.

ಪತ್ರಿಕಾ ಜಗತ್ತಿಗೆ ಎಐ ತಂತ್ರಜ್ಞಾನ ಒಡ್ಡುತ್ತಿರುವ ಸವಾಲು, ಡಿಜಿಟಲ್ ಸ್ಪರ್ಧೆಗಳನ್ನು ಅವಲೋಕಿಸಲಾಗಿದೆ. ಓಟಿಟಿ ಸೃಷ್ಟಿಸುತ್ತಿರುವ ಸಂಚಲನವನ್ನು ಸೊಗಸಾಗಿ ಕಟ್ಟಿಕೊಡಲಾಗಿದೆ. ಪತ್ರಕರ್ತರು, ಪತ್ರಿಕೋದ್ಯಮ ವಿದ್ಯಾರ್ಥಿಗಳು ಹಾಗೂ ಆಸಕ್ತರಿಗೆ ಓದಲು ಯೋಗ್ಯವಾದ ಕೃತಿ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಧನದಸಿ ಮೊನೆ

ಶ್ರೀ ರಾಮಕೃಷ್ಣ ಪರಮಹಂಸರು ಹುಟ್ಟಿ ನೂರು ವರ್ಷವಾದ ಸಂದರ್ಭದಲ್ಲಿ ಕುವೆಂಪು ಅವರು 'ಶತಾಮನ ಸಂಧ್ಯೆ'ಕವನ ರಚಿಸಿದ್ದಾರೆ. ಅದರಲ್ಲಿ ಮೌಢ್ಯಭಾವದಿಂದ ಮತಿ ಹೀನತೆ ಮತ ಕಲಹ ನಾಶವಾಗುವುದಿಲ್ಲ. ನರಹೃದಯದ ಬಿಸಿ ರಕ್ತದ ಬಾಯಾರಿಕೆ ಆರಿಲ್ಲ. ದಾರಿದ್ರ್ಯದ ಕರುಳನ್ನು ಇರಿಯುವ ಸಿರಿವಂತರ ಹಣದ ಕತ್ತಿಯ ಹರಿತವಾದ ತೀಕ್ಷ್ಣತೆ ಕುಗ್ಗಿ ಮಸುಕಾಗಿಲ್ಲ ಎಂದು ಧನದಾಹಿಗಳ ದೌರ್ಜನ್ಯ ಚಿತ್ರಿಸಿದ್ದಾರೆ. ದೀನ ದಲಿತರ ಮೇಲಿನ ನಿರಂತರ ದೌರ್ಜನ್ಯ ಕ್ರೌರ್ಯ ಹಿಂಸೆಯು ಇಲ್ಲಿ ಕಾವ್ಯವಾಗಿ ಹರಿದಿದೆ. 'ಧನದಸಿಮೊನೆ' ಪದ ರೂಪಕವಾಗಿಯೂ ಪ್ರಯೋಗವಾಗಿದೆ.

'ದಾರಿದ್ರ್ಯದ ಕರುಳಿರಿಯುವ
ಧನದಸಿಮೊನೆ ಮಾಸಿಲ್ಲ' (ಶತಮಾನ ಸಂಧ್ಯೆ – ಅಗ್ನಿಹಂಸ)

ಅಂಚೆದಿಪ್ಪುಳ್

ಅಂಚೆದಿಪ್ಪುಳ್ (ನಾ). ಹಂಸಪಕ್ಷಿಯ ಗರಿಯ ನವಿರು

'ನನ್ನ ಮಗ ಹಂಸಪಕ್ಷಿಯ ಗರಿಯ ನವಿರಿನ ಹಾಸಿಗೆಯಲ್ಲಿ ಮಲಗುತ್ತಿದ್ದಾನೆ. ಆ ಮೃದು ಶರೀರದವನು ಕಲ್ಲು ಮುಳ್ಳುಗಳಲ್ಲಿ ನಡೆಯುವಂತೆ ಕಾಡಿಗೆ ಓಡಿಸಲು ನೀನು ಹೇಗೆ ಯೋಚಿಸಿದೆ.' ಎಂದು ದಶರಥನು ತನ್ನ ಪ್ರೀತಿಪಾತ್ರ ಮಗನನ್ನು ಕಾಡಿಗೆ ಕಳುಹಿಸೆಂದು ಕೈಕೆ ಕೇಳಿದಾಗ ನೊಂದು ನುಡಿಯುತ್ತಾನೆ.

ರಾಮನ ಎಲ್ಲ ಮೃದು ಭಾವಗಳಿಗೆ ಸೂಕ್ತವಾಗಿ ಕುವೆಂಪು 'ಅಂಚೆದಿಪ್ಪುಳ್' ಪದ ಪ್ರಯೋಗಿಸಿದ್ದಾರೆ.

ಅಂಚೆದಿಪ್ಪುಳ್ ಸಜ್ಜೆಯೊಳ್ ಪವಡಿಪಾತನಂ
ಕಲ್‌ಮುಳ್ಳಿಗಟ್ಟಲ್ಕದೆಂತು ಬಗೆದಂದೆ ನೀಂ

ಅಗಂಗೊಳ್

ಅಗಂಗೊಳ್ (ಕ್ರಿ). ಒಳಕೊಳ್ಳು; ಸ್ವಾಧೀನಪಡಿಸಿಕೊ (ಅಗ + ಕೊಳ್)

ಬೆದರುಗಣ್ಣಾಗುತ್ತೆ ನಿಟ್ಟಿಸಿದಳೇನನೊ
ಸುದೂರವನಗಂಗೊಳ್ವವೋಲ್

ಅಗ (ನಾ). ಒಳಗು, ಒಳಗಡೆ ಎಂಬ ಅರ್ಥವುಳ್ಳ ಶಬ್ದ.

(ಈ ಶಬ್ದಕ್ಕೆ ಕನ್ನಡದಲ್ಲಿ ಸ್ವತಂತ್ರ ಪ್ರಯೋಗವಿಲ್ಲ. ಇದು 'ಅಂಗಗೊಳ್'. 'ಅಗಪಡು' ಮೊದಲಾದ ಸಮಾಸಗಳಲ್ಲಿ 'ಅಗ-:', 'ಅಗಂ-' ಈ ರೂಪಗಳಲ್ಲಿ ದೊರೆಯುತ್ತದೆ.)

ಸೀತೆಯು ಯುದ್ಧ ಸಮಯದಲ್ಲಿ ಅಂತರ್ಮುಖಿಯಾಗಿ ಅದನ್ನು ಪರಿಭಾವಿಸುತ್ತ, ಬೆದರುಗಣ್ಣಿನಿಂದ ದೂರದಲ್ಲಿರುವುದನ್ನು ಒಳಕೊಳ್ಳುವಂತ- ಪ್ರಜ್ಞೆಗೆ ಒಳಗಾಗುತ್ತಾಳೆ. ಆಗ ಕುವೆಂಪು ಅವರು ಆ ಮನೋಸ್ಥಿತಿಯನ್ನು ಪದಗಳಲ್ಲಿ ಅಭಿವ್ಯಕ್ತಿಸಲು ಸಮಾಸ ಪದ 'ಅಗಂಗೊಳ್' ಸೃಷ್ಟಿಸಿದ್ದಾರೆ.

ಕಾಲುದಾರಿಯ ಬೈಕ್ ಸವಾರಿ ಅನುಭವಗಳ ಹೆದ್ದಾರಿ

ಬೈಕ್ ಏರಿ ಹೆದ್ದಾರಿಯಲ್ಲೋ, ಕಾಲುದಾರಿಯಲ್ಲೋ ವೇಗವಾಗಿ ಸಾಗುವುದರಿಂದ ಒಳ್ಳೆಯ ರೈಡರ್ ಆಗುವುದಿಲ್ಲ. ಸುರಕ್ಷತಾ ಕ್ರಮಗಳ ಜೊತೆಗೆ ಭೇಟಿ ಕೊಡುವ ಸ್ಥಳ, ಅಲ್ಲಿನ ಜನ, ಹವಾಮಾನ ಇತ್ಯಾದಿಗಳ ಅರಿವೂ ಇರಬೇಕು. ಆಗಷ್ಟೇ ಬೈಕ್ ಸವಾರಿ ಖುಷಿಯ ಕಣಜವಾಗುತ್ತದೆ.

ಮೋಹನ್ ಕುಮಾರ ಸಿ.

‘ಬೈಕ್ ರೈಡ್ ಎಂದರೆ ಕೇವಲ ವೇಗದ ಪ್ರಯಾಣವಲ್ಲ. ನಮ್ಮನ್ನು ನಾವು ಕಂಡುಕೊಳ್ಳುವ ಹುಡುಕಾಟ’

ಮೈಸೂರಿನ ಬೈಕ್ ರೈಡರ್ ದಂಪತಿ ರಾಘವೇಂದ್ರ ಟಿ.ಇ. ಮತ್ತು ವೇದಾ ದಶಕದ ಪ್ರಯಾಣದ ಅನುಭವವನ್ನು ತೆರೆಯುತ್ತಾ ಹೋದರು.

ರಾಜ್ಯದ ಪಶ್ಚಿಮ ಘಟ್ಟಗಳು, ಕಾಶ್ಮೀರ, ಲೇಹ್–ಲಡಾಖ್, ಸಿಕ್ಕಿಂ, ನೇಪಾಳ, ಭೂತಾನ್, ಇಂಡೋನೇಷ್ಯಾದ ಬಾಲಿ, ಶ್ರೀಲಂಕಾಗಳಲ್ಲಿ ಬೈಕ್ ಸವಾರಿ ಯಾನದಲ್ಲಿ ಕಲಿತ ಪಾಠಗಳು ಹತ್ತಾರು. ಸ್ಥಳೀಯ ಜನರ ಸಹಕಾರ, ರುಚಿಯೂಟದ ಸವಿಯನ್ನು ನೆನಪಿಸಿಕೊಂಡ ಅವರು, ತಮಿಳುನಾಡಿನ ಆಂಬೂರ್ ಬಳಿ ಭೀಕರ ಅಪಘಾತದಲ್ಲಿ ಯಾವುದೇ ಗಾಯವಾಗದಂತೆ ಉಳಿಸಿದ ಸುರಕ್ಷಿತ ಜಾಕೆಟ್, ಮಂಡಿಯ ಕವಚವನ್ನು ತೋರಿ ಭಾವುಕರಾದರು.

ಬೆಂಗಳೂರಿನಲ್ಲಿ ಫಿಸಿಯೊ ಥೆರಪಿಸ್ಟ್ ಆಗಿ ಕೆಲಸ ಮಾಡುತ್ತಿದ್ದ ರಾಘವೇಂದ್ರ ಅವರಿಗೆ ಸಂಜು ಎಂಬುವರ ಪರಿಚಯವಿತ್ತು. ಅವರ ಲಡಾಖ್ ಸುತ್ತಾಟವೇ ಬೈಕ್ ಸವಾರಿಯತ್ತ ಆಕರ್ಷಿಸಿತು. ಕಾಶ್ಮೀರ–ಲಡಾಖ್‌ನ ಕಾಲುದಾರಿಯಲ್ಲಿ (ಆಫ್ ರೋಡ್) ಪ್ರಯಾಣದ ಕನಸು ಹೊತ್ತು ‘ರಾಯಲ್ ಎನ್‌ಫೀಲ್ಡ್ ಕ್ಲಾಸಿಕ್ 350’ ಖರೀದಿಸಿದ್ದರು.



ನೇಪಾಳದ ಮುಕ್ತಿನಾಥಕ್ಕೆ ಬೈಕ್ ಸವಾರಿ

ಇದೀಗ ನೆಚ್ಚಿನ ಕೆಟಿಎಂ 360ಯಲ್ಲಿ ದೇಶ–ವಿದೇಶಗಳನ್ನು ಸುತ್ತಾಡುತ್ತಿದ್ದಾರೆ.

ರಾಘವೇಂದ್ರ ಅವರು, ಬೈಕ್ ರೈಡ್‌ನ ಪಾಠ ಕಲಿತದ್ದು ‘ಬುಲ್ಸ್ ಆಫ್ ಮೈಸೂರು’ ಚಾರಣಿಗರ ಕ್ಲಬ್‌ನಿಂದ. ವೇದಾ ಅವರನ್ನು ಮದುವೆಯಾದ ನಂತರ ಸಂಕ್ರಾಂತಿ ಹಬ್ಬದ ವೇಳೆ ಮೈಸೂರಿನಿಂದ ರಾಜಸ್ಥಾನ ಜೈಸಲ್ಮೇರ್‌ಗೆ ಬೈಕಿನಲ್ಲಿ ಹೋಗಿದ್ದರು. ಅವರ ಮೊದಲ ರೈಡ್ ಹೊರತುಪಡಿಸಿ ಎಲ್ಲ ಸವಾರಿಯಲ್ಲೂ ವೇದಾ ಜೊತೆಯಾಗಿದ್ದಾರೆ. ಲೇಹ್– ಲಡಾಖ್–ನುಬ್ರಾ ಕಣಿವೆ–ಪಾಂಗಾಂಗ್ ಸರೋವರ–ಕಾರ್ಗಿಲ್–ಶ್ರೀನಗರಕ್ಕೆ ಬೈಕ್ ಸವಾರಿ ಮಾಡಿದ್ದ ಇವರು, ‘ಆಗ ಈ ದಾರಿಗಳೂ ಕಠಿಣವಾಗಿದ್ದವು. ಈಗಿನಂತೆ ರೋಹ್ತಾಂಗ್ ಪಾಸ್‌ನಲ್ಲಿ ಅಟಲ್ ಸುರಂಗದಾರಿ ಇರಲಿಲ್ಲ’ ಎಂದರು.



ದುರ್ಗಮ ಹಾದಿಯಲ್ಲಿ...

‘ಸಮುದ್ರ ಮಟ್ಟದಿಂದ ಎಂಟು ಸಾವಿರ ಅಡಿಗಳಷ್ಟು ಮೇಲೇರುತ್ತಿದ್ದಂತೆಯೇ ವಾತಾವರಣದಲ್ಲಿ ಆಮ್ಲಜನಕದ ಕೊರತೆ ಉಂಟಾಗುತ್ತದೆ. ಇದಕ್ಕೆ ಅಕ್ಯೂಟ್ ಮೌಂಟೇನ್ ಸಿಕ್‌ನೆಸ್ ಎನ್ನುತ್ತಾರೆ. ಮೂರು ಬಾರಿ ಲೇಹ್‌ಗೆ ಹೋಗಿದ್ದ ಮೈಸೂರಿನವರೊಬ್ಬರು ಈಚೆಗಿನ ಸವಾರಿಯಲ್ಲಿ ಉಸಿರಾಟದ ತೊಂದರೆಯಿಂದ ತೀರಿಕೊಂಡರು. ಪ್ರತಿ ಸಾವಿರ ಅಡಿಯಷ್ಟು ಎತ್ತರಕ್ಕೇರಿದಾಗೆಲ್ಲ ಅಲ್ಲಿನ ವಾತಾವರಣಕ್ಕೆ ದೇಹವನ್ನು ಹೊಂದಿಸಿಕೊಳ್ಳಬೇಕೆಂಬ ಎಚ್ಚರ ರೈಡರ್‌ಗೆ ಇರಬೇಕು. ಎಲ್ಲೇ ಹೋದರೂ ಅಲ್ಲಿನ ಸ್ಥಳೀಯರೊಂದಿಗೆ ಬೆರೆಯಬೇಕು. ಹತ್ತಿರದ ಪ್ರೇಕ್ಷಣೀಯ ಸ್ಥಳ, ಸಾಗಬೇಕಾದ ದಾರಿ ಎಲ್ಲವನ್ನೂ ಸ್ಥಳೀಯರೇ ತೋರುತ್ತಾರೆ. ಏನೂ ತಿಳಿದುಕೊಳ್ಳದೇ ಹಿಮಾಲಯದ ಯಾವುದೇ ಸ್ಥಳವನ್ನು ಮೂರೇ ದಿನದಲ್ಲಿ ನೋಡಿ ಬರುತ್ತೇನೆಂದರೆ ಅಪಾಯ ಕಟ್ಟಿಟ್ಟ ಬುತ್ತಿ’ ಎಂದು ರಾಘವೇಂದ್ರ ಎಚ್ಚರಿಸುತ್ತಾರೆ.

ಚಳಿಯಿಂದ ರಕ್ಷಿಸಿಕೊಳ್ಳಲು ಉಡುಪುಗಳು, ಸುರಕ್ಷಾ ಜಾಕೆಟ್, ಕೈಗವಸು, ಬೈಕ್ ರಿಪೇರಿ ಮಾಡುವ ತಿಳಿವಳಿಕೆ ಅಗತ್ಯ. ಈ ಕಾರಣಕ್ಕಾಗಿಯೇ ಗ್ಯಾರೇಜ್‌ಗೆ ಹೋಗಿ ಬ್ರೇಕ್, ಬ್ಯಾಟರಿ, ಕ್ಲಚ್ ವಯರ್ ಬದಲಾಯಿಸುವುದು, ಪಂಕ್ಚರ್ ಹಾಕುವುದನ್ನು ಕಲಿತಿದ್ದಾರೆ. ಇಲ್ಲದೇ ಹೋದರೆ ನಿರ್ಜನ ರಸ್ತೆಯಲ್ಲಿ ಸಹಾಯಕ್ಕಾಗಿ ಗಂಟೆಗಟ್ಟಲೆ ಕಾಯಬೇಕಾಗುತ್ತದೆ. ಈ ವೇಳೆ ಭೂ ಕುಸಿತ, ಹಿಮಪಾತ ಏನು ಬೇಕಾದರೂ ಆಗಬಹುದು. ಚಳಿಗೆ ಮರಗಟ್ಟುವ ಕೈಗಳನ್ನು ಸೈಲೆನ್ಸರ್ ಕಾವಿನಲ್ಲಿ ಬೆಚ್ಚಗೆ ಮಾಡಿಕೊಳ್ಳಬೇಕೆಂಬ ಸಣ್ಣ ಸಣ್ಣ ಉಪಾಯಗಳೂ ಗೊತ್ತಿರಬೇಕು ಎನ್ನುತ್ತಾರೆ.

ಸವಾಲು ಎಸೆದ ಮುಕ್ತಿನಾಥ

ನೇಪಾಳದ ಮುಕ್ತಿನಾಥಕ್ಕೆ ಹೋಗುವ ಮುಂಚೆ ಭಾರತದ ಲೇಹ್ ಸವಾರಿಯೇ ಕಡಿದಾದುದೆಂದುಕೊಂಡಿದ್ದ ರಾಘವೇಂದ್ರ ದಂಪತಿಗೆ ಮುಕ್ತಿನಾಥ ರೈಡಿಂಗ್‌ನ ಕಠಿಣ ಸವಾಲುಗಳ ನೆನಪು ಹಚ್ಚಹಸಿರಾಗಿದೆ. ಹೈದರಾಬಾದ್- ನಾಗಪುರ- ವಾರಾಣಸಿ– ಗೋರಖ್‌ಪುರ ಮಾರ್ಗವಾಗಿ ನೇಪಾಳ ಪ್ರವೇಶ ಮಾಡಿ, ಪೋಕ್ರಾದಲ್ಲಿ ಉಳಿದರು. ಮುಕ್ತಿನಾಥಕ್ಕೆ ಹೋಗಲು ಲಗೇಜ್‌ಗಳನ್ನು ಬೈಕ್‌ನಲ್ಲಿ ಏರಿಸಿಕೊಳ್ಳುವಾಗ, ಅಲ್ಲಿನ ಹೋಟೆಲ್‌ನವರೇ ‘ನೀವೇನು ಹಣ ಕೊಡಬೇಡಿ, ಲಗೇಜ್ ಇಲ್ಲಿಯೇ ಇಡಿ’ ಎಂದರಂತೆ. ದಾರಿಯಲ್ಲಿ ಹೋಗುವಾಗ ಹೋಟೆಲ್‌ನವರೇಕೆ ಹಾಗೆ ಹೇಳಿದರೆಂಬುದು ಇವರಿಗೆ ಅರಿವಾಯಿತು.

‘ಒಂದು ಬದಿ ಆಳವಾದ ಕಮರಿಯಲ್ಲಿ ಭೋರ್ಗರೆಯುತ್ತ ಹರಿಯುವ ನದಿ, ಮತ್ತೊಂದು ಬದಿಯಲ್ಲಿ ಹಿಮಮಳೆಗಳೂ ಜಗ್ಗದೇ ನಿಶ್ಚಲವಾಗಿ ನಿಂತ ಚೂಪುಗಲ್ಲುಗಳ ಪರ್ವತ. ಮಧ್ಯದಲ್ಲಿ ಕಿರುಹಾದಿಯಲ್ಲಿ ಸಾಹಸ. ನಿತ್ಯ 800 ಕಿಲೊಮೀಟರ್ ಬೈಕ್ ರೈಡ್ ಮಾಡುತ್ತಿದ್ದವರು, ಹಳ್ಳ, ಕಲ್ಲು, ಹೊಂಡಗಳಿರುವ ರಸ್ತೆಯಲ್ಲಿ ನಾಲ್ಕು ಗಂಟೆಯಲ್ಲಿ ಕ್ರಮಿಸಿದ್ದು ಕೇವಲ 14 ಕಿಲೊಮೀಟರ್’ ಎಂದು ಅಚ್ಚರಿಗೊಳಿಸಿದರು.

ಗುರಿಯನ್ನು ಮುಟ್ಟುವುದೇ ಉದ್ದೇಶವಾಗಿಲ್ಲದಿದ್ದರೆ ಸಾಕಷ್ಟು ಮಾನವೀಯತೆ, ಅಂತಃಕರಣದ ಪಾಠಗಳನ್ನು ಕಲಿಯುತ್ತೇವೆ ಎಂಬುದಕ್ಕೆ ಮುಕ್ತಿನಾಥ ಮಾರ್ಗದ ಹಳ್ಳಿಯ ‘ಭೂಮಿ’ ಎಂಬ ದನ ಕಾಯುವ ವ್ಯಕ್ತಿಯನ್ನು ರಾಘವೇಂದ್ರ ಉದಾಹರಿಸಿದರು. ‘ತನ್ನ ಪುಟ್ಟ ಗುಡಿಸಲಿನಲ್ಲಿ ಆಶ್ರಯ ನೀಡಿದ ‘ಭೂಮಿ’, ಸೊಪ್ಪು–ತರಕಾರಿ ಊಟ ಬಡಿಸಿದರು. ಮಾರನೇ ದಿನದ್ದು ಅಪಾಯದ ದಾರಿಯೆಂದು ಎಚ್ಚರಿಸಿದರು. ಅವರನ್ನು ಮರೆಯುವುದಾದರೂ ಹೇಗೆ’ ಎಂದು ಕೃತಜ್ಞರಾದರು.


ಮುಕ್ತಿನಾಥದ ‘ಬಾಬ್ ಮಾರ್ಲೆ’ ಕೆಫೆಯಲ್ಲಿ ಸಿಗುವ ಎಲ್ಲ ತರಾವರಿ ತಿನಿಸಿನ ಸವಿ, ಉಚಿತ ವಸತಿ, ಕನ್ನಡದಲ್ಲಿ ಮಾತನಾಡುತ್ತಿದ್ದ ಇವರನ್ನು ನಾಗಾ ಸಾಧುವೊಬ್ಬ ‘ಬರಬೇಕು, ಬರಬೇಕು’ ಎಂದಿದ್ದನ್ನು ಬೆರಗಿನಿಂದ ಹೇಳಿದರು.

‘ಭೂತಾನ್‌ಗೆ ಕೇವಲ ಗುರುತಿನಚೀಟಿ, ಪರವಾನಗಿ ತೋರಿಸಿ ಹೋಗಬಹುದಿತ್ತು. ಈಗ ಅನುಮತಿ ಪಡೆದು ಅವರದೇ ಎಸ್ಕಾರ್ಟ್‌ನಲ್ಲಿ ತೆರಳಬೇಕು. ಆಗ ನಿತ್ಯ ₹ 100 ನೀಡಬೇಕಿತ್ತು. ಈಗ ಪ್ರಯಾಣ ಮಾಡಬೇಕೆಂದರೆ ₹ 45 ಸಾವಿರ ಭರಿಸಬೇಕಿದೆ. ಅಲ್ಲಿನ ಶ್ರದ್ಧಾಕೇಂದ್ರಗಳಲ್ಲಿ ಭಾರತೀಯ ರೈಡರ್‌ಗಳು, ಪ್ರವಾಸಿಗರು ಗೌರವದಿಂದ ನಡೆದುಕೊಳ್ಳದ್ದರಿಂದ ಈ ಪರಿಸ್ಥಿತಿ ಬಂದಿದೆ’ ಎಂದು ರಾಘವೇಂದ್ರ ಬೇಸರ ವ್ಯಕ್ತಪಡಿಸಿದರು.

ಬಾಲಿಯಲ್ಲಿ 18 ದಿನ

‘ಇಂಡೊನೇಷ್ಯಾ ಬಾಲಿಗೆ ಅಂತರರಾಷ್ಟ್ರೀಯ ಚಾಲನಾ ಪರವಾನಗಿ ತೆಗೆದುಕೊಂಡು ಹೋಗಿದ್ದೆವು. ಎಲ್ಲಿ ಹೋದರೂ ಮೆಕ್ಯಾನಿಕ್ ಅನ್ನು ಪರಿಚಯ ಮಾಡಿಕೊಳ್ಳುತ್ತೇವೆ. ಕೆಲವು ನಗರದ ಮಾರ್ಗಗಳನ್ನು ಸಂಜೆ 7 ಗಂಟೆಗೆ ಮುಚ್ಚಲಾಗುತ್ತದೆ. ಸಂಜೆ 6 ಆಗಿತ್ತು. ಬೈಕ್ ಕೀ ಕಳೆದುಹೋಗಿತ್ತು. ಗಾಬರಿಯಿಂದ ಮೆಕ್ಯಾನಿಕ್‌ಗೆ ಕರೆ ಮಾಡಿದೆ. ಎರಡೇ ನಿಮಿಷಕ್ಕೆ ನಕಲಿ ಕೀಗಳೊಂದಿಗೆ ಬಂದು ಬೈಕ್ ಚಾಲೂ ಮಾಡಿಕೊಟ್ಟರು’ ಎಂದರು.

‘ಅಪಘಾತದ ಆಘಾತದಿಂದ ಪೆಟ್ರೋಲ್ ಹಾಕಿಸುವುದನ್ನೇ ಮರೆತುಬಿಟ್ಟಿದ್ದೆವು. ರಾಮನಗರ ದಾಟಿದ ಮೇಲೆ ಪೆಟ್ರೋಲ್ ಖಾಲಿಯಾಗಿತ್ತು. ರಾತ್ರಿ 9.30ರ ಸುಮಾರು ಯಾರೊಬ್ಬರೂ ನೆರವಾಗಲಿಲ್ಲ. ಇಬ್ಬರು ಮುಸ್ಲಿಂ ಯುವಕರು ಟೋ ಮಾಡಲು ನೋಡಿದರು, ಆಗಲಿಲ್ಲ. ಪೆಟ್ರೋಲ್ ತರುವುದಾಗಿ ಹಣವನ್ನು ಪಡೆಯದೇ ಹೋದರು. ಬಳಿಕ ಮುಸ್ಲಿಂ ದಂಪತಿ ಬಂದು ಮೂರು ಕಿಲೊಮೀಟರ್ ದೂರದ ಪೆಟ್ರೋಲ್ ಬಂಕ್‌ವರೆಗೂ ಟೋ ಮಾಡಿದರು. ಅಲ್ಲಿ ಆ ಹುಡುಗರೂ ಸಿಕ್ಕರು. ನಾನು ಕೈಮುಗಿದೆ’ ಎಂದು ಭಾವುಕರಾದರು.



ರಾಘವೇಂದ್ರ – ವೇದಾ

ಇದು ಹತ್ತು ವರ್ಷಗಳ ಹಿಂದೆ ಕಾರ್ಗಿಲ್‌ನಲ್ಲಿ ನಡೆದ ಘಟನೆ. ಅಲ್ಲಿನ ತಿರುವೊಂದರಲ್ಲಿ ವೇಗವಾಗಿ ಸಾಗಿದರು. ಅದು ಟ್ರಕ್ ಚಾಲಕನಿಗೆ ಕೋಪ ತರಿಸಿತು. ಅದು ತಪ್ಪೆಂದು ಇವರಿಗೂ ಅರಿವಾಯಿತು. ಆದರೆ, ಟ್ರಕ್ ಚಾಲಕ ಹಿಂದಿನಿಂದಲೇ ಹಾರ್ನ್ ಮಾಡುತ್ತಾ ಬರುತ್ತಿದ್ದ. ಇವರು ದೂರದಲ್ಲಿ ಬೈಕ್ ನಿಲ್ಲಿಸಿ ಕೈ ಮುಗಿದು ಕ್ಷಮಿಸಿ ಎಂದು ಕೇಳಿದರು. ಅವನೂ ಕರಗಿದ. ‘ನಿಮಗೆ ಯಾವ ತೊಂದರೆಯೂ ಆಗುವುದಿಲ್ಲ, ಆಗುವುದು ನಮಗೆ. ಟ್ರಕ್ ಬಿದ್ದರೆ ರೋಡ್ ಬಂದ್ ಮಾಡಿ ಬಿಡುತ್ತಾರೆ. ಇದರಿಂದ ಬೇರೆ ಟ್ರಕ್‌ನವರಿಗೆ ತೊಂದರೆಯಾಗುತ್ತದೆ’ ಎಂದು ಮಿಕ್ಕ ಟ್ರಕ್ ಚಾಲಕರ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದನ್ನು ರಾಘವೇಂದ್ರ ಮೆಚ್ಚುಗೆಯಿಂದ ಹೇಳಿದರು.

ಹೊಸ ಸ್ಥಳಗಳ ಭೇಟಿ, ಹೊಸ ಜನರ ಒಡನಾಟ, ವೈವಿಧ್ಯಮಯ ಸಂಸ್ಕೃತಿ, ಸವಾಲು ಎಸೆಯುವ ರಸ್ತೆ, ಹವಾಮಾನ ಎಲ್ಲವೂ ಹೊಸದೇ ಪಾಠಗಳನ್ನು ಹೇಳಿಕೊಡುತ್ತವೆ. ಅವುಗಳಿಗೆ ಸರಿಯಾಗಿ ಕಿವಿಗೊಟ್ಟರೆ ಬದುಕು ಸಮೃದ್ಧವಾಗುತ್ತದೆ. ❖

ರೈಡರ್‌ಗಳಿಗೆ ಕಿವಿಮಾತು

- ಬೆಳಿಗ್ಗೆಯೇ ಬೈಕ್ ಸವಾರಿ ಆರಂಭಿಸಬೇಕು. ಸಂಜೆ 6.30ರ ನಂತರ ಪ್ರಯಾಣ ಬೇಡ. ಚೆನ್ನಾಗಿ ನೀರು ಕುಡಿಯಬೇಕು. ನಿದ್ದೆ ಬಂದರೆ ರಸ್ತೆ ಪಕ್ಕ ನಿಲ್ಲಿಸಿ, ಚಿಕ್ಕ ನಿದ್ದೆಯನ್ನು ಮುಗಿಸಿಯೇ ಪ್ರಯಾಣಿಸಬೇಕು. ನಿದ್ದೆಯಲ್ಲೇ ಓಡಿಸುತ್ತೇನೆಂದವರು ಗಂಟೆಗೆ 5 ಕಿ.ಮೀ ಓಡಿಸುವುದೂ ಕಷ್ಟ.
- ಪ್ರಯಾಣವೆಂದರೆ ಕುಡಿದು, ಮೋಜಿನ ಪಾರ್ಟಿ ಮಾಡಿ ಬರುವುದಲ್ಲ. ಎಲ್ಲರೊಂದಿಗೆ ಬೆರೆಯಬೇಕು. ವಿಧೇಯರಾಗಿ ವರ್ತಿಸಬೇಕು. ವೇಗವಾಗಿ ಓಡಿಸುವುದೇ ಬೈಕ್ ರೈಡ್ ಅಲ್ಲ. ಸುರಕ್ಷತೆಯೇ ಆದ್ಯತೆ ಆಗಬೇಕು.
- ಪ್ರಥಮ ಚಿಕಿತ್ಸೆ ಕಿಟ್, ಔಷಧ ಒಯ್ಯಬೇಕು. ಬೈಕ್‌ನಿಂದ ಇಳಿದ ತಕ್ಷಣ ಕೂರದೇ ಸಣ್ಣ ವ್ಯಾಯಾಮ ಮಾಡಬೇಕು.
- ಮಿತಿಯಿಂದ ಹಣ ಖರ್ಚು ಮಾಡಬೇಕು. ನೇಪಾಳ, ಭೂತಾನ್ ಪ್ರವಾಸಗಳು ಲಕ್ಷ ದಾಟಿಲ್ಲ. ಅದಕ್ಕೆ ಜನರೊಂದಿಗೆ ಬೆರೆಯುವುದೇ ಕಾರಣ. ಪ್ರಯಾಣವು ಶಕ್ತಿ ನೀಡುತ್ತದೆ. ಅದು ನಿಮ್ಮ ವೃತ್ತಿಯಲ್ಲಿ ಪ್ರತಿಫಲಿಸುತ್ತದೆ.

ಮಜ ಮಜ ಮಜಕೂರ


• ಎಂ.ಎಸ್.ಪೂಜಾರ



ದೃಶ್ಯ ಚಿಕ್ಕ ಕೀಶ್ರುಷ್ಟು ಕಥೆಯ — ಬೇಕಾಗಿದ್ದಾರೆ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ರಾಮಣ್ಣ ‘ಮನೆ ಕಾಯಲು ಬೇಕಾಗಿದ್ದಾರೆ’ ಎಂದು ತಮ್ಮ ಮನೆಯ ಮುಂದೆ ಬೋರ್ಡ್ ಹಾಕಿದ್ದರು. ದಾರಿಯಲ್ಲಿ ಹೋಗುವವರಿಗೆಲ್ಲ ತಾವೇ ನಿಂತು ಬೋರ್ಡ್‌ನತ್ತ ಬೊಟ್ಟು ಮಾಡಿ ತೋರಿಸಿದರೂ ಈ ಕೆಲಸಕ್ಕೆ ಜನ ಸಿಗಲಿಲ್ಲ. ದಿನ ನಿಂತು ಬೊಟ್ಟು ತೋರುತ್ತಿದ್ದ ರಾಮಣ್ಣನಿಗೆ ಕೊನೆಗೆ ತಲೆ ಕೆಟ್ಟಂತಾಗಿತ್ತು.



ಪ್ರಾಸ ಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ				
ಗ್ಯಾ	ನ	ಕೊ	ಶ	ಪ್ರ
ವ	ಬೆ	ವಿ	ಗೋ	ಗ
ಕಿ	ಪ			

1

	ಳ	ಕು
	ಳ	ಕು

2

	ಯ	ನ
	ಯ	ನ

3

	ಕಾ	ರ
	ಕಾ	ರ

4

	ರಂ	ಟಿ
	ರಂ	ಟಿ

5

	ಮ್ಮ	ತ್ತು
	ಮ್ಮ	ತ್ತು

6

	ಚ	ನ
	ಚ	ನ

ಮೋಜಿನ ENGLISH

ಇದು ಜಗತ್ತಿನ ಮೊಟ್ಟಮೊದಲ ಇಂಗ್ಲಿಷ್‌ನ ಪದಬಂಧ

R	O	T	A	S
O	P	E	R	A
T	E	N	E	T
A	R	E	P	O
S	A	T	O	R

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತದಲ್ಲಿ ಗರ್ದಿ ಗಮ್ಮತ್ತು

ಮಾಡಿ–ನೋಡಿ–ಆಡಿ

ಯಾವುದೇ ಸಂಖ್ಯೆಯಿಂದ ಪ್ರಾರಂಭಿಸಿದರೂ ಕೆಲವು ಮೂಲಕ್ರಿಯೆಗಳ ಸಹಾಯದಿಂದ ಒಂದೇ ಉತ್ತರ ಪಡೆಯಬಹುದು.

ಉದಾ: ಊಹಾ ಸಂಖ್ಯೆ	6	13	102
6ರಿಂದ ಗುಣಿಸಿ	36	78	612
9ನ್ನು ಗುಣಿಸಿ	45	87	621
3 ರಿಂದ ಭಾಗಿಸಿ	15	29	207
15ನ್ನು ಕೂಡಿಸಿ	30	44	222
2 ರಿಂದ ಭಾಗಿಸಿ	15	22	111
ಈಗ ಊಹಾಸಂಖ್ಯೆ ಕಳೆಯಿರಿ	9	9	9

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಬ್ರೇನ್‌ವೀಟಾ
Two Hundred and six

ಮೋಜಿನ ಇಂಗ್ಲಿಷ್
1)MANGO 2) OFFICE 3) FORGET 4) HANDSOME 5) OXFORD 6) GODOWN 7) LOTUS 8) FATHER 9) BESIDE 10) DONKEY

ಪ್ರಾಸಪದಬಂಧ
1)ಪ್ರಕೃತಿ–ವಿಕೃತಿ
2) ಮುನ್ನುಡಿ–ಬೆನ್ನುಡಿ
3)ಖಚಿತ–ಉಚಿತ
4)ಗುಂಡಾರ–ಭಂಡಾರ
5) ಸಲಿಗೆ–ಸುಲಿಗೆ
6)ನಿನಗೆ–ನನಗೆ

ನಿತ್ಯ ಜಾಣಪದ ಆಟ

ಹೊಂದಿಸು – ಆನಂದಿಸು

ಇಲ್ಲಿ ‘ಅ’ ಪಟ್ಟಿಯಲ್ಲಿರುವ 5 ಅಕ್ಷರಗಳನ್ನು ಹಾಗೂ ‘ಬ’ ಪಟ್ಟಿಯಲ್ಲಿ 2 ಅಕ್ಷರದ 5 ಪದಗಳನ್ನು ಕೊಟ್ಟಿದೆ. ನೀವು ‘ಅ’ ಪಟ್ಟಿಯಿಂದ ಆಯ್ದು ಬ ಪಟ್ಟಿಯಲ್ಲಿನ ಎರಡಕ್ಷರದ ಪದಕ್ಕೆ 3 ಅಕ್ಷರ ಸೇರಿಸಿದರೆ 5 ಅಕ್ಷರದ ಒಂದು ಅರ್ಥ ಬದ್ಧ ಪದವಾಗುತ್ತದೆ. ಯಾವ ಪದಕ್ಕೆ ಯಾವ ಅಕ್ಷರಗಳು. ಹೊಂದಿಸು – ಆನಂದಿಸು

ಅ ಪಟ್ಟಿ				
ಜ	ದಿ	ಗ	ದಾ	ಕು
ಮಂ	ನಾಂ	ವಿ	ಮಾ	ರ
ನು	ಲು	ವ	ತ	ಸು

ಬ ಪಟ್ಟಿ				
ನ				ರಿ
ಸ				ರ
ಶಿ				ರ
ವಾ				ರ
ಮ				ಲ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಸುನಿಧಿ
ಬೆಳಗಾವಿ



ಅವ್ಯಕ್ತ
ದುಬೈ



ವಿಶ್ವರಾಜ ಜೋಡಟ್ಟಿ
ಬೆಳಗಾವಿ



ಪುನರ್ವ ಕೆ ಗೌಡ
ಕೆ.ಆರ್.ನಗರ



ತನ್ಮಯೀ ಎಂ
ಚಿಕ್ಕಬಳ್ಳಾಪುರ



ನಿಸದಹರ್ಷ.ಎಸ್
ಬೆಂಗಳೂರು

ರಂಗೇರಿದ ಚುನಾವಣೆ: ಟಿಕೆಟ್ ಹಂಚಿಕೆ ಕಸರತ್ತು

ಜಾರ್ಖಂಡ್ ಮತ್ತು ಮಹಾರಾಷ್ಟ್ರ ವಿಧಾನಸಭೆಗಳಿಗೆ ಚುನಾವಣೆ ಘೋಷಣೆಯಾಗುತ್ತಿರುವಂತೆಯೇ ಎಲ್ಲ ಪಕ್ಷಗಳಲ್ಲಿ ಅಭ್ಯರ್ಥಿಗಳ ಆಯ್ಕೆಗೆ ತೀವ್ರ ಕಸರತ್ತು ಆರಂಭವಾಗಿದೆ. ಬಿಜೆಪಿಯು ಜಾರ್ಖಂಡ್ ವಿಧಾನಸಭೆಗೆ ತನ್ನ 66 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಿದೆ. 'ಇಂಡಿಯಾ' ಮೈತ್ರಿಕೂಟದ ಜೆಎಂಎಂ ಹಾಗೂ ಕಾಂಗ್ರೆಸ್ 70 ಸ್ಥಾನಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದರೆ, ಈ ಪಕ್ಷಗಳ ನಡೆಗೆ ಮೈತ್ರಿಕೂಟದ ಮತ್ತೊಂದು ಅಂಗಪಕ್ಷ ಆರ್‌ಜೆಡಿ ಅಸಮಾಧಾನ ವ್ಯಕ್ತಪಡಿಸಿದೆ. ತನ್ನ ಮುಂದೆ ಎಲ್ಲ ಆಯ್ಕೆಗಳು ಮುಕ್ತವಾಗಿವೆ ಎಂದೂ ಹೇಳಿದೆ. ಮಹಾರಾಷ್ಟ್ರದಲ್ಲಿ 'ಇಂಡಿಯಾ' ಮೈತ್ರಿಕೂಟದಲ್ಲಿ ಬಿರುಕು ಮೂಡಿದೆ. ಟಿಕೆಟ್ ಹಂಚಿಕೆ ಅಂತಿಮಗೊಳ್ಳುವ ಮೊದಲೇ ಕಾಂಗ್ರೆಸ್ ಪಕ್ಷ ಸಿಇಸಿ ಸಭೆ ಕರೆದಿರುವುದು ಹಲವು ಊಹಾಪೋಹಗಳಿಗೆ ಕಾರಣವಾಗಿದೆ

ಜಾರ್ಖಂಡ್: ಬಿಜೆಪಿ ಮೊದಲ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ/ರಾಂಚಿ: ಜಾರ್ಖಂಡ್ ವಿಧಾನಸಭೆಗೆ 66 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಜೆಪಿ ಶನಿವಾರ ಬಿಡುಗಡೆ ಮಾಡಿದೆ.

ಮಾಜಿ ಮುಖ್ಯಮಂತ್ರಿಗಳಾದ ಬಾಬುಲಾಲ್ ಮರಾಂಡಿ, ಚಂಪೈ ಸೊರೇನ್ ಅವರು ಮೊದಲ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಜೆಎಂಎಂ ಮುಖಂಡ ಹಾಗೂ ಮುಖ್ಯಮಂತ್ರಿ ಹೇಮಂತ ಸೊರೇನ್ ಅವರ ನಾದಿನಿ ಸೀತಾ ಸೊರೇನ್ ಅವರಿಗೂ ಟಿಕೆಟ್ ನೀಡಲಾಗಿದೆ.

ಬಾಬುಲಾಲ್ ಮರಾಂಡಿ ಅವರಿಗೆ ಗಿರಿಧ್ ಜಿಲ್ಲೆಯ ಧನ್ವಾರ್ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. 2000ದಲ್ಲಿ ಹೊಸದಾಗಿ ರಚನೆಯಾದ ಜಾರ್ಖಂಡ್ ರಾಜ್ಯದ ಮೊದಲ ಮುಖ್ಯಮಂತ್ರಿಯಾಗಿದ್ದ ಮರಾಂಡಿ ಅವರು, ಸದ್ಯ ವಿಧಾನಸಭೆ ವಿರೋಧ ಪಕ್ಷದ ನಾಯಕರಾಗಿದ್ದಾರೆ.

ಮತ್ತೊಬ್ಬ ಮಾಜಿ ಮುಖ್ಯಮಂತ್ರಿ ಚಂಪೈ ಸೊರೇನ್ ಅವರಿಗೆ ಸರಾಯ್‌ಕೆಲಾ ಕ್ಷೇತ್ರದಿಂದ ಪಕ್ಷದ ಟಿಕೆಟ್ ನೀಡಲಾಗಿದೆ.

ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮುಖ್ಯಮಂತ್ರಿ ಹೇಮಂತ ಸೊರೇನ್ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿತ್ತು. ಆಗ ಕೆಲ ಕಾಲ ಚಂಪೈ ಅವರು ಮುಖ್ಯಮಂತ್ರಿಯಾಗಿದ್ದರು.

ಜಾರ್ಖಂಡ್ ಹೈಕೋರ್ಟ್ ಜಾಮೀನು ನೀಡಿದ ನಂತರ ಜೈಲಿನಿಂದ ಹೊರ ಬಂದ ಹೇಮಂತ ಸೊರೇನ್ ಪುನಃ ಮುಖ್ಯಮಂತ್ರಿ ಹುದ್ದೆಗೇರಿದಾಗ, ಚಂಪೈ ಸೊರೇನ್ ಅವರು ಜೆಎಂಎಂ ತೊರೆದು, ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.

ಮುಖ್ಯಮಂತ್ರಿ ಹೇಮಂತ ಸೊರೇನ್ ಅವರ ನಾದಿನಿ, ಸೀತಾ ಸೊರೇನ್ ಅವರನ್ನು ಜಾಮ್‌ತಾಡಾ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ಸೀತಾ ಅವರು ಜೆಎಂಎಂ ಅಧ್ಯಕ್ಷ ಶಿಬು ಸೊರೇನ್ ಅವರ ಹಿರಿಯ ಮಗ ದುರ್ಗ ಅವರ ಪತ್ನಿ. ಜಾರಿ ನಿರ್ದೇಶನಾಲಯವು ಹೇಮಂತ ಸೊರೇನ್ ಅವರನ್ನು ಬಂಧಿಸಿದಾಗ, ಪತ್ನಿ ಕಲ್ಪನಾ ಅವರನ್ನು ಮುಖ್ಯಮಂತ್ರಿ ಮಾಡಲು ಪಕ್ಷವು ಮುಂದಾಗಿತ್ತು. ಈ ತೀರ್ಮಾನವನ್ನು ವಿರೋಧಿಸಿದ್ದ ಸೀತಾ ಅವರು, ಜೆಎಂಎಂ ತೊರೆದು ಬಿಜೆಪಿಗೆ ಸೇರ್ಪಡೆಯಾಗಿದ್ದರು.

ಇಬ್ಬರು ಮಾಜಿ ಮುಖ್ಯಮಂತ್ರಿಗಳ ಪತ್ನಿಯರಿಗೂ ಬಿಜೆಪಿ ಟಿಕೆಟ್ ನೀಡಿದೆ. ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಅರ್ಜುನ್ ಮುಂಡಾ ಪತ್ನಿ ಮೀರಾ ಅವರಿಗೆ ಪೋಟ್ಕಾ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದ್ದು, ಇದು ಅವರ ಮೊದಲ ಚುನಾವಣೆ. ಮತ್ತೊಬ್ಬ ಮಾಜಿ ಮುಖ್ಯಮಂತ್ರಿ ಮಧು ಕೋಡಾ ಪತ್ನಿ ಗೀತಾ ಕೋಡಾ ಅವರಿಗೆ ಜಗನ್ನಾಥಪುರ ಕ್ಷೇತ್ರದ ಟಿಕೆಟ್ ನೀಡಲಾಗಿದೆ.

ಪ್ರಜಾ ಮತ
ಜನತಂತ್ರದ ಹಬ್ಬ

ಮಹಾರಾಷ್ಟ್ರ: 150 ಕ್ಷೇತ್ರಗಳಲ್ಲಿ ಸ್ಪರ್ಧೆ

ಮುಂಬೈ: ಮಹಾರಾಷ್ಟ್ರದಲ್ಲಿ ಬಿಜೆಪಿ 150ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ಶಿವಸೇನಾ (ಶಿಂದೆ ಬಣ) ಮತ್ತು ಎನ್‌ಸಿಪಿ (ಅಜಿತ್ ಪವಾರ್ ಬಣ) ಸೇರಿದಂತೆ ಇತರೆ ಮಿತ್ರಪಕ್ಷಗಳಿಗೂ ಸೂಕ್ತ ಆದ್ಯತೆ ನೀಡಲಿದೆ ಎಂದು ಪಕ್ಷದ ಪ್ರಮುಖ ನಾಯಕರೊಬ್ಬರು ಶನಿವಾರ ತಿಳಿಸಿದರು.

'ಒಂದು ತಂಡವಾಗಿ 'ಮಹಾಯುತಿ' ಸ್ಪರ್ಧಿಸಲಿದೆ. ಮಿತ್ರಪಕ್ಷಗಳ ನೆರವಿನಿಂದ ಬಿಜೆಪಿ ಮತ್ತೆ ಸರ್ಕಾರ ರಚಿಸಲಿದೆ' ಎಂದು ಹೇಳಿದರು. ಬಿಜೆಪಿಗರೇ ಮುಂದಿನ ಮುಖ್ಯಮಂತ್ರಿ ಆಗುತ್ತಾರಾ ಎಂಬ ಪ್ರಶ್ನೆಗೆ, 'ಮಹಾಯುತಿ'ಯಿಂದ ಒಬ್ಬರು ಮುಖ್ಯಮಂತ್ರಿ ಆಗಲಿದ್ದಾರೆ' ಎಂದು ಮಾಹಿತಿ ನೀಡಿದರು.

70 ಸ್ಥಾನಗಳಲ್ಲಿ ಜೆಎಂಎಂ, ಕಾಂಗ್ರೆಸ್ ಸ್ಪರ್ಧೆ: ಸೊರೇನ್

ರಾಂಚಿ (ಪಿಟಿಐ): ಜಾರ್ಖಂಡ್ ಚುನಾವಣೆಯಲ್ಲಿ, 81 ಸ್ಥಾನಗಳ ಪೈಕಿ ಕಾಂಗ್ರೆಸ್ ಮತ್ತು ಜೆಎಂಎಂ ಸೇರಿ 70 ಸ್ಥಾನಗಳಲ್ಲಿ ಸ್ಪರ್ಧಿಸಲಿವೆ ಎಂದು ಮುಖ್ಯಮಂತ್ರಿ ಹೇಮಂತ ಸೊರೇನ್ ಶನಿವಾರ ಹೇಳಿದ್ದಾರೆ.



ಹೇಮಂತ ಸೊರೇನ್

ಉಳಿದ 11 ಸ್ಥಾನಗಳ ಹಂಚಿಕೆಗೆ ಸಂಬಂಧಿಸಿ 'ಇಂಡಿಯಾ' ಮೈತ್ರಿಕೂಟದ ಅಂಗಪಕ್ಷಗಳಾದ ಆರ್‌ಜೆಡಿ ಮತ್ತು ಎಡಪಕ್ಷಗಳ ಜೊತೆ ಮಾತುಕತೆ ನಡೆಯುತ್ತಿದೆ ಎಂದು ಹೇಳಿದ್ದಾರೆ.

'ಸ್ಥಾನಗಳ ಹಂಚಿಕೆ ಕುರಿತು ಮಿತ್ರಪಕ್ಷಗಳೊಂದಿಗೆ ಸಮಾಲೋಚನೆ ನಡೆಸಿದ ನಂತರವೇ ನಿರ್ಧಾರ ಕೈಗೊಳ್ಳಲಾಗಿದ್ದು, ಶೀಘ್ರವೇ ಅಭ್ಯರ್ಥಿಗಳನ್ನು ಘೋಷಿಸಲಾಗುವುದು' ಎಂದು ಮಿತ್ರಪಕ್ಷಗಳೊಂದಿಗಿನ ಸಭೆ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

'ಜೆಎಂಎಂ ನೇತೃತ್ವದ ಮೈತ್ರಿಕೂಟ ರಾಜ್ಯದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ನಮ್ಮ ಕೈಹಿಡಿಯಲಿದ್ದು, ಮತ್ತೊಮ್ಮೆ ಅಧಿಕಾರಕ್ಕೇರುತ್ತೇವೆ' ಎಂದರು.

ಏಕಪಕ್ಷೀಯ ನಿರ್ಧಾರ: ಆರ್‌ಜೆಡಿ

ಜಾರ್ಖಂಡ್ ಚುನಾವಣೆಗೆ ಸಂಬಂಧಿಸಿ ಸೀಟುಗಳ ಹಂಚಿಕೆ ವಿಷಯದಲ್ಲಿ 'ಇಂಡಿಯಾ' ಮೈತ್ರಿಕೂಟದ ಅಂಗಪಕ್ಷವಾದ ಆರ್‌ಜೆಡಿ ಶನಿವಾರ ತನ್ನ ಅಸಮಾಧಾನ ಹೊರಹಾಕಿದೆ.

'ಪಕ್ಷದ ಮುಂದೆ ಎಲ್ಲ ಅವಕಾಶಗಳು ಮುಕ್ತವಾಗಿವೆ' ಎಂದು ಹೇಳುವ ಮೂಲಕ ತನ್ನ ಮುಂದಿನ ನಡೆ ಕುರಿತು ಸ್ಪಷ್ಟ ಸಂದೇಶ ರವಾನಿಸಿದೆ.

ಕಾಂಗ್ರೆಸ್ ಹಾಗೂ ಜೆಎಂಎಂ ಸೀಟುಗಳ ಹಂಚಿಕೆ ಕುರಿತು ನಿರ್ಧಾರ ಕೈಗೊಂಡಿರುವುದು 'ಏಕಪಕ್ಷೀಯ' ನಡೆ ಎಂದು ಆರ್‌ಜೆಡಿ ವಕ್ತಾರ ಮನೋಜ್‌ಕುಮಾರ್ ಝಾ ಹೇಳಿದ್ದಾರೆ.

15 ರಿಂದ 18 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಆರ್‌ಜೆಡಿ ಮುಂದಾಗಿದೆ. ಏಕಾಂಗಿಯಾಗಿಯೇ ಬಿಜೆಪಿಯನ್ನು ಸೋಲಿಸುವ ವಿಶ್ವಾಸ ವ್ಯಕ್ತಪಡಿಸಿದೆ.

23ಕ್ಕೆ ಪ್ರಿಯಾಂಕಾ ನಾಮಪತ್ರ

ಪ್ರಜಾವಾಣಿ ವಾರ್ತೆ/ಪಿಟಿಐ

ತಿರುವನಂತಪುರ: ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ವಯನಾಡ್ ಲೋಕಸಭೆ ಕ್ಷೇತ್ರದ ಉಪಚುನಾವಣೆಗೆ ಇದೇ 23ರಂದು ನಾಮಪತ್ರ ಸಲ್ಲಿಸಲಿದ್ದಾರೆ.

ಸಹೋದರ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪ್ರಿಯಾಂಕಾ ಅವರೊಂದಿಗೆ ಕೇರಳಕ್ಕೆ ಇದೇ 22ರ ಸಂಜೆ ಆಗಮಿಸಲಿದ್ದಾರೆ. 23ರ ಮಧ್ಯಾಹ್ನ 12ರರೊಳಗೆ ಪ್ರಿಯಾಂಕಾ ಅವರು ನಾಮಪತ್ರ ಸಲ್ಲಿಸಲಿದ್ದಾರೆ. ನಾಮಪತ್ರ ಸಲ್ಲಿಕೆಗೂ ಮುನ್ನ ವಯನಾಡ್‌ನ ಕಲ್ಪಟ್ಟ ನಗರದಲ್ಲಿ ಬೃಹತ್ ರೋಡ್‌ಶೋವೊಂದನ್ನು ಯುಡಿಎಫ್ ಆಯೋಜಿಸಿದೆ.

ರಾಹುಲ್ ಗಾಂಧಿ ಅವರು 2019ರಲ್ಲಿ ಹಾಗೂ 2024ರ ಲೋಕಸಭೆ ಚುನಾವಣೆಯಲ್ಲಿ ವಯನಾಡ್‌ನಿಂದ ಸ್ಪರ್ಧಿಸಿದ್ದರು. ಈ ವೇಳೆ ರಾಹುಲ್ ಅವರೊಂದಿಗೆ ಪ್ರಿಯಾಂಕಾ ಅವರು ರೋಡ್ ಶೊ ಹಾಗೂ ಹಲವು ರ‍್ಯಾಲಿಗಳನ್ನು ನಡೆಸಿದ್ದರು. ಆದರೆ, ಇದೇ ಮೊದಲ ಬಾರಿಗೆ ಪ್ರಿಯಾಂಕಾ ಅವರು ಸ್ವತಃ ತಾವೇ ಅಭ್ಯರ್ಥಿಯಾಗಲು ಕೇರಳಕ್ಕೆ ಆಗಮಿಸಲಿದ್ದಾರೆ.

ಪ್ರಿಯಾಂಕಾ ಎದುರು ನವ್ಯಾ

ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಎದುರಾಳಿಯಾಗಿ ಬಿಜೆಪಿಯ ನವ್ಯಾ ಹರಿದಾಸ್ ಕಣಕ್ಕೆ ಇಳಿಯಲಿದ್ದಾರೆ. ನವ್ಯಾ ಅವರ ಹೆಸರನ್ನು ಬಿಜೆಪಿ ಶನಿವಾರ ಪ್ರಕಟಿಸಿದೆ.

ಗೌರಿ ಲಂಕೇಶ್ ಕೊಲೆ ಆರೋಪಿ ಶಿವಸೇನಾ ಸೇರ್ಪಡೆ

ಜಾಲ್ನಾ (ಮಹಾರಾಷ್ಟ್ರ) (ಪಿಟಿಐ): ಪತ್ರಕರ್ತೆ ಗೌರಿ ಲಂಕೇಶ್ ಅವರ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ಶ್ರೀಕಾಂತ್ ಪಾಂಗಾರ್ಕರ್, ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ಜಾಲ್ನಾದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಪಕ್ಷದ ಮುಖಂಡ ಅರ್ಜುನ್ ಖೋಟ್ಕರ್ ಸಮ್ಮುಖದಲ್ಲಿ ಶ್ರೀಕಾಂತ್, ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅರ್ಜುನ್ ಖೋಟ್ಕರ್, 'ಪಾಂಗಾರ್ಕರ್ ಮಾಜಿ ಶಿವಸೈನಿಕನಾಗಿದ್ದು, ಪಕ್ಷಕ್ಕೆ ಮರಳಿದ್ದಾರೆ. ಅವರನ್ನು ಜಾಲ್ನಾ ವಿಧಾನಸಭೆ ಕ್ಷೇತ್ರದ ಪ್ರಚಾರ ಸಮಿತಿ ಅಧ್ಯಕ್ಷರನ್ನಾಗಿ ಮಾಡಲಾಗಿದೆ' ಎಂದು ಹೇಳಿದ್ದಾರೆ.

ಶ್ರೀಕಾಂತ್ ಅವರು 2001ರಿಂದ 2006ರವರೆಗೆ ಶಿವಸೇನಾದ (ಆಗ ಪಕ್ಷವು ಇಬ್ಭಾಗವಾಗಿರಲಿಲ್ಲ) ಜಾಲ್ನಾ ಪಾಲಿಕೆಯ ಸದಸ್ಯರಾಗಿದ್ದರು. ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಅವರನ್ನು 2018ರ ಆಗಸ್ಟ್‌ನಲ್ಲಿ ಬಂಧಿಸಲಾಗಿತ್ತು. ಕಳೆದ ಸೆಪ್ಟೆಂಬರ್ 4ರಂದು ಅವರಿಗೆ ಕರ್ನಾಟಕ ಹೈಕೋರ್ಟ್ ಜಾಮೀನು ನೀಡಿತ್ತು.

ಮೈತ್ರಿ ಅಂತಿಮಕ್ಕೆ ಮುನ್ನವೇ ಕಾಂಗ್ರೆಸ್ ಸಿಇಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಎರಡು ರಾಜ್ಯಗಳು ಹಾಗೂ ವಿವಿಧ ರಾಜ್ಯಗಳ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಹಾಗೂ ಚುನಾವಣಾ ಸಿದ್ಧತೆ ಕುರಿತು ಚರ್ಚಿಸಲು ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿಯ ಸಭೆ ಇದೇ 20 ಹಾಗೂ 21ರಂದು ನವದೆಹಲಿಯಲ್ಲಿ ನಡೆಯಲಿದೆ. ಮಿತ್ರ ಪಕ್ಷಗಳ ಜತೆಗೆ ಸೀಟು ಹಂಚಿಕೆ ಪ್ರಕ್ರಿಯೆ ಪೂರ್ಣಗೊಳ್ಳುವ ಮುನ್ನವೇ ಸಭೆ ಕರೆದಿರುವುದು ಕುತೂಹಲ ಕೆರಳಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯಲ್ಲಿ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್, ಕರ್ನಾಟಕದ ಇಂಧನ ಸಚಿವ ಕೆ.ಜೆ.ಜಾರ್ಜ್ ಮತ್ತಿತರ ನಾಯಕರು ಭಾಗಿಯಾಗಲಿದ್ದಾರೆ.

ಮಹಾರಾಷ್ಟ್ರದಲ್ಲಿ ಮಹಾ ವಿಕಾಸ ಅಘಾಡಿಯಲ್ಲಿ (ಎಂವಿಎ) ಸೀಟು ಹಂಚಿಕೆ ಅಂತಿಮಗೊಂಡಿಲ್ಲ.

ಕರ್ನಾಟಕ, ತೆಲಂಗಾಣ ಹಾಗೂ ಹಿಮಾಚಲ ಪ್ರದೇಶದಲ್ಲಿ ಚುನಾವಣಾ ವೇಳಾಪಟ್ಟಿ ಪ್ರಕಟಕ್ಕೆ ಮುನ್ನವೇ ಪಕ್ಷವು ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟಿಸಿತ್ತು ಹಾಗೂ ಪ್ರಚಾರಕ್ಕೆ ಚಾಲನೆ ನೀಡಿತ್ತು. ಈ ರಾಜ್ಯಗಳಲ್ಲಿ ಪಕ್ಷ ಗೆದ್ದಿತ್ತು. ಆದರೆ, ಮಹಾರಾಷ್ಟ್ರ ಹಾಗೂ ಜಾರ್ಖಂಡ್‌ನಲ್ಲಿ ಸೀಟು ಹಂಚಿಕೆ ಅಂತಿಮಗೊಳ್ಳದಿರುವುದರಿಂದ ಪ್ರಚಾರಕ್ಕೆ ಹಿನ್ನಡೆಯಾಗಿದೆ ಎಂದು ಪಕ್ಷದ ನಾಯಕರು ಹೇಳುತ್ತಾರೆ.

ಜಾರ್ಖಂಡ್‌ನಲ್ಲಿ ಬಿಜೆಪಿಯು ಮಿತ್ರ ಪಕ್ಷಗಳೊಂದಿಗೆ ಸೀಟು ಹಂಚಿಕೆ ಅಂತಿಮಗೊಳಿಸಿದೆ ಹಾಗೂ ಹಿಂದುತ್ವವನ್ನು ಪ್ರಮುಖ ವಿಷಯವನ್ನಾಗಿಟ್ಟುಕೊಂಡು ಆಕ್ರಮಣಕಾರಿ ಪ್ರಚಾರ ನಡೆಸುತ್ತಿದೆ. ಆಡಳಿತ ವಿರೋಧಿ ಅಲೆ ಬಲವಾಗಿದೆ. ಇದರಿಂದಾಗಿ, ಇದರಿಂದ ಜೆಎಂಎಂ ಮೈತ್ರಿಕೂಟಕ್ಕೆ ಕಣ ಕಠಿಣವಾಗಿದೆ ಎಂದು ಮೂಲಗಳು ತಿಳಿಸಿವೆ.

ಭ್ರಷ್ಟಾಚಾರ ಪ್ರಕರಣದಲ್ಲಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಜೈಲಿಗೆ ಹೋಗಿ ಬಂದಿದ್ದಾರೆ. ಈ ವಿಷಯವನ್ನು ಮುಂದಿಟ್ಟುಕೊಂಡು ಬಿಜೆಪಿ ಪ್ರಚಾರ ನಡೆಸುತ್ತಿದೆ. ಜತೆಗೆ, ಬುಡಕಟ್ಟು ಸಮುದಾಯಗಳ ಮತ ವಿಭಜನೆಯಾಗುವ ಸಂಭವ ಇದೆ. ಇದಲ್ಲದೆ, ಚಂಪೈ ಸೊರೇನ್ ಅವರು ಬಿಜೆಪಿ ಪಾಳಯದಲ್ಲಿ ಗುರುತಿಸಿಕೊಂಡಿರುವುದು ಸಹ ಹೊಡೆತ ನೀಡಬಹುದು ಎಂದು ಕಾಂಗ್ರೆಸ್ ನಾಯಕರೊಬ್ಬರು ವಿಶ್ಲೇಷಿಸಿದರು.

ಮಹಾರಾಷ್ಟ್ರ: 260 ಸ್ಥಾನಗಳಲ್ಲಿ ಒಮ್ಮತ

ಮಹಾರಾಷ್ಟ್ರದಲ್ಲಿ, ಕಾಂಗ್ರೆಸ್ ರಾಜ್ಯ ಘಟಕದ ಮುಖ್ಯಸ್ಥ ನಾನಾ ಪಟೋಲೆ ಭಾಗವಹಿಸಿದರೆ ಭವಿಷ್ಯದ ಚರ್ಚೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ಶಿವಸೇನಾ (ಯುಬಿಟಿ) ಶುಕ್ರವಾರ ಬೆದರಿಕೆ ಹಾಕಿದೆ. ಉದ್ಧವ್ ಠಾಕ್ರೆ ನೇತೃತ್ವದ ಪಕ್ಷದೊಂದಿಗಿನ ಭಿನ್ನಾಭಿಪ್ರಾಯಗಳನ್ನು ನಿವಾರಿಸಲು ಪಕ್ಷದ ಉಸ್ತುವಾರಿ ರಮೇಶ್ ಚೆನ್ನಿತ್ತಲ ಮುಂಬೈಗೆ ಧಾವಿಸಿದರು.

ಕಾಂಗ್ರೆಸ್, ಶಿವಸೇನಾ (ಯುಬಿಟಿ) ಮತ್ತು ಎನ್‌ಸಿಪಿ (ಶರದ್ ಪವಾರ್ ಬಣ) 288 ಸ್ಥಾನಗಳ ಪೈಕಿ ಸುಮಾರು 260 ಸ್ಥಾನಗಳಲ್ಲಿ ಒಮ್ಮತಕ್ಕೆ ಬಂದಿವೆ. ಉಳಿದ ಕ್ಷೇತ್ರಗಳ ಕಗ್ಗಂಟು ಬಗೆಹರಿದಿಲ್ಲ. ಅಲ್ಲದೆ, ಮೈತ್ರಿಕೂಟದಲ್ಲಿ ಸಮಾಜವಾದಿ ಪಕ್ಷ, ಸಿಪಿಐ(ಎಂ), ರೈತರು ಮತ್ತು ಕಾರ್ಮಿಕರ ಪಕ್ಷಗಳಂತಹ ಸಣ್ಣ ಪಕ್ಷಗಳಿಗೆ ಅವಕಾಶ ಕಲ್ಪಿಸಬೇಕಾಗುತ್ತದೆ. ಕಾಂಗ್ರೆಸ್ ಪಕ್ಷವು 115-120 ಕ್ಷೇತ್ರಗಳನ್ನು ಬಿಟ್ಟುಕೊಡಬೇಕು ಎಂದು ಪಟ್ಟು ಹಿಡಿದಿದೆ. ಆದರೆ, ಮಿತ್ರಪಕ್ಷಗಳು 100ರಿಂದ 105 ಸ್ಥಾನಗಳನ್ನು ಕಾಂಗ್ರೆಸ್‌ಗೆ ನೀಡಲು ಒಲವು ತೋರಿವೆ.



ರಾಂಚಿಯಲ್ಲಿ ಶನಿವಾರ ನಡೆದ 'ಸಂವಿಧಾನ ಸಮ್ಮಾನ ಸಮ್ಮೇಳನ'ದಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಪಾಲ್ಗೊಂಡಿದ್ದರು — ಪಿಟಿಐ ಚಿತ್ರ

ಭಾರತೀಯ ರಾಜತಾಂತ್ರಿಕರಿಗೆ ಕೆನಡಾ ವಿದೇಶಾಂಗ ಸಚಿವೆ ಮೆಲಾನಿ ಎಚ್ಚರಿಕೆ

'ವಿಯೆನ್ನಾ ಒಪ್ಪಂದ ಉಲ್ಲಂಘಿಸಿದರೆ ಸಹಿಸಲ್ಲ'

ಟೊರಾಂಟೊ/ ಒಟ್ಟಾವ (ಪಿಟಿಐ): ಕೆನಡಾದಲ್ಲಿರುವ ಭಾರತದ ಇನ್ನುಳಿದ ರಾಜತಾಂತ್ರಿಕ ಅಧಿಕಾರಿಗಳಿಗೆ 'ವಿಯೆನ್ನಾ ಒಪ್ಪಂದ ಉಲ್ಲಂಘಿಸಿದರೆ ದೇಶ ತೊರೆಯಬೇಕಾಗುತ್ತದೆ' ಎನ್ನುವ ಎಚ್ಚರಿಕೆ ನೀಡಲಾಗಿದೆ ಎಂದು ಕೆನಡಾದ ವಿದೇಶಾಂಗ ವ್ಯವಹಾರಗಳ ಸಚಿವೆ ಮೆಲಾನಿ ಜೋಲಿ ಶುಕ್ರವಾರ ಹೇಳಿದ್ದಾರೆ.



ಮೆಲಾನಿ ಜೋಲಿ

ವಿಯೆನ್ನಾ ಒಪ್ಪಂದವನ್ನು ಉಲ್ಲಂಘಿಸುವ ಅಥವಾ ಕೆನಡಾ ಪ್ರಜೆಗಳ ಜೀವ ಅಪಾಯಕ್ಕೆ ಸಿಲುಕಿಸುವ ಯಾವುದೇ ರಾಜತಾಂತ್ರಿಕರನ್ನು ಸರ್ಕಾರ ಸಹಿಸುವುದಿಲ್ಲ ಎಂದೂ ಜೋಲಿ ಮಾಂಟ್ರಿಯಲ್‌ನಲ್ಲಿ ಎಚ್ಚರಿಸಿದ್ದಾರೆ.

ಸಿಖ್ ಪ್ರತ್ಯೇಕತಾವಾದಿ ನಾಯಕ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದಲ್ಲಿ ಭಾರತೀಯ ಹೈಕಮಿಷನರ್ ಭಾಗಿಯಾಗಿದ್ದಾರೆ ಎಂದು ಕೆನಡಾ ಆರೋಪಿಸಿ, ಆರು ಮಂದಿ ರಾಜತಾಂತ್ರಿಕರನ್ನು ದೇಶ ತೊರೆಯುವಂತೆ ಸೂಚಿಸಿತ್ತು. ಇದಕ್ಕೆ ಪ್ರತಿಯಾಗಿ ಭಾರತವೂ ಕೆನಡಾದ ಆರು ರಾಜತಾಂತ್ರಿಕರಿಗೆ ದೇಶ ತೊರೆಯಲು ತಾಕೀತು ಮಾಡಿತ್ತು.

ಭಾರತವನ್ನು ರಷ್ಯಾಕ್ಕೆ ಹೋಲಿಸಿರುವ ಜೋಲಿ, 'ಕೆನಡಾದಲ್ಲಿ ನಡೆದಿರುವ ಹತ್ಯೆಗಳು, ಕೊಲೆ ಬೆದರಿಕೆಗಳು ಮತ್ತು ಭಯೋತ್ಪಾದನಾ ಚಟುವಟಿಕೆಗಳಲ್ಲಿ ಭಾರತದ ರಾಜತಾಂತ್ರಿಕರ ನಂಟು ಇರುವುದಾಗಿ ಕೆನಡಾದ ಪೊಲೀಸ್ ಪಡೆ ಹೇಳಿದೆ' ಎಂದು ತಿಳಿಸಿದ್ದಾರೆ.

'ನಮ್ಮ ದೇಶದ ಇತಿಹಾಸದಲ್ಲಿ ಇಂತಹದ್ದನ್ನು ಕಂಡಿರಲಿಲ್ಲ. ಕೆನಡಾದ ನೆಲದಲ್ಲಿ ಇನ್ನೊಂದು ದೇಶ ಇಂತಹ ಕೃತ್ಯ ಎಸಗಿದ ಉದಾಹರಣೆ ಇಲ್ಲ. ನಾವು ಯುರೋಪಿನ ಬೇರೆಡೆ ಇಂತಹದನ್ನು ನೋಡಿದ್ದೇವೆ. ಜರ್ಮನಿ ಮತ್ತು ಬ್ರಿಟನ್‌ನಲ್ಲಿ ರಷ್ಯಾ ಅಂತಹ ಕೃತ್ಯಗಳನ್ನು ಮಾಡಿದೆ. ಈ ವಿಷಯದಲ್ಲಿ ನಾವು ದೃಢವಾಗಿ ನಿಲ್ಲುವ ಅಗತ್ಯವಿದೆ' ಎಂದು ಹೇಳಿದ್ದಾರೆ.

ಭಾರತದ ಉಳಿದ ರಾಜತಾಂತ್ರಿಕ ಅಧಿಕಾರಿಗಳನ್ನು ಹೊರಹಾಕಲಾಗುವುದೇ ಎಂಬ ಪ್ರಶ್ನೆಗೆ ಅವರು, 'ಈಗಾಗಲೇ ಹೈಕಮಿಷನರ್ ಸೇರಿ ಆರು ಮಂದಿಯನ್ನು ಹೊರ ಹಾಕಲಾಗಿದೆ. ಮುಖ್ಯವಾಗಿ ಟೊರಾಂಟೊ ಮತ್ತು ವ್ಯಾಂಕೋವರ್‌ನಲ್ಲಿರುವ ರಾಜತಾಂತ್ರಿಕರಿಗೆ ಸ್ಪಷ್ಟ ಎಚ್ಚರಿಕೆಯನ್ನು ನೀಡಲಾಗಿದೆ. ವಿಯೆನ್ನಾ ಒಪ್ಪಂದವನ್ನು ಉಲ್ಲಂಘಿಸುವ ಯಾವುದೇ ರಾಜತಾಂತ್ರಿಕರನ್ನು ನಾವು ಸಹಿಸಿಕೊಳ್ಳುವುದಿಲ್ಲ' ಎಂದು ತಿಳಿಸಿದರು.

'ಗಮನ ಬೇರೆಡೆ ಸೆಳೆಯಲು ಪ್ರಧಾನಿ ಟ್ರುಡೊ ಯತ್ನ'

ಇತರ ವಿವಾದಗಳಿಂದ ದೇಶದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಪ್ರಧಾನಿ ಜಸ್ಟಿನ್ ಟ್ರುಡೊ, ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣ ಬಳಸಿಕೊಂಡಿದ್ದಾರೆ ಎಂದು ವಿರೋಧ ಪಕ್ಷದ ನಾಯಕರೊಬ್ಬರು ಆರೋಪಿಸಿದ್ದಾರೆ.

'ಖಾಲಿಸ್ತಾನಿ ಉಗ್ರನಿಗೆ ನೀಡಿರುವ ಪೌರತ್ವವನ್ನು ಮರಣೋತ್ತರವಾಗಿ ಹಿಂಪಡೆದು, ಈ ಹಿಂದಿನ ಸರ್ಕಾರದ ತಪ್ಪನ್ನು ಸರಿಪಡಿಸಬೇಕು' ಎಂದೂ ಕೆನಡಾ ಪೀಪಲ್ಸ್ ಪಾರ್ಟಿಯ ನಾಯಕ ಮ್ಯಾಕ್ಸಿಮ್ ಬರ್ನಿಯರ್ ಅವರು ಒತ್ತಾಯಿಸಿದ್ದಾರೆ.

'ಇಡೀ ವಿವಾದದ ಕೇಂದ್ರ ವ್ಯಕ್ತಿಯಾಗಿರುವ ನಿಜ್ಜರ್ ಒಬ್ಬ ವಿದೇಶಿ ಭಯೋತ್ಪಾದಕ. ಇಲ್ಲಿ ಆಶ್ರಯ ಪಡೆಯಲು ಹಲವು ಬಾರಿ ನಕಲಿ ದಾಖಲೆಗಳನ್ನು ಬಳಸಿದ್ದಾನೆ. ಆತನಿಗೆ 2007ರಲ್ಲಿ ಪೌರತ್ವ ನೀಡಲಾಗಿದೆ' ಎಂದರು.

ಭಾರತೀಯ ರಾಜತಾಂತ್ರಿಕರು ನಮ್ಮ ನೆಲದಲ್ಲಿ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆಂದು ಪೊಲೀಸರು ಮತ್ತು ಸರ್ಕಾರ ಮಾಡಿರುವ ಆರೋಪಗಳು ನಿಜವಾಗಿದ್ದರೆ, ಅದು ತುಂಬಾ ಗಂಭೀರ ವಿಚಾರ. ಆದರೆ, ಈ ಆರೋಪಗಳಿಗೆ ಸಂಬಂಧಿಸಿ ಇಲ್ಲಿಯವರೆಗೆ, ನಾವು ಭಾರತಕ್ಕೆ ಯಾವುದೇ ಪುರಾವೆಗಳನ್ನು ಒದಗಿಸಿಲ್ಲ. ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಟ್ರುಡೊ ಈ ವಿವಾದವನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ಯುದ್ಧ ವ್ಯಾಪಿಸುವ ಸಾಧ್ಯತೆ: ಫ್ರಾನ್ಸ್ ಎಚ್ಚರಿಕೆ



ಜಾನ್ ನೊಯೆಲ್

ಕೀವ್ (ರಾಯಿಟರ್ಸ್): 'ಉಕ್ರೇನ್ ಮತ್ತು ರಷ್ಯಾ ನಡುವಿನ ಕದನದಲ್ಲಿ ರಷ್ಯಾವನ್ನು ಬೆಂಬಲಿಸಿ ಉತ್ತರ ಕೊರಿಯಾದ ಸೈನಿಕರು ಅದರ ಸೇನೆ ಸೇರಿದರೆ ಯುದ್ಧ ಉಲ್ಬಣಗೊಳ್ಳುವ ಸಾಧ್ಯತೆಯಿದೆ' ಎಂದು ಫ್ರಾನ್ಸ್ ಎಚ್ಚರಿಸಿದೆ.

ಉಕ್ರೇನ್ ವಿದೇಶಾಂಗ ಸಚಿವರ ಜತೆ ಶನಿವಾರ ಕೀವ್‌ನಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫ್ರಾನ್ಸ್ ವಿದೇಶಾಂಗ ಸಚಿವ ಜಾನ್ ನೊಯೆಲ್ ಬರೊ, 'ಇದು ಸಂಘರ್ಷವನ್ನು ಬೇರೊಂದು ಹಂತಕ್ಕೆ ಕೊಂಡೊಯ್ಯುವ ಗಂಭೀರ ಸಮಸ್ಯೆಯಾಗಿದೆ. ಅಲ್ಲದೆ, ಈ ಬೆಳವಣಿಗೆಯು ರಷ್ಯಾವು ಯುದ್ಧದಲ್ಲಿ ಹಿನ್ನಡೆ ಅನುಭವಿಸುತ್ತಿದೆ ಎಂಬುದನ್ನು ಸೂಚಿಸುತ್ತದೆ' ಎಂದಿದ್ದಾರೆ.

ಫ್ರಾನ್ಸ್ ವಿದೇಶಾಂಗ ಸಚಿವರು ಮೊದಲ ಬಾರಿ ಉಕ್ರೇನ್ ಪ್ರವಾಸ ಕೈಗೊಂಡಿದ್ದಾರೆ. 'ನ್ಯಾಟೊ'ಗೆ ಉಕ್ರೇನ್ ಸೇರ್ಪಡೆ ಕುರಿತು ಮಾತನಾಡಿದ ಅವರು 'ನ್ಯಾಟೊಗೆ ಸೇರಲು ಉಕ್ರೇನ್‌ಗೆ ಫ್ರಾನ್ಸ್ ಮುಕ್ತ ಆಹ್ವಾನ ನೀಡುತ್ತದೆ. ಆದರೆ ಈ ಬಗ್ಗೆ ಮಿತ್ರರಾಷ್ಟ್ರಗಳೊಂದಿಗೆ ಚರ್ಚಿಸಬೇಕಾಗುತ್ತದೆ' ಎಂದರು. ಉತ್ತರ ಕೊರಿಯಾದ 10,000 ಸೈನಿಕರು ಉಕ್ರೇನ್ ಮೇಲೆ ಯುದ್ಧ ಮಾಡಲು ರಷ್ಯಾ ಸೇನೆಯನ್ನು ಸೇರಿದ್ದಾರೆ ಎಂಬ ಗುಪ್ತಚರ ಮಾಹಿತಿ ಲಭಿಸಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಶುಕ್ರವಾರ ಹೇಳಿದ್ದರು.

ಲೆಬನಾನ್‌ನಿಂದ ಹಾರಿದ ಡ್ರೋನ್‌ಗಳು • ಇಸ್ರೇಲ್‌ನ ಉತ್ತರ ಭಾಗದ ನಗರಗಳ ಮೇಲೆ ಹಿಜ್ಬುಲ್ಲಾ ದಾಳಿ: ವ್ಯಕ್ತಿ ಸಾವು

ಪ್ರಧಾನಿ ನೆತನ್ಯಾಹು ನಿವಾಸದ ಮೇಲೆ ದಾಳಿ

ಜೆರುಸಲೇಂ (ಎಎಫ್‌ಪಿ): ಇಸ್ರೇಲ್‌ನ ಕರಾವಳಿ ತೀರದ ಕೆಸರಿಯಾ ನಗರದಲ್ಲಿರುವ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಖಾಸಗಿ ನಿವಾಸದ ಮೇಲೆ ಶನಿವಾರ ಡ್ರೋನ್ ದಾಳಿ ನಡೆದಿದೆ.

'ಪ್ರಧಾನಿ ಮನೆಯ ಮೇಲೆ ಡ್ರೋನ್ ದಾಳಿ ನಡೆದಿದೆ. ಆದರೆ, ನಿವಾಸದಲ್ಲಿ ಪ್ರಧಾನಿ ಅಥವಾ ಅವರ ಪತ್ನಿ ಇರಲಿಲ್ಲ. ಆದ್ದರಿಂದ ಯಾರಿಗೂ ಯಾವುದೇ ರೀತಿಯಲ್ಲಿ ಗಾಯಗಳಾಗಿಲ್ಲ' ಎಂದು ಇಸ್ರೇಲ್ ಸೇನೆ ಹೇಳಿದೆ. ಇಸ್ರೇಲ್‌ನ ಉತ್ತರ ಭಾಗದ ಪ್ರದೇಶಗಳಲ್ಲಿ ಶನಿವಾರ ಬೆಳಿಗ್ಗೆಯಿಂದಲೂ ಸೈರನ್ ಶಬ್ದ ಕೇಳಿಸುತ್ತಲೇ ಇತ್ತು.

ದಾಳಿಗಳ ಬಗ್ಗೆ ಇಸ್ರೇಲ್ ಸೇನೆ ಬೆಳಿಗ್ಗೆ ಹೊತ್ತಿಗೆ ಮಾಹಿತಿ ನೀಡಿದೆ. 'ಲೆಬನಾನ್‌ನಿಂದ ಒಟ್ಟು ಮೂರು ಡ್ರೋನ್‌ಗಳು ಬಂದಿದ್ದವು. ಅವುಗಳಲ್ಲಿ ಎರಡು ಡ್ರೋನ್‌ಗಳನ್ನು ಹೊಡೆದುರುಳಿಸಿದ್ದೇವೆ. ಒಂದು ಡ್ರೋನ್, ಕಟ್ಟಡವೊಂದಕ್ಕೆ ಅಪ್ಪಳಿಸಿದೆ' ಎಂದು ಸೇನೆ ಹೇಳಿದೆ. ಆದರೆ, ಆ ಕಟ್ಟಡ ಪ್ರಧಾನಿ ನೆತನ್ಯಾಹು ಅವರ ನಿವಾಸವೇ ಎಂಬುದನ್ನು ಮಾತ್ರ ಸೇನೆ ಖಚಿತಪಡಿಸಿಲ್ಲ. ಈ ದಾಳಿಯ ಹೊಣೆಯನ್ನು ಹಿಜ್ಬುಲ್ಲಾ ಕೂಡ ಹೊತ್ತುಕೊಂಡಿಲ್ಲ. ಜೊತೆಗೆ, ಈ ಬಗ್ಗೆ ಪ್ರತಿಕ್ರಿಯೆಯನ್ನೂ ನೀಡಿಲ್ಲ.

'ಇಸ್ರೇಲ್‌ನ ಉತ್ತರ ಭಾಗದ ಪ್ರಮುಖ ನಗರ ಹೈಫಾದಲ್ಲಿರುವ ಸೇನಾ ನೆಲೆಗಳನ್ನು ಗುರಿಯಾಗಿಸಿ ಅತ್ಯಾಧುನಿಕ ಸರಣಿ ರಾಕೆಟ್‌ಗಳನ್ನು ಹಾರಿಸಲಾಗಿದೆ' ಎಂದು ಹಿಜ್ಬುಲ್ಲಾ ಸಂಘಟನೆ ಶನಿವಾರ ಹೇಳಿದೆ. 'ಇಸ್ರೇಲ್ ಗುರಿಯಾಗಿಸಿ ಲೆಬನಾನ್‌ನಿಂದ ಸುಮಾರು 55 ರಾಕೆಟ್‌ಗಳು ಅಪ್ಪಳಿಸಿವೆ' ಎಂದು ಇಸ್ರೇಲ್ ಸೇನೆ ಕೂಡ ಒಪ್ಪಿಕೊಂಡಿದೆ.

'ಕರಾವಳಿ ತೀರದ ನಗರವೊಂದರಲ್ಲಿ ರಾಕೆಟ್ ಸ್ಫೋಟದಿಂದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಹೈಫಾ ಜಿಲ್ಲೆಯ ಪ್ರದೇಶವೊಂದರಲ್ಲಿ ಐದು ಮಂದಿ ಗಾಯಗೊಂಡಿದ್ದಾರೆ. ಜೊತೆಗೆ, ಮೂರು ಅಂತಸ್ತಿನ ಕಟ್ಟಡವೊಂದರ ಮೇಲೂ ರಾಕೆಟ್ ಬಿದ್ದಿದೆ' ಎಂದು ಇಸ್ರೇಲ್ ಹೇಳಿದೆ.

ಇಸ್ರೇಲ್‌ನೊಂದಿಗಿನ ಯುದ್ಧವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಹಿಜ್ಬುಲ್ಲಾ ಶುಕ್ರವಾರವಷ್ಟೇ ಹೇಳಿಕೆ ನೀಡಿತ್ತು.



ಪ್ರಧಾನಿ ನೆತನ್ಯಾಹು ಅವರ ನಿವಾಸದ ಮೇಲೆ ನಡೆದ ಡ್ರೋನ್ ದಾಳಿ ಬಳಿಕ ಸ್ಥಳದಲ್ಲಿ ಇಸ್ರೇಲ್ ಭದ್ರತಾ ಸಿಬ್ಬಂದಿ ಶನಿವಾರ ಜಮಾಯಿಸಿ, ತಪಾಸಣೆ ನಡೆಸಿದರು —ಎಎಫ್‌ಪಿ ಚಿತ್ರ

'ನನ್ನನ್ನು ತಡೆಯಲು ಸಾಧ್ಯವಿಲ್ಲ'

ತಮ್ಮ ಮನೆಯ ಮೇಲೆ ಡ್ರೋನ್ ದಾಳಿ ನಡೆದ ಕುರಿತು ಪ್ರತಿಕ್ರಿಯಿಸಿರುವ ಪ್ರಧಾನಿ ನೆತನ್ಯಾಹು, 'ಯಾವುದೇ ಶಕ್ತಿಗೂ ನನ್ನನ್ನು ತಡೆಯಲು ಸಾಧ್ಯವಿಲ್ಲ. ಈ ಯುದ್ಧದಲ್ಲಿ ನಮ್ಮ ದೇಶ ಗೆಲುವು ಸಾಧಿಸಲಿದೆ' ಎಂದಿದ್ದಾರೆ. ಈ ಬಗ್ಗೆ ಅವರು ಹಿಬ್ರು ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ವಿಡಿಯೊ ಪೋಸ್ಟ್ ಹಂಚಿಕೊಂಡಿದ್ದಾರೆ ಎಂದು 'ಅಲ್‌ಜಜೀರಾ' ವರದಿ ಮಾಡಿದೆ.

'ನಮ್ಮ ಜನರ ತಲೆಗಳನ್ನು ತೆಗೆದ, ನಮ್ಮ ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ, ನಮ್ಮ ಶಿಶುಗಳನ್ನು ಜೀವಂತ ಸಮಾಧಿ ಮಾಡಿದ ಕೃತ್ಯದ ಸೂತ್ರಧಾರ, ಬಂಡುಕೋರ ಹಮಾಸ್ ನಾಯಕ ಸಿನ್ವರ್ ಅವರನ್ನು ನಾವು ಹತ್ಯೆ ಮಾಡಿದ್ದೇವೆ. ಇರಾನ್ ಬೆಂಬಲಿತ ಬಂಡುಕೋರರ ವಿರುದ್ಧದ ಯುದ್ಧ ಮುಂದುವರಿಯಲಿದೆ' ಎಂದು ಹೇಳಿದ್ದಾರೆ.

ಗಾಜಾಪಟ್ಟಿ: 50 ಸಾವು

ಹಮಾಸ್ ಸಂಘಟನೆಯ ನಾಯಕ ಸಿನ್ವರ್ ಹತ್ಯೆ ಬಳಿಕ, ಯುದ್ಧವನ್ನು ನಿಲ್ಲಿಸಬಹುದು ಎಂದು ಅಮೆರಿಕ ಸೇರಿದಂತೆ ಹಲವು ದೇಶಗಳು ಒತ್ತಾಯಿಸುತ್ತಿದ್ದರೂ ಇಸ್ರೇಲ್ ತನ್ನ ದಾಳಿಯನ್ನು ಗಾಜಾಪಟ್ಟಿ ಹಾಗೂ ಲೆಬನಾನ್ ಮೇಲೆ ಶನಿವಾರ ತೀವ್ರಗೊಳಿಸಿದೆ. ಗಾಜಾಪಟ್ಟಿ ಮೇಲಿನ ದಾಳಿಯಲ್ಲಿ ಮಕ್ಕಳೂ ಸೇರಿದಂತೆ ಸುಮಾರು 50 ಮಂದಿ ಮೃತಪಟ್ಟಿದ್ದಾರೆ. ಆಸ್ಪತ್ರೆಗಳ ಮೇಲೆ, ನಿರಾಶ್ರಿತರ ಶಿಬಿರಗಳ ಮೇಲೆ ಇಸ್ರೇಲ್ ದಾಳಿ ನಡೆಸಿದೆ.

ಲೆಬನಾನ್‌ನ ಬೆಕಾ ಕಣಿವೆಯ ಮೇಲೆ ಇಸ್ರೇಲ್ ಶನಿವಾರ ದಾಳಿ ನಡೆಸಿದೆ. ಇಲ್ಲಿನ ಬಾಲೂಲ್ ನಗರದ ವಸತಿ ಕಟ್ಟಡದ ಮೇಲೆ ನಡೆಸಿದ ದಾಳಿಯಲ್ಲಿ ನಾಲ್ವರು ಮೃತಪಟ್ಟಿದ್ದಾರೆ. ಇವರಲ್ಲಿ ಬಾಲೂಲ್ ನಗರದ ಪಕ್ಕದ ಸೊಹ್ಮರ್ ನಗರದ ಮೇಯರ್ ಕೂಡ ಸೇರಿದ್ದಾರೆ.

ಕಿವೀಸ್ ಬಳಗಕ್ಕೆ 107 ರನ್‌ಗಳ ಗೆಲುವಿನ ಗುರಿ • ಸರ್ಫರಾಜ್ ಶತಕದ ಸೊಬಗು • ಪಂತ್ ಆಟದ ಬೆರಗು

ಇನ್ನೂ ಬಾಕಿ ಇದೆ ಭಾರತದ ಹೋರಾಟ!



ಸರ್ಫರಾಜ್ ಖಾನ್ — ರನ್ 150 | ಎಸೆತ 195 | ಬೌಂಡರಿ 18 | ಸಿಕ್ಸರ್ 3

ಸರ್ಫರಾಜ್ ಖಾನ್ ಶತಕ ಸಂಭ್ರಮ —ಪ್ರಜಾವಾಣಿ ಚಿತ್ರಗಳು/ ಎಸ್‌.ಕೆ. ದಿನೇಶ್

‘ಭಾರತ ತಂಡಕ್ಕಾಗಿ ಶತಕದ ಕನಸು ನನಸು’

‘ಬಾಲ್ಯದಿಂದಲೂ ನಾನು ಕಂಡಿದ್ದ ಕನಸು ಇವತ್ತು ನನಸಾಗಿದೆ. ಭಾರತ ತಂಡವನ್ನು ಪ್ರತಿನಿಧಿಸಿ ಶತಕ ಗಳಿಸಬೇಕು. ತಂಡವನ್ನು ಸಂಕಷ್ಟದಿಂದ ಪಾರು ಮಾಡಬೇಕು ಎಂಬ ಕನಸು ಕಂಡಿದ್ದೆ. ಅದೀಗ ಕೈಗೂಡಿದೆ. ಮತ್ತಷ್ಟು ಸಾಧಿಸುವ ಹುಮ್ಮಸ್ಸು ಮೂಡಿದೆ’ –ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ಶತಕ ದಾಖಲಿಸಿದ ಸರ್ಫರಾಜ್ ಖಾನ್ ಅವರ ಅಭಿಮಾನದ ನುಡಿಗಳಿವು.

ಕಳೆದ ಫೆಬ್ರುವರಿಯಲ್ಲಿ ಸರ್ಫರಾಜ್ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಇತ್ತೀಚೆಗೆ ಇರಾನಿ ಟ್ರೋಫಿಯಲ್ಲಿ ದ್ವಿಶತಕ ಹೊಡೆದಿದ್ದರು. ದುಲೀಪ್ ಟ್ರೋಫಿಯಲ್ಲೂ ರನ್‌ಗಳ ಹೊಳೆ ಹರಿಸಿದ್ದರು. ತಮ್ಮನ್ನು ರಾಷ್ಟ್ರೀಯ ತಂಡದ ಆಯ್ಕೆಗಾರರು ನಿರ್ಲಕ್ಷಿಸ-ದಂತೆ ನೋಡಿಕೊಂಡಿದ್ದರು.

‘ಲೇಟ್ ಕಟ್ ಮತ್ತು ಅಪ್ಪರ್ ಕಟ್‌ಗಳನ್ನು ಆಡುವುದೆಂದರೆ ಬಹಳ ಇಷ್ಟ. ನಾನು ಅಭ್ಯಾಸ ಮಾಡುವ ಪಿಚ್‌ಗಳಲ್ಲಿಯೂ ಈ ಶಾಟ್‌ಗಳನ್ನು ಹೆಚ್ಚು ಆಡಿದೆ’ ಎಂದರು.

ಟೆಸ್ಟ್ ಇನಿಂಗ್ಸ್‌ನಲ್ಲಿ ಭಾರತದ ಗರಿಷ್ಠ ರನ್‌ರೇಟ್ (450+)

ರನ್ ರೇಟ್	ಮೊತ್ತ	ಎದುರಾಳಿ	ಸ್ಥಳ	ವರ್ಷ
4.64	462 (99.3 ಓವರ್)	ನ್ಯೂಜಿಲೆಂಡ್	ಬೆಂಗಳೂರು	2024
4.61	482 (104.3 ಓವರ್)	ನ್ಯೂಜಿಲೆಂಡ್	ಆಕ್ಲೆಂಡ್	1990
4.58	495 (108 ಓವರ್)	ವೆಸ್ಟ್ ಇಂಡೀಸ್	ಮುಂಬೈ	2013
4.52	474 (104.5 ಓವರ್)	ಅಫ್ಗಾನಿಸ್ತಾನ	ಬೆಂಗಳೂರು	2018
4.50	600 (133.1 ಓವರ್)	ಶ್ರೀಲಂಕಾ	ಗಾಲೆ	2017

ಹೆಚ್ಚು ರನ್ ಗಳಿಸಿದ ಭಾರತದ ವಿಕೆಟ್‌ಕೀಪರ್ (ನ್ಯೂಜಿಲೆಂಡ್ ಎದುರು)

ರನ್	ಆಟಗಾರ	ಸ್ಥಳ	ವರ್ಷ
99	ರಿಷಭ್ ಪಂತ್	ಬೆಂಗಳೂರು	2024
98	ಎಂ.ಎಸ್. ಧೋನಿ	ನಾಗ್ಪುರ	2010
90	ಫರೂಕ್ ಇಂಜಿನಿಯರ್	ಚೆನ್ನೈ	1965
88	ಸೈಯದ್ ಕಿರ್ಮಾನಿ	ಮುಂಬೈ	1976

7 ಬಾರಿ
ಟೆಸ್ಟ್ ಕ್ರಿಕೆಟ್‌ನಲ್ಲಿ ರಿಷಭ್ ಪಂತ್ 90+ ರನ್‌ಗಳಿಗೆ ಔಟಾಗಿದ್ದು. ಸಚಿನ್ ತೆಂಡೂಲ್ಕರ್ (10) ಮತ್ತು ರಾಹುಲ್ ದ್ರಾವಿಡ್ (9) ಅವರ ನಂತರದ ಸ್ಥಾನದಲ್ಲಿ ರಿಷಭ್ ಇದ್ದಾರೆ.

462 ರನ್
ಮೊದಲ ಇನಿಂಗ್ಸ್‌ನಲ್ಲಿ ಐವತ್ತು ರನ್‌ಗಳೊಳಗೆ ಆಲೌಟ್ ಆಗಿ ಎರಡನೇ ಇನಿಂಗ್ಸ್‌ನಲ್ಲಿ 400ಕ್ಕಿಂತ ಹೆಚ್ಚು ರನ್ ಗಳಿಸಿದ ಮೊದಲ ತಂಡ ಭಾರತ. ದಕ್ಷಿಣ ಆಫ್ರಿಕಾ ಬರ್ಮಿಂಗ್‌ಹ್ಯಾಮ್‌ನಲ್ಲಿ 1924ರಲ್ಲಿ ಗಳಿಸಿದ್ದ 390 ರನ್‌ಗಳು ಇದುವರೆಗಿನ ದಾಖಲೆಯಾಗಿತ್ತು.

ಇತಿಹಾಸ ಮರುಕಳಿಸುವುದೇ?

ಎರಡು ದಶಕಗಳ ಹಿಂದೆ ಬಲಾಢ್ಯ ಆಸ್ಟ್ರೇಲಿಯಾ ತಂಡದ ಎದುರು 107 ರನ್‌ಗಳ ಗುರಿಯೊಡ್ಡಿದ್ದ ಭಾರತ ತಂಡವು ಅಮೋಘ ಜಯ ಸಾಧಿಸಿತ್ತು. ಈ ಪಂದ್ಯದಲ್ಲಿಯೂ ಅಂತಹದೊಂದು ಸಾಧನೆ ಮರುಕಳಿಸುವುದೇ?

ಅಂದು (2004) ವಾಂಖೆಡೆ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ತಂಡವನ್ನು ಭಾರತ 13 ರನ್‌ಗಳಿಂದ ಸೋಲಿಸಿತ್ತು.

• ಗಿರೀಶ ದೊಡ್ಡಮನಿ

ಬೆಂಗಳೂರು: ಸರ್ಫರಾಜ್ ಖಾನ್ ಮತ್ತು ರಿಷಭ್ ಪಂತ್ ಅವರು ಶನಿವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ದಾಖಲಿಸಿದ ಜೊತೆಯಾಟವು ಕ್ರಿಕೆಟ್‌ಪ್ರಿಯರ ನೆನಪಿನಂಗಳದಲ್ಲಿ ಬಹುಕಾಲದವರೆಗೆ ನಲಿಯಲಿದೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ಶತಕ ಗಳಿಸಿದ ಖಾನ್ (150; 195ಎಸೆತ) ಮತ್ತು ತಮ್ಮ ವೃತ್ತಿಜೀವನದಲ್ಲಿ ಏಳನೇ ಬಾರಿ ‘ನರ್ವಸ್ ನೈಂಟಿ’ ಅನುಭವಿಸಿದ ಪಂತ್ (99; 105ಎ) ಅವರ ಆಟದಿಂದಾಗಿ ಭಾರತ ತಂಡವು ಮೊದಲ ಟೆಸ್ಟ್‌ನಲ್ಲಿ ಇನಿಂಗ್ಸ್ ಸೋಲು (ಕಿವೀಸ್ ಪ್ರಥಮ ಇನಿಂಗ್ಸ್‌ನಲ್ಲಿ 356 ರನ್ ಮುನ್ನಡೆ ಸಾಧಿಸಿತ್ತು) ತಪ್ಪಿಸಿಕೊಂಡಿತು.

ಮೊದಲ ಇನಿಂಗ್ಸ್‌ನಲ್ಲಿ ಕೇವಲ 46 ರನ್‌ಗಳಿಗೆ ಕುಸಿದಿದ್ದ ತಂಡವು ಎರಡನೇ-ಯದ್ದರಲ್ಲಿ 462 ರನ್‌ಗಳ ಮೊತ್ತ ಗಳಿಸಲು ಖಾನ್ ಮತ್ತು ಪಂತ್ ಜೊತೆಯಾಟದಿಂದ ಸಾಧ್ಯವಾಯಿತು. ಆದರೆ ಉಳಿದ ಬ್ಯಾಟರ್‌ಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಲಿಲ್ಲ. ಆದ್ದರಿಂದ ನ್ಯೂಜಿಲೆಂಡ್ ತಂಡಕ್ಕೆ ಕೇವಲ 107 ರನ್‌ಗಳ ಸಾಧಾರಣ ಗುರಿಯನ್ನು ಒಡ್ಡಲು ಮಾತ್ರ ಭಾರತಕ್ಕೆ ಸಾಧ್ಯವಾಗಿದೆ. ಆದರೂ ಆತಿಥೇಯರ ಹೋರಾಟ ಇನ್ನೂ ಬಾಕಿ ಇದೆ. ಗೆಲುವಿನ ಆಸೆ ಬಿಟ್ಟಿಲ್ಲ.

‘ನಮಗಿನ್ನೂ ಗೆಲುವಿನ ಅವಕಾಶ ಇದೆ. ಈ ಪಿಚ್‌ನಲ್ಲಿ ಬ್ಯಾಟಿಂಗ್ ಅಷ್ಟು ಸುಲಭವಲ್ಲ. ಐದನೇ ದಿನ ಆಡುವುದು ಇನ್ನೂ ಕಷ್ಟ. ನಮ್ಮ ಬೌಲರ್‌ಗಳು ಜಯ ತಂದುಕೊಡುತ್ತಾರೆ’ ಎಂದು ದಿನದಾಟದ ನಂತರ ಸರ್ಫರಾಜ್ ಸುದ್ದಿಗೋಷ್ಠಿ-ಯಲ್ಲಿ ಹೇಳಿದ ಮಾತುಗಳಲ್ಲಿ ತುಂಬು ವಿಶ್ವಾಸವಿತ್ತು. ಕ್ರೀಡಾಂಗಣದಲ್ಲಿ ಸೇರಿದ್ದ 20 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರೂ ಅದೇ ವಿಶ್ವಾಸದೊಂದಿಗೆ ಸಂಜೆ ಮನೆಗೆ ಮರಳಿದ್ದಾರೆ.

ಆದರೆ 36 ವರ್ಷಗಳ ನಂತರ ಭಾರತದಲ್ಲಿ ಟೆಸ್ಟ್ ಪಂದ್ಯ ಜಯಿಸುವ ಕನಸು ಕಾಣುತ್ತಿರುವ ಕಿವೀಸ್ ಬಳಗವೂ ಈ ಪುಟ್ಟ ಗುರಿಯನ್ನು ಸುಲಭ ಎಂದು ತಿಳಿದುಕೊಂಡಿಲ್ಲ.



ರಿಷಭ್ ಪಂತ್ — ರನ್ 99 | ಎಸೆತ 105 | ಬೌಂಡರಿ 9 | ಸಿಕ್ಸರ್ 5

‘ಇಲ್ಲಿ ಜಯವು ಸುಲಭವಾಗಿ ಒಲಿಯುತ್ತದೆ ಎಂದುಕೊಂಡಿಲ್ಲ. ಏಕೆಂದರೆ ನಾವು ಎದುರಿಸುತ್ತಿರು-ವುದು ವಿಶ್ವದರ್ಜೆಯ ತಂಡ ಎಂಬ ಅರಿವಿದೆ. ನಾವು ತಾಳ್ಮೆಯಿಂದ ಆಡಿ ಗೆಲ್ಲುವ ವಿಶ್ವಾಸವೂ ಇದೆ’ ಎಂದು ನ್ಯೂಜಿಲೆಂಡ್ ವೇಗಿ ವಿಲಿಯಮ್ಸ್ ಓ ರೂರ್ಕಿ ಸುದ್ದಿಗೋಷ್ಠಿಯಲ್ಲಿ ಅಭಿಪ್ರಾಯಪಟ್ಟರು.

ಖಾನ್-ಪಂತ್ ಆಟದ ಗಮ್ಮತ್ತು: ಪಂದ್ಯದ ಮೂರನೇ ದಿನದಾಟದ ಕೊನೆಯ ಎಸೆತದಲ್ಲಿ ವಿರಾಟ್ ಕೊಹ್ಲಿ ಔಟಾದಾಗ ತಂಡಕ್ಕೆ ಮೊದಲ ಇನಿಂಗ್ಸ್ ಮೊತ್ತ ಚುಕ್ತಾ ಮಾಡಲು ಇನ್ನೂ 125 ರನ್‌ಗಳ ಅಗತ್ಯವಿತ್ತು. ಅರ್ಧಶತಕ ಗಳಿಸಿದ್ದ ಸರ್ಫರಾಜ್ ಕ್ರೀಸ್‌ನಲ್ಲಿ ಉಳಿದಿದ್ದರು. ಬೆಳಿಗ್ಗೆ ಇಬ್ಬರೂ ಕ್ರೀಸ್‌ಗೆ ಬಂದಾಗ ಆಗಸದಲ್ಲಿ ಕಾರ್ಮೋಡ ಕವಿದಿದ್ದವು. ಕ್ರೀಡಾಂಗಣದ ಫ್ಲಡ್‌ಲೈಟ್‌ಗಳು ಮಂದಬೆಳಕನ್ನು ಮರೆಮಾಚಿದ್ದವು. ಆರಂಭದ ಹಂತದಲ್ಲಿ ಕೆಲವು ಬಾರಿ ಇಬ್ಬರ ನಡುವೆ ಸಂವಹನದ ಲೋಪದಿಂದ ರನ್‌ಔಟ್ ಆಗುವ ಅಪಾಯಗಳೂ ಎದುರಾಗಿದ್ದವು. ನಂತರ ಸುಧಾರಿಸಿಕೊಂಡು ಆಡಿದ ಇಬ್ಬರೂ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 177 ರನ್ ಸೇರಿಸಿದರು.

ಖಾನ್ ಅವರ ಲೇಟ್ ಕಟ್‌ಗಳು, ಸ್ಲಾಗ್ ಸ್ವೀಪ್‌ಗಳು ಮುದಗೊಳಿಸಿದವು. ಪಂತ್ ಎಂದಿನಂತೆ ಆಕ್ರಮಣಕಾರಿ ಆಟವಾಡಿದರು. ಮೊದಲ ಇನಿಂಗ್ಸ್‌ನಲ್ಲಿ ವಿಕೆಟ್ ಕೀಪಿಂಗ್ ಮಾಡುವಾಗ ಅವರ ಮೊಣಕಾಲಿಗೆ ಚೆಂಡು ಬಡಿದು ಗಾಯವಾಗಿತ್ತು. ಎರಡು ವರ್ಷಗಳ ಹಿಂದೆ ಅಪಘಾತದಲ್ಲಿ ಗಾಯಗೊಂಡು ಶಸ್ತ್ರಚಿಕಿತ್ಸೆಗೊಳಗಾದ ಕಾಲಿಗೇ ಪೆಟ್ಟು ಬಿದ್ದಿತ್ತು. ಆದ್ದರಿಂದ ಅವರು ಕೀಪಿಂಗ್ ಮಾಡಿರಲಿಲ್ಲ. ಅವರು ಬ್ಯಾಟಿಂಗ್ ಮಾಡುವುದು ಕೂಡ ಅನುಮಾನವಾಗಿತ್ತು. ಆದರೆ ಕ್ರೀಸ್‌ಗೆ ಬಂದರು. ತಮ್ಮ ಆಟ ತೋರಿಸಿದರು.

ಸ್ಪಿನ್ನರ್ ಎಜಾಜ್ ಪಟೇಲ್ ಹಾಕಿದ 66ನೇ ಓವರ್‌ನಲ್ಲಿ ಅವರು ಎರಡು ಎಸೆತಗಳಲ್ಲಿ ಸತತ ಸಿಕ್ಸರ್‌ಗಳನ್ನು ಎತ್ತಿದರು. ನಂತರದ ಎರಡು ಎಸೆತಗಳಲ್ಲಿ ಎಲ್‌ಬಿಡಬ್ಲ್ಯು ಔಟಾಗುವ ಸಾಧ್ಯತೆಗಳಿದ್ದವು. ಆದರೆ ಡಿಆರ್‌ಎಸ್‌ನಲ್ಲಿ ನಾಟೌಟ್ ಎಂದು ಪ್ರಕಟವಾಗಿದ್ದು ಪಂತ್ ಆಟ ಮುಂದುವರಿಯಲು ಕಾರಣವಾದವು.

ಆದರೆ ಚಹಾ ವಿರಾಮಕ್ಕೂ ಮುನ್ನ ಖಾನ್ ವಿಕೆಟ್ ಪಡೆಯುವಲ್ಲಿ ಟಿಮ್ ಸೌಥಿ ಯಶಸ್ವಿಯಾದರು. ಪಂತ್ ತಮ್ಮ ಶತಕಕ್ಕೆ ಇನ್ನೊಂದೇ ರನ್ ಅವಶ್ಯವಿದ್ದ ಸಂದರ್ಭದಲ್ಲಿ ವಿಲಿಯಂ ಓ ರೂರ್ಕಿ ಎಸೆತದಲ್ಲಿ ಬೌಲ್ಡ್ ಆದರು. ಕೆ.ಎಲ್. ರಾಹುಲ್ (12 ರನ್) ಎರಡನೇ ಇನಿಂಗ್ಸ್ ನಲ್ಲಿಯೂ ವಿಫಲರಾದರು. ಅಶ್ವಿನ್ (15 ರನ್) ಬಿಟ್ಟರೆ ಉಳಿದ ಬ್ಯಾಟರ್ ಗಳು ಹೆಚ್ಚು ಹೊತ್ತು ಆಡಲಿಲ್ಲ. ಅನಗತ್ಯ ಹೊಡೆತಗಳಿಗೆ ಪ್ರಯತ್ನಿಸಿ ವಿಕೆಟ್ ಚೆಲ್ಲಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 46 (31.2 ಓವರ್‌ಗಳಲ್ಲಿ)
ನ್ಯೂಜಿಲೆಂಡ್: 402 (91.3 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್: 462 (99.3 ಓವರ್‌ಗಳಲ್ಲಿ)
(ಶುಕ್ರವಾರ 49 ಓವರ್‌ಗಳಲ್ಲಿ 3ಕ್ಕೆ231)
ಸರ್ಫರಾಜ್ ಸಿ ಪಟೇಲ್ ಬಿ ಸೌಥಿ 150 (195ಎ, 4x18, 6x3)
ರಿಷಭ್ ಬಿ ರೂರ್ಕಿ 99 (105ಎ, 4x9, 6x5)
ರಾಹುಲ್ ಸಿ ಬ್ಲಂಡೆಲ್ ಬಿ ರೂರ್ಕಿ 12 (16ಎ, 4x2)
ಜಡೇಜ ಸಿ ಯಂಗ್ ಬಿ ರೂರ್ಕಿ 5 (15ಎ, 4x1)
ಅಶ್ವಿನ್ ಎಲ್‌ಬಿಡಬ್ಲ್ಯು ಬಿ ಹೆನ್ರಿ 15 (24ಎ, 4x1)
ಕುಲದೀಪ್ ಯಾದವ್ ಔಟಾಗದೇ 6 (20ಎ)
ಬೂಮ್ರಾ ಸಿ ಬ್ಲಂಡೆಲ್ ಬಿ ಹೆನ್ರಿ 0 (4ಎ)
ಸಿರಾಜ್ ಸಿ ಸೌಥಿ ಬಿ ಹೆನ್ರಿ 0 (2ಎ)
ಇತರೆ: 18 (ಬೈ 7, ಲೆಗ್‌ಬೈ 9, ನೋಬಾಲ್ 1, ವೈಡ್ 1)
ವಿಕೆಟ್ ಪತನ: 4-408 (ಸರ್ಫರಾಜ್ ಖಾನ್, 84.1), 5-433 (ರಿಷಭ್ ಪಂತ್, 88.1), 6-438 (ಕೆ.ಎಲ್. ರಾಹುಲ್, 90.2), 7-441 (ರವೀಂದ್ರ ಜಡೇಜ, 92.3), 8-458 (ರವಿಚಂದ್ರನ್ ಅಶ್ವಿನ್, 97.3), 9-462 (ಜಸ್‌ಪ್ರೀತ್ ಬೂಮ್ರಾ, 99.1), 10-462 (ಮೊಹಮ್ಮದ್ ಸಿರಾಜ್, 99.3)
ಬೌಲಿಂಗ್: ಟಿಮ್ ಸೌಥಿ 15–2–53–1, ಮ್ಯಾಟ್ ಹೆನ್ರಿ 24.3–3–102–3, ವಿಲಿಯಂ ಓ ರೂರ್ಕಿ 21–4–92–3, ಅಜಾಜ್ ಪಟೇಲ್ 18–3–100–2, ಗ್ಲೆನ್ ಫಿಲಿಪ್ಸ್ 15–2–69–1, ರಚಿನ್ ರವೀಂದ್ರ 6–0–30–0
ನ್ಯೂಜಿಲೆಂಡ್: ವಿಕೆಟ್ ನಷ್ಟವಿಲ್ಲದೆ 0 (0.4 ಓವರ್‌ಗಳಲ್ಲಿ)
ಲೇಥಮ್ ಔಟಾಗದೇ 0 (4ಎ)
ಕಾನ್ವೆ ಔಟಾಗದೇ 0 (0ಎ)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 0.4–0–0–0

ಇಂದೂ ಮಳೆಯಾಟದ ಸಾಧ್ಯತೆ

ಬೆಂಗಳೂರಿನಲ್ಲಿ ಭಾನುವಾರವೂ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ. ಇದರಿಂದಾಗಿ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಟೆಸ್ಟ್ ಪಂದ್ಯದ ಕೊನೆಯ ದಿನದಾಟ ವ್ಯತ್ಯಯವಾಗುವ ಸಾಧ್ಯತೆ ಇದೆ.

ಮಳೆ, ಬೆಳಕಿನ ಆಟ

ಈ ಟೆಸ್ಟ್ ಪಂದ್ಯದ ಮೊದಲ ದಿನದಾಟ ವು ಸಂಪೂರ್ಣವಾಗಿ ಮಳೆಗೆ ಕೊಚ್ಚಿ ಹೋಗಿತ್ತು. ಆದರೆ ಗುರುವಾರ ಮತ್ತು ಶುಕ್ರವಾರ ಮಳೆಯಾಗಿರಲಿಲ್ಲ. ಶನಿವಾರ ಎರಡು ಬಾರಿ ಮಳೆ ಸುರಿಯಿತು.

ಬೆಳಿಗ್ಗೆ 11 ಗಂಟೆಗೆ ಮಳೆಯಾಯಿತು. ಆಗ ಭಾರತ ತಂಡವು 3 ವಿಕೆಟ್‌ಗಳಿಗೆ 344 ರನ್ ಗಳಿಸಿತ್ತು. ರಿಷಭ್ ಮತ್ತು ಖಾನ್ ಕ್ರೀಸ್‌ನಲ್ಲಿದ್ದರು. ಮಧ್ಯಾಹ್ನ 1.50ಕ್ಕೆ ಆಟ ಆರಂಭವಾಯಿತು.

ಭಾರತ ತಂಡವು 462 ರನ್‌ಗಳಿಗೆ ಆಲೌಟ್ ಆದ ನಂತರ ಕಿವೀಸ್ ಬ್ಯಾಟಿಂಗ್ ಆರಂಭಿಸಿತು.

ಜಸ್‌ಪ್ರೀತ್ ಬೂಮ್ರಾ ನಾಲ್ಕು ಎಸೆತ ಹಾಕಿದ್ದಾಗ ಮಂದಬೆಳಕು ಹೆಚ್ಚಿತು. ಕಿವೀಸ್ ಬ್ಯಾಟರ್‌ಗಳು ಆಟ ಮುಂದುವರಿಸಲು ಇಚ್ಛಿಸಲಿಲ್ಲ. ಅಂಪೈರ್‌ಗಳು ಆಟ ಸ್ಥಗಿತ ಮಾಡಿದಾಗ ನಾಯಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅಸಮಾಧಾನ ವ್ಯಕ್ತಪಡಿಸಿದರು. ಅಂಪೈರ್‌ಗಳೊಂದಿಗೆ ಮಾತನಾಡಿದರು. ಇದಾಗಿ ಕೆಲವೇ ನಿಮಿಷಗಳ ನಂತರ ಜೋರಾಗಿ ಮಳೆ ಸುರಿಯಿತು.

ಫೈನಲ್‌ನಲ್ಲಿ ಇಂದು ನ್ಯೂಜಿಲೆಂಡ್– ದಕ್ಷಿಣ ಆಫ್ರಿಕಾ ಸೆಣಸಾಟ

ಹೊಸ ಚಾಂಪಿಯನ್ನರ ಉದಯಕ್ಕೆ ವೇದಿಕೆ ಸಜ್ಜು

ದುಬೈ (ಪಿಟಿಐ/ ಎಎಫ್‌ಪಿ): ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ನಡುಣ ಭಾನುವಾರ ನಡೆಯಲಿರುವ ಮಹಿಳಾ ಟಿ20 ವಿಶ್ವಕಪ್ ಫೈನಲ್ ಪಂದ್ಯದ ಫಲಿತಾಂಶ ಏನೇ ಇರಲಿ, ಗೆಲ್ಲುವ ತಂಡ ಮೊದಲ ಬಾರಿ ಚಾಂಪಿಯನ್ ಎನಿಸಲಿದೆ. ಎರಡೂ ತಂಡಗಳು ಈ ಹಿಂದೆ ಈ ಪ್ರತಿಷ್ಠಿತ ಟ್ರೋಫಿ ಗೆದ್ದಿಲ್ಲ.

ಇದುವರೆಗೆ ನಡೆದಿರುವ ಎಂಟು ಟೂರ್ನಿಗಳಲ್ಲಿ ಆರು ಬಾರಿ ಆಸ್ಟ್ರೇಲಿಯಾ ಗೆದ್ದು ಬೀಗಿದೆ.

ನ್ಯೂಜಿಲೆಂಡ್ ಕ್ರಿಕೆಟ್‌ಗೆ ವೈಭವದ ದಿನಗಳನ್ನು ಕಾಣಿಸಿದ ಮೂವರು ಆಟಗಾರ್ತಿಯರಿಗೆ ಇದು ವಿಶ್ವಕಪ್ ಗೆಲ್ಲಲು ಬಹುಶಃ ಕೊನೆಯ ಅವಕಾಶ. ಈಗಿನದು ಚುಟುಕು ಕ್ರಿಕೆಟ್ ವಿಶ್ವಕಪ್‌ನಲ್ಲಿ ನ್ಯೂಜಿಲೆಂಡ್‌ಗೆ ಮೂರನೇ ಫೈನಲ್. ಈ ಹಿಂದೆ ಒಮ್ಮೆ ಇಂಗ್ಲೆಂಡ್‌ಗೆ, ಮತ್ತೊಮ್ಮೆ ಆಸ್ಟ್ರೇಲಿಯಾಕ್ಕೆ ಮಣಿದಿತ್ತು.

ಈ ವಿಶ್ವಕಪ್‌ಗೆ ಮೊದಲು ನ್ಯೂಜಿಲೆಂಡ್ ಸತತವಾಗಿ 10 ಪಂದ್ಯಗಳನ್ನು ಸೋತಿತ್ತು. ಆದರೆ ಸೋಫಿ ಡಿವೈನ್ ನಾಯಕತ್ವ, ಅನುಭವಿಗಳಾದ ಸೂಝಿ ಬೇಟ್ಸ್, ಅಮೇಲಿಯಾ ಕೆರ್ ಅವರು ಉತ್ತಮ ಪ್ರದರ್ಶನ ನೀಡಿ ತಂಡ ಈ ಹಂತಕ್ಕೆ ಬರಲು ನೆರವಾದರು.



ಸೋಫಿ ಡಿವೈನ್



ಲಾರಾ ವೋಲ್ವಾರ್ಟ್

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2024

ಕಿವೀಸ್‌ನ ದಿಗ್ಗಜ ಆಟಗಾರ್ತಿಯ-ರಾದ ಸೋಫಿ ಡಿವೈನ್, ಬೇಟ್ಸ್, ಲೀ ತಹುಹು ಅವರ ಪಾಲಿಗೆ ಈ ವಿಶ್ವಕಪ್ ಬಹುಶಃ ಕೊನೆಯದು. 35 ವರ್ಷ ವಯಸ್ಸಿನ ಡಿವೈನ್ ಸೀಮಿತ ಓವರುಗಳ ಕ್ರಿಕೆಟ್‌ನಲ್ಲಿ 7000ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. 37 ವರ್ಷ ವಯಸ್ಸಿನ ಬೇಟ್ಸ್ 10 ಸಾವಿರಕ್ಕೂ ಹೆಚ್ಚು ರನ್ ಹರಿಸಿದ್ದಾರೆ. ಪೇಸ್ ಬೌಲರ್, 34 ವರ್ಷ ವಯಸ್ಸಿನ ತಹುಹು ಏಕದಿನ ಕ್ರಿಕೆಟ್‌ನಲ್ಲಿ 112 ಮತ್ತು ಟಿ20 ಕ್ರಿಕೆಟ್‌ನಲ್ಲಿ 93 ವಿಕೆಟ್ ಗಳಿಸಿದ್ದಾರೆ. ಕಪ್ ಗೆಲ್ಲಲು ಅವರೆಲ್ಲಾ ಶತಪ್ರಯತ್ನ ಹಾಕುವುದು ಖಚಿತ.

2023ರ ವಿಶ್ವಕಪ್‌ನಲ್ಲಿ ಹರಿಣಗಳ ತಂಡ ಕೇವಲ 19 ರನ್‌ಗಳಿಂದ ಆಸ್ಟ್ರೇಲಿಯಾಕ್ಕೆ ಮಣಿದಿತ್ತು.

ಹರಿಣಗಳ ಸವಾಲು: ದಕ್ಷಿಣ ಆಫ್ರಿಕಾ ಸೆಮಿಫೈನಲ್‌ನಲ್ಲಿ ಎಂಟು ವಿಕೆಟ್‌ಗಳಿಂದ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾವನ್ನು ಸೋಲಿಸಿ ಪರಾಕ್ರಮ ಮೆರೆದಿತ್ತು.

ನ್ಯೂಜಿಲೆಂಡ್‌ಗೆ ಬೌಲಿಂಗ್‌ನಲ್ಲಿ ಕೆರ್ ಪ್ರಮುಖ ಅಸ್ತ್ರವಾದರೆ, ದಕ್ಷಿಣ ಆಫ್ರಿಕಾದಲ್ಲಿ ಇಬ್ಬರು ಪ್ರಬಲ ಬ್ಯಾಟರ್‌ಗಳು ಅವರಿಗೆ ಸವಾಲೊಡ್ಡಬಲ್ಲರು. ಅಗ್ರ ಬ್ಯಾಟರ್‌ಗಳಾದ ಲಾರಾ ವೊಲ್ವಾರ್ಟ್ (190 ರನ್) ಮತ್ತು ತಾಜ್ಮಿನ್ ಬ್ರಿಟ್ಸ್ (170) ಟೂರ್ನಿಯಲ್ಲಿ ಯಶಸ್ಸು ಕಂಡಿದ್ದಾರೆ. ಆ್ಯನೆಕಿ ಬಾಷ್ ಮತ್ತು ಮರಿಝಾನೆ ಕಾಪ್ ಕೂಡ ಉತ್ತಮ ಕೊಡುಗೆ ನೀಡಬಲ್ಲರು.

ಬೌಲಿಂಗ್‌ನಲ್ಲಿ ನೊನ್‌ಕುಲುಲೆಕೊ ಮ್ಲಾಬಾ (10 ವಿಕೆಟ್), ಇತರ ಬೌಲರ್‌ಗಳ ಸಹಕಾರವಿದ್ದರೆ ಎದುರಾಳಿಗಳ ಮೇಲೆ ಒತ್ತಡ ಹೇರಬಲ್ಲರು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್

ಹಾಕಿ: ಭಾರತಕ್ಕೆ ಮಣಿದ ಜಪಾನ್

ಜೊಹೊರ್ (ಮಲೇಷ್ಯಾ), (ಪಿಟಿಐ): ಭಾರತ ಜೂನಿಯರ್ ಹಾಕಿ ತಂಡ 4–2 ಗೋಲುಗಳಿಂದ ಶನಿವಾರ ಜಪಾನ್ ತಂಡವನ್ನು ಸೋಲಿಸಿ ಸುಲ್ತಾನ್ ಆಫ್ ಜೊಹೊರ್ ಕಪ್ ಟೂರ್ನಿಯಲ್ಲಿ ತನ್ನ ಅಭಿಯಾನವನ್ನು ಅಮೋಘ ರೀತಿಯಲ್ಲಿ ಆರಂಭಿಸಿತು.

ಅಮಿರ್ ಅಲಿ (12ನೇ ನಿಮಿಷ), ಗುರ್ಜೋತ್ ಸಿಂಗ್ (36ನೇ ನಿಮಿಷ), ಆನಂದ್ ಸೌರಭ್ ಕುಶ್ವಾಹ (44ನೇ ನಿಮಿಷ) ಮತ್ತು ಅಂಕಿತ್ ಪಾಲ್ (47ನೇ ನಿಮಿಷ) ಅವರು ಭಾರತದ ಪರ ಗೋಲುಗಳನ್ನು ಗಳಿಸಿದರು.

ಜಪಾನ್ ಕಡೆ ತ್ಸುಬಾಸಾ ತನಕೆ (26ನೇ ನಿಮಿಷ) ಮತ್ತು ರಕುಸೀ ಯಮಾನಾಕ (57ನೇ ನಿಮಿಷ) ಚೆಂಡನ್ನು ಗುರಿ ತಲುಪಿಸಿದರು.

ಭಾರತದ ಗೋಲ್ ಕೀಪಿಂಗ್ ದಂತಕಥೆ ಪಿ.ಆರ್.ಶ್ರೀಜೇಶ್ ಅವರು ತಂಡದ ಪ್ರದರ್ಶನದ ಬಗ್ಗೆ ತೃಪ್ತಿ ವ್ಯಕ್ತಪ-ಡಿಸಿದರು. ಇದು ಜೂನಿಯರ್ ತಂಡದ ಕೋಚ್ ಆದ ಮೇಲೆ ಶ್ರೀಜೇಶ್ ಅವರಿಗೆ ಮೊದಲ ಟೂರ್ನಿ.

ಭಾರತ ಆಕ್ರಮಣಕಾರಿಯಾಗಿ ಆಡಿತು. ಗೋಲಿನ ಅವಕಾಶಗಳನ್ನು ಸೃಷ್ಟಿಸಿಕೊಳ್ಳುವತ್ತಲೇ ಗಮನ ನೀಡಿತು.

ಪುಣೇರಿ ಪಲ್ಟನ್‌ಗೆ ಮಣಿದ ಹರಿಯಾಣ ಸ್ಟೀಲರ್ಸ್

ತಲೈವಾಸ್ ಜಯದ ಆರಂಭ

• ಬಸವರಾಜ ದಳವಾಯಿ

ಹೈದರಾಬಾದ್: ಸಂಘಟಿತ ಆಟವಾಡಿದ ತಮಿಳು ತಲೈವಾಸ್ ತಂಡವು ಪ್ರೊ ಕಬಡ್ಡಿ ಲೀಗ್‌ನಲ್ಲಿ ಜಯದ ಆರಂಭ ಮಾಡಿತು. ಇಲ್ಲಿಯ ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಲೀಗ್‌ನ ತನ್ನ ಮೊದಲ ಪಂದ್ಯದಲ್ಲಿ ತಲೈವಾಸ್ 44–29ರಿಂದ ತೆಲುಗು ಟೈಟನ್ಸ್ ತಂಡಕ್ಕೆ ಸೋಲುಣಿಸಿತು.

ಪಂದ್ಯದ ಅರ್ಧಕ್ಕೂ ಹೆಚ್ಚು ಅವಧಿಯಲ್ಲಿ ಟೈಟನ್ಸ್‌ನ ನಾಯಕ ಹಾಗೂ ಪ್ರಮುಖ ರೈಡರ್ ಪವನ್ ಕುಮಾರ್ ಸೆಹ್ರಾವತ್ ಅವರನ್ನು ಹೊರಗುಳಿಯುವಂತೆ ಮಾಡಿದ್ದು ತಲೈವಾಸ್ ಜಯಕ್ಕೆ ಪ್ರಮುಖ ಕಾರಣವಾಯಿತು.

ಪಂದ್ಯದ ಎರಡನೇ ನಿಮಿಷದಲ್ಲಿ ರೈಡ್ ಮಾಡಿದ ಪವನ್, ತಂಡಕ್ಕೆ ಎರಡು ಪಾಯಿಂಟ್ ತಂದುಕೊಟ್ಟರು. ಮುಂದಿನ ಎರಡು ನಿಮಿಷಗಳಲ್ಲಿ ಮುನ್ನಡೆ 5–1ಕ್ಕೆ ಹೆಚ್ಚಿತು. ಆದರೆ ತಲೈವಾಸ್ ಸಂಘಟಿತ ಆಟದ ಬಲದಿಂದ ಪುಟಿದೆದ್ದು ಆರನೇ ನಿಮಿಷ ಎದುರಾಳಿಯನ್ನು ಆಲೌಟ್ ಮಾಡಿ 12–8ರ ಮುನ್ನಡೆ ಸಾಧಿಸಿತು. ವಿರಾಮದ ವೇಳೆಗೆ ತಲೈವಾಸ್ 3 ಪಾಯಿಂಟ್‌ಗಳಿಂದ ಮುಂದಿತ್ತು.

ಸೂಪರ್ ಟೆನ್ ಸಾಧಿಸಿದ ರೈಡರ್‌ಗಳಾದ ನರೇಂದರ್ ಖಂಡೋಲಾ ಮತ್ತು ಸಚಿನ್ ಅವರ ಆಟದ ಬಲದಿಂದ ತಲೈವಾಸ್ 30ನೇ ನಿಮಿಷದಲ್ಲಿ ಎದುರಾಳಿಯನ್ನು ಮತ್ತೊಮ್ಮೆ ಆಲೌಟ್ ಮಾಡಿ 31–22ರ ಮುನ್ನಡೆ ಗಳಿಸಿತು. 46ನೇ ನಿಮಿಷ ಟೈಟನ್ಸ್ ಮೂರನೇ ಬಾರಿ ಆಲೌಟ್ ಆಯಿತು. ಆಗ ತಲೈವಾಸ್ ಮುನ್ನಡೆ 40–26ಕ್ಕೆ ಏರಿತು. ಟೈಟನ್ಸ್ ಪರ ಪವನ್ ಸೆಹ್ರಾವತ್ ಮತ್ತು ವಿಜಯ್ ಮಲಿಕ್ ಕ್ರಮವಾಗಿ 10 ಮತ್ತು 9 ಪಾಯಿಂಟ್ಸ್ ಗಳಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಹಾಲಿ ಚಾಂಪಿಯನ್ ಪುಣೇರಿ ಪಲ್ಟನ್ 35–25ರಿಂದ ಹರಿಯಾಣ ಸ್ಟೀಲರ್ಸ್ ತಂಡವನ್ನು ಮಣಿಸಿತು.

ಇಂದಿನ ಪಂದ್ಯಗಳು
ಬೆಂಗಾಲ್ ವಾರಿಯರ್ಸ್–ಜೈಪುರ ಪಿಂಕ್ ಪ್ಯಾಂಥರ್ಸ್: ರಾತ್ರಿ 8ರಿಂದ
ಗುಜರಾತ್ ಜೈಂಟ್ಸ್– ಬೆಂಗಳೂರು ಬುಲ್ಸ್– ರಾತ್ರಿ 9ರಿಂದ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

ಸಂಕ್ಷಿಪ್ತ ಸುದ್ದಿ

ಪಳಂಗಪ್ಪ ಅಧ್ಯಕ್ಷ

ಬೆಂಗಳೂರು: ಬೆಂಗಳೂರು ಹಾಕಿ ಸಂಸ್ಥೆಯ ಅಧ್ಯಕ್ಷರಾಗಿ ಎ.ಬಿ. ಪಳಂಗಪ್ಪ ಹಾಗೂ ಉಪಾಧ್ಯಕ್ಷರಾಗಿ ಡಾ.ಯು. ವಿ.ಶಂಕರ್, ಲೋಕೇಶ್, ಡಾ.ರಘು, ಮಣಿ ಮಾರನ್ ಆಯ್ಕೆಯಾದರು.

ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಮಹಾಸಭೆಯಲ್ಲಿ ಈ ಆಯ್ಕೆ ನಡೆಯಿತು. ಖಜಾಂಚಿಯಾಗಿ ಟಿ.ಸಿ. ವಿನೋಬಾ, ಜತೆ ಕಾರ್ಯದರ್ಶಿಯಾಗಿ ಎಸ್. ಶೀಲನ್, ಜಿ.ಎಸ್. ವಿವೇಕ್ ಆಯ್ಕೆಯಾದರು.

ಕಾರ್ಯಕಾರಿ ಸದಸ್ಯರು: ಡಾ.ನವೀನ್, ಇಜಾಜ್ ಅಹಮದ್, ನವೀನ್ ಕುಮಾರ್, ಎ.ಎಸ್.ತಿಮ್ಮಣ್ಣ, ಶಶಿಧರ್, ಸುಜಿತ್ ಕುಮಾರ್, ಜೋಸೆಫ್ ವಿಜಯ್, ಡೆನ್ನಿಸ್ ನಿಕೋಲಸ್, ಲೋಕರಾಜ್.

ಭಾರತಕ್ಕೆ ಸೋಲು

ಬೆಂಗಳೂರು: ಭಾರತ ತಂಡವು ಇಲ್ಲಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 13ನೇ ಏಷ್ಯನ್ ನೆಟ್‌ಬಾಲ್ ಮಹಿಳಾ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ 43–50ರಿಂದ ಫಿಲಿಪೀನ್ಸ್ ತಂಡಕ್ಕೆ ಮಣಿಯಿತು.

ದಿನದ ಇತರ ಪಂದ್ಯದಲ್ಲಿ ಚೀನಾ ತೈಪೆ 35–29ರಿಂದ ಬಹರೇನ್ ತಂಡವನ್ನು; ಹಾಂಗ್‌ಕಾಂಗ್ 67–41ರಿಂದ ಬ್ರೂನಿ ತಂಡವನ್ನು; ಮಲೇಷ್ಯಾ 83–8ರಿಂದ ಜಪಾನ್ ತಂಡವನ್ನು; ಥಾಯ್ಲೆಂಡ್ 89–6ರಿಂದ ಇರಾನ್ ತಂಡವನ್ನು; ಶ್ರೀಲಂಕಾ 118–5ರಿಂದ ಸೌದಿ ಅರೇಬಿಯಾ ತಂಡವನ್ನು ಸೋಲಿಸಿತು.

ಕರ್ನಾಟಕ ರನ್ನರ್ ಅಪ್

ಬೆಂಗಳೂರು: ಕರ್ನಾಟಕ ತಂಡವು ಗುಂಟೂರಿನಲ್ಲಿ ಶನಿವಾರ ಮುಕ್ತಾಯವಾದ 35ನೇ ದಕ್ಷಿಣ ವಲಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವು ರನ್ನರ್ ಅಪ್ ಸ್ಥಾನ ಪಡೆಯಿತು.

ಫುಟ್‌ಬಾಲ್: ಕರ್ನಾಟಕ ಶುಭಾರಂಭ

ಬೆಂಗಳೂರು: ಗೋಲುಗಳ ಸುರಿಮಳೆಗೈದ ಕರ್ನಾಟಕದ ತಂಡವು ಪಶ್ಚಿಮ ಬಂಗಾಳದ ನಾಡಿಯಾದಲ್ಲಿ 'ರಾಜಮಾತಾ ಜೀಜಾಬಾಯಿ ಟ್ರೋಫಿ'ಗಾಗಿ ಶನಿವಾರ ಆರಂಭಗೊಂಡ 29ನೇ ಮಹಿಳೆಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿತು.



ಐಟಿಎಫ್ ಓಪನ್ ಮಹಿಳೆಯರ ಟೆನಿಸ್ ಟೂರ್ನಿ

ಫೈನಲ್‌ಗೆ ಆಕಾಂಕ್ಷಾ, ತನಿಶಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಆಕಾಂಕ್ಷಾ ನಿಟ್ಟುರೆ ಮತ್ತು ತನಿಶಾ ಕಶ್ಯಪ್ ಅವರು ಇಲ್ಲಿ ನಡೆಯುತ್ತಿರುವ ಎಸ್‌ಕೆಎಂಇ ಐಟಿಎಫ್ ಓಪನ್ ಮಹಿಳೆಯರ ಟೆನಿಸ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿದರು.

ಕೆಎಸ್‌ಎಲ್‌ಟಿಎ ಟೆನಿಸ್ ಅಂಗಣದಲ್ಲಿ ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಏಳನೇ ಶ್ರೇಯಾಂಕದ ಆಕಾಂಕ್ಷಾ 7-5, 3-6, 6-2ರ ಮೂರು ಸೆಟ್‌ಗಳ ಹೋರಾಟದಲ್ಲಿ ಎರಡನೇ ಶ್ರೇಯಾಂಕದ ವೈಷ್ಣವಿ ಅಡ್ಕರ್ ಅವರಿಗೆ ಆಘಾತ ನೀಡಿದರು.

ಮತ್ತೊಂದು ಪಂದ್ಯದಲ್ಲಿ ಎಂಟನೇ ಶ್ರೇಯಾಂಕದ ತನಿಶಾ 6-1, 7-5ರ ನೇರ ಸೆಟ್‌ಗಳಿಂದ ಕ್ಯಾರೊ ಲನ್ ಡೆಲೌನೆ (ನ್ಯೂ ಕ್ಯಾಲೆಡೋನಿಯಾ) ಅವರನ್ನು ಹಿಮ್ಮೆಟ್ಟಿಸಿದರು.

ಡಬಲ್ಸ್ ವಿಭಾಗದಲ್ಲಿ ಭಾರತದ ಅಗ್ರ ಶ್ರೇಯಾಂಕದ ಹುಮೇರಾ ಬಹರ್ಮಸ್ ಮತ್ತು ಪೂಜಾ ಇಂಗಳೆ ಅವರು 7-6 (7-2), 6-4ರಿಂದ ಸ್ವದೇಶದ ಸಾಯಿ ಸಂಹಿತಾ ಮತ್ತು ದಿವಾ ಭಾಟಿಯಾ ಅವರನ್ನು ಸೋಲಿಸಿ ಫೈನಲ್ ಪ್ರವೇಶಿಸಿದರು.

ಮತ್ತೊಂದು ಸೆಮಿಫೈನಲ್‌ನಲ್ಲಿ ಆಕಾಂಕ್ಷಾ ಮತ್ತು ಸೋಹಾ ಸಾದಿಕ್ ಜೋಡಿಯು 5-4ರಿಂದ ಅರೀನಾ ಅರಿಪುಲ್ಲಿನಾ ಮತ್ತು ಜೋ ಲೀನ್ ಸಾ ವಿರುದ್ಧ ಮುನ್ನಡೆಯಲ್ಲಿದ್ದಾಗ ಮಳೆ ಸುರಿದು ಪಂದ್ಯ ಸ್ಥಗಿತಗೊಂಡಿತು.



ಆಕಾಂಕ್ಷಾ ನಿಟ್ಟುರೆ



ಕರ್ವಾ ಚೌತ್ ಆಚರಿಸಲಾಗುತ್ತಿದೆ!

ರಣಜಿ ಟ್ರೋಫಿ: ಮತ್ತೆ ಮಳೆ ಆಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮತ್ತು ಕೇರಳ ತಂಡಗಳ ನಡುವಣ ರಣಜಿ ಟ್ರೋಫಿ ಪಂದ್ಯದ ಎರಡನೇ ದಿನವೂ ಮಳೆ ಮತ್ತು ತೇವಗೊಂಡ ಮೈದಾನದಿಂದ ಸ್ವಲ್ಪ ಹೊತ್ತು ಮಾತ್ರ ಆಟ ಸಾಧ್ಯವಾಯಿತು. ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಸಿ' ಗುಂಪಿನ ಪಂದ್ಯದಲ್ಲಿ ಶನಿವಾರ 27 ಓವರುಗಳ ಆಟ ಸಾಧ್ಯವಾಗಿದ್ದು, ಕೇರಳ ಮೊದಲ ಇನಿಂಗ್ಸ್‌ನಲ್ಲಿ 3 ವಿಕೆಟ್‌ಗೆ 161 ರನ್ ಗಳಿಸಿದೆ.

ಮೊದಲ ದಿನ ಟೀ ವಿರಾಮದ ನಂತರವಷ್ಟೇ ಆಟ ಸಾಧ್ಯವಾಗಿದ್ದು, 23 ಓವರುಗಳಲ್ಲಿ ಕೇರಳ ವಿಕೆಟ್ ನಷ್ಟವಿಲ್ಲದೇ 88 ರನ್ ಹೊಡೆದಿತ್ತು. ಕರ್ನಾಟಕದ ಬೌಲರ್‌ಗಳು ಇಂದು ಆರಂಭದ ಅವಧಿಯಲ್ಲಿ ಮೂರು ವಿಕೆಟ್‌ಗಳನ್ನು ಪಡೆದು ಕೇರಳ ಅಬ್ಬರಿಸದಂತೆ ನೋಡಿಕೊಂಡರು.

ದಿನದಾಟ ಬೇಗನೇ ಮೊಟಕುಗೊಂಡಾಗ ನಾಯಕ ಸಚಿನ್ ಬೇಬಿ (ಔಟಾಗದೇ 23, 62ಎ) ಮತ್ತು ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ (ಔಟಾಗದೇ 15, 12ಎ) ಕ್ರೀಸ್‌ನಲ್ಲಿದ್ದರು. ಮೋಡದ ವಾತಾವರಣದಲ್ಲಿ ಬಿರುಸಿನಿಂದ ಆಡಿದ ಭಾರತ ತಂಡದ ಆಟಗಾರ ಸ್ಯಾಮ್ಸನ್ ಎರಡು ಬೌಂಡರಿಗಳ ಜೊತೆ ಒಂದು ಸಿಕ್ಸರ್ ಎತ್ತಿದರು.

ಲಂಚ್ ನಂತರ ಆಟ ನಡೆಯಲಿಲ್ಲ. ಮಧ್ಯಾಹ್ನ 2 ಗಂಟೆಗೆ ಜಿಟಿಜಿಟಿ ಮಳೆ ಬಿಡುವು ನೀಡಿದರೂ, ಪಿಚ್ ಸುತ್ತಮುತ್ತಲ ಭಾಗ ತೇವಗೊಂಡಿದ್ದು ಮಧ್ಯಾಹ್ನ 3.30ಕ್ಕೆ ಅಂಪೈರ್‌ಗಳು ದಿನದಾಟ ಕೊನೆಗೊಳಿಸಲು ನಿರ್ಧರಿಸಿದರು.

ಆರಂಭ ಆಟಗಾರ ವತ್ಸಲ್ ಗೋವಿಂದ್ (31) ಶುಕ್ರವಾರದ ಮೊತ್ತಕ್ಕೇ ನಿರ್ಗಮಿಸಿದರು. ದಿನದ ಐದನೇ ಓವರಿನಲ್ಲಿ ತಂಡದ ಮೊತ್ತ 94 ಆಗಿದ್ದಾಗ ಅವರು ವೈಶಾಖ ವಿಜಯಕುಮಾರ್ ಬೌಲಿಂಗ್‌ನಲ್ಲಿ ಎಲ್‌ಬಿ ಬಲೆಗೆ ಬಿದ್ದರು. ಇದೇ ಮೊತ್ತಕ್ಕೆ ರೋಹನ್ ಕುನ್ನುಮ್ಮಾಳ್ (63) ಸಹ ವಾಸುಕಿ ಕೌಶಿಕ್ ಬೌಲಿಂಗ್‌ನಲ್ಲಿ ನಿರ್ಗಮಿಸಿದರು. ಬಾಬಾ ಅಪರಾಜಿತ್ (19, 58ಎ) ಶ್ರೇಯಸ್ ಗೋಪಾಲ್‌ಗೆ ವಿಕೆಟ್ ನೀಡುವ ಮೊದಲು ಸಚಿನ್ ಬೇಬಿ ಜೊತೆ 50 ರನ್ ಸೇರಿಸಿದ್ದರಿಂದ ತಂಡ ಚೇತರಿಸಿತು.

ಸ್ಕೋರುಗಳು: ಮೊದಲ ಇನಿಂಗ್ಸ್: ಕೇರಳ: 50 ಓವರುಗಳಲ್ಲಿ 3 ವಿಕೆಟ್‌ಗೆ 161 (ವತ್ಸಲ್ ಗೋವಿಂದ್ 31, ರೋಹನ್ ಕುನ್ನುಮ್ಮಾಳ್ 63, ಸಚಿನ್ ಬೇಬಿ ಔಟಾಗದೇ 23, ಸಂಜು ಸ್ಯಾಮ್ಸನ್ ಔಟಾಗದೇ 15; ವಾಸುಕಿ ಕೌಶಿಕ್ 43ಕ್ಕೆ1, ವೈಶಾಖ ವಿಜಯಕುಮಾರ್ 34ಕ್ಕೆ1, ಶ್ರೇಯಸ್ ಗೋಪಾಲ್ 18ಕ್ಕೆ1) ವಿರುದ್ಧ ಕರ್ನಾಟಕ.

ಪಂಜಾಬ್‌ಗೆ ಮಹತ್ವದ ಮುನ್ನಡೆ

ಮುಲ್ಲನಪುರ (ಪಂಜಾಬ್), (ಪಿಟಿಐ): ಬೌಲರ್‌ಗಳ ಉತ್ತಮ ಪ್ರದರ್ಶನದಿಂದ ಪಂಜಾಬ್ ತಂಡ ರಣಜಿ ಟ್ರೋಫಿ ಕ್ರಿಕೆಟ್ 'ಸಿ' ಗುಂಪಿನ ಪಂದ್ಯದ ಮೂರನೇ ದಿನವಾದ ಶನಿವಾರ ಮಧ್ಯಪ್ರದೇಶ ವಿರುದ್ಧ 70 ರನ್‌ಗಳ ಮಹತ್ವದ ಮುನ್ನಡೆ ಪಡೆಯಿತು.

ಪಂಜಾಬ್ ತಂಡದ (ಶುಕ್ರವಾರ: 7 ವಿಕೆಟ್‌ಗೆ 254) 277 ರನ್‌ಗಳಿಗೆ ಉತ್ತರವಾಗಿ ಮಧ್ಯಪ್ರದೇಶ 207 ರನ್‌ಗಳಿಗೆ ಆಲೌಟ್ ಆಯಿತು. ಮಧ್ಯಮ ಕ್ರಮಾಂಕದಲ್ಲಿ ನಾಯಕ ಶುಭಂ ಶರ್ಮಾ 61 ರನ್ (101ಎ) ಗಳಿಸಿದರೆ, ಭಾರತ ತಂಡದ ಆಟಗಾರ ರಜತ್ ಪಾಟೀದಾರ್ 90 ರನ್ (178 ಎ) ಹೊಡೆದರು. ವೇಗಿ ಗುರನೂರ್ ಬ್ರಾರ್ 3 ವಿಕೆಟ್ ಪಡೆದರೆ, ಸ್ಪಿನ್ನರ್‌ಗಳಾದ ಮಯಂಕ್ ಮಾರ್ಕಂಡೆ, ಸುಖ್ವಿಂದರ್ ಸಿಂಗ್ ಮತ್ತು ನಮನ್ ಧೀರ್ ತಲಾ 2 ವಿಕೆಟ್ ಪಡೆದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಪಂಜಾಬ್:95.5 ಓವರುಗಳಲ್ಲಿ 277 (ಸಲೀಲ್ ಅರೋರಾ 101, ಸುಖ್ವಿಂದರ್ ಸಿಂಗ್ 66; ಕುಲವಂತ್ ಖೆಜ್ರೋಲಿಯಾ 58ಕ್ಕೆ3); ಮಧ್ಯಪ್ರದೇಶ: 73.5 ಓವರುಗಳಲ್ಲಿ 207 (ಶುಭಂ ಶರ್ಮಾ 61, ರಜತ್ ಪಾಟೀದಾರ್ 90; ಗುರನೂರ್ ಬ್ರಾರ್ 36ಕ್ಕೆ3, ಮಯಂಕ್ ಮಾರ್ಕಂಡೆ 46ಕ್ಕೆ2, ಸುಖ್ವಿಂದರ್ ಸಿಂಗ್ 47ಕ್ಕೆ2, ನಮನ್ ಧೀರ್ 5ಕ್ಕೆ2).



